ಸಮಕಾಲೀನ ಬದುಕಿನ ಸಂವಾದಕ್ಕಾಗಿ

ಶೂದ್ರ

ಸಂಪಾದಕ : ಶೂದ್ರ ಶ್ರೀನಿವಾಸ್

'ಶೂದ್ರ' 38: ಒಂದು ಸಾಂಸ್ಕೃತಿಕ ಸಂಭ್ರಮ

'ಶೂದ್ರ' ಸಾಹಿತ್ಯಕ ಪತ್ರಿಕೆಯ '38'ನೇ ವರ್ಷದ ನೆನಪಿಗೆ 'ಒಂದು ಸಾಂಸ್ಕೃತಿಕ ಸಂಭ್ರಮ' ಎಂಬ ನೆಪದಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಇದೇ ಮಾರ್ಚ್ 20ರಂದು ನಡೆದ ಈ ಕಾರ್ಯಕ್ರಮದಲ್ಲಿ ಹಿರಿಯ ರಾಷ್ಟ್ರಕವಿಗಳಾದ ಪ್ರೊ. ಜಿ.ಎಸ್. ಶಿವರುದ್ರಪ್ಪನವರ ಹೆಸರಿನಲ್ಲಿ ಆಯೋಜಿಸುತ್ತ ಬಂದಿರುವ ಗೌರವ ಕಾವ್ಯಸ್ಪರ್ಧೆಯ ಪ್ರಶಸ್ತಿಯನ್ನು ಪ್ರೊ. ಟಿ. ಯಲ್ಲಪ್ಪ ಅವರ 'ಕಡಲಿಗೆ ಕಳಿಸಿದ ದೀಪ' ಕವನ ಸಂಕಲನವನ್ನು 2008ಕ್ಕೆ ಆರಿಸಲಾಗಿತ್ತು. 2009ಕ್ಕೆ ಎಲ್.ಎಸ್. ಮುಕುಂದರಾಜ್ ಅವರ 'ವಿಲೋಮ ಚರಿತೆ' ಕವನ ಸಂಕಲನವನ್ನು ಆರಿಸಲಾಗಿತ್ತು. ತೀರ್ಪುಗಾರರಾಗಿ ಡಾ|| ಹೆಚ್.ಎಸ್. ಮಾಧವರಾವ್ ಹಾಗೂ ಜಯಶಂಕರ್ ಹಲಗೂರು ಅವರು ಸಹಕರಿಸಿದರು. ಪ್ರಶಸ್ತಿಯ ಮೊತ್ತ ತಲಾ ಎಂಟು ಸಾವಿರ ರೂ.ಗಳು. ಈ ಪ್ರಶಸ್ತಿಗಳನ್ನು ಪ್ರೊ.ಜಿ.ಎಸ್. ಸಿದ್ದಲಿಂಗಯ್ಯನವರು ವಿತರಿಸಿದರು. ಇದೇ ಸಂದರ್ಭದಲ್ಲಿ ಪ್ರೊ.ಸಿ.ಎನ್. ರಾಮಚಂದ್ರನ್ ಅವರು 'ನನ್ನ ಪುಸ್ತಕ ಲೋಕ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಪ್ರೊ. ಜಿ.ಎಸ್. ಸಿದ್ದಲಿಂಗಯ್ಯನವರು 'ಪಂಪಭಾರತ' ಕುರಿತು ಮಾತಾಡಿದರು.

ಮಧ್ಯಾಹ್ನದ ಗೋಷ್ಠಿಯ 'ಕವಿಸ್ಪಂದನ' ಮತ್ತು ನನ್ನ ಕಥಾಲೋಕ' ಕಾರ್ಯಕ್ರಮವನ್ನು ಪ್ರೊ. ಎಂ.ಎಚ್. ಕೃಷ್ಣಯ್ಯನವರು ಉದ್ಘಾಟಿಸಿದರು. ಇದರಲ್ಲಿ 'ನನ್ನ ಕಥಾಲೋಕ' ಕುರಿತು ಕೇಶವರೆಡ್ಡಿ ಹಂದ್ರಾಳರವರು ಮಾತಾಡಿದರು. ಕವಿಸ್ಪಂದನದಲ್ಲಿ ಕನ್ನಡದ ಮುಖ್ಯ ಕವಿಗಳಾದ ಡಾ|| ಹೆಚ್.ಎಸ್. ವೆಂಕಟೇಶಮೂರ್ತಿ, ಕೆ.ಬಿ. ಸಿದ್ದಯ್ಯ, ಎಸ್. ಮಂಜುನಾಥ್, ಹೆಚ್.ಎಲ್. ಪುಷ್ಪಾ ಅವರು ಮಾತಾಡಿ ತಮ್ಮ ಕವನಗಳನ್ನು ವಾಚಿಸಿದರು. ಸಂಜೆ ಮೂರನೆಯ ಗೋಷ್ಠಿಯಲ್ಲಿ ಎಸ್. ದಿವಾಕರ್ ಅವರು ಸಾಹಿತಿಯ ದೃಷ್ಟಿಯಲ್ಲಿ ಭೀಮಸೇನ ಜೋಶಿ' ಎಂಬ ವಿಷಯ ಕುರಿತು ಮಾತಾಡಿದರು. ಇದರ ನಂತರ ಖ್ಯಾತ ಹಿಂದೂಸ್ತಾನಿ ಗಾಯಕಿ ವಿದುಷಿ ಪೂರ್ಣಿಮಾ ಭಟ್ ಕುಲಕರ್ಣಿ ಅವರಿಂದ ಸಂತೀತವಿತ್ತು. ಇವರಿಗೆ ಸಾಥಿಯಾಗಿ ವ್ಯಾಸಮೂರ್ತಿ ಕಟ್ಟಿ ಮತ್ತು ಗುರುಮೂರ್ತಿ ವೈದ್ಯ ಅವರು ಇದ್ದರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ|| ಕೆ. ಮರುಳಸಿದ್ದಪ್ಪ ಮತ್ತು ವೀಣಾವಾದಕ ಡಿ. ಬಾಲಕೃಷ್ಣ ಅವರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಜನ್ನಿ (ಜನಾರ್ಧನ), ಅಪ್ಪುಗೆರೆ ತಿಮ್ಮರಾಜು, ಬಾನಂದೂರು ಕೆಂಪಯ್ಯ ಮತ್ತು ಶ್ವೇತಾ ಅವರಿಂದ ತತ್ವಪದಗಳ ಗಾಯನವಿತ್ತು. ಭಾಗವಹಿಸಿದ ಎಲ್ಲರಿಗೂ 'ಶೂದ್ರ ಋಣಿಯಾಗಿದೆ.

ಶೂದ್ರ ಕಾವ್ಯ ಸ್ಪರ್ಧೆ ಮತ್ತು ವಿಚಾರಪೂರ್ಣ ಲೇಖನ ಸ್ಪರ್ಧೆ

ಪ್ರೊ. ಜಿ.ಎಸ್.ಎಸ್. ಅವರ ಹೆಸರಿನ ಗೌರವ ಕಾವ್ಯಸ್ಪರ್ಧೆಯ ಜೊತೆಗೆ ತತ್ವಚಿಂತನೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ವಿಚಾರಪೂರ್ಣ ಲೇಖನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕಾವ್ಯಸ್ಪರ್ಧೆಯ ಮೊತ್ತ ಹತ್ತು ಸಾವಿರ ರೂ.ಗಳು. 2010ರ ಕವನ ಸಂಕಲನದ ಎರಡು ಪ್ರತಿಗಳನ್ನು ಜೂನ್ 10ರೊಳಗೆ ಕಳಿಸಬಹುದು. ವಿಚಾರಪೂರ್ಣ ಲೇಖನವು 10 ರಿಂದ 20 ಪುಟಗಳ ಮಿತಿಯಲ್ಲಿರಬೇಕು. ಇದರ ಪ್ರಶಸ್ತಿಯ ಮೊತ್ತ ಐದು ಸಾವಿರ ರೂ.ಗಳು. ಜೂನ್ 30ರೊಳಗೆ ಕಳಿಸಬೇಕಾಗಿ ವಿನಂತಿ.

'ಶೂದ್ರ'ದ ಸಾಹಿತ್ಯ ಮಂಟಪ, ಮಾನಸ ವಿದ್ಯಾಕೇಂದ್ರ,
ಅಣ್ಣಯ್ಯರೆಡ್ಡಿ ಬಡಾವಣೆ, ಜೆ.ಪಿ.ನಗರ 6ನೇ ಹಂತ, ಬೆಂಗಳೂರು-78,
ಫೋನ್ : 22451762

ಸಮಕಾಲೀನ ಬದುಕಿನ ಸಂವಾದಕ್ಕೆ

ಶೂದ್ರ

“ತಾಜಮಹಲ್ಲಿನ ಮುಂದೆ ನೂರಾರು ಕ್ಯಾಮರಾ ಕ್ಲಿಕ್ಕು
ಪ್ರತಿ ಜೋಡಿ ಹಿಂದೆ ಇಣುಕುವ ಅದೇ ತಾಜಮಹಲ್ಲು – ಕಣ್ಣೊರಸಿ ನಕ್ಕು
ತರುಣ ತರುಣಿ, ಮುದುಕ ಮುದುಕಿ ಕಾರಾಗಾರದಲ್ಲಿ ಸಿಕ್ಕು
ಪರಿತಪಿಸುತ್ತಾರೆ ಕಟ್ಟನಿಕ್ಕಟ್ಟಲ್ಲಿ ಕಾಲಾನುಕಾಲಕ್ಕು”

– ಡಾ ॥ ಹೆಚ್.ಎಸ್. ವೆಂಕಟೇಶಮೂರ್ತಿ

ಸಂಪಾದಕ :
ಶೂದ್ರ ಶ್ರೀನಿವಾಸ್

ಸಹಾಯಕ ಸಂಪಾದಕರು :
ಕೆ.ಎನ್. ಅರುಣ
ಎಸ್. ಪ್ರೀತಿ
ಹುಳಿಮಾವು ಲೋಕೇಶ್
ಪಾನ್ಯಂ ನಟರಾಜ್
ಬಿ.ವೈ. ಲಲಿತಾಂಬ
ಆರ್. ಬಾಬು, ಬಾಣಸವಾಡಿ
ಜೇನುಗೂಡು ಮಹೇಶ್

ಮುಖಪುಟದ ಚಿತ್ರ :
ನಾಗಾರ್ಜುನ ಕೊಂಡ
2ನೇ ಶತಮಾನ
ಕೃಪೆ : 100 ವಂಡರ್ಸ್ ಆಫ್
ಇಂಡಿಯ ಕೃತಿ

ಹಿಂಬದಿಯ ಚಿತ್ರ :
ಶಾಕುಂಲತ ಕುಶ್ರಾಮ್‌ರವರ
ಚಿತ್ರ
ಕೇರಳ ಲಲಿತಕಲಾ ಅಕಾಡೆಮಿ

ಸಂಪುಟ – 38
ಜನವರಿ – ಮಾರ್ಚ್ 2011

ಶೂದ್ರ ಶ್ರೀನಿವಾಸ್
‘ಕಾವಿಮನೆ’, ಮಾನಸ ವಿದ್ಯಾಕೇಂದ್ರ
ಜೆ.ಪಿ.ನಗರ 6ನೇ ಹಂತ, ಬೆಂಗಳೂರು – 78.
ದೂರವಾಣಿ : 22451762
ಇ-ಮೇಲ್ :
shudrasrinivas@gmail.com

ಅಕ್ಷರ ಜೋಡಣೆ : ಶ್ರೀ ಸ್ವರ ಗ್ರಾಫಿಕ್ಸ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು-76.
ದೂರವಾಣಿ : 41215662

ಮುದ್ರಕರು : ಜಿ.ಕೆ. ಆಫ್‌ಸೆಟ್ ಪ್ರಿಂಟಿಂಗ್ ಪ್ರೆಸ್
ಆಡುಗೋಡಿ, ಬೆಂಗಳೂರು-560030.
ದೂರವಾಣಿ : 22239872

ಈ ಶೂದ್ರ ಎಂಬ ಗೂಡಿನಲ್ಲಿ ಒಂದಷ್ಟು ಚಿಲಿಪಿಲಿ.....

ಛಾಯಾಚಿತ್ರ ಕೃಪೆ : ಕೆ.ಎಸ್. ರಾಜಾರಾಂ

ಈ ಸಂಚಿಕೆಯ ಚಿಲಿಪಿಲಿಗೆ ಒಂದಷ್ಟು ಬರೆಯುವ ಸಮಯಕ್ಕೆ ಕ್ರಿಕೆಟ್‌ನ ವಿಶ್ವಕಪ್ ಆಟಗಳು ಏಕಾಗ್ರತೆ-ಯಿಂದ ಬರೆಯದಂತೆ ಮಾಡಿದೆ. ಇಂಥ ಮನಸ್ಥಿತಿಯಲ್ಲಿ ನನ್ನ ಪ್ರೀತಿಯ ನಗರ 'ಸಿಟಿ ಆಫ್ ಜಾಯ್' ಅನ್ನು ತುಂಬಿಕೊಂಡಿರುವ ಕಲ್ಕತ್ತೆಯ ಕಾಲೇಜು ಸ್ಟ್ರೀಟ್ ಕುರಿತು ಬರೆಯಬೇಕಾಯಿತು. ಅದೊಂದು ಪುಸ್ತಕರಾಶಿ. 1986ರಲ್ಲಿ ನಲವತ್ತು ದಿವಸ ಆ ಮಹಾನಗರದ ಬೀದಿಬೀದಿಯನ್ನು ಸುತ್ತುವಾಗ ಕಾಲೇಜ್ ಸ್ಟ್ರೀಟ್‌ನಲ್ಲಿ ಸಾಕಷ್ಟು ಕಾಲವನ್ನು ಕಳೆದಿದ್ದೆ. ಈ ಬಾರಿ ಜನವರಿ ಕೊನೆಯ ಎಂಟು ದಿನಗಳಲ್ಲಿ ಆರೇಳು ಗಂಟೆ ಈ ಮಹಾನ್ ಪುಸ್ತಕಬೀದಿಯಲ್ಲೇ ಕಳೆದಿದ್ದೆ. ಹಾಗೆಯೇ ಜನವರಿ 26ರಂದು ಕಲ್ಕತ್ತ ಬುಕ್ ಫೇರ್. ಇಂಥ ನಗರಕ್ಕೆ ಈ ಬಾರಿ ಕ್ರಿಕೆಟ್ ಆಟವಿಲ್ಲ. ಹೀಗೆ ಬರೆಯುವ ಕಾಲಕ್ಕೆ ಅತ್ಯಂತ ಚೆನ್ನಾಗಿ ಬರೆಯುವ ಲೇಖಕಿ ವೀಣಾ ಬನ್ನಂಜೆಯವರು 'ಶೂದ್ರ ಎಲ್ಲಿದ್ದೀರಿ? ಮನೆಯಲ್ಲಿದ್ದರೆ ಟಿ.ವಿ.ಯನ್ನು ಆನ್ ಮಾಡಿ. ಜಪಾನಿನ ಭೀಕರ ಭೂಕಂಪದಿಂದ ಕೂಡಿದ ಸುನಾಮಿಯನ್ನು ತೋರಿಸುತ್ತಿದ್ದಾರೆಂದರು. ನಾನು ಹೊರಗಿದ್ದೆ. ಕೊನೆಗೆ ಪ್ರೆಸ್ ಕ್ಲಬ್‌ಗೆ ಹೋಗಿ ನೋಡಿ ತಲ್ಲಣಗೊಂಡೆ. ಇಷ್ಟೆಲ್ಲ ವಿಜ್ಞಾನ ಮುಂದುವರೆದಿರುವಾಗ, ಎಷ್ಟೋ ಬಾರಿ ಹವಾಮಾನವನ್ನು ಕರಾರುವಕ್ಕಾಗಿ ತಿಳಿಸುವ ತಜ್ಞರು 'ಸುನಾಮಿ' ಕುರಿತು ಮುನ್ಸೂಚನೆ ಯಾಕೆ ಕೊಡಲಿಲ್ಲ ಅನ್ನಿಸಿತು. ಸಾವಿರಾರು ಕೋಟಿ ಆಸ್ತಿ ಮತ್ತು ಸಂಪತ್ತಿನ ನಾಶದ ಜೊತೆಗೆ; ನಿಖರವಾಗಿ ಇಷ್ಟೇ ಮಂದಿ ಸಮುದ್ರಕ್ಕೆ ಕೊಚ್ಚಿ ಹೋಗಿದ್ದಾರೆಂಬುದು ಗೊತ್ತಿಲ್ಲ. ಮತ್ತೆ ಅಂದು ರಾತ್ರಿ ಸುನಾಮಿ ಕುರಿತು ಟಿ.ವಿ.ಯ ಬೇರೆ ಬೇರೆ ಚಾನೆಲ್‌ಗಳಲ್ಲಿ ನೋಡಿದಾಗ, ತಲ್ಲಣಗೊಂಡೆ. ನೈಸರ್ಗಿಕ ವಿಕೋಪ ಯಾವ ಯಾವ ರೀತಿಯಲ್ಲಿರುತ್ತದೆಂದು. ಇಂಥ ಸನ್ನಿವೇಶದಲ್ಲಿ ಯಾವ ರೀತಿಯ ಶ್ರದ್ಧಾಂಜಲಿಯನ್ನು ಅರ್ಪಿಸುವುದು.

ಬೆಳಗಾಂನಲ್ಲಿ ವಿಶ್ವಕನ್ನಡ ಸಮ್ಮೇಶನ ನಡೆದಿದೆ. ಎಲ್ಲವೂ ಅದ್ದೂರಿ, ಇಂಥ ಸಾಂಸ್ಕೃತಿಕ ಸಮಾವೇಶದ ಸಮಯದಲ್ಲಿ ಕೊನೆಯ ಪಕ್ಷ ಕೆಲವು ಮುಖ್ಯ ಲೇಖಕರನ್ನು ಸೇರಿಸಿಕೊಂಡು ಒಂದು ಗೋಷ್ಠಿ ನಡೆಸಿದ್ದರೆ ಎಷ್ಟು ಚೆನ್ನಾಗಿತ್ತು. ಯಾಕೆಂದರೆ ಅದು ಮರಾಠಿ ಗಡಿ ಭಾಗ. ಅದಕ್ಕಿಂತ ಮಿಗಿಲಾಗಿ ಅವರೂ ಮರಾಠಿ ಮಂದಿ ನಮ್ಮ ದೇಶದವರೇ ಆಗಿದ್ದಾರೆ. ಇದನ್ನು ಸೂಚಿಸುವ ಒಬ್ಬ ವಿಷನರಿ ನಾಯಕರು ನಮ್ಮ ನಡುವೆ ಇಲ್ಲವೇ? ನನಗೆ ಎಷ್ಟೋ ಮಂದಿ ಗೆಳೆಯರು ಕೇಳಿದರು: "ಶೂದ್ರ, ಬೆಳಗಾಂ ಜಿಲ್ಲೆಯ ಯಾವುದಾದರೂ ಒಂದು ಮೂಲೆಯಲ್ಲಿ ನಾವು ಎರಡು ಭಾಷಾ ಬಾಂಧವರನ್ನು ಸೇರಿಸಿ ಸಮಾವೇಶ ಮಾಡೋಣವೇ?" ಎಂದು. ಇಲ್ಲಿ

ದ್ವೇಷ, ಸಿನಿಕತನ ಮತ್ತು ವಿರೋಧದ ಪ್ರಶ್ನೆಯಲ್ಲ. ನಾವು ಇಂಥದಕ್ಕೆ ಹೇಗೆ ಸ್ಪಂದಿಸುತ್ತೇವೆ ಎಂಬುದು ಕೂಡ ಮುಖ್ಯ. ಇದಕ್ಕೆ ಸಂಬಂಧಿಸಿದಂತೆ ನಾನು ಸದಾ ಗೌರವಿಸುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಮತ್ತು ಯು.ಆರ್. ಅನಂತಮೂರ್ತಿಯವರು ಹೇಗೆ ಸ್ಪಂದಿಸಿದರು ಎಂಬುದು ಗೊತ್ತಿಲ್ಲ. ಇರಲಿ, ಇಂಥದು ಒಂದು ಹುಚ್ಚು ಸಮಾಜದಲ್ಲಿ ನಡೆಯುತ್ತಲೇ ಹೋಗಬಹುದು.

ಇದರ ನಡುವೆಯೇ ಈ ಬಾರಿ ಕವಿ ಮಿತ್ರರಾದ ಆನಂದ ಜಂಝುರವಾಡ ಅವರು ಮರಾಠಿಯ ಹಿರಿಯ ಲೇಖಕರಾದ ಪು.ಲ. ದೇಶಪಾಂಡೆಯವರ ಶ್ರೀಮತಿಯವರು ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ರವರನ್ನು ಕುರಿತಂತೆ ಬರೆದ ದೀರ್ಘ ಲೇಖನವನ್ನು ಅನುವಾದಿಸಿ ಕಳಿಸಿದ್ದಾರೆ. ತುಂಬ ಮಾರ್ಮಿಕವಾದ ಲೇಖನ. ಹಾಗೆಯೇ ಕತೆಗಾರ್ತಿ ಬಿ.ಟಿ. ಜಾಹ್ನವಿಯವರು ನಾನು ತುಂಬ ಇಷ್ಟಪಡುವ ಹಿಂದುಸ್ತಾನಿ ಗಾಯಕಿ ವಿದುಷಿ ಪ್ರಭಾ ಅತ್ರೆ ಕುರಿತು ಸಂದರ್ಶನ ರೂಪದ ಆಪ್ತ ಲೇಖನವಿದೆ. ಇದರ ಜೊತೆಗೆ ವಿಶೇಷಣಗಳಿಗೆ ಮೀರಿದ ಗಾಯಕ ಭೀಮಸೇನ್ ಜೋಶಿಯವರ ಬಗ್ಗೆ ಗೆಳೆಯ ಪ್ರಮೋದ್ ಮುತಾಲಿಕ್ ಅವರು ಲೇಖನ ಬರೆದಿದ್ದಾರೆ. ಮುತಾಲಿಕ್ ಅವರು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿರುವಂಥವರು. ಹಿಂದೂಸ್ತಾನಿ ಸಂಗೀತಕ್ಕೆ ಸಂಬಂಧಿಸಿದಂತೆ ದಟ್ಟವಾದ ಅರಿವನ್ನು ವಿಸ್ತರಿಸಿಕೊಂಡವರು. ಶೂದ್ರಕ್ಕೆ ಸಾಹಿತ್ಯ, ಸಂಗೀತ ಮತ್ತು ಕಲೆ ಹಾಗೂ ರಾಜಕೀಯ ಯಾವುದೂ ಬೇರೆಯಲ್ಲ. ಕೆ.ಎಸ್. ಮಧುಸೂದನ ಅವರ ಕಥೆ ಇದೆ. ಕ.ನಂ. ನಾಗರಾಜ್ ಅವರೂ ಕಥೆಯನ್ನು ಕೊಟ್ಟರು. ಆದರೆ ಕಥೆ ಚೆನ್ನಾಗಿದ್ದರೂ ಮಂದಿನ ಸಂಚಿಕೆಗೆ ಉಳಿಸಿಕೊಂಡಿರುವೆ. ರಾಮಲಿಂಗಪ್ಪ ಟಿ ಬೇಗೂರು ಅವರ ಶಿಕ್ಷಣಕ್ಕೆ ಸಂಬಂಧಿಸಿದ ಲೇಖನ ಹಾಗೂ ಡಾ॥ ಹೆಚ್. ಶಶಿಕಲಾ ಅವರ 'ಸ್ವಾತಂತ್ರೋತ್ತರ ಸಣ್ಣ ಕಥಾ ಸಾಹಿತ್ಯ' ಕುರಿತ ಲೇಖನವಿದೆ.ಕೆ.ಪಿ. ಮೃತ್ಯುಂಜಯ, ಚಂದ್ರಶೇಖರ ಲಾಳ್ಯ, ಕೆ. ಸುಜಾತ, ರುದ್ರೇಶ್ವರಸ್ವಾಮಿ, ಆದೂರು ಪ್ರಕಾಶ್ ಅವರ ಕವನಗಳಿವೆ. ಈ ಎಲ್ಲ ಕವನಗಳು ವಿಭಿನ್ನ ನೆಲೆಗಳಲ್ಲಿ ರೂಪುಗೊಂಡಂಥವು. ಈ ಬಾರಿಯ ಸಂಚಿಕೆಗೂ ಕಳೆದ ಎರಡು ಸಂಚಿಕೆಗಳಲ್ಲಿಯ ಕಿ.ರಂ. ಅವರನ್ನು ಕುರಿತ ಕವಿತೆಗಳಿಂದ ಪ್ರೇರಣೆಗೊಂಡು ಕೆಲವರು ಬರೆದು ಕಳಿಸಿದ್ದಾರೆ. ಆದರೆ ಅವ್ಯಾವನ್ನು ಪ್ರಕಟಿಸಲು ಹೋಗಲಿಲ್ಲ. ಕಳೆದ ಸಂಚಿಕೆಯ ಒಟ್ಟು ಲೇಖನಗಳನ್ನು ಕುರಿತು ಅಭಿಪ್ರಾಯದ ರೂಪದಲ್ಲಿ ಕವಿಮಿತ್ರ ಪ್ರೊ. ಟಿ.ಯಲ್ಲಪ್ಪ ಅವರ ಒಂದು ಲೇಖನವನ್ನು ಪ್ರಕಟಿಸಿರುವೆ. ಹೀಗೆ ಪ್ರತಿಸಂಚಿಕೆ ಕುರಿತು ಬರೆಸುವ ಆಶಯವಿದೆ. ಈ ಸಂಚಿಕೆಯಲ್ಲಿ ಮಾಮೂಲಿನಂತೆ ಪ್ರೊ. ಬಿ.ವೈ. ಲಲಿತಾಂಬ ಅವರು ಹಿಂದಿಯ ನಾಗಾರ್ಜುನ ಬಗ್ಗೆ ಲೇಖನ ಬರೆದಿದ್ದಾರೆ. ಬೆಂಗಳೂರಿನ ದಿನಚರಿಯ ಪುಟಗಳಿವೆ, ಈಗ ಕಂಡ ಪುಸ್ತಕಗಳಲ್ಲಿ ಕೆಲವು ಕೃತಿಗಳ ಪರಿಚಯವಿದೆ.

'ಶೂದ್ರ' ನಡೆಸಿಕೊಡುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಗೌರವ ಕಾವ್ಯಸ್ಪರ್ಧೆಯಲ್ಲಿ ಭಾಗವಹಿಸಿದ ಕವಿಗಳಿಗೆಲ್ಲ ಋಣಿಯಾಗಿರುವೆ. ಹಾಗೆಯೇ ಒಟ್ಟು ಕವನಸಂಕಲನಗಳನ್ನು ಓದಿ ಗೆಳೆಯರಾದ ಡಾ॥ ಹೆಚ್.ಎಸ್. ಮಾಧವರಾವ್ ಮತ್ತು ಜಯಶಂಕರ್ ಹಲಗೂರು ಅವರು 2008ಕ್ಕೆ ಟಿ. ಯಲ್ಲಪ್ಪ ಅವರ 'ಕಡಲಿಗೆ ಕಳಿಸಿದ ದೀಪ' ಮತ್ತು 2009ಕ್ಕೆ ಎಲ್.ಎನ್. ಮುಕುಂದರಾಜ್ ಅವರ 'ವಿಲೋಮ ಚರಿತೆ'ಸಂಕಲನಗಳನ್ನು ಆಯ್ಕೆ ಮಾಡಿದ್ದಾರೆ. ಎರಡು ಸಂಕಲನಗಳಿಗೂ ಗೌರವ ಪ್ರಶಸ್ತಿಯ ಜೊತೆಗೆ ಎಂಟು ಸಾವಿರ ರೂ.ಗಳ ಗೌರವ ಧನವನ್ನು ನೀಡಲಾಗುವುದು. ಇದನ್ನು ಮಾರ್ಚ್ 20ರ ಶೂದ್ರದ 38ನೇ ವರ್ಷದ ಸಾಹಿತ್ಯಕ ಕಾರ್ಯಕ್ರಮದಲ್ಲಿ ಪ್ರೊ. ಜಿ.ಎಸ್.ಎಸ್. ಸಮ್ಮುಖದಲ್ಲಿ ನೀಡಲಾಗುವುದು.

ಈ ಸಂಚಿಕೆ ಬರುವ ಸಮಯಕ್ಕೆ ಈ ನಾಡು ಕಂಡ ಅಪರೂಪದ ರಾಜಕಾರಣಿ ಹಾಗೂ ಸಮಾಜವಾದಿ ಚಿಂತಕ ಎಂ.ಪಿ. ಪ್ರಕಾಶ್ ಅವರು ನಿಧನರಾಗಿದ್ದಾರೆ. ಪ್ರಕಾಶ್ ಅವರು ಶೂದ್ರಕ್ಕೆ ಬರೆದವರು. ಶೂದ್ರದ ಬಹಳಷ್ಟು ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರು. ನಮ್ಮ ಖಾಸಗಿ ಚಿಂತನಗೋಷ್ಠಿಗಳಲ್ಲಿ ಪಾಲುಗೊಂಡವರು. ಈ ರಾಷ್ಟ್ರ ಕಂಡ ಮಹಾನ್ ನಾಯಕ ಭೀಮಸೇನ ಜೋಶಿಯವರು ನಿಧನ ಹೊಂದಿದ್ದಾರೆ. ಈ ಮಹನೀಯರಿಗೂ ಶೂದ್ರ ಶ್ರದ್ಧಾಂಜಲಿಯನ್ನು ಅರ್ಪಿಸುವುದು. ಹಾಗೆಯೇ ಶೂದ್ರಕ್ಕೆ ತುಂಬ ಪ್ರಿಯರಾಗಿದ್ದ ಸಮಾಜವಾಗಿ ನಾಯಕ ಹಾಗೂ ಚಿಂತಕ ಸುರೇಂದ್ರ ಮೋಹನ್ ಅವರಿಗೆ.

ಈ ಸಂಚಿಕೆಯ ಗೂಡಿನಲ್ಲಿ



ಕೃಪೆ :
ಸಲೀಂ ಆಲಿ

ಮಲ್ಲಿಕಾರ್ಜುನ ಅಣ್ಣಾ – ಸುನೀತ ದೇಶಪಾಂಡೆ 9

ಕೋಡಿಗುದ್ದಿನ ಧ್ಯಾನ – ಚಂದ್ರಶೇಖರ ತಾಳ್ಯ 25

ಅಗುಳು ಕದ್ದ ನುಡಿ – ಆದೂರು ಪ್ರಕಾಶ್ 27

ಬಾಬಾ ನಾಗಾರ್ಜುನ – ಪ್ರೊ. ಬಿ.ವೈ. ಲಲಿತಾಂಬ 28

ಅವರ ಮತ್ತು ನೀವು – ಡಾ. ಪ್ರಭಾಕರ್ ಮಾಚ್ವೆ 32

ಕಾಳಿದಾಸ – ನಾಗಾರ್ಜುನ 33

ಡಾ॥ ಪ್ರಭಾ ಅತ್ರೆಯವರೊಡನೆ...... – ಬಿ.ಟಿ. ಜಾಹ್ನವಿ 34

ಶಿಕ್ಷಣ ಮತ್ತು ಹಣದ ಪ್ರಶ್ನೆಗಳು – ರಾಮಲಿಂಗಪ್ಪ ಟಿ. ಬೇಗೂರು 46

ಚಿಕ್ಕತಿಮ್ಮನ ಇವಾಹ..... – ಕೆ.ಎಸ್. ಮಧುಸೂದನ 55

ನೆಲದ ಮರೆಯ ನಿಧಾನ – ಕೆ. ಸುಜಾತ 62

ಕವಡೇ ಕಾಸಿನ ಕಿಮ್ಮತ್ತು – ಕೆ. ಸುಜಾತ 63

ಭಾಷಾ ಚಳುವಳಿ ಮತ್ತು ಸಾಹಿತಿಗಳು – ಬಿ.ಸಿ. ದೇಸಾಯಿ 64

ಸ್ವಾತಂತ್ರ್ಯೋತ್ತರ ಸಣ್ಣ ಕಥಾ ಸಾಹಿತ್ಯ – ಡಾ|| ಹೆಚ್. ಶಶಿಕಲಾ 70

ಯು.ಆರ್. – ಎಂ. ಎಸ್. ರುದ್ರೇಶ್ವರಸ್ವಾಮಿ 75

ನಿನ್ನ ಮರೆಯಲ್ಲಿ ಇರುವೆ – ಕೆ.ಪಿ. ಮೃತ್ಯುಂಜಯ 76

ಭಯದಲ್ಲಿ ದಿನ – ಕೆ.ಪಿ. ಮೃತ್ಯುಂಜಯ 77

ದೊರೆ ಭೀಮಸೇನ ಜೋಶಿ – ಪ್ರಮೋದ್ ಮುತಾಲಿಕ್ 78

ಬೆಂಗಳೂರು ದಿನಚರಿಯ ಪುಟಗಳಿಂದ – ಶೂದ್ರ ಶ್ರೀನಿವಾಸ್ 84

ಕಲ್ಕತ್ತೆಯ ಪುಸ್ತಕಲೋಕವೆಂಬ ಕಾಲೇಜು ಬೀದಿ – ಕನಸಿಗೊಂದು ಕಣ್ಣು 93

ಒಳನೋಟ 101

ಈಗ ಕಂಡ ಪುಸ್ತಕಗಳು – ಸಿದ್ಧಾರ್ಥ 108

ಮಲ್ಲಿಕಾರ್ಜುನ ಅಣ್ಣಾ

– ಸುನೀತ ದೇಶಪಾಂಡೆ

All, All are gone, the old familiar faces

- Charles Lamb

ಜನವರಿ 12ರಂದು ಕುಮಾರ ಹೋದ. ಸರಿಯಾಗಿ ಎಂಟು ತಿಂಗಳ ನಂತರ ಸೆಪ್ಟೆಂಬರ್ 12ರಂದು ಅಣ್ಣಾ ತೀರಿದರು. ವಸಂತಾ, ಎಲ್ಲರಕ್ಕಿಂತ ಮೊದಲೇ ಎಷ್ಟೋ ವರ್ಷಗಳ ಹಿಂದೆಯೇ ಅಗಲಿ ಹೋಗಿದ್ದ. ಭಾರತೀಯ ಸಂಗೀತ ಶಾಸ್ತ್ರದಲ್ಲಿ ಮೂವರು ದಿಗ್ಗಜರು ತಮ್ಮ ತಮ್ಮದೇ ಆದ ರೀತಿಯಲ್ಲಿ ಬಹಳ ದೊಡ್ಡ ಸಾಧಕರು. ತಮ್ಮದೇ ಆದ ವೈಭವ, ತಮ್ಮದೇ ಆದ ಶಕ್ತಿ, ತಮ್ಮದೇ ಆದ ಅಲೌಕಿಕತ್ವವನ್ನು ಪಡೆದವರಿವರು. ಅನೇಕ ಸಮಕಾಲೀನರಂತೆಯೇ, ಈ ಮೂವರೂ ಸಂಗೀತಗಾರರ ಗಾಯನವನ್ನು ಒಂದೇ ಆಯುಷ್ಯದಲ್ಲಿ ಕೇಳುವ ಯೋಗ ನನಗೆ ಒದಗಿ ಬಂತು. ಆದರೆ ಒಂದು ವಿಶೇಷವೆಂದರೆ ಭಾಯೀಯಿಂದಾಗಿ ಈ ಮೂವರ ಪರಿಚಯವಾಗುವದು ಮಾತ್ರವಲ್ಲ, ಅತ್ಯಂತ ಆತ್ಮೀಯ, ಮನೆಯವರೇ ಎನ್ನುವ ಬಗೆಯ ಆಪ್ತತೆ, ಸುದೈವದಿಂದ ನನ್ನ ಪಾಲಿಗೆ ಒದಗಿ ಬಂತು.

ಅನು : ಮರಾಠಿಯಿಂದ ಆನಂದ ಜಂಝುರವಾಡ, ಆನಂದ ನಗರ, ಮುಧೋಳ, ಬಾಗಲಕೋಟೆ ಜಿಲ್ಲೆ – 587 313

ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಗಾಯನವನ್ನು ಕುರಿತು ನಾನು ಭಾಯಿಯ ಬಾಯಿಂದ ತುಂಬ ಕೇಳಿದ್ದೆ. 1947 ಅಥವ 48ರಲ್ಲಿ ಇರಬೇಕು, ಜ್ಯೋತ್ಸ್ನಾಬಾಯಿಯ ಮಗಳು ನಂದನಾಳ ಹುಟ್ಟುಹಬ್ಬದ ನಿಮಿತ್ತವಾಗಿ, ಪುಣೆದಲ್ಲಿ ಜ್ಯೋತ್ಸ್ನಾಬಾಯಿಯ ಮನೆಯಲ್ಲೇ ನಡೆದ ಅಣ್ಣಾ ಅವರ ಬೈಠಕ್ಕಿಗೂ ನಾನು, ಭಾಯೀ ಹಾಜರಿದ್ದೆವು. ಅವರ ಅನೇಕ ಧ್ವನಿಮುದ್ರಿತ ಹಾಡುಗಳೂ ಕಿವಿಗೆ ಬಿದ್ದಿದ್ದವು. ಆದರೆ 1959ರವರೆಗೂ ಅವರ ಪ್ರತ್ಯಕ್ಷ ಪರಿಚಯವಾಗುವ ಯೋಗ ಒದಗಿ ಬಂದಿರಲಿಲ್ಲ. 1959ರಲ್ಲಿ ನಾವು ದಿಲ್ಲಿಯಲ್ಲಿದ್ದಾಗ ಒಂದು ದಿನ ಕೆ.ಡಿ. ದೀಕ್ಷಿತರ ಸಂಗಡ ಅವರು ನಮ್ಮ ಮನೆಗೆ ಬಂದರು. ಭಾಯೀ ಆಗ ದಿಲ್ಲಿಯ ದೂರದರ್ಶನ ಹಾಗೂ ಆಕಾಶವಾಣಿಯಲ್ಲೇ ಇದ್ದರು. ಮಲ್ಲಿಕಾರ್ಜುನರು ಯಾವುದೋ ಗಾಯನ ಕಾರ್ಯಕ್ರಮಕ್ಕೆಂದೋ, ಧ್ವನಿಮುದ್ರಣಕ್ಕೆಂದೋ, ಒಂದು ಕೆಲಸದ ಮೇಲೆ ದಿಲ್ಲಿಗೆ ಬಂದಿದ್ದರು. ಜೊತೆಗೆ ಅವರ ಹೆಂಡತಿ ಹಾಗೂ ಮಗಳು ಗಿರಿಜಾ ಕೂಡ ಇದ್ದರು. ದೇಶದ ಅಥವ ಈ ಕಡೆಯ ಸಂಗೀತ ಕ್ಷೇತ್ರದ ಯಾರೇ ದಿಲ್ಲಿಗೆ ಬಂದರೂ – ವಿಶೇಷವಾಗಿ ಆಕಾಶವಾಣಿಯ ಕಡೆಗೆ ಬಂದರಂತೂ ಅವರ ವಸತಿ ದೀಕ್ಷಿತರ ಮನೆಯಲ್ಲೇ ಇರುತ್ತಿತ್ತು.

ಭಾವು ಸಾಹೇಬ ಹಾಗೂ ನಿರ್ಮಲಾ ವೈನಿ ಇವರಿಬ್ಬರು ನಮಗೆ ದೊಡ್ಡಣ್ಣ–ವೈನಿಯ ಸ್ಥಾನದಲ್ಲಿದ್ದರು ನಮ್ಮಿಬ್ಬರ ಸಂಬಂಧಿಕರ ಪರಿಚಯವೂ ನಮ್ಮಿಬ್ಬರಿಗೂ ಇತ್ತು. ಈ ಸಂಬಂಧವನ್ನು ಗಟ್ಟಿಗೊಳಿಸುವಲ್ಲಿ ಸಾಹಿತ್ಯ ಮತ್ತು ಸಂಗೀತಗಳ ಪಾತ್ರವೇ ದೊಡ್ಡದಿತ್ತು.

ಮಲ್ಲಿಕಾರ್ಜುನ ಅಣ್ಣಾ ಆ ದಿನ ಮೊದಲ ಬಾರಿಗೆ ನಮ್ಮ ಮನೆಗೆ ಬಂದಿದ್ದರು. ಧೋತರ, ಉದ್ದನೆಯ ಕೋಟು, ಟೊಪ್ಪಿಗೆ, ಇದು ಅವರ ಆ ದಿನ ಪೋಷಾಕು. ಮುಂದಿನ ಮುವತ್ತಮೂರು ವರ್ಷಗಳಲ್ಲೂ ಅದೇನೂ ಬದಲಾಗಲಿಲ್ಲ. ವಯೋಮಾನಕ್ಕನುಗುಣವಾಗಿ ಅವರ ವ್ಯಕ್ತಿತ್ವ ಮತ್ತು ಗಾಯನ ಪರಿಪಕ್ವವಾಗುತ್ತ ಹೋದವು. ಆದರೆ ಇನ್ನುಳಿದ ಅವರ ನಡವಳಿಕೆ, ಮಾತುಗಾರಿಕೆ, ನಗುವು ಇವುಗಳು ಯಾವುದೇ ಬದಲಾಯಿತೆಂದು ನನಗಂತೂ ಅನ್ನಿಸಲಿಲ್ಲ. ಅಣ್ಣಾ ಆ ದಿನ ನಮ್ಮ ಮನೆಗೆ ಊಟಕ್ಕೆಂದೇ ಬಂದಿದ್ದರು. ಆದರೆ ಊಟದ ಮೊದಲು ಹಾಡಲು ಕುಳಿತರು. ಪೇಟಿಯ ಮೇಲೆ ಭಾಯಿ ಇದ್ದ. ದೀಕ್ಷಿತ ದಂಪತಿಗಳು, ನಾನು ಮತ್ತು ಮಗಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಕುಳಿತ ಅಣ್ಣಾ ಅವರ ಹೆಂಡತಿ, ನಾವಿಷ್ಟೇ ಜನ ಅಂದಿನ ಶ್ರೋತ್ರುಗಳು, ಆ ದಿನ ಅವರೇನು ಹಾಡಿದರು ಎಂಬುದು ಇಂದು ನನಗೆ ನೆನಪಿಲ್ಲ. ಆದರೆ ಅವರ ಗಾಯನದ ಬಗೆಗೆ ಕೇಳಿದ ಲೋಕದ ಆಪ್ತ ಮಾತುಗಳಿಗೆ ಉಚಿತವಾದ ರೀತಿಯಲ್ಲೇ ಅವರ ಅಂದಿನ ಗಾಯನವಿತ್ತು. ಆ ದಿನ ಅವರು ಹಾಡುವಾಗ ಕಣ್ಣು ತುಂಬಿದ ಅವರ ಮೂರ್ತಿವಂತ ವ್ಯಕ್ತಿತ್ವ ಆ ನಂತರ ಎಂದಿಗೂ ಭಂಗಗೊಳ್ಳಲಿಲ್ಲ. ತುಸುವೂ ಕುಂದಲಿಲ್ಲ. ಕೊನೆಯ ನಾಲ್ಕಾರು ವರ್ಷಗಳಲ್ಲಿ ಅವರು ತಮ್ಮ ಬೈಠಕ್ಕನ್ನು ಮೂರು–ನಾಲ್ಕು ತಾಸುಗಳ ಬದಲು ತುಸು ಬೇಗನೆ ಮುಗಿಸುತ್ತಿದ್ದರು. ಆದರೆ ಶ್ರೋತೃಗಳ ಅಪೇಕ್ಷೆಗನುಗುಣವಾಗಿ, ಅವರಿಗೆ ಬೇಕಾದಷ್ಟು ಸುಖ ಸಂಪೂರ್ಣವಾಗಿ ಸಿಗುತ್ತಿತ್ತು. ಅದರಲ್ಲಿ ಯಾವ ಕೊರತೆಯೂ ಇರಲಿಲ್ಲ.

ಆ ದಿನದ ಆಪ್ತ ಭೇಟಿಯ ನಂತರ ಅಣ್ಣಾ ಅವರಿಗೆ ನಮ್ಮ ಮನೆಗೆ ಬರಲು ನಮ್ಮ ಆಮಂತ್ರಣವಿರಲೇಬೇಕೆಂದು ಎನ್ನಿಸಲೇ ಇಲ್ಲ. ಊರಿಗೆ ಬಂದರೆಂದರೆ ಅವರು ನಮ್ಮ ಮನೆಗೆ ಬರದೆ ಇರುತ್ತಿರಲೇ ಇಲ್ಲ. ಕ್ರಮೇಣ ಮುಂದೆ ಅವರು ನಮ್ಮಲ್ಲೇ ಇಳಿದುಕೊಳ್ಳತೊಡಗಿದರು. ಅತ್ಯಂತ ಹಕ್ಕಿನಿಂದ ಇಳಿದುಕೊಳ್ಳುತ್ತಿದ್ದರು. ಒಂದು ಸಲ ಅವರು ಅತ್ಯಂತ ಅವಸರದಿಂದ ಮುಂಬಯಿಗೆ ಬಂದು ಹೋಗುವವರಿದ್ದರು. ದಿಲ್ಲಿಗೋ, ಮತ್ತೆಲ್ಲಿಗೋ ಹೋಗುವದಕ್ಕಾಗಿ ಅವರು ಧಾರವಾಡದಿಂದ ಮುಂಬಯಿಗೆ ಬಂದಿದ್ದರು. ರಾತ್ರಿ ಹನ್ನೊಂದು ಗಂಟೆಗೆ, ಬಾಲಾಜಿ

ಜೋಶಿಯವರೊಂದಿಗೆ ಸಾಂತಾಕ್ರೂಝುದಲ್ಲಿದ್ದ ನಮ್ಮ ಮನೆಗೆ, ಸುಮ್ಮನೆ ಭೇಟಿಯಾಗಿ ಹೋಗಲೆಂದು ಬಂದರು. ಊಟ ಮಾಡಿಯೇ ಬಂದಿದ್ದರು. ಚಹ ಕುಡಿಯುತ್ತ ಹರಟೆಯೂ ನಡೆದಿತ್ತು. ಅವರ ಮಾತಿನೊಳಗೆ ನಾನು "ಅಣ್ಣಾ ಧ್ರುಪದ ಮತ್ತು ಖಯ್ಯಾಲ ಗಾಯಕಿ ಇದರ ನಡುವ ಪಕ್ಕಾ ಅಂತರ ಏನದರ್ರಿ?" ಎಂದು ಕೇಳಿದೆ. ಸಂಗೀತ ಶಾಸ್ತ್ರದ ಬಗೆಗಿದ್ದ ನನಗಿದ್ದ ಅಗಾಧ ಅಜ್ಞಾನದ ಪರಿಚಯ ಅಣ್ಣಾ ಅವ್ರಿಗೆ ಆಗಲೇ ಇದ್ದಿರಬೇಕು. ಆದರೆ ಮನಗೊಟ್ಟು ಕೇಳಿದ ಆ ಪ್ರಶ್ನೆಗೆ ಅವರು ಅಷ್ಟೇ ಮನಸ್ಸುಗೊಟ್ಟು ತಿಳಿಸಿಕೊಡತೊಡಗಿದರು. ಧ್ರುಪದ ಮತ್ತು ಖಯ್ಯಾಲ ಗಾಯಕೀ ಪದ್ಧತಿಗಳಲ್ಲಿ ಹಾಡಿ ತೋರಿಸುತ್ತ, ಉದಾಹರಣೆಗಳನ್ನು ಕೊಡುತ್ತ ಅವುಗಳ ನಡುವಿನ ಅಂತರವನ್ನು ಅವರು ತಿಳಿಸಿ ಹೇಳಿದರು. ಒಂದು, ಒಂದೂವರೆ ತಾಸು ಅವರು ಹಾಡುತ್ತ ಹೋದರು. ನನ್ನ ಪ್ರಶ್ನೆ ಅಡ್ಡಾದಿಡ್ಡಿಯಾದದ್ದೇ ಇದ್ದೀತು, ಆದರೆ ಅದನ್ನು ತಿಳಿಸಿ ಹೇಳುವ ಕ್ರಮದಲ್ಲಿ ಅವರಿಂದ ನಿರ್ಮಾಣವಾದ ಒಂದು, ಮಧುರವಾದ ಸುಂದರ ಪ್ರಬಂಧ, ಭಾಯೀ ಮತ್ತು ಅಣ್ಣಾ ಇಬ್ಬರನ್ನೂ ಆನಂದದಿಂದ ಪುಳಕಿತಗೊಳಿಸಿತು ಎನ್ನುವದು ನನ್ನ ಅರಿವಿಗೆ ಬಂದಿತು.

ಇಂದು ನನ್ನೆದುರಿರುವ ಇದೆ ಪಲ್ಲಂಗದ ಮೇಲೆ ಕುಳಿತೇ ಅಣ್ಣಾ ಆ ದಿನ ಹಾಡಿದ್ದರು. ಹಾಗೂ ಎದುರಿನ ಇನ್ನೊಂದು ಪಲ್ಲಂಗದ ಮೇಲೆ ಕುಳಿತೆ ನಾವು ಮೂವರೂ ಆ ಗಾಯನವನ್ನು ಕೇಳಿದ್ದೆವು. ಯಾವುದೇ 'ಸಾಥ್' ಇಲ್ಲದ ಆ ನಿರ್ಮಲ, ಆತ್ಮಪ್ರಬಲವಾದ ಆ ಮಧುರ ಸ್ವರಗಳ ಕಂಪನ, ನಮ್ಮ ಮನೆಯ ಗೋಡೆಗಳಿಗೆ ಮಾತ್ರವಲ್ಲ, ಸುತ್ತಲಿನ ಗಿಡ–ಮರಗಳಿಗೂ ಅಂದು ಅವರಿಗೆ ಬಂದಿರಬೇಕು. ಹಾಡುವಾಗ ಗಾಯಕರ ಅಥವ ಯಾವುದೇ ಸೃಷ್ಟಿಕಾಲದ ಕಲಾವಿದರ ಇಡೀ ಮೈಯಲ್ಲಿ ಯಾವುದೋ ಒಂದು ಹೊಸ ಬಗೆಯ ಮಿಂಚು, ಶಕ್ತಿಯೂ ಹುಟ್ಟುತ್ತಿರುವದೆ? ಏಕಾಗ್ರತೆ ಎನ್ನುವದೇ ಅದು ತನು, ಮನಗಳ ಒಗ್ಗೂಡಿದ ಕ್ರಿಯೆ. ಎಂದ ಮೇಲೆ ಸಂಗೀತಗಾರರು ಹಾಡುವಾಗ ಅವರ ಸ್ವರಗಳು ಕಂಠದಿಂದ ಉತ್ಪನ್ನವಾಗುತ್ತಿದ್ದರೂ, ನುಡಿಸುವಾಗ ಬೆರಳುಗಳಿಂದ ಸೃಷ್ಟಿಯಾಗುತ್ತಿದ್ದರೂ, ಆ ಕೊರಳು, ಆ ಬೆರಳುಗಳಿಗೆ, ಇಡೀ ದೇಹದ ಸಹಕಾರಯುತ ಸ್ಪರ್ಶ ಇದ್ದೇ ಇರುತ್ತದೆಯಲ್ಲವೆ? ಈ ನಿರ್ಜೀವ ಪಲ್ಲಂಗ ನನ್ನಂತೆಯೇ ಇಂದು ಅದೂ ಮುದಿಯಾಗಿದೆ. ನಮ್ಮಂತೆಯೇ ಅದು ಕೂಡ ನಮ್ಮ ಆ ಸಾಂತಾಕ್ರೂಝುದ ದೊಡ್ಡ ಮನೆಯಿಂದ ಪುಣೆಯ ಈ ಸಣ್ಣ ಮನೆಗೆ ನಮ್ಮೊಡನೆಯೇ ಬಂತು. ಈ ಪುಣೆಯಲ್ಲಂತೂ ಅನೇಕ ಬಾರಿ ಅಣ್ಣಾ, ವಸಂತಾ ಇದಲ್ಲದೆ ಇನ್ನೂ ಅನೇಕ ಹಿರಿ–ಕಿರಿಯ ಕಲಾವಿದರು ಇದೇ ಪಲ್ಲಂಗದ ಮೇಲೆ ಕುಳಿತು ಸಂತೋಷದಿಂದ ಹಾಡಿದ್ದಾರೆ. ನನ್ನಂತೆಯೇ ಈ ಪಲ್ಲಂಗ, ಈ ಗೋಡೆಗಳು ಕೂಡ ಭಾಗ್ಯವಂತರೆಂದೇ ಎನ್ನಬಹುದು.

ಒಂದು ಸಂಜೆ ಇದೇ ಮನೆಯಲ್ಲಿ ಹೀಗೆಯೇ ಹರಟೆ ನಡೆದಿತ್ತು. ಇಂತಹದೇ ಒಂದು ಸಂಜೆ ಧಾರವಾಡದಲ್ಲಿ ಅಣ್ಣಾ ಅವರ ಮಕ್ಕಳು ಅವರ ಜೊತೆಗೂಡಿ ವಚನಗಳನ್ನು ಹಿಂದೊಮ್ಮೆ ಹಾಡಿ ತೋರಿಸಿದ ನೆನಪು ಬಂತು. ಆ ವಚನಗಳನ್ನು ಇನ್ನೊಮ್ಮೆ ಕೇಳುವ ನನ್ನ ಆಶೆಯನ್ನು ವ್ಯಕ್ತಪಡಿಸಿದೆ. ಅಣ್ಣಾ, ವಚನಗಳನ್ನು ಹಾಡತೊಡಗಿದರು. ವಸಂತಾ ಕೂಡ ಅಂದು ಎದುರೇ ಕುಳಿತಿದ್ದ. ಅವನೂ ಕೂಡ ಸ್ವರದ ಜೊತೆಗೆ ಸ್ವರ ಸೇರಿಸಿ ಹಾಡತೊಡಗಿದ. ನಂತರ ಇಬ್ಬರೂ ಕೂಡಿ 'ಸ್ತೋತ್ರ' ರೂಪದ ವಚನಗಳನ್ನು ಹಾಡತೊಡಗಿದರು. ಒಬ್ಬರ ತಾನಗಳು ಮುಗಿ–ಮುಗಿಯುತ್ತಿದ್ದಂತೆಯೇ ಅದರೊಳಗಿಂದಲೇ ಇನ್ನೊಬ್ಬರು ತಮ್ಮ ತಾನಗಳನ್ನು ಸೆಳೆದುಕೊಂಡು ಪ್ರಾರಂಭಿಸುತ್ತಿದ್ದರು. ಅಣ್ಣಾ ಮತ್ತು ವಸಂತಾ, ಎರಡೂ ಜೋಡಿಗಳ, 'ಸವಾಲ–ಜವಾಬ' ರೂಪದ ಗಾಯನದಿಂದ ತುಂಬಿ ತುಳುಕಿದ ಆ ಪ್ರಸನ್ನ ಸಂಜೆಯ ನೆನಪು ನನ್ನಲ್ಲಿನ್ನೂ ಹಚ್ಚಹಸಿರಾಗಿದೆ. ವಸಂತಾನಿಗೂ ಇಷ್ಟೊಂದು ಸ್ತೋತ್ರ ರೂಪಿ ವಚನಗಳು

ಕಂಠಪಾಠವಿದ್ದವೆಂಬುದು ನಮಗೆ ತಿಳಿದೇ ಇರಲಿಲ್ಲ. ವಸಂತಾ ಹಾಗೂ ನಮ್ಮ ಸ್ನೇಹ ಇಷ್ಟು ಹಳೆಯದಾಗಿದ್ದರೂ ಅದು ತಿಳಿದಿರಲಿಲ್ಲ. ಅಣ್ಣಾ ಅವರ ಮೂಲಕ ಅದಕ್ಕೊಂದು ಯೋಗ ಒದಗಿ ಬಂತು.

ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿ ಕೆಲವೇ ಅಲ್ಪ ಅಪವಾದಗಳನ್ನು ಬಿಟ್ಟರೆ ಅವರು ಊರಿಗೆ ಬಂದರೆಂದರೆ ನಮ್ಮಲ್ಲಿಯೆ ಮುಕ್ಕಾಮಿಗೆ ಬರುತ್ತಿದ್ದರು. ಭಾಯೀ, ಅವರ ವರ್ಣನೆಯನ್ನು "ಹಾಡಿನ ಗುಂಗಿನ್ಯಾಗ ಇರೋ ಮನುಷ್ಯ" ಎಂದೇ ಮಾಡಿದ್ದ. ಅಣ್ಣಾ ಹಾಡಿನ ಗುಂಗಿನಲ್ಲಿರುತ್ತಿದ್ದರೋ, ಏನು ಹಾಡುಗಳೇ ಅವರ ಸುತ್ತ ಠಳಾಯಿಸುತ್ತಿದ್ದವೋ? ತಿಳಿಯದು. 'ಮಲ್ಲಿಕಾ' ಎಂದರೆ ಮಲ್ಲಿಗೆ. ಹುಟ್ಟಿದ ಹನ್ನೆರಡನೆ ದಿನ ಅವರಿಗೆ 'ಮಲ್ಲಿಕಾರ್ಜುನ' ಎಂದು ಹೆಸರಿಡುವಾಗ, ಮಲ್ಲಿಗೆಯ ಸುತ್ತಲೂ ಸದಾಕಾಲ ಘಮಘಮಿಸುವ ಪರಿಶುದ್ಧ, ನಿರ್ಮಲ, ಸಾತ್ವಿಕ, ಮೃದು-ಕೋಮಲವಾದ ಗಂಧದಂತಹ ಸ್ವರಗಳು ಈ ಜೀವದ ಸುತ್ತ ಸದಾಕಾಲ ತಳಮಳಿಸುವವೆಂದು ಅಂದು ಯಾರಾದರೂ ಭವಿಷ್ಯ ಕಂಡಿದ್ದರೇ? ಅವರ ಮುಕ್ಕಾಮು ಇತ್ತೆಂದರೆ ನಮ್ಮ ಇಡೀ ಮನೆಯೇ ಸಂಗೀತಮಯವಾಗಿಬಿಡುತ್ತಿತ್ತೆನ್ನುವದಂತೂ ಸರಿಯೇ. ಆದರೆ ಈ ಸಂಗೀತವನ್ನು ಬಿಟ್ಟರೆ ಅಣ್ಣಾ ಅವರ ಇನ್ನುಳಿದ ಕೆಲಸಗಳು, ವ್ಯವಹಾರಗಳು, ಅಸ್ತವ್ಯಸ್ತವೇ ಆಗಿರುತ್ತಿದ್ದವು. ತಾವು ಬರುವ ದಿನ, ರೈಲು ಎಲ್ಲವನ್ನೂ ಮೊದಲೇ ತಿಳಿದಿರುತ್ತಿದ್ದರು. ಆದರೆ ಸಾಮಾನ್ಯವಾಗಿ ಆ ದಿನ ಅವರು ತಿಳಿಸಿದಂತೆ ಬರುತ್ತಲೇ ಇರಲಿಲ್ಲ. ಅವರು ತಾವು ತಿಳಿಸಿದ ದಿನ, ಸಮಯಗಳ ಆಸುಪಾಸಿನಲ್ಲಿ ಒಂದು ಯಾವುದೋ ದಿನ ಬಂದು ಮುಟ್ಟುತ್ತಿದ್ದರು. ರಾತ್ರಿ ಬಂದು ತಲುಪುವ ರೈಲಿನಿಂದ ಬರುತ್ತೇನೆಂದು ತಿಳಿಸಿದ್ದರೆ ಅದಕ್ಕೂ ಮೊದಲು ಹಿಂದಿನ ದಿನ ಮಧ್ಯಾಹ್ನ ಅಥವ ಮರುದಿನ ಮುಂಜಾನೆ, ಹೀಗೆ ಯಾವಾಗಲೋ ಬರುತ್ತಿದ್ದರು. ಅವರ ಅವಶ್ಯಕತೆಗಳಲ್ಲೂ ಬಹಳ ಸರಳವಾಗಿದ್ದವು. ಅವರಿಗೆ ಬೇಕಾಗುವ ಎಲೆ-ಅಡಿಕೆ, ಕುದಿಸಿ ಆರಿಸಿದ ನೀರು, ಊದುಬತ್ತಿಗಳು, ಇವೆಲ್ಲವುಗಳನ್ನು ಅವರ ಕೋಣೆಯಲ್ಲಿ ನಾನು ಮೊದಲೆ ಅವರಿಗೆ ಬೇಕಾದಂತೆ ಸಜ್ಜು ಮಾಡಿರುತ್ತಿದ್ದೆ. ಅವರಿಗೂ ಕೂಡ ಎಲ್ಲದರ ವ್ಯವಸ್ಥೆಯ ಬಗೆಗೆ ಎಷ್ಟು ಖಾತ್ರಿ ಇರುತ್ತಿತ್ತೆಂದರೆ, ಅವರು ತಮ್ಮ ಸ್ವಂತ ಮನೆಗೆ ಬಂದಷ್ಟೇ ನಿರ್ಧಾಸ್ತವಾಗಿ ನಮ್ಮ ಮನೆಗೆ ಬರುತ್ತಿದ್ದರು. ಅವರ ಊಟ-ಉಪಹಾರಗಳಲ್ಲಿ ಅವರಿಗಿದ್ದ ಬೇಕು-ಬೇಡಗಳ ಪರಿಚಯ ನನಗೆ ಎಂದೋ ತಿಳಿದಿದ್ದರಿಂದ ಅದನ್ನೆಲ್ಲ ನಾನು ಅವರಿಗೆ ಒದಗಿಸುತ್ತಿದ್ದರಿಂದಲೋ ಏನೋ, ಅವರು "ನಮ್ಮ 'ತಾಯೀ' ಅಂದ್ರ ನನ್ನ ಖರೇ ಅವ್ವ ಇದ್ಧಾಂಗ" ಎಂದು ಇತರರ ಮುಂದೂ ಮುಕ್ತವಾಗಿ ಹೇಳುತ್ತಿದ್ದರು ಹಾಗೂ ನನ್ನ ಮೇಲೆ ಅಷ್ಟೇ ಅವಲಂಬನೆ ಇರುತ್ತಿದ್ದರು. ಅವರ ಮುಕ್ಕಾಮು ಇಲ್ಲಿ ನಾಲ್ಕೈದು ದಿನ ಇದ್ದಾಗ ಕೆಲವು ಸಲ ಸ್ನೇಹಿತರ ಮನೆಯಲ್ಲಿ ಊಟದ ಆಮಂತ್ರಣವಿರುತ್ತಿತ್ತು. ಅಣ್ಣಾ ಅವ್ರಿಗೆ ಕುಡಿಯಲು ಕಾಯ್ದು ಆರಿದ ನೀರೇ ಬೇಕೆಂದು ನಾನು ಮೊದಲೇ ಆ ಸ್ನೇಹಿತರಿಗೆ ತಿಳಿಸಿರುತ್ತಿದ್ದೆ. ಆದರೆ ಅದರ ವ್ಯವಸ್ಥೆ ಆಗಿಯೇ ಆಗುತ್ತದೆಂದು ನನಗೆ ಧೈರ್ಯವಿರುತ್ತಿತ್ತು. ಅಣ್ಣಾ ಅವ್ರಿಗೆ ಆ ವಿಶ್ವಾಸವಿರುತ್ತಿರಲಿಲ್ಲ. ಹೊರಡುವ ಮೊದಲು ಅವರು "ತಾಯೀ, ನಾವು ನಮ್ಮ ನೀರು ನಾವು ಜೋಡಿ ತೊಗೊಂಡು ಹೋಗುಣು. ಗದ್ಲಾ ಬ್ಯಾಡಾ. ಏನು ನೇಮ ಅವರೂ ಮರತೀವಿ, ಬಿಟ್ಟೇವಿ ಅಂದ್ರ? ಸುಳ್ಳ ತ್ರಾಸು ಬ್ಯಾಡಾ" ಎನ್ನುತ್ತಿದ್ದರು. ಅವರು ಬೇಜಾರುಪಟ್ಟುಕೊಳ್ಳುತ್ತಾರೆಂದು ನಾನು, ಅವರಿಗೆ ಬೇಕಾದ ನೀರನ್ನೂ ಜೊತೆಗೆ ಒಯ್ಯುತ್ತಿದ್ದೆ. ನನಗನ್ನಿಸುತ್ತಿತ್ತು. ನಾನು ನಳದ ನೀರನ್ನೇ ಇದು ಕುದಿಸಿ ಆರಿಸಿದ ನೀರು ಎಂದು ಕೊಟ್ಟರೂ ಅವರು ವಿಶ್ವಾಸದಿಂದ ಕಣ್ಮುಚ್ಚಿ ಕುಡಿದರೂ ಅವರಿಗೆ ಯಾವ ತೊಂದರೆಯೂ ಆಗುತ್ತಿರಲಿಲ್ಲ. ಬದಲಾಗಿ ಆ ಆಮಂತ್ರಕರು ಕುದಿಸಿ ಆರಿಸಿದ ನೀರನ್ನೇ

ಕೊಟ್ಟರೂ, ಅಣ್ಣಾ ಅದರ ಬಗೆಗೆ ಸಾಶಂಕಿತರಾಗಿರುತ್ತಿದ್ದರು. ಮನೆಗೆ ಮರಳಲು ಅನುಸರಿಸುತ್ತಿದ್ದರು ಎಂದು.

ಅವರ ವಿಶ್ವಾಸವಂತೂ ನಮ್ಮ ಮೇಲೆಯೇ ತುಂಬ ಇತ್ತು. ಆದರೆ ಇದರ ಜೊತೆಗೆ ಒಂದು ಬಗೆಯ ಹುಚ್ಚು-ಅಂತಃಕರಣವೂ ಅವರಲ್ಲಿತ್ತು ಎಂಬುದೂ ನನ್ನ ಅನುಭವಕ್ಕೆ ಒಮ್ಮೆ ಬಂತು. ಒಂದು ಸಲ ಅಣ್ಣಾ ಅವರು ನಮ್ಮಲ್ಲಿ ಇದ್ದಾಗಲೇ ನಮ್ಮ ಒಂದು ಸ್ನೇಹಿತರ ವಲಯದ ಕುಟುಂಬವೂ ನಮ್ಮಲ್ಲಿ ಬಂತು. ಅವರು ಬರುವಾಗ ಸಾಕಷ್ಟು ಮೀನುಗಳನ್ನು ತಾಳಿಸಿಕೊಂಡು ತಂದಿದ್ದರು. ಇದಲ್ಲದೆ ಇನ್ನೂ ಅನೇಕ ಪ್ರಕಾರದ ಮೀನುಗಳನ್ನೂ ತಂದಿದ್ದರು. ಎಲ್ಲವೂ ಭಾಯೀಯ ಪ್ರೀತಿಯ ಜಿನಸುಗಳೇ. ಅದನ್ನು ತಂದ ಕುಟುಂಬದವರ ಆಲೋಚನೆ ಎಂದರೆ, ನಾನು ಕೇವಲ ಅನ್ನ ಮಾಡುವುದು, ಎಲ್ಲರೂ ಕೂಡಿ ಮಸ್ತಾಗಿ ಊಟದ ಮೋಜು ಮಾಡುವುದು, ಇದು ಅವರ ಯೋಜನೆ. ಆದರೆ ಮನೆಯಲ್ಲಿ ಅಣ್ಣಾ ಅವರು ಇದ್ದುದನ್ನು ನೋಡಿ ಅವರೂ ಸಂಕೋಚಪಡತೊಡಗಿದರು. ಅನಿವಾರ್ಯವಾಗಿ ನಾವು ಒಂದು ನಡುವಿನ ದಾರಿಯನ್ನು ಹುಡುಕಿದೆವು. ಅಣ್ಣಾ ಅವರು ಊಟ ಮಾಡಿ ಕೋಣೆಗೆ ಹೋದ ನಂತರ ಭಾಯೀಗೆ ತಿನ್ನಲು ಕೊಡಲೆಂದು, ಆ ಪದಾರ್ಥಗಳನ್ನು ಡಬ್ಬಿಗಳಲ್ಲಿ ಹಾಕಿ ಫ್ರಿಜ್‌ನಲ್ಲಿಟ್ಟೆವು. ಅಣ್ಣಾ ಅವರ ಜೊತೆ ಭಾಯೀ ಹೊರ ಕೋಣೆಯಲ್ಲೇ ಹರಟೆ ಹೊಡೆಯುತ್ತ ಕುಳಿತ. ವಸಂತಾನೂ ಬಂದಿದ್ದ. ದಿನೇಶನೂ ಬಂದಿದ್ದ. ಇವರಂತೂ ಅಸಲೀ ಮೀನಿನ ಊಟದ ಭಕ್ತರು. ಟೇಬಲ್ ಮೇಲೆ ಇಷ್ಟೆಲ್ಲ ಜನರಿಗೆ ಒಂದೇ ಸಲ ಬಡಿಸುವದು ಸಾಧ್ಯವಿಲ್ಲವೆಂಬ ನೆಪದಿಂದ, ವಸಂತಾ, ದಿನೇಶ ಇಬ್ಬರಿಗೂ ಮೊದಲೇ ಊಟಕ್ಕೆ ಬಡಿಸಲಾಯಿತು. ಎರಡನೇ ಪಂಕ್ತಿ ಅಸಲೀ ಶಾಕಾಹಾರಿಗಳಾದ ಅಣ್ಣಾ ಹಾಗೂ ಭಾಯೀಯದು. ಮೂರನೇ ಪಂಕ್ತಿ ಹೆಣ್ಣುಮಕ್ಕಳದು. ಹೀಗೆ ಒಂದು ವ್ಯವಸ್ಥೆಯಾಯಿತು. ಒಳಗಿನವರೆಲ್ಲ ಊಟಕ್ಕೆ ಕುಳಿತಾಗಲೂ ಅಣ್ಣಾ ಅವ್ರಿಗೆ ಹೊರಗೇ ಚಹಾ ಕೂಡ ಕೊಟ್ಟು ಕಳಿಸಿದೆ. ಒಂದರ್ಥದಲ್ಲಿ ನಮ್ಮ ಕಳ್ಳತನವನ್ನು ಮುಚ್ಚಿಡುವ ಎಲ್ಲ ಪ್ರಯತ್ನಗಳನ್ನೂ ನಾವು ಮಾಡಿದೆವು. ಆದರೆ ತಮ್ಮ ಎಲೆ-ಅಡಿಕೆ, ಬೀಡಾಗಳನ್ನು ತೆಗೆದುಕೊಳ್ಳಲು ಅಣ್ಣಾ ಒಂದು ಸಲ ಎದ್ದು ತಮ್ಮ ಕೋಣೆಗೆ ನಡುವೆಯೇ ಹೋಗಿ ಬಂದರು. ಅವರಿಗೆ ಮೀನಿನ ವಾಸನೆ ನಕ್ಕೀ ತಿಳಿದಿರಬೇಕು. ಆದರೆ ತಮಗೇನೂ ತಿಳಿಯಲೇ ಇಲ್ಲ ಎನ್ನುವಂತೆಯೇ ಅವರು ವರ್ತಿಸಿದರು. ಎರಡನೇ ಪಂಕ್ತಿಯಲ್ಲಿ ಭಾಯೀಯ ಜೊತೆ ಮುಕ್ತವಾಗಿ ಎಂದಿನಂತೆಯೇ ಊಟ ಮಾಡಿದರು. ಬೇಸರದ ಒಂದು ಎಳೆಯೂ ಅಲ್ಲಿರಲಿಲ್ಲ. ನಮ್ಮ ಅಡಚಣೆಗಳನ್ನು ಗಮನಿಸಿ, ಆ ವಿಷಯದ ಬಗೆಗೆ ಗೊತ್ತಿದ್ದೂ ಅದನ್ನು ಅಲಕ್ಷಿಸಿದರು. ನಮ್ಮ ತಪ್ಪನ್ನು ಅಂತಃಕರಣದಂದ ಹೀಗೆ ಹೊಟ್ಟೆಯಲ್ಲಿ ಹಾಕಿಕೊಂಡರು.

ನಮ್ಮ ಮನೆಯಲ್ಲಿ ದೇವರು, ಧರ್ಮ, ಪೂಜೆ, ಇತ್ಯಾದಿ ಏನೂ ಇರಲಿಲ್ಲ. ಆದರೆ ಅಣ್ಣಾ ಅವರ ವಾಸ್ತವ್ಯವಿದ್ದಾಗ ಅವರು ತಮ್ಮ ಪೂಜೆ ಮಾಡಿಕೊಳ್ಳುತ್ತಿದ್ದರು. ಅವರ ದೇವರನ್ನು ಅವರು ತಮ್ಮ ಬ್ಯಾಗಿನಲ್ಲೇ ತಂದಿರುತ್ತಿದ್ದರೆಂದು ಕಾಣುತ್ತದೆ. ನಾನು ಒಂದು ತಾಲಿ, ತಾಮ್ರದ ಪೂಜಾಪಾತ್ರೆ, ನೀರು, ಹೂವು, ಊದಿನಕಡ್ಡಿ ಇತ್ಯಾದಿಗಳನ್ನೆಲ್ಲ ಕೊಡುತ್ತಿದ್ದೆ. ಅವರೂ ಅಷ್ಟರ ಮೇಲೆಯೇ ತಮ್ಮ ಪೂಜೆಯನ್ನು ನಡೆಸುತ್ತಿದ್ದರು. ಅವರ ಪೂಜೆ ಅವರ ಕೋಣೆಯಲ್ಲೇ ಐದು-ಹತ್ತು ನಿಮಿಷಗಳಲ್ಲಿ ಮುಗಿಯುತ್ತಿತ್ತು. ಇದಕ್ಕಿಂತ ಹೆಚ್ಚಿದನೇನನ್ನೂ ಅವರು ನಿರೀಕ್ಷಿಸುತ್ತಿರಲಿಲ್ಲ. ನಾನೂ ವಿಷಯದ ಬಗೆಗೆ ಅವರೊಂದಿಗೆ ಎಂದೂ ವಾದಕ್ಕಿಳಿಯಲಿಲ್ಲ.

ಧಾರವಾಡದ ಅವರ ಮನೆಯ ಪಡಸಾಲೆಯಲ್ಲಿ ಗೋಡೆಯಲ್ಲಿಯೇ ಒಂದು ಕಮಾನು ಇತ್ತು. ಅಲ್ಲಿ ಅನೇಕರ ಫೋಟೋಗಳನ್ನು ಸಾಲುಸಾಲಾಗಿ ತೂಗುಹಾಕಲಾಗಿತ್ತು. ಲಿಂಗಾಯತ

ಸ್ವಾಮೀಜಿಗಳ, ಶಿವಲಿಂಗಗಳ ಭಾವಚಿತ್ರಗಳವು. ನಿತ್ಯವೂ ಸ್ನಾನವಾದ ಮೇಲೆ ಹಣೆಯ ತುಂಬ ಭಸ್ಮ ಧರಿಸಿ, ಮಡಿಯಿಂದ ಹೂವು-ಗಂಧಗಳನ್ನು ಏರಿಸಿ, ಅಣ್ಣಾ ಆ ಭಾವಚಿತ್ರಗಳ ಪೂಜೆ ಮಾಡುತ್ತಿದ್ದರು. ರಾಜಶೇಖರ, ಅಣ್ಣಾ ಅವರ ಒಬ್ಬನೇ ಕಕ್ಕುಲತೆಯ ಮಗ. ಉಳಿದವರೆಲ್ಲ ಹೆಣ್ಣು-ಮಕ್ಕಳು. ರಾಜಶೇಖರ ಇಂಗ್ಲೀಷ್ ಅಧ್ಯಾಪಕರು ಹಾಗೂ ಗಾಯನದಲ್ಲಿ ಅಣ್ಣಾ ಅವರ ಶಿಷ್ಯರೂ ಆಗಿದ್ದರು. ಆದರೆ ಅವರು ತಾವು ಲಿಂಗಾಯತರಾಗಿದ್ದುಕೊಂಡು ಬ್ರಾಹ್ಮಣ ಹುಡುಗಿಯನ್ನು ಮದುವೆಯಾದರೆಂದು, ಅಣ್ಣಾ ಅವರ ಮನೆ ಅವರ ಪಾಲಿಗೆ ಬಂದಾಯಿತು. ಜಾತಿ-ಗೀತಿಗಳ ಈ ಬಗೆಯ ಖಡಕ್ ಬಂಧನಗಳನ್ನು ಪಾಲಿಸುತ್ತಿದ್ದ ಅಣ್ಣಾ ಅವರ ದೇವರ ಮನೆಯಲ್ಲಿ ಆ ದೇವರುಗಳ ಫೋಟೋಗಳ ಜೊತೆಗೆಯೇ, ಅದೇ ಸಾಲಿನಲ್ಲಿ ಅಲ್ಲಾದೀಯಾಖಾನ್ ಸಾಹೇಬರ ಭಾವಚಿತ್ರವೂ ಇತ್ತು. ಉಳಿದ ಫೋಟೋಗಳಂತೆಯೇ ಆ ಫೋಟೋಕ್ಕೂ ನಿತ್ಯ ಪೂಜೆ, ನಮಸ್ಕಾರಗಳು ನಡೆಯುತ್ತಿದ್ದವು. ಹಾಗಾದರೆ ಜಾತಿ-ಗೀತಿ, ಧರ್ಮ, ಇತ್ಯಾದಿಗಳ ಬಗೆಗೆ ಅವರ ನಿಜವಾದ ಖಚಿತ ಅಭಿಪ್ರಾಯ, ಅರ್ಥವೇನಿತ್ತು? ಒಂದು ದಿನ ನನಗೂ ತಡೆಯಲಾಗದೆ ಅವರ ಜೊತೆಗೆ ವಿಷಯ ಪ್ರಸ್ತಾಪಿಸಿದೆ "ಅಣ್ಣಾ ಧಾರವಾಡದ ನಿಮ್ಮ ಮನ್ಯಾಗ ದೇವರ ಜೋಡಿ, ಅದೇ ಮಡಿಯಿಂದ ನೀವು ಆ ಖಾನ್ ಸಾಹೇಬರ ಫೋಟೋಕ್ಕೂ ಪೂಜಾ ಮಾಡ್ತಿರಿ, ಇದೇನಿದು?" ಎಂದೆ.

"ಅಂದ್ರೇನು ತಾಯೀ, ಗುರೂ ಅಂದ್ರ ಅವರೂ ದೇವರಿದ್ಧಾಂಗ" ಎಂದು ಆ ಕ್ಷಣದಲ್ಲೂ ಅವರು ಕೈಮುಗಿದರು. ಅಂದರೆ ಗುರುಗಳ ಬಗೆಗೆ ಮಾತ್ರ ಭಕ್ತಿ, ಶಿಷ್ಯರ ಬಗೆಗೆ ಮಾತ್ರ ಆ ಅದೇ ಪರಂಪರಾಗತ ಶಿಸ್ತು. ಈ ಬಗೆಯ ಪ್ರತ್ಯೇಕ ವಿಭಾಗಗಳನ್ನೇ ಅವರು ಮಾಡಿಕೊಂಡಿದ್ದರೆ? ಅವರ ಧಾರವಾಡದ ಮನೆಗೆ ನಾವು ಅನೇಕ ಸಲ ಹೋಗಿದ್ದೆವು. ಯಾವುದಾದರೂ ಕಾರಣದಿಂದ ಬೆಳಗಾಂವ, ಘಟಪ್ರಭಾ, ಹುಬ್ಬಳ್ಳಿ, ಧಾರವಾಡಗಳಿಗೆ ಹೋದೆವೆಂದರೆ, ಅಣ್ಣಾ ಅವರ ಭೇಟಿಗೆಂದು ಅವರ ಮನೆಗೆ ಹೋಗುತ್ತಿದ್ದೆವು. ಎಷ್ಟೋ ಸಲ ಅವರ ಭೇಟಿಗೆಂದೇ ಅವರಲ್ಲಿ ಹೋಗುತ್ತಿದ್ದೆವು. ಆಗ ನಾವಿಬ್ಬರೆ ಹೋಗಿದ್ದರಂತೂ ಅವರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದೆವು. ಅವರ ಮನೆಯಲ್ಲೋ ಯಾವ ಕಾಲಕ್ಕೂ ಸಂಗೀತವಿರುತ್ತಿತ್ತು. ಒಂದು ದಿನ ಸಂಜೆ ಹೀಗೆಯೇ ಅಣ್ಣಾ ಅವರು ತಮ್ಮ ಮನೆಯಲ್ಲೇ ಪೂರಿಯಾ ಹಾಡುತ್ತಿದ್ದರು. ಗಾಯನ ಅತ್ಯಂತ ರಂಗೇರಿತ್ತು. ಅಷ್ಟರಲ್ಲಿ ಒಳಕೋಣೆಯ ಬಾಗಿಲಲ್ಲಿ ನಿಂತು ಅವರ ಮಗಳು ಅವರನ್ನು ಒಳಗೆ ಕರೆದಳು. ಅಣ್ಣಾ ಅವರ ಗಾಯನದ ಮುಸಲಧಾರೆಗೆ ತಡೆಯಾಯಿತು. ಆ ಮಗಳ ಕಂಠವೂ ಮಧುರವಾಗಿತ್ತು. ಅವಳದೂ ಕೂಡ ಹಾಡಲು ಬನಿಗೊಂಡ ಕಂಠವೇ. ನಡೆದಿದ್ದ ಗಾಯನದಲ್ಲಿ ಈ ಬಗೆಯ ಅಡಚಣೆ ಬರುವದೆಂದು ಯಾರೂ ಭಾವಿಸಿರಲಿಲ್ಲ. ಏನೋ ಹರಕತ್ತಿನ ತುರ್ತು ಕೆಲಸವಿರಬೇಕೆಂದು ಅಣ್ಣಾ ಒಳಗೆ ಹೋದರು. ಬಹುಶಃ ತಕ್ಷಣವೇ ಮರಳಿ ಬರುತ್ತಿರಬಹುದೆಂದು ನಾವೂ ಕುಳಿತಲ್ಲಿಯೇ ಕುಳಿತು ದಾರಿ ನೋಡತೊಡಗಿದವು. ನಮ್ಮ ನಮ್ಮೊಳಗೆ ಪಿಸುಮಾತಿನಲ್ಲೇ ಏನೇನೋ ಅನುಮಾನಗಳನ್ನು ಮಾಡತೊಡಗಿದೆವು. ಐದು ಹತ್ತು ನಿಮಿಷಗಳಾದರೂ ಅಣ್ಣಾ ಹೊರಗೆ ಬರಲಿಲ್ಲ. ಆಗ ನಾನೇ ಎದ್ದು ಒಳಗೆ ಹೋದೆ. ಅಲ್ಲಿ ನೋಡಿದರೆ ಅಣ್ಣಾ ಅವರ ಇನ್ನೊಬ್ಬ ಮಗಳಿಗೆ 'ಫಿಟ್ಸ್' ಬಂದಿತ್ತು. ಆ ಯೌವ್ವನದ ಹೆಣ್ಣುಮಗಳ ಹಲ್ಲುಗಳು ಅವುಡಗಚ್ಚಿ, ಮೈ ಎಲ್ಲ ಬಿಗಿದು, ಒರಟಾಗಿ ಬಿದ್ದುಬಿಟ್ಟಿತ್ತು. ಅವಳ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡು ಅಣ್ಣಾ ಅವಳ ನೆತ್ತಿಯನ್ನು ತಟ್ಟುತ್ತಿದ್ದರು. ಅವಳನ್ನು ಎಚ್ಚರಗೊಳಿಸಲು ಪ್ರಯತ್ನಿಸುತ್ತಿದ್ದರು. ಮೂಗಿಗೆ ಉಳ್ಳಾಗಡ್ಡಿಯ ವಾಸನೆ ತೋರಿಸುವುದು, ಮುಖಕ್ಕೆ ನೀರು ಗೊಜ್ಜುವದು, ಇತ್ಯಾದಿ ಪ್ರಯತ್ನಗಳನ್ನು ವೈನಿ ಹಾಗೂ ಇನ್ನುಳಿದಿಬ್ಬರು ಹೆಣ್ಣುಮಕ್ಕಳು ಮಾಡುತ್ತಿದ್ದರು. ನಾನೂ ನನ್ನದೇ ಆದ ರೀತಿಯಲ್ಲಿ ಅವರಿಗೆ ಸಹಾಯ ಮಾಡತೊಡಗಿದೆ.

"ಡಾಕ್ಟರರನ್ನ ಕರಕೊಂಡು ಬರಲೇನು?" ಎಂದು ಕೇಳಿದರೆ ಅಣ್ಣಾ, "ಏನೂ ಬ್ಯಾಡಾ, ಈಗ ಆರಾಮಾಗ್ತದ, ಏನೂ ಕಾಳಜೀ ಮಾಡೂ ಕಾರಣ ಇಲ್ಲ. ನಾ ಸದ್ಯಾ ಬಂದೇ ಅಂತ ಭಾಯೀಗೆ ಹೇಳ್ರಿ" ಎಂದರು. ಕ್ರಮೇಣ ಆ ಹುಡುಗಿಗೆ ಎಚ್ಚರ ಬರತೊಡಗಿತು. ಅಣ್ಣಾ ಅವ್ರ ಕಣ್ಣುಗಳಲ್ಲಿ ನೀರು ಹರಿಯುತ್ತಿತ್ತು. ಅದನ್ನೊರಸಿಕೊಳ್ಳುತ್ತ ಅಣ್ಣಾ ನಗತೊಡಗಿದರು. ಬಹುಶಃ ಹುಡುಗಿಗೆ ಮೊದಲೂ ಹೀಗಾಗುತ್ತಿರಬೇಕು. ಅಂತಲೇ ಅವರು ಎದೆಗುಂದಲಿಲ್ಲವೇನೋ. ಅದಕ್ಕಾಗಿಯೇ ಡಾಕ್ಟರರ ಅವಶ್ಯಕತೆಯೂ ಅವರಿಗೆ ಅನವಶ್ಯಕವೆನಿಸಿರಬೇಕು. ನಾನು ಹೊರಗೆ ಬಂದು ಕುಳಿತೆ. ಭಾಯೀ, ಭರ್ಡಿಕರ, ಜೋಶಿ ಇತ್ಯಾದಿ ಅಲ್ಲಿ ಕುಳಿತವರಿಗೆ ನಡೆದ ವಿಷಯ ತಿಳಿಸಿದೆ. ಅಷ್ಟರಲ್ಲೇ ಅಣ್ಣಾ ಹೊರಗೆ ಬಂದರು. ತಂಬೂರಾಗಳು ನಿನದಿಸಿದವು. ಯಾವ ಘಟ್ಟದಲ್ಲಿ ತಮ್ಮ ರಾಗ-ಪ್ರಸ್ತುತಿಯನ್ನು ನಿಲ್ಲಿಸಿದ್ದರೋ, ಖಚಿತವಾಗಿ ಅಲ್ಲಿಂದಲೇ ಅಣ್ಣಾ ಗಾಯನವನ್ನು ಮುಂದುವರೆಸಿದರು. ಯಾವ ತಡೆಯೂ ನಡೆದೇ ಇಲ್ಲವೆಂಬಂತೆ, ಯಾವ ಘಟನೆಯೂ ನಡೆದೇ ಇಲ್ಲವೆಂಬಂತೆ ಅವರು ಹಾಡತೊಡಗಿದರು. ನಾನಂತೂ ವಿಸ್ಮಯಗೊಂಡೆವು. ಇದೆಲ್ಲ ಇಷ್ಟು ಸರಳವಾಗಿ, ಸಹಜವಾಗಿ, ಸಾಧಿಸಬಹುದಾದ ವಿಷಯವೆ? ಅಣ್ಣಾ ಆ ಪೂರಿಯಾ ರಾಗದ ಜೊತೆ ನಡೆಸಿದ್ದ ಸುಖ-ಸಂವಾದವನ್ನು ನಿಲ್ಲಿಸಿ ಒಳಗೆ ಹೋದವರು, ಅವರು ಬಂದ ನಂತರ ಆ ಸಂಭಾಷಣೆ ಮತ್ತೆ ಅಲ್ಲಿಂದಲೇ ಪ್ರಾರಂಭವಾಯಿತೆ? ಅವರೇ ಹರಡಿದ್ದ ಆ ಪೂರಿಯಾದ ಪರಿಮಳವೇ ಆ ಕೋಣೆ ತುಂಬ ತುಂಬಿ, ಅದೇ ಅವರ ದಾರಿ ಕಾಯುತ್ತ ಕುಳಿತ್ತಿತ್ತೆ? ಅವರು ಬಂದ ತಕ್ಷಣ ಅವರ ಶ್ವಾಸದ ಉಸಿರು-ಗಾಳಿಯಲ್ಲಿ ಕೂಡಿಕೊಂಡು ಮತ್ತೆ ಸುಖಪಟ್ಟಿತೆ? ಸಂಸಾರ ಮತ್ತು ಸಂಗೀತ ಎರಡರಲ್ಲೂ ಏಕಕಾಲದಲ್ಲೇ ಸಂಪನ್ನಗೊಂಡಿರುತ್ತಿದ್ದ ಈ ಮನುಷ್ಯ ಒಬ್ಬನೇಯೋ? ಅಥವ ಇಬ್ಬರೂ ಬೇರೆ ಬೇರೆಯೋ? ಒಂದೇ ಶರೀರದಲ್ಲಿ ಗೂಡುಗಟ್ಟಿದ್ದವೇನೋ ಈ ಜೋಡಿ ವ್ಯಕ್ತಿತ್ವಗಳು. ಮಗಳ ಮೇಲಿನ ಅಂತಃಕರಣದಿಂದ ವ್ಯಾಕುಲಗೊಂಡ ತಂದೆಯ ಕಣ್ಣಲ್ಲಿ ದಳದಳ ನೀರು ಹರಿದದ್ದನ್ನು ನಾನು ಅದೇ ತಾನೇ ಪ್ರತ್ಯಕ್ಷ ನೋಡಿದ್ದೆ. ಆದರೆ ಆ ಮನಸ್ಥಿತಿಯಲ್ಲೂ ಅವರ ಮನಸ್ಸಿನ ಇನ್ನೊಂದು ಮೂಲೆಯಲ್ಲಿ ಸಂಗೀತವು ತುಂಬಿಕೊಂಡೇ ಇತ್ತು. ಆ ಸ್ವರಗಳಿಗೆ, ಆ ಲಯಗಳಿಗೆ, ಆ ಆಪ್ತತೆಗೆ ಯಾವ ಧಕ್ಕೆಯೂ ಆಗಿರಲಿಲ್ಲ. ಎತ್ತಿಕೊಂಡಿದ್ದ ಆ 'ಚೀಜನ್ನು ಅಣ್ಣಾ ಮುಗಿಸಿದಾಗ ಒಂದು ವಿಚಿತ್ರ ಬಗೆಯ ಶೂನ್ಯ, ಮೌನ ಆವರಿಸಿತು. ಭಾಯೀ ಸಹಜವಾಗಿ ಕೇಳಿದ. "ಅಕ್ಕಮ್ಮಗ ಮೈಯಾಗ ಹುಶಾರಿರಲ್ಲೇನು? ಸುನೀತಾ ಹೇಳ್ತಿದ್ದಳು ಇದೇ ಈಗ..." "ಏನಿಲ್ಲ ಸಂಸಾರ ಅಂದ ಮ್ಯಾಲ ಇಂಥಾವೆಲ್ಲ ಇರೋವ..." ಎಂದು ಅಣ್ಣಾ ಮತ್ತೆ ಮುಂದಿನ ಚೀಜನ್ನು ಹಾಡಲು ಪ್ರಾರಂಭಿಸಿದರು.

ಹೀಗೆ ನಡುವೆ ಯಾವುದಾದರೂ ಕಾರಣದಿಂದ ಅಕಸ್ಮಾತ್ ಗಾಯನ ನಿಂತರೆ, ಮತ್ತೆ ಪುನಃ ಅಲ್ಲಿಂದಲೇ ಅದನ್ನು ಪ್ರಾರಂಭಿಸುವ ವಿಲಕ್ಷಣವಾದ ಹತೋಟಿ ಅವರಿಗಿತ್ತು. ಪುಣೆಯಲ್ಲಿ ಒಂದು ಸಲ ಗಾಡಗೀಳರ ಮನೆಯಲ್ಲಿ ಅಣ್ಣಾ ಅವರ ಗಾಯನವಿತ್ತು. ರೇಶಿಮೆಯ ಸೂಕ್ಷ್ಮ ಎಳೆಗಳಂತೆ ತಾನಗಳ ಹೆಣಿಕೆ ನಡೆದಿತ್ತು. ಆದರೆ ಅಷ್ಟರಲ್ಲೇ ತಬಲಾದಲ್ಲಿ ಏನೋ ಅಡಥಳವಾಗಿ ಗಾಯನ ನಿಂತಿತು. ಎಲ್ಲವೂ ಸರಿಹೊಂದಿ ಸಿದ್ಧವಾಗಲು ಏಳೆಂಟು ನಿಮಿಷಗಳೇ ಹಿಡಿದವು. ಎಲ್ಲವೂ ವ್ಯವಸ್ಥಿತವಾದ ಮೇಲೆ ಅಣ್ಣಾ, ತಬಲಜೀಗೂ ಕೈಯಿಂದ ಸನ್ನೆ ಮಾಡಿ, ಕ್ಷಣಾರ್ಧದಲ್ಲೇ, ಅದೇ ಗಾಯನವೇ ಮುಂದುವರೆದಂತೆ ಹಾಡಲು ಶುರು ಮಾಡಿದರು. ಇಂಥ ಸಂದರ್ಭಗಳಲ್ಲಿ ಮಹಫಿಲ್ಲುಗಳ ಧ್ಯಾನವೂ ತುಂಡರಿಸುವದಿಲ್ಲ. ನಡುವಿನ ಈ ಅವಧಿಯಲ್ಲಿ ಗಾಯನ-ತಡೆಯಾಗಿದ್ದರೂ ಏನೂ ನಡೆದೇ ಇಲ್ಲ ಎನ್ನುವಂತೆ ಎಲ್ಲರಿಗೂ ಭಾಸವಾಗಿ, ವಾತಾವರಣವು

ಮತ್ತದೇ ರೀತಿಯಾಗಿ ಉತ್ತೇಜಿತವಾಗುತ್ತದೆ. ನಾವೆಲ್ಲ ಮತ್ತೆ ನಮ್ಮ ಭಾವವನ್ನು ವಿಲೀನಗೊಳಿಸಿಕೊಳ್ಳುತ್ತೇವೆ. ಮುಂದೆಂದೋ ಇಂತಹ ಕಾರ್ಯಕ್ರಮದ ನೆನಪಾದರೆ, ಆಗ ಮಾತ್ರ ನಡುವೆ ನಡೆದಿದ್ದ ಈ ಪ್ರಸಂಗವೂ ನೆನಪಿನಲ್ಲಿ ಉಳಿದಿರುತ್ತದೆ. ಆದರೆ ಅದೇನಿದ್ದರೂ ಪ್ರತ್ಯಕ್ಷವಾಗಿ ಆ ಸಂಗೀತದ ಬೈಠಕ್ಕು ನಡೆದಾಗ ಅದಕ್ಕೆ ಯಾವುದೇ ಭಂಗವನ್ನುಂಟು ಮಾಡುವ ಶಕ್ತಿ ಆ ಘಟನೆಗೆ ಇರಲಿಲ್ಲವೆಂಬುದೂ ನೆನಪಿನಲ್ಲಿ ಉಳಿಯುತ್ತದೆ. ಸುಂದರವಾದ ಚಂದ್ರನನ್ನು ನೋಡುತ್ತಿರುವಾಗ ಒಂದು ಕಪ್ಪು ಕಾಗೆ ಈ ಕಡೆಯಿಂದ ಆ ಕಡೆಗೆ ಹಾರಿಹೋದಂತೆ ಎನ್ನಿಸುತ್ತದೆಯೇ ವಿನಹ ಆ 'ಚಂದ್ರೋತ್ಸವ'ದ ವೈಭವದ ಒಂದು ಎಳೆಯೂ ಕಳೆಗುಂದುವದಿಲ್ಲ.

ಅಣ್ಣಾ ಅವರ ಸಹವಾಸದ ನನ್ನ ನೆನಪುಗಳು ಕೇವಲ ಸಂಗೀತದ ನೆನಪುಗಳೇನಲ್ಲ. ಇನ್ನೂ ಅನೇಕ ಬೇರೆ ವಿಷಯಗಳ ಬಗೆಗೂ ಅಣ್ಣಾ ಮಾತನಾಡುತ್ತಿದ್ದರು. ತಮ್ಮ ಬಾಲ್ಯದ ದಿನಗಳನ್ನು ಬಿಡಿಸಿ ಹೇಳುತ್ತಿದ್ದರು. ಅನೇಕ ಸಲ ನನ್ನಿಂದ ಮ್ಹರ್ಡೇಕರ, ಬೋದಕರಂಥ ಕವಿಗಳ ಕವಿತೆಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಕೆಲವು ಸಲ ಆ ಮರಾಠಿ ಕವಿತೆಗಳ ಅಂತಹದೇ ಭಾವ-ಸೌಂದರ್ಯವನ್ನು ಪ್ರಕಟಿಸುವ ಕನ್ನಡ ಕವಿತೆಗಳ ಸಾಲುಗಳನ್ನು ನಮಗೆ ಕೇಳಿಸುತ್ತಿದ್ದರು. ಕವಿತೆಯೊಳಗಿನ ಭಾಷಿಕ ಸೌಂದರ್ಯ, ಶ್ರೀಮಂತಿಕೆ, ಇವುಗಳಲ್ಲಿ ಅವರಿಗೆ ತುಂಬ ಅಭಿರುಚಿ ಇತ್ತು. ಒಳ್ಳೆಯ ತಿಳುವಳಿಕೆ ಇತ್ತು. ಕನ್ನಡದ ವಚನಗಳನ್ನು ಮರಾಠಿಯಲ್ಲಿ ಅವರು ತುಂಬ ಸುಂದರವಾಗಿ, ತಪ್ಪಿಲ್ಲದಂತೆ ನಿರೂಪಿಸುತ್ತಿದ್ದರು. ಮಾತನಾಡುವಾಗ ಸ್ವಲ್ಪ ವ್ಯಾಕರಣದ ನೆಲೆಯಲ್ಲಿ ಪುಟಿತವಾದರೂ ಹೃದಯದ ಅರ್ಥವನ್ನು ಹೃದಯಕ್ಕೆ ಮುಟ್ಟಿಸುವಲ್ಲಿ ಅವರಿಗೆ ಯಾವ ಅಡೆ-ತಡೆಯೂ ಇರುತ್ತಿರಲಿಲ್ಲ.

ಅವರ ಮಾತುಗಾರಿಕೆಯಲ್ಲಿ ಯಾರ ಬಗೆಗೂ ನಿಂದೆ-ಟೀಕೆಗಳು ಎಂದೂ ಇರುತ್ತಿರಲಿಲ್ಲ. ಅಂತಹ ಮಾತಿಗೆ ಸಮಯವೂ ಇರುತ್ತಿರಲಿಕ್ಕಿಲ್ಲ. ಅವರಿಗೆ ಅಂತಹ ಮಾತಿನಲ್ಲಿ ಆಸಕ್ತಿಯೂ ಇರಲಿಲ್ಲ. ನಾನೊಮ್ಮೆ ಅವರನ್ನು ಕೇಳಿದೆ "ಅಣ್ಣಾ, ನೀವು ಇಷ್ಟೊಂದು ಸಂಗೀತ ಕೇಳ್ದಿರಿ, ಕಲಿಸಿದಿರಿ, ಸ್ವತಃ ಹಾಡಿದಿರಿ, ಸಂಗೀತದ ಬಗೆಗೆ ಸಾಕಷ್ಟು ಚಿಂತನವನ್ನೂ ನಡೆಸಿದಿರಿ. ನಿಮ್ಮ ದೃಷ್ಟೊಯೊಳಗ ಇಂದಿನ ಅತ್ಯಂತ ಶ್ರೇಷ್ಠ ಗಾಯಕರ್ಯಾರು? ಹೇಳ್ರಿ" ಎಂದೆ. ದೊಡ್ಡದಾಗಿ ನಕ್ಕು ಅವರು ಮೊದ-ಮೊದಲು ನನ್ನ ಪ್ರಶ್ನೆಯನ್ನು ಬಲಪಡಿಸಲು ಪ್ರಯತ್ನಿಸಿದರು. ಆದರೆ ನಾನು ಮತ್ತೆ ಮತ್ತೆ ಬೆನ್ನತ್ತಿ ಕೇಳಿದ ನಂತರ" ಖರೆ ಹೇಳಲೇನು ತಾಯೀ, ಇಂದಿನದು ಬಿಡ್ರಿ, ಇನ್ನೂ ಐವತ್ತು ವರ್ಷದ ಮ್ಯಾಲ - ಅಂದ್ರ ಆಗ ನಮ್ಮ ಸಂಗೀತವೂ ಭಾಳ ಮುಂದ ಹೋಗಿರ್ತದ - ಆಗ, ಇಂದಿನವೇನಾದರೂ ಗಟ್ಟಿಯಾಗಿ ಉಳಿತಿದ್ರೆ ನನಗನಸ್ತದ ನಾರಾಯಣರಾವ್ ಬಾಲಗಂಧರ್ವ ಮತ್ತು ಬೇಗಂ ಅಖ್ತರ, ಇವರಿಬ್ಬರೇ ಉಳದರ ಉಳೀತಾರ, ಉಳಿದ ನಾವೆಲ್ಲಾ ಕಾಲದ ಪಡದೇದ ಹಿಂದು ಉಳಿಯಾವ್ರು" ಎಂದು ಗಂಭೀರವಾಗಿ ಹೇಳಿದರು.

ಶಾಸ್ತ್ರೀಯ ಗಾಯನದಲ್ಲಿ ಇಡೀ ಬದುಕನ್ನೇ ಕಳೆದ ಮಲ್ಲಿಕಾರ್ಜುನ ಮನ್ಸೂರರಂಥ ಶ್ರೇಷ್ಠ ಗಾಯಕರ ಮಾತಿದು ಎಂಬುದನ್ನು ಗಮನಿಸಿದರೆ, ಅವರ ಪಾರದರ್ಶಕ ಆಲೋಚನಾಶಕ್ತಿ ನಮ್ಮ ಅರಿವಿಗೆ ಬರುತ್ತದೆಂಬುದಂತೂ ಸರಿಯೇ, ಅದರ ಜೊತೆಗೇ ಆ ಕಾಲ-ಪ್ರವಾಹದ ಸಾಂಸ್ಕೃತಿಕ ಜೀವನದ ಹೊಳಹುಗಳೂ ನಮ್ಮ ಗಮನಕ್ಕೆ ಬರುತ್ತವೆ.

ಗಾಯಕರ ಅಥವ ಯಾವುದೇ ದೊಡ್ಡ ವ್ಯಕ್ತಿಗಳ ಖಾಸಗೀ ಬದುಕನ್ನು ಕುರಿತು ಸಾರ್ವಜನಿಕರು ಏನೇನೋ ಮಾತನಾಡುತ್ತಿರುತ್ತಾರೆ. ನಾರಾಯಣರಾವ್ ಬಾಲಗಂಧರ್ವ

ಮತ್ತು ಗೋಹರಜಾನ ಇವರಿಬ್ಬರ ಸಂಬಂಧದ ಬಗೆಗೂ ಇಂದಿಗೂ ಅನೇಕ ವಿವಾದದ ಮಾತುಗಳು ಕೇಳಿ ಬರುತ್ತವೆ. ಮದುವೆ ಮಾಡಿಕೊಂಡು ಅವಳನ್ನು ನಾರಾಯಣರಾವ್ ಅವರು ಹೆಂಡತಿ ಎಂದು ಸ್ವೀಕರಿಸಿದ್ದರೂ, ಆ ಸ್ವೀಕರಣೆಯ ಉದ್ದೇಶದ ಬಗೆಗೇನೆ ಸಿಕ್ಕಸಿಕ್ಕಂತೆ ಸಂಶಯದ ಮಾತುಗಳು ಇಂದಿಗೂ ಕಿವಿಗೆ ಬೀಳುತ್ತಿವೆ. ಒಮ್ಮೆ ಒಂದು ಬೈಠಕ್ಕಿನಲ್ಲಿ ಯಾರೋ ಒಬ್ಬರು ಈ ಬಗೆಯ ವಿಷಯ ತೆಗೆದಾಗ ಅಣ್ಣಾ ಅವರು ಆಡಿದ ಆ ಮಾತುಗಳನ್ನು ಎಂದೂ ಮರೆಯುವಂತಿಲ್ಲ. ಅಣ್ಣಾ ಅವರ ಹಿರಿಯ ಅಣ್ಣಂದಿರದೇ ಒಂದು ನಾಟಕ ಕಂಪನಿ ಇತ್ತು. ಅಲ್ಲಿ ಗೋಹರಜಾನ ಪಾತ್ರ ಮಾಡುತ್ತಿದ್ದ. ಆದರೆ ಅವಳಿಗೆ ಬಾಲಗಂಧರ್ವರ ಪರಿಚಯವೂ ಆಗ ಆಗಿರಲಿಲ್ಲ. ಆದರೆ ಗಾಯನದ ಪ್ರಾಕ್ಟೀಸ್ ಮಾಡಲು ಕುಳಿತಾಗ ಅವಳು ನಾರಾಯಣರಾವ್ ಅವರ ಭಾವಚಿತ್ರವನ್ನು ಎದುರಿಗಿಟ್ಟುಕೊಂಡೇ ಕುಳಿತಿರುತ್ತಿದ್ದಳು. ಇಷ್ಟೊಂದು ಭಾವಪೂರ್ಣವಾಗಿ ಒಬ್ಬ ಹೆಣ್ಣುಮಗಳು ಒಬ್ಬನನ್ನು ಪ್ರೀತಿಸಿದಾಗ ಆ ಪ್ರೀತಿಗೆ ಅವಳ 'ದೇವರು' ಅವಳಿಗೆ ಫಲಿಸಿ ಬಂದಿದ್ದರೆ, ನಾವು ಅವರ ಬಗೆ ಹುಚ್ಚುಚ್ಚರಾಗಿ ಮಾತನಾಡಬಾರದು. ಅದು ಮನುಷ್ಯರಿಗೆ ಶೋಭಿಸುವಂತಹ ಮಾತಲ್ಲ ಮತ್ತು ಅದು ಸತ್ಯವೂ ಅಗಿರುವುದಿಲ್ಲ. "ತಾಯೀ ನಾ ಇದು ಕಣ್ಣಿಂದ ನೋಡೇನಿ, ನಾರಾಯಣರಾವ್ ಅವರ ಮೇಲೆ ಇಷ್ಟು ಸಮರ್ಪಣ ಭಾವದ ಪ್ರೀತಿಯನ್ನ ಆಕಿನ್ನ ಬಿಟ್ರ ಯಾರೂ ಮಾಡಲಿಲ್ಲ. ಅದು ಅಷ್ಟು ಸಲಭನೂ ಅಲ್ಲ. ಫಾಲತೂ ಮಂದಿಗೆ ಅದು ನೀಗೂದೂ ಇಲ್ಲ" ಎಂದೇ ಅಣ್ಣಾ ಹೇಳುತ್ತಿದ್ದರು.

ಇಂತಹ ಅನೇಕ ಪ್ರಸಂಗಗಳಲ್ಲಿ ಅಣ್ಣಾ ಅವರ ಮನುಷ್ಯ ಸಂಬಂಧಗಳ ಬಗೆಗಿನ ವಿಚಾರದ ಪ್ರಗಲ್ಭತೆ ಅರಿವಾಗುತ್ತಿತ್ತು. ಅಲ್ಲಿ ಧರ್ಮ, ಅರ್ಥ, ಸಾಮಾನ್ಯ ಸ್ಥಾನಮಾನ, ಎಲ್ಲವೂ ನಗಣ್ಯವಾಗಿದ್ದವು. ಆದರೆ ಹೀಗೆನಿಸಿದಾಗೆಲ್ಲ ಒಂದು ಪ್ರಶ್ನೆಯೂ ತಪ್ಪದೆ ನನ್ನನ್ನು ಕಾಡುತ್ತಿತ್ತು ಇಷ್ಟೊಂದು ವಿಶಾಲ ಮನೋಭಾವದ ಇವರು ಇದ್ದ ಒಬ್ಬನೇ ಒಬ್ಬ ಬಂಗಾರದಂಥ ಮಗ ಶೇಖರಣ್ಣಾನನ್ನು ಅವರು ಪ್ರೀತಿಸಿ ಬೇರೆ ಜಾತಿಯವಳೊಡನೆ ಲಗ್ನವಾದರೆಂದು ಇಷ್ಟೇಕೆ ದೂರವಿಟ್ಟರು? ಒಗಟು ಒಡೆಯಲಾರದ್ದು, ಬಿಡಿಸಲಾಗದ್ದು. ಸ್ವಲ್ಪ ಧೈರ್ಯ ಮಾಡಿ ಅಣ್ಣಾ ಅವರನ್ನೇ ಕೇಳಿದಾಗಲೂ ಅವರು ಕೊಟ್ಟ ಉತ್ತರ ನನಗೆ ಪಟಾಯಿಸುತ್ತಿರಲೇ ಇಲ್ಲ. ಅದು ಒಳಗೊಳಗೇ ಕಾಡುತ್ತಿತ್ತು.

ಹೀಗೆಯೆ, ಇನ್ನೊಂದು ಸಲ, ಅವರು ಇಂತಹದೇ ಒಂದು ಖಾಸಗೀ ಬದುಕಿಗೆ ಸಂಬಂಧಪಟ್ಟ ಪ್ರಶ್ನೆಗೆ ಹಾರಿಕೆಯ ಉತ್ತರ ಕೊಟ್ಟಿದ್ದು ನನಗಿನ್ನೂ ನೆನಪಿದೆ. ಭೋಪಾಳದ ಭಾರತ-ಭವನದ ವತಿಯಿಂದ ಅಣ್ಣಾ ಅವರ ಗಾಯನ ಹಾಗೂ ಒಂದು ಮುಕ್ತ ಸಂದರ್ಶನ ಯೋಜಿತವಾಗಿತ್ತು. ನಾವು ಅನೇಕ ಜನ ಸ್ನೇಹಿತರು ಅದಕ್ಕಾಗಿಯೇ ಅಲ್ಲಿಗೆ ಹೋಗಿದ್ದೆವು. ಯಥಾಪ್ರಕಾರವಾಗಿ ಅವರ ಸಂಗೀತವಂತೂ ಅದ್ಭುತವಾಗಿಯೇ ಇತ್ತು. ಸಂದರ್ಶನದಲ್ಲಿ ಅಣ್ಣಾ ಮುಕ್ತ ಮನಸ್ಸಿನಿಂದಲೇ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ಶಾಸ್ತ್ರೀಯ ಸಂಗೀತದ ಅನೇಕ ಪ್ರಶ್ನೆಗಳಿಗೆ ಆಲೋಚನಾಯುಕ್ತ ಉತ್ತರಗಳನ್ನು ನೀಡುತ್ತಿದ್ದರು. ಸಂಗೀತ-ಶಾಸ್ತ್ರವನ್ನು ಅವರೆಷ್ಟು ಆಳವಾಗಿ ಜೀರ್ಣಿಸಿಕೊಂಡಿದ್ದಾರೆ, ಆ ಬಗೆಗಿನ ಅವರ ತಿಳುವಳಿಕೆ ಅದೆಷ್ಟು ಸೂಕ್ಷ್ಮವಾಗಿದೆ ಎಂಬುದು ಅವರ ಪ್ರತಿಮಾತಿನಲ್ಲೂ ವ್ಯಕ್ತವಾಗುತ್ತಿತ್ತು. ನಾನು ನನ್ನ ಪ್ರಶ್ನೆಯನ್ನು ಅವ್ರಿಗೆ ಮನೆಯಲ್ಲೇ ಕೇಳಬಹುದಿತ್ತು. ಕೆಲವು ಪ್ರಶ್ನೆಗಳನ್ನು ಕೇಳುತ್ತಲೂ ಇದ್ದೆ. ಆದರೆ ಆ ದಿನ ಅವರ ಸಂದರ್ಶನ ಎಷ್ಟು ರಂಗೇರಿತೆಂದರೆ ನಾನು ಕೊನೆಗೂ ತಡೆಯಲಾಗದೇ ಒಂದು ಪ್ರಶ್ನೆ ಕೇಳಿದೆ. ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ, ಹೀಗೆ ಪ್ರತಿಯೊಂದು ವೇಳೆಯಲ್ಲೂ ಹಾಡಬಹುದಾದ ಪ್ರಸ್ತುತಪಡಿಸಬಹುದಾದ, ರಾಗಗಳು ಭಿನ್ನ ಭಿನ್ನವಾಗಿದೆ ಎಂಬ ಒಂದು

ಪರಿಕಲ್ಪನೆ ಇದೆ. ಗಾಯಕರ ಬೈತಕ್ಕು ಯಾವ ವೇಳೆಯಲ್ಲಿರುತ್ತದೋ ಅದೇ ವೇಳೆಯ ರಾಗವನ್ನು ಗಾಯಕರು ಪ್ರಸ್ತುತಪಡಿಸುತ್ತಾರೆ. ರಾಗ, ಮತ್ತು ಅದಕ್ಕೆ ನಿಬದ್ಧವಾದ ಒಂದು ಕಾಲ, ಎಂಬ ಪರಿಕಲ್ಪನೆಯನ್ನು ಅಣ್ಣಾ ಅವರು ಒಪ್ಪುವರೆ? ಹಾಗೆ ಒಂದು ವೇಳೆ ಒಪ್ಪುತ್ತಿದ್ದರೆ ಆಕಾಶವಾಣಿಯಲ್ಲಿ ರಾತ್ರಿ ಪ್ರಸಾರವಾಗಬೇಕಾಗಿರುವ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದ ಸಂಗೀತವನ್ನು ಹಿಂದಿನ ದಿನದ ಬೆಳಗಿನಲ್ಲೋ, ಮಧ್ಯಾಹ್ನವೋ ಧ್ವನಿಮುದ್ರಿಸಿಕೊಳ್ಳುವ ಕಾರ್ಯ ಪದ್ಧತಿಗೆ ಅಣ್ಣಾ ಅವರು ಹೇಗೆ ಸಮ್ಮತಿಸುತ್ತಾರೆ? ಎಂಬ ಭಾವದ ಪ್ರಶ್ನೆ ನನ್ನದಾಗಿತ್ತು.

"ಆಯಾ ಕಾಲಕ್ಕೆ ಅದೇ ರಾಗ ಹಾಡಬೇಕು ಅನ್ನೋದಕ್ಕ ಅಂಥಾದ್ದೇನು ಬಹಳ ಮಹತ್ವಯಿಲ್ಲ ಪರಂಪರೆಯೊಳಗೆ ಅದು ಅಂತ ಗಾಯಕರು ಅದನ್ನ ಪಾಲಸ್ತಾರ" ಎಂಬುದು ಅಣ್ಣಾ ಅವರ ಎತ್ತರದ ಒಟ್ಟು ಸ್ವರವಾಗಿತ್ತು. ನಾನು ಕೇಳಿದೆ "ಈ ಪರಂಪರಾ ನಿರರ್ಥಕ್ತನ ಇದ್ರ ಇದನ್ನ ನಿಮ್ಮಂಥ ದೊಡ್ಡ ಸಂಗೀತಕಾರರು ಇದನ್ನ ಮುರಿಯೋ ಧೈರ್ಯ ತೋರಿಸಬೇಕಲ್ಲ?" ಅದಕ್ಕವರು "ಯಾರಿಗೆ ಅದನ್ನ ಮುರಿಯೋದು ಅವಶ್ಯ ಅನಸ್ತದ ಅದನ್ನ ಅವರು ಅವಶ್ಯ ಮುರೀಬೇಕು" ಎಂದರು. ಇದು ಹಾರಿಕೆಯ ಉತ್ತರವಲ್ಲವೆ? ಆದರೆ ಅವರ ಉತ್ತರಕ್ಕೆ ಕೂಡಿದವರೆಲ್ಲ ನಕ್ಕರು. ಆ ಪ್ರಶ್ನೆ ಹಾಗೇ ಉಳಿಯಿತು.

ಯಾವುದೋ ಬಂಡುಕೋರ ಮನುಷ್ಯ ಜಿದ್ದಿನಿಂದ ಕಲೆಯ ಪ್ರವಾಹಕ್ಕೆ ಹೊಸ ದಿಕ್ಕು ಕೊಡುತ್ತಾನೆ, ಕೆಲವು ಸಲ ಆ ಪ್ರವಾಹವೇ ತಾನೇ ತಾನಾಗಿ ನಿಧಾನವಾಗಿ ಬದಲಾಗುತ್ತ ಹೊಸ ದಿಕ್ಕನ್ನು ಮೈಗೂಡಿಸಿಕೊಳ್ಳುತ್ತದೆ, ಎಷ್ಟೊ ಸಲ ಒಂದು ಪರಂಪರೆ ಅವ್ಯಾಹತವಾಗಿ ಅನೇಕ ಸಲ ಒಂದೇ ರೀತಿಯಲ್ಲಿ ಹರಿಯುತ್ತಲೇ ಇರುತ್ತದೆ. ಈ ಯಾವುದೇ ಬಗೆಯ ಘಟನೆಗಳಲ್ಲೂ ಕಲೆಯ ಕ್ಷೇತ್ರದಲ್ಲಿ ಯಾನಮಾಡಲೂ, ಅಥವ ಶೃಂಗಗಳನ್ನು ಸಾಧಿಸಲು, ಯಾವ ಅಡಚಣೆಯೂ ಇರುವುದಿಲ್ಲ. ಯಾವ ರಾಗವನ್ನು ನೀವು ಯಾವಾಗ ಪ್ರಸ್ತುತಪಡಿಸುತ್ತೀರಿ ಎಂಬುದಕ್ಕೆ ವಿಶೇಷ ಅರ್ಥವೇ ಇಲ್ಲ. ನೀವೆಷ್ಟು ತಾಕತ್ತಿನಿಂದ ಹಾಡುತ್ತೀರಿ, ಹೇಗೆ ತಾನಗಳನ್ನು ನಿಭಾಯಿಸುತ್ತೀರಿ, ಹೇಗೆ ಅರಳಿಸುತ್ತೀರಿ, ಆ ರಾಗದ ಮರವನ್ನು ಎಷ್ಟು ವಿಸ್ತಾರವಾಗಿ ಹಬ್ಬಿಸುತ್ತೀರಿ ಸ್ವಂತಕ್ಕೂ, ಶ್ರೋತೃಗಳಿಗೂ ಕೈವಲ್ಯ-ಸಾಕ್ಷಾತ್ಕಾರದ ಅನುಭವವನ್ನು ತಂದುಕೊಡುವ ಶಕ್ತಿ ನಿಮ್ಮ ಗಾನಕ್ಕಿದೆಯೇ, ಇತ್ಯಾದಿಗಳ ಮೇಲೆಯೇ ಎಲ್ಲ ಅವಲಂಬಿಸಿರುತ್ತದೆ. ಸಂಗೀತ ಕ್ಷೇತ್ರದಲ್ಲಿ ಕುಮಾರ್ ತುಂಬ ಬಂಡುಖೋರನಾಗಿದ್ದ. ತನ್ನದೇ ಆದ ಸಂಗೀತ ಸಾಮ್ರಾಜ್ಯವನ್ನೇ ಆತ ಸ್ಥಾಪಿಸಿದ. ಆದರೆ ಆತನೇನೂ ಈ ರಾಗಗಳ ಸಮಯದ ಬಂಧನಗಳನ್ನು ಮುರಿಯುತ್ತೇನೆಂದು ಕಂಕಣಬದ್ಧನಾಗಿರಲಿಲ್ಲ. ಇಂತಹ ವ್ಯಕ್ತಿಗಳಿಗೇ ಅದು ಅಷ್ಟೊಂದು ಮುಖ್ಯವಾಗಿ ಕಂಡಿಲ್ಲವೆಂದರೆ, ಅದು ಅಷ್ಟು ಮುಖ್ಯವಾದ ವಿಷಯವೇ ಆಗಿರಲಿಕ್ಕಿಲ್ಲ. ನನಗದರದಲ್ಲಿ ಹುಟ್ಟಿದ ಆಸಕ್ತಿ ನನ್ನ ತೀರ ವೈಯಕ್ತಿಕವಾದ ಸಾಮಾನ್ಯವಾದ ಸಂಗತಿ ಎಂದು ನನಗೆ ಆ ನಂತರ ಎನ್ನಿಸತೊಡಗಿತು.

ಹಾಗೆ ನೋಡಿದರೆ ಅಣ್ಣಾ ಪರಂಪರಾವಾದಿಗಳೇ ಆಗಿದ್ದರು. ಅವರು ಬಂಡುಖೋರರಲ್ಲ. ಆದರೆ ಪರಂಪರೆಯ ಅವರ ವ್ಯಾಖ್ಯೆ ಪ್ರಮಾಹಪತಿತರ ಅಥವಾ ಅಂಧಶ್ರದ್ಧೆಯುಳ್ಳವರ ಬಗೆಯದಾಗಿರಲಿಲ್ಲ. ಸರಳವಾದ, ಸಹಜವಾದ ಆದರೆ ನಿಶ್ಚಿತವಾದ ಖಚಿತವಾದ ಒಂದು ವಿಚಾರಲೋಕ ಅವರದಾಗಿತ್ತು. ಅವರು ಹಾಡಲು ಹೊರಟರೆಂದರೆ, ಅದೇ ದೋತರ, ಕೋಟು, ಟೊಪ್ಪಿಗೆ, ಇದೇ ಅವರ ಪೋಶಾಕು. ಆದರೆ ಅದು ಸ್ವಚ್ಛವಾಗಿರುತ್ತಿತ್ತು. ಇಸ್ತ್ರಿಯ ಪದ್ಧತಿಯನ್ನು ಅವರು ಇಟ್ಟುಕೊಂಡಿರಲಿಲ್ಲವೆಂಬುದೇನೋ ನಿಜವೆ, ಆದರೆ ಅಶಿಸ್ತನ್ನೂ ಅವರು ಅಷ್ಟೇ ದೂರವಿಟ್ಟಿದ್ದರು. ಕಣ್ಣಿನ ಮೇಲಿದ್ದ ಚಾಳೀಸು ಅನೇಕ ಸಲ ಹಣೆಯ ಮೇಲಿನ ವಿಭೂತಿಯ ಗೆರೆಗಳು ಅದರ ಮೇಲೆ ಮೂಡಿಬಿಟ್ಟಿರುತ್ತಿದ್ದವು. ಅದನ್ನು ಹಾಡಲು

ಕುಳಿತಾಗ ನೋಡಿದ ತಕ್ಷಣ ಅವರಿಗೆ ಮೋಜೆನಿಸುತ್ತಿತ್ತು. ಮನಸ್ಸಿನೊಳಗೇ ಅವರು ಒಂದು ಕ್ಷಣ ನಗುತ್ತಿದ್ದರು. ಆದರೆ ಅವರ ಗಾಯನ ಶುರುವಾಯಿತೆಂದರೆ ಮಂತ್ರದಂಡ ಪ್ರಯೋಗಿಸಿದಂತೆ ಇಡೀ ದೃಶ್ಯವೇ ಬದಲಾಗಿ ಹೋಗುತ್ತಿತ್ತು. ಅವರ ಬೈಠಕ್ ರಂಗೇರಲು ಅವರಿಗೆ ಸಮಯದ ಅಂತರವೇ ಬೇಕಾಗಿರಲಿಲ್ಲ. ಮೊದಲ ಸ್ವರವೇ ಪರಿಪೂರ್ಣವಾಗಿ ಸಿದ್ಧಗೊಂಡೇ ಅವತರಿಸುತ್ತಿತ್ತು. ಮುಂದಿನ ಅವರ ಎಲ್ಲ ಹಾಡುಗಾರಿಕೆಯ ಬೈಠಕ್ಕು, ಶ್ರೋತೃಗಳಿಗೂ, ಆ ಸ್ವರಗಳು ಆ ಮುಖದ ಚಹರೆಗಳು, ಆ ಲಯಗಳು ಎಲ್ಲ ಒಟ್ಟಾಗಿ ಒಂದು ಅಲೌಕಿಕ ಶಿಲ್ಪಾಕೃತಿಯ ಎದುರು ನಿಂತರೆ, ತಮ್ಮ ಇಡೀ ಜೀವಶಕ್ತಿ ಕಣ್ಣು ಮತ್ತು ಕಿವಿಗಳೆರಡರಲ್ಲೇ ಕೇಂದ್ರಿಕೃತಗೊಂಡಂತೆ, ಒಂದು ಅಪೂರ್ವ ಸುಖದ ಅನುಭವ ನೀಡುತ್ತಿದ್ದವು. ಹಾಡುವಾಗ ಅವರನ್ನು ನೋಡುವುದೂ ಒಂದು ಅಪೂರ್ವವಾದ, ಕಣ್ತುಂಬಿ ನೋಡುತ್ತಲೇ ಇರಬೇಕೆನ್ನಿಸುವಂತಹ ಅನುಭವ. ರೇಶಿಮೆಯ ಎಳೆಗಳಂಥ ನಯವಾದ ಸೂಕ್ಷ್ಮವಾದ, ಮುತ್ತಿನಂತಹ, ಆತ್ಮತೇಜದ ಬಲದಿಂದ ನೇಯ್ದುಕೊಳ್ಳುತ್ತಿದ್ದ ಸ್ವರಗಳು ಅವರಿಂದ ಹೊರಬರುತ್ತಿದ್ದಾಗ ಅವರ ರೂಪ ದೃಷ್ಟಿತಾಗುವಷ್ಟು ಮೋಹಕವಾಗಿರುತ್ತಿತ್ತು. ಆ ಸ್ವರಗಳ ಮೂಲ ಸಂಚಲನವೇ ಒಬ್ಬ ಪ್ರಿಯಕರನ ನಿಧಾನವಾದ, ಮೃದುವಾದ, ಆರ್ತವಾದ, ಡವಗುಟ್ಟುವ ಮಧುರ ಗುಂಜನದ ಲಯದಂತಿರುತ್ತಿತ್ತು. ನಡುನಡುವೆ ಒದಗುತ್ತಿದ್ದ ಶೋತೃಗಳ ಪ್ರತಿ–ಸ್ಪಂದನ ಅದಕ್ಕೆ ಅಣ್ಣಾ ನೀಡುತ್ತಿದ್ದ ನಿರ್ಭಾವುಕವಾದ ಆದರೆ ನಗುಮೊಗದ ಪ್ರತಿ–ಸ್ಪಂದನ ಇದೂ ಕೂಡ ಒಂದು ಅಪರೂಪದ ಅನುಭವವೇ ಆಗಿರುತ್ತಿತ್ತು. ಸ್ವರ–ಲಯಗಳ ಆ ಪ್ರಚಂಡ ಪ್ರವಾಹದಲ್ಲೇ ಈ ಬಗೆಯ ಒಂದು ಮಧುರ–ರಸ ಸ್ಪಂದನವೂ ಮಿಂಚಿ ಹೋಗುತ್ತಿತ್ತು. ಕುಮಾರನ ಗಾಯನದಲ್ಲಿ ರಾಗದ ನಿರ್ಮಾಣದ ಕ್ರಿಯೆಯೂ ಕಾಣುತ್ತಿತ್ತು. ಆದರೆ ಅಣ್ಣಾ ಅವರ ಗಾಯನ ಗಾಯಕೀಯ ತುಂಬಿದ ಭಂಡಾರವನ್ನು ನಮ್ಮೆದುರು ಸುರಿಯಲೆಂದೇ ಸಿದ್ಧವಾಗಿರುವಂತೆ ಕಾಣುತ್ತಿತ್ತು. ಅದು ಪ್ರಾರಂಭವಾಗುವಾಗಲೇ ತುಂಬಿರುತ್ತಿತ್ತು. ಮೊದಲಿನಿಂದಲೂ ಕೊನೆಯವರೆಗೂ ಅದು ನಮ್ಮಲ್ಲಿ ತುಂಬಿಕೊಳ್ಳುತ್ತಲೇ ಹೋಗುತ್ತಿತ್ತು. ಹಾಗೆ ನೋಡಿದರೆ ಅಣ್ಣಾ ಸನಾತನತೆ, ಮಠ, ಗುರು, ಕರ್ಮಠ ಆಚರಣೆಗಳು, ಸೇವಾ ಮನೋಭಾವ ಇತ್ಯಾದಿಗಳನ್ನು ಒಪ್ಪುವವರಾಗಿದ್ದರು. ಆದರೆ ಗಾಯನ ಸಾಮ್ರಾಜ್ಯದಲ್ಲಿ ಮಾತ್ರ ಅವರು ಸ್ವರಗಳನ್ನು ಪ್ರೀತಿಸಿದ್ದು ಕೇವಲ ಭಕ್ತಿ ಭಾವದಿಂದಲಲ್ಲ. “ಕವನ ದೇಸ್ ಗಯೋ” ಇರಲಿ “ಮಹ ಜಾ ಜೋಗಿ” ಇರಲಿ “ಹೇ ರಾಹ ಸನತ ಬಾಯೀ” ಇರಲಿ ಅಥವಾ ಬಿಹರ್ ರಾಗದ “ನೀಂದ ನ ಆಯೀ” ಇರಲಿ, ಇವುಗಳನ್ನು ಕೇಳಿದಾಗ ಈ ಮನುಷ್ಯ ಭಕ್ತನಾಗಿ ಮಾತ್ರವಲ್ಲ, ಒಬ್ಬ ಪ್ರಿಯಕರನಾಗಿಯೂ ಬಹಳ ಉಚ್ಚ ಸಾಧಕನಾಗಿದ್ದಾನೆ ಎನ್ನಿಸುತ್ತಿತ್ತು.

ಇದೆಲ್ಲ ಅವರಿಗೆ ಹೇಗೆ ಸಾಧಿಸುತ್ತಿತ್ತು? ಈ ಗುಣ–ಪೂರ್ಣತೆ ಅವರಿಗೆ ಎಲ್ಲಿಂದ ಲಭಿಸಿತು? ದೊಡ್ಡ ಕಲಾವಿದರಿಗೆ ಅಷ್ಟೇ ದೊಡ್ಡದಾದ ಮನಸ್ಸು ಎಲ್ಲಿಂದ ದೊರೆಯುತ್ತದೆ? ನನಗನ್ನಿಸುವಂತೆ ಇವೆಲ್ಲ ಅಂಶಗಳೂ ಇವರಿಗೆ ಜನ್ಮ–ಜಾತವಾಗಿಯೇ ದೊರೆತಿರುತ್ತದೆ. ಆದರೆ ಇನ್ನುಳಿದ ಅವರ ಧಡಪಡಗಳು, ಕಷ್ಟಗಳು, ಮಹಾತ್ವಾಕಾಂಕ್ಷೆ, ತಮ್ಮ ತಮ್ಮ ಕಲೆಯನ್ನು ಅವಗತಮಾಡಿಕೊಳ್ಳುವ ಅವರ ತೀವ್ರ ಆಸಕ್ತಿ, ಸೂಕ್ತ ಮಾರ್ಗದರ್ಶನ, ಇಂಥವುಗಳನ್ನೆಲ್ಲ ಅಣ್ಣಾ ಅವರಂಥವರು ಎಲ್ಲ ಗುರುಕೃಪೆ' ಎನ್ನುತ್ತಾರೆ. ತಮ್ಮ ಸ್ವಂತದ ಶಿಷ್ಯ ವೃತ್ತಿಯ ಕಾಲದ ಘಟನೆಗಳು ಹೇಗಿದ್ದವು ಎಂಬುದನ್ನೂ ಅಣ್ಣಾ ಅವರಿಂದ ನಾವು ತುಂಬ ಕೇಳಿದ್ದೆವು. ಒಂದೇ ಒಂದು ಘಟನೆಯ ಅಪವಾದದ ನೆನಪನ್ನು ಬಿಟ್ಟರೆ ಆ ಉಳಿದ ನೆನಪುಗಳೆಲ್ಲ ಅವರಿಗಿದ್ದ ಗುರುವಿನ ಬಗೆಗಿನ ಅಪಾರ ಆದರ ಹಾಗೂ ನಿತಾಂತ ಭಕ್ತಿಗಳಿಂದಲೇ ತುಂಬಿಕೊಂಡಿದ್ದವು.

ಹಾಗಿದ್ದರೆ ಆ ಅಪವಾದಾತ್ಮಕ ನೆನಪು ಯಾವುದು? ಆ ಘಟನೆಯ ಹಿಂದಿನ ನೋವು ಯಾರದೋ ಯೋಜಕ ಕ್ರಿಯೆಯೇನಾಗಿರಲಿಲ್ಲ. ಆ ಕಾಲದ ಅವರ ಎಳೆಯ ಮನಸ್ಸು ಆರ್ಥಿಕವಾದ ಕಷ್ಟ ನಷ್ಟಗಳ ಜಗ್ಗಾಟದ ದಿನಗಳಲ್ಲಿ, ಆ ನೋವನ್ನು ಅವರಿಗೆ ಸಹಿಸಲಾಗದೆ ಅದು ಅವರ ಆಳದಲ್ಲಿ ನೆಲೆಮಾಡಿಕೊಂಡು ಕುಳಿತಿರಬೇಕು.

ಒಮ್ಮೆ ನಾವು ಧಾರವಾಡಕ್ಕೆ ಹೋದಾಗ ಅಲ್ಲಿಂದ ಕುಂದಗೋಳಕ್ಕೂ ಹೋದೆವು. ಅಣ್ಣಾ ಅವರಿಗೆ "ಬರ್ರಿ" ಅಂದ ತಕ್ಷಣ ನಮ್ಮ ಜೊತೆಗೆ ಬಂದು ಬಿಟ್ಟರು. ಸವಾಯಿ ಗಂಧರ್ವರ ಪುಣ್ಯತಿಥಿಯ ನಿಮಿತ್ತ ಪ್ರತಿವರ್ಷವೂ ಒಂದು ಸಂಗೀತೋತ್ಸವ ಕುಂದಗೋಳದಲ್ಲಿ ನಡೆಯುತ್ತಿತ್ತು. ಈಗಲೂ ನಡೆಯುತ್ತಿರಬೇಕು. ನನಗನ್ನಿಸುವಂತೆ ಆಗ ಎರಡು-ಮೂರು ದಿನ ಅಖಂಡವಾದ ಅನ್ನ ಛತ್ರವೂ ಅಲ್ಲಿರುತ್ತಿತ್ತು. ಎಲ್ಲೆಲ್ಲಿಂದಲೋ ಅನೇಕ ಕಲಾವಿದರು ಭಾಗವಹಿಸಿ ಹಾಡಿ ನುಡಿಸಿ, ಹೋಗುತ್ತಿದ್ದರು. ಸುತ್ತಮುತ್ತಲಿನ ಹಳ್ಳಿಯ ಜನರೂ ಅಲ್ಲಿ ಸೇರುತ್ತಿದ್ದರು. ನಾವು ಹೋದಾಗ ಜನ ಆಗಲೇ ತುಂಬಿ ಬಿಟ್ಟಿದ್ದರು.

ಅಣ್ಣಾ ಅವರೂ ಸ್ವಲ್ಪ ಹೊತ್ತು ಹಾಡಿದರು ಆ ನಂತರ ನಾವು ಮರಳಿ ಬಂದೆವು.

"ಅಣ್ಣಾ, ಗರ್ದೀ ಏನೋ ಭಾಳ ಇತ್ತು. ಆದರ ಶಿಸ್ತು ಇದ್ದಿದ್ದಿಲ್ಲ. ಕೆಲವರಂತು ನಡುನಡುವೆ ಎದ್ದೆದ್ದು ಹೋಗುತ್ತಿದ್ದರು" ತಿರುಗಿ ಬರುವಾಗ ನಾನು ಈ ಮಾತನ್ನಾಡಿದೆ.

"ತಾಯೀ ಏನು ಹೇಳೂದು ಅವ್ರಿಗೇನು ಫುಕಟ ಊಟ ಸಿಗತದ ಅಂತ ಸುತ್ತಮುತ್ತಲಿನ ಬಡವರೆಲ್ಲಾ ಬರ್ತಾರ ಅವ್ರಿಗೇನು ಸಂಗೀತ ಗೊತ್ತಿರ್ತದ?" ಅಣ್ಣಾ ಎಂದರು.

"ಅಣ್ಣಾ, ನೀವು ಪ್ರತಿ ವರ್ಷನೂ ಹೋಗಿ ಹಾಡತಿರಬೇಕಲ್ಲಾ?" ಎಂದೆ.

"ಇಲ್ಲಾ, ಇಲ್ಲಾ, ನಾ ಇದ ಮೊದಲ ಸಲಾ ಅಲ್ಲೆ ಹೋದದ್ದು, ಹಾಡಿದ್ದು" ಎಂದರು ಅಣ್ಣಾ. ನಮಗಂತೂ ತುಂಬ ವಿಸ್ಮಯವಾಯಿತು. ಆ ದಾರಿಯ ಪ್ರವಾಸದಲ್ಲೇ ಅದಕ್ಕೆ ಕಾರಣಗಳೂ ಗೊತ್ತಾದವು.

ಅಣ್ಣಾ ತೀರ ಚಿಕ್ಕ ವಯಸ್ಸಿನಲ್ಲಿ ಗಾಯನಕ್ಕಿಳಿದರು. ಸಿಗುವ ಎಲ್ಲ ಸ್ಥಳಗಳಿಂದಲೂ ಸಂಗೀತವನ್ನು ಪಡೆಯುತ್ತಿದ್ದರು. ಆದರೆ ಒಳ್ಳೆಯ ಗುರುವನ್ನು ಪಡೆದು ಶಾಸ್ತ್ರೋಕ್ತವಾಗಿ ಶಿಸ್ತಿನಿಂದ ಸಂಗೀತವನ್ನು ಕಲಿಯಲು ಅವರು ಗವಾಯೀ ಗಂಧರ್ವರ ಬಳಿ ಹೋದರು. ಅವರನ್ನು ಶಿಷ್ಯರೆಂದು ಸ್ವೀಕರಿಸಲು ಸವಾಯೀ ಗಂಧರ್ವರು ನಿರಾಕರಿಸಿದರು. ಅವರಿಗೂ ಅವರದೇ ಕಾರಣಗಳಿದ್ದವೇನೋ, ಆ ಕಾಲದಲ್ಲಿ ಒಬ್ಬನನ್ನು ಶಿಷ್ಯನೆಂದು ಸ್ವೀಕರಿಸಿದರೆ ಅವನನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಸ್ವಂತ ಮಗನಂತೆಯೇ ಅವನ ಪಾಲನೆ-ಪೋಷಣೆ ಮಾಡಬೇಕಾಗುತ್ತಿತ್ತು. ಬಹುಶಃ ಅದು ಅವರಿಗೆ ಸಾಧ್ಯವಾಗಿರಲಿಕ್ಕಿಲ್ಲ. ನಿಜವಾಗಿ ಅಲ್ಲಿ ಯಾವ ಸಮಸ್ಯೆ ಇತ್ತು ಎಂಬುದು ಯಾರಿಗೆ ಗೊತ್ತು? ಆದರೆ ಅಣ್ಣಾ ಅವರಿಗೆ ತಾವು ಲಿಂಗಾಯಿತರು, ಅವರು ಬ್ರಾಹ್ಮಣರು ಅದಕ್ಕೆಂದೇ ಅವರು ವಿದ್ಯೆ ನೀಡಲು ನಿರಾಕರಿಸಿದರು ಎಂದೆನ್ನಿಸಿತು. ಜಾತಿ-ಜಾತಿಗಳ ನಡುವಿನ ಈ ವೈಮನಸ್ಸು ಇಂದಿಗೂ ಈ ದೇಶದಲ್ಲಿ ರಾಜಾರೋಷವಾಗಿ ನಡೆಯುತ್ತಲೇ ಇದೆ. ಒಮ್ಮೆ ಬೆಳಗಾವಿಗೆ ಹೋದಾಗ ಶಿವರಾತ್ರಿಯ ದಿನ ನಮ್ಮನ್ನು ಒಬ್ಬ ವೈಷ್ಣವರ ಮನೆಯಲ್ಲಿ ಊಟಕ್ಕೆ ಆಮಂತ್ರಿಸಲಾಗಿತ್ತು. ಅಂದಿನ ಊಟವೋ ಅಕ್ಷರಶಃ ಪಂಚ ಪಕ್ವಾನ್ನದ ಊಟವೇ ಆಗಿತ್ತು. ಮೊದಲು ನಮಗೇ ಊಟಕ್ಕೆ ಬಡಿಸಿದರು. ಇದು ನಮಗಾಗಿ ಯೋಜಿತವಾದ ವಿಶೇಷ ಆತಿಥ್ಯವೆಂದೇ ಎನ್ನಿಸಿತು. ಆದರೆ ಆ ನಂತರದ ಹರಟೆಯಲ್ಲಿ

ತಿಳಿಯಿತು ಶಿವರಾತ್ರಿಯ ದಿನ ಉಪವಾಸವೆಂದು ಶೈವರ ಮನೆಯಲ್ಲಿ ಅನ್ನವನ್ನು ಬೇಯಿಸುವುದಿಲ್ಲವೆಂದೇ ವೈಷ್ಣವರ ಮನೆಯಲ್ಲಿ ಅಂದು ಅದ್ಭುತ ಮೇಜವಾನೀ ನಡೆಯುತ್ತದಂತೆ. ಹಿಂದು ಮುಸಲ್ಮಾನರ ಬಗೆಯ ಧರ್ಮಾಧರ್ಮಗಳಲ್ಲಿ ಮಾತ್ರವಲ್ಲ, ನಮ್ಮ ನಮ್ಮೊಳಗೆ ಇರುವ ಜಾತಿ ಜಾತಿಗಳಲ್ಲೂ ಈ ಕಹಿಯನ್ನು ಬೆಳೆಸಲಾಗುತ್ತಿದೆ. ಇದನ್ನು ಮಾಡುವವರೂ ಇದು ತಮ್ಮ ಕರ್ತವ್ಯವೆನ್ನುವಂತೆಯೇ ಮಾಡುತ್ತಿರುತ್ತಾರೆ. ಆದ್ದರಿಂದಲೇ ನಾವು ಅಂದು ಕೇಳಿದ ವಿಷಯದ ಹಿಂದಿನ ಭಾವ ಪೂರ್ತಿ ಸುಳ್ಳಾಗಿಯೂ ಇರಲಿಕ್ಕಿಲ್ಲ ಎನ್ನಿಸಿತು. ಆದರೆ ಅಣ್ಣಾ ಅವರಿಗೆ ಅವರಿಗಾದ ಅಪಮಾನವನ್ನು ಮರೆಯಲಾಗಲಿಲ್ಲವೆಂದೇ ಕುಂಡಗೋಳ ಗ್ರಾಮ ಇಷ್ಟು ಹತ್ತಿರವೇ ಇದ್ದರೂ ಅವರಿಗೆ ಇಷ್ಟು ವರ್ಷಗಳಾದರೂ ಅದರಲ್ಲಿ ಭಗವಹಿಸಲಾಗಿರಲಿಲ್ಲ. ಆ ದಿನ ಅವರು ನಮ್ಮ ಜೊತೆಗೆ ಬಂದೇ ಬಿಟ್ಟಿದ್ದರು. ಇಂಥ ಸಂದರ್ಭದಲ್ಲಿ ಗಾಯಕರು ತಮ್ಮದೇ ಆದ ರೀತಿಯಲ್ಲಿ ಸಂಗೀತ ಸೇವೆಯನ್ನು ಸಲ್ಲಿಸಬೇಕೆಂಬ ರೂಢಿಯನ್ನೂ ಅವರು ನಿರಾಕರಿಸುವುದು ಸಾಧ್ಯವಿರಲಿಲ್ಲ. ಆದರೆ ಆ ಗಾಯನದಲ್ಲಿ ಎಂದಿನ ಅವರ ಜೀವ ಪ್ರವಾಹದ ಹರಿವು ಇರಲಿಲ್ಲ.

ಒಬ್ಬ ಗೃಹಸ್ಥರಾಗಿ ಅಣ್ಣಾ ತಮ್ಮ ಕೌಟಂಬಿಕ ಕರ್ತವ್ಯಗಳಲ್ಲಿ ಯಾವುದನ್ನೂ ನಿರ್ಲಕ್ಷಿಸಿರಲಿಲ್ಲ. ಎಲ್ಲ ಹೆಣ್ಣುಮಕ್ಕಳಿಗೂ ಸಾಧ್ಯವಿದ್ದಷ್ಟು ಶಿಕ್ಷಣವನ್ನು ಕೊಡಿಸಿದರು. ಅವರ ಮದುವೆ ಮಾಡಿಕೊಟ್ಟರು. ಮಗನಿಗೂ ಚೆನ್ನಾಗಿ ಕಲಿಸಿದರು. ಇತ್ತೀಚೆಗೆ ಕೆಲವು ವರ್ಷಗಳಿಂದ ಗಾಯಕರ ಆರ್ಥಿಕ ಪರಿಸ್ಥಿತಿ ತುಂಬ ಬದಲಾಗುತ್ತಿದೆ. ಆದರೆ ಒಂದು ಕಾಲದಲ್ಲಿ ಅಣ್ಣಾ ಅವರ ತಲೆಮಾರಿನ ಗಾಯಕರಿಗಂತೂ, ಬಹಳ ಕಾಲ ಆರ್ಥಿಕವಾದ ಕಷ್ಟನಷ್ಟಗಳನ್ನು ಅನುಭವಿಸುವ ಕಾಲವಿತ್ತು. ಇಂತಹದರಲ್ಲಿಯೂ ಅಣ್ಣಾ ಅವರು ತಮ್ಮ ಕುಟುಂಬವನ್ನೂ ಕುಟುಂಬಿಗಳೂ ಅವರನ್ನೂ ಒಳ್ಳೆಯ ರೀತಿಯಲ್ಲಿ ಸಂಭಾಳಿಸಿದರು, ಪೋಷಿಸಿದರು. ಆದರೆ ಇನ್ನುಳಿದ ವಿಷಯಗಳಲ್ಲಿ ಮಾತ್ರ ಕುಟುಂಬದಲ್ಲಿ ಆನಂದವೇ ತುಂಬಿಕೊಂಡಿರುತ್ತಿತ್ತು. ಒಂದು ದಿನ ಧಾರವಾಡದಲ್ಲಿ ಅವರ ಮನೆಯಲ್ಲಿದ್ದಾಗ ನಮಗೆ ಏನೋ ತೋರಿಸಬೇಕೆಂದು ಅವರು ತಮ್ಮ ಕಪಾಟು ತೆರೆದರು. ಅದರಲ್ಲಿ ತುರುಕಿ ಇಟ್ಟ ಎಷ್ಟೋ ಕಾಗದ-ಪತ್ರಗಳು ಧಪಧಪನೆ ನೆಲಕ್ಕೆ ಬಿದ್ದವು ಅವೆಲ್ಲವನ್ನೂ ಹೊಂದಿಸಿ, ಕೂಡಿಸಿ ಇಡಲು ನಾನೂ ಅವರಿಗೆ ನೆರವಾಗಲು ಹೋದೆ. ನನ್ನ ಗಮನಕ್ಕೆ ಬಂದ ವಿಚಿತ್ರವೆಂದರೆ ಅದರಲ್ಲಿ ಬಂದ ಎಷ್ಟೋ ಪತ್ರಗಳನ್ನು ತೆರೆದು ನೋಡಿರಲೂ ಇಲ್ಲ. ಬಹುಶಃ ಅಣ್ಣಾ ಅವರು ಊರಲಿಲ್ಲದಾಗ ಬಂದ, ಬಂದ ಮೇಲೆ ಅವರಿಗೆ ತೋರಿಸಲೆಂದು ಇಟ್ಟು ತೊರಿಸುವುದು ಮರೆತು ಹೋದ ಪತ್ರಗಳವು. ಕೆಲವು ಪತ್ರಗಳಂತು ತಿಂಗಳುಗಳ ಹಿಂದಿನ ಪತ್ರಗಳು ಒಡೆದು ನೋಡಿದರೆ ಸಾಕಷ್ಟು ಸೌಕರ್ಯ ಸಂಭಾವನೆಗಳನ್ನು ಕೊಡಲೊಪ್ಪಿ ಸಂಗೀತ ಕಾರ್ಯಕ್ರಮಕ್ಕೆ ಕರೆದ ಆಮಂತ್ರಣಗಳು. ಸಮಯವು ಮಿಕ್ಕಿ ಹೋಗಿತ್ತು. ಕೇವಲ 6 ಲಕ್ಷಕ್ಕಿಂತ ಸಾಕಷ್ಟು ಹಾನಿಯೇ ಆಗಿತ್ತು. ಅಣ್ಣಾ ಎಂದಿನಂತೆ ಲೊಚಗುಟ್ಟುತ್ತ ನಕ್ಕರು. ಆ ವಿಷಯ ಅಲ್ಲಿಗೆ ಮುಗಿಯಿತು.

ಒಂದು ಸಲ ನಮ್ಮ ಮನೆಯಿಂದ ಅವರು ಮುಂಬಯಿಗೆ ಹೋಗುತ್ತಿದ್ದರು. ಅವರನ್ನು ರೈಲಿನಲ್ಲಿ ಕೂಡಿಸಿ ಅವರ ಲಗೇಜುಗಳನ್ನು ಒಳಗಿಟ್ಟು ನಂತರ ನಾನು "ಟಿಕೀಟು ತಗೊಂಡಿರಲ್ಲಾ?" ಎಂದೆ. "ಹಾಂ ತಗೊಂಡೀನಿ" ಎಂದು ಅಣ್ಣಾ ಕಿಸೆಗೆ ಕೈ ಹಾಕಿ ಎಂಟು-ಹತ್ತು ಟಿಕೀಟುಗಳನ್ನು ಹೊರ ತೆಗೆದರು. ಯಾವಾಗಲೋ ಎಲ್ಲೆಲ್ಲಿಯೋ ಹೋಗಿದ್ದರ ಆ ಟಿಕೀಟುಗಳು. ಅದರಲ್ಲಿ ಪುಣೆ-ಮುಂಬಯಿಯ ಟಿಕೀಟುಗಳೂ ಮೂರು-ನಾಲ್ಕು ಇದ್ದವು. ನಾನು ಅವರಿಗೆ ಈಗ

ಬೇಕಾಗಿದ್ದ ಟಿಕೀಟನ್ನು ಅದರಲ್ಲಿಂದ ಅವರಿಗೆ ಹುಡುಕಿ ಕೊಟ್ಟು ಉಳಿದವುಗಳನ್ನೆಲ್ಲ ನಾನೇ ಇಟ್ಟುಕೊಂಡೆ. ಅವರು ಎಂದಿನಂತೆ ದೊಡ್ಡದಾಗಿ ನಕ್ಕರು ಅಷ್ಟೇ. ಆದರೆ ನನಗನ್ನಿಸುತ್ತಿತ್ತು ಇವರಿಗೆ ಇಷ್ಟು ಜನ ಹೆಣ್ಣು ಮಕ್ಕಳಿದ್ದಾರೆ ಯಾರಾದರೂ ಒಬ್ಬರು ಅವರ ಈ ಎಲ್ಲ ಅವಶ್ಯಕತೆಗಳ ಬಗೆಗೆ ಲಕ್ಷ್ಯವಹಿಸಿದ್ದರೆ ಇವರಿಗೆ ಹೆಚ್ಚು ಸಹಾಯವಾಗುತ್ತಿರಲಿಲ್ಲವೆ?" ಎಂದು. ಆದರೆ ಅದೂ ಸಾಧ್ಯವಿರಲಿಲ್ಲ ಸ್ವತಃ ಅಣ್ಣಾ ಅವರಿಗೆ ಈ ಅವಶ್ಯಕತೆಯು ಬೇಕಾಗಿರಲಿಲ್ಲ. ಮತ್ತು ಇದರಿಂದಾಗಿ ಅವರಿಗೆ ಯಾವ ಕೊರತೆಯೂ ಅವರಿಗೆ ಉಂಟಾಗಿರಲಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಆದ ಮಿತಿಗಳಿರುತ್ತವೆ, ತಮ್ಮದೇ ಆದ ಕ್ಷಿತಿಜಗಳಿರುತ್ತದೆ. ಕ್ಷಿತಿಜವೆಂದರೆ ಅದೂ ಒಂದು ಬಗೆಯ ಕಣ್ಣುಗಳ ಮಿತಿಯ ಸಂಕೇತವೇ ಅಲ್ಲವೇ? ನಮ್ಮ ನಮ್ಮ ದೃಷ್ಟಿಯ ಜಿಗಿತ ತಲುಪಬಹುದಾದ ಹದ್ದುಗಳೇ ನಮ್ಮ ನಮ್ಮ ಕ್ಷಿತಿಜಗಳು. ಅಣ್ಣಾ ಅವರ ಒಳಗಣ್ಣುಗಳಿಗೆ ಅತೀ ದೂರದ ಅನಂತದೊಳಗಿನ ರಾಗಗಳು ಕೂಡ ಕಾಣಿಸುತ್ತಿದ್ದವು. ಅದರೊಳಗಿನ ನಕ್ಷತ್ರಗಳಂತಹ ಸ್ವರಗಳ ಪ್ರಕಾಶದ ನಿಶ್ಚಿತ ಸ್ಥಾನಗಳು ಕೂಡ ಖಚಿತವಾದ ರೀತಿಯಲ್ಲಿ ತಿಳಿದಿರುತ್ತಿದ್ದವು ಆದರೆ ದಿನಕ್ಕೆ ಹತ್ತು ಸಲ ತೆರೆಯುತ್ತಿದ್ದ ತಮ್ಮ ಕಪಾಟಿನೊಳಗೆ ಅರಿವೆಗಳು ಹಣ ತೆರೆದು ನೋಡದೆ ಬಿದ್ದ ಪತ್ರಗಳೂ, ಎಲ್ಲವೂ ಅಸ್ತವ್ಯಸ್ತವಾಗಿ ತುರಕಲ್ಪಟ್ಟಿದೆ ಎಂಬುದು ಮಾತ್ರ ಅವರಿಗೆ ತಿಳಿಯುತ್ತಿರಲಿಲ್ಲ. ಬಹುಶಃ ಅವರ ಬಾಹ್ಯ ದೃಷ್ಟಿಯ ಕ್ಷಿತಿಜಕ್ಕೂ ಅವರ ತಂಬೂರಿಯ ಸ್ವರಗಳಷ್ಟೇ ಮುಟ್ಟಿ ಕಂಪಿಸುತ್ತಿರಬೇಕು. ಆ ಪ್ರದೇಶದ ಆ ಕಡೆಗಿನ ಜಗತ್ತು ಅದು ತಮ್ಮದಲ್ಲವೇ ಅಲ್ಲವೆನಿಸುತ್ತಿರಬೇಕು ಅವರಿಗೆ.

ಅಣ್ಣಾ ಅವರಿಗೆ ಕ್ಯಾನ್ಸರ್ ಆಗಿದೆ ಮತ್ತು ಅದು ಯಾವ ವೈದ್ಯಕೀಯ ಯೋಜನೆಗಳೂ ಉಪಯೋಗಕ್ಕೆ ಬೀಳದಷ್ಟು ವೇಗವಾಗಿ ಹಬ್ಬುತ್ತಿದೆ ಎಂದು ತಿಳಿದ ತಕ್ಷಣ ನಾವಿಬ್ಬರೂ ಧಾರವಾಡಕ್ಕೆ ಹೊರಟು ನಿಂತೆವು. ದಾರಿಯಲ್ಲಿಯೂ ಅಣ್ಣಾ ಅವರ ಗಾಯಕರ ಕ್ಯಾಸೆಟ್ಟುಗಳನ್ನೇ ಕೇಳುತ್ತಿದ್ದೆವು. ಈ ಮೊದಲೂ ಕೇಳಿದ್ದೆ ಆ ಗಾಯನದೊಂದಿಗೆ ಅವರ ಜೊತೆಗಿನ ನಮ್ಮ ನೆನಪುಗಳೂ ನಮ್ಮ ಮನಸ್ಸಿನಲ್ಲಿ ಅಂದು ಹುಡುದಿ ಹಾಕುತ್ತಿದ್ದವು. ಅದರಲ್ಲಿಯ ಒಂದು ನೆನಪೆಂದರೆ ಅಣ್ಣಾ ಅವರನ್ನು ನಮ್ಮ ಮನೆಗೆ ಮೊದಲ ಸಲ ಕರೆತಂದ ಭಾವೋಸಾಹೇಬ ದೀಕ್ಷೀತರ ನೆನಪೂ ಆಯಿತು.

ಅಣ್ಣಾ ಅವರನ್ನು ನಮ್ಮ ಮನೆಗೆ ಕರೆತಂದಿದ್ದ ಈ ಭಾವು ಸಾಹೇಬ ದೀಕ್ಷಿತರು ಈ ಲೋಕವನ್ನು ತೊರೆದದ್ದೂ ಅಣ್ಣಾ ಅವರ ಗಾಯನವನ್ನು ಕೇಳುತ್ತಿರುವಾಗಲೇ. ಒಮ್ಮೆ ಅವರು ತಾವು ಕೇಳಿದ ಅಣ್ಣಾ ಅವರ ಒಂದು ಗಾಯನದ ಕ್ಯಾಸೆಟ್‌ನ್ನು ಅವರ ಅಣ್ಣಾ ಕೇಳಲಿ ಎಂದು ಮತ್ತೆ ಹಾಕಿದ್ದರು. ಒಂದು ವಿಶಿಷ್ಟವಾದ ಘಟ್ಟಕ್ಕೆ ಗಾಯನ ಬಂದಾಗ ಅವರು ತಮ್ಮ ಅಣ್ಣನಿಗೆ ಹಾಂ ನೋಡು ಇಧೆಂಗ ಮದೀ ಮ್ಯಾಲೇ ತೆರೀ ಹಾಂಗ ಏರಿ ಬರ್ತದ ಹಾಂ ನೋಡು ಅದೇ ಅದೇ ಧಾ...... ಅದೇ 'ಧಾ' ಅದೇ 'ಧಾ' ಆ ಮಾರನೇ 'ಧಾ' ದ ಆಘಾತದ ಹೊತ್ತಿಗೇನೆ ದೀಕ್ಷಿತರ ಪ್ರಾಣ ಹೋಯಿತು. ಎಲ್ಲವೂ ವಿಚಿತ್ರ ಹೀಗೆಯೇ ಆ ಸ್ನೇಹಿತರು ಹೋದರು. ಈಗ ಆ ಅಣ್ಣಾ ಅವರೂ ಹೋದರು.

ಒಂದು ಸಲ ಅಣ್ಣಾ ಅವರು ಧಾರವಾಡಕ್ಕೆ ಮರಳಿ ಹೋಗಲೆಂದು ಸ್ಟೇಶನ್ನಿಗೆ ಬಂದರು. ಅವರನ್ನು ಕಳಿಸಲು ನಾರಳಕರ ಅವರು ಸ್ಟೇಶನ್ನಿಗೆ ಗಾಡಿ ತೆಗೆದುಕೊಂಡು ಬಂದಿದ್ದರು. ನಾರಳಕರು ಕೇಳಿದರು

"ಅಣ್ಣಾ ಇನ್ನ ಮತ್ತೆ ತಿರುಗಿ ಎಂದ ಬರ್ತಿರಿ?"

"ಬರ್ತೀನಿ ಖರೇನ ಬರ್ತೀನಿ ಹತ್ತನೇ ತಾರೀಖು ಬರ್ತೀನಿ. ಹನ್ನೊಂದನೇ ತಾರೀಖು ಇಲ್ಲೇ ಮತ್ತ ಸಂಗೀತ ಅದ"

"ಅದೇ ನೀವು ಹತ್ತನೇ ತಾರೀಖು ಬರಾವ್ರೆ ಇದ್ದರ, ಅದಕ್ಕೂ ಎರಡು ದಿನ ಮೊದಲ ಬರ್ಲಿಕ್ಕೆ ಏನ ಹರಕತ್ತದ? ಎಂಟನೇ ತಾರೀಖೇ ಬರ್ರೆಲಾ"

"ಯಾಕ? ಎಂಟನೇ ತಾರೀಖು ಏನದ?"

"ಅರೇ, ಭಾಯೀಯವರ ಅರವತ್ತನೇ ವರ್ಷದ ಹುಟ್ಟಿದ ಹಬ್ಬ ಎಂಟನೇ ತಾರೀಕೇ ಅಲ್ಲೇನು?"

"ಸರಿ, ಹಾಂಗಾರ ನಾ ಎಂಟನೇ ತಾರೀಖ ಬರ್ತೇನಿ" ಎಂದರು ಅಣ್ಣಾ.

ಅಣ್ಣಾ ಆರನೇ ತಾರೀಖಿನಂದೇ ಬೆಳಿಗ್ಗೆ ಬಂದರು. ಏಳನೇ ತಾರೀಖಿನ ಮಧ್ಯರಾತ್ರಿಯಿಂದ ಶುಭಾಶಯ ಹೇಳುವ ಫೋನುಗಳು ಬರತೊಡಗಿದವು. ಲೋಕದ ಜನರ ಉತ್ಸಾಹಕ್ಕೆ ಮೇರೆ ಇರಲಿಲ್ಲ. ನಮ್ಮನ್ನು ಮಲಗಲು ಕೂಡ ಜನರು ಬಿಡುತ್ತಿರಲಿಲ್ಲ. ಬೆಳಗಿನ ಮೂರು ಗಂಟೆಯ ಮೊದಲೇ ನಾವೆಲ್ಲ ಎದ್ದೆವು. ಮೂರುವರೆಯ ಹೊತ್ತಿಗೆ ಚಹಾ ಕುಡಿ-ಕುಡಿಯುತ್ತಲೇ ಅಣ್ಣಾ ಭೈರವ ಹಾಡಲು ಶುರುಮಾಡಿದರು. ಆ ಡಾಯನಿಂಗ್ ಟೇಬಲ್ ಮೇಲೆ ಕುಳಿತೇ ಅದರದೇ ಠೇಕಾಗಳನ್ನು ನುಡಿಸುತ್ತ ಅರ್ಧ ಮುಕ್ಕಾಲು ತಾಸು ಭೈರವ ಹಾಡಿದರು. ಭಾಯೀಯ ಹುಟ್ಟುಹಬ್ಬಕ್ಕೆ ಅಣ್ಣಾ ಅವರು ಕೊಟ್ಟ ಆ ಉಡುಗೊರೆ ವಿಶಿಷ್ಟವಾಗಿತ್ತು.

"ಅಣ್ಣಾ ನಾ ನಿಮಗೊಂದು ಮಾತು ಕೇಳಲ?" ನಾನೆಂದೆ.

"ಕೇಳಲಾ" ಅಣ್ಣಾ ನಕ್ಕರು.

ಈ ಅವರ ನಗೆ ಖಾಸ ಅವರದೇ ಆಗಿತ್ತು ಅದು ಸದಾ ಅವರ ಜೊತೆಗಿರುತ್ತಿತ್ತು. ಸುಖ ದುಃಖ ಯಾವುದೇ ಪ್ರಸಂಗದಲ್ಲೂ ಅದು ಸೂಕ್ತ ರೂಪ ಧರಿಸಿ ವ್ಯಕ್ತವಾಗುತ್ತಿತ್ತು.

"ಅಣ್ಣಾ, ಪ್ರತ್ಯೇಕ ಗವಾಯಿಗಳಿಗೂ ಅವರವರದೇ ಆದ 'ಷಡ್ಜ' ಇರತದಂತಾರೆ ಅದು ಕರೇ ಎರಡು ಬಿಳೀ ನಾಲ್ಕು ಏನಾದರೂ ಇರಬಹುದು. ಆದ್ರ ಸಂಗೀತದ ಪ್ರಾರಂಭಕ್ಕೆ ಸಂಗೀತಗಾರ ಒಮ್ಮೆ ಆ 'ಸಾ' ಹಚ್ಚಿದಾ ಅಂದ್ರ ಮುಂದ ಅಂವಾ ಯಾವ ರಾಗವನ್ನ ಹಾಡಾಂವಿದ್ದಾನ ಅನ್ನೂದು ಮಂದಿಗೆ ತಕ್ಷಣ ತಿಳದಬಿಡ್ತದಂತ ಈ ಅಂದಾಜು ಅವರಿಗ್ಯಾಂಗ ಸಿಗ್ತದ? ಕೇವಲ ಆ 'ಸಾ'ದ ಮ್ಯಾಲೆ ಮುಂದಿನ ರಾಗ ಹ್ಯಾಂಗ ಹೊಳೀತದ?"

"ಹೌದು ತಾಯೀ ಆ 'ಸಾ' ಹಚ್ಚಾತಾರಲ್ಲಾ ಅದು ಹೊರಗ ಬರೂವಾಗ ಅದು ತಾನೊಂದೇ ಬತ್ತಲೇಯಾಗಿ ಬರೂದೇ ಇಲ್ಲ. ಅದು ತನ್ನ ರಾಗದ ಎಲ್ಲ ವೇಷ-ಭೂಷಣಗಳನ್ನ ಹಾಕ್ಕೊಂಡ ಹೊರಗ ಬರ್ತದ ಅದಕ್ಕೆ ಅದನ್ನ ಸರಿಯಾಗಿ ತಿಳಿಲಿಕ್ಕೆ ಆಗ್ತದ.

ನಾವು ಪುಣೆಯಲ್ಲಿದ್ದಾಗ ಸತತವಾಗಿ ಮೂರು ದಿನ ಅಣ್ಣಾ ಅವರ ಮೆಹಫಲ್ಲುಗಳನ್ನು ಆಯೋಜಿಸಿದ್ದೆವು. ರಾತ್ರಿಯದೊಂದು ಸಂಜೆಯದೊಂದು, ಬೆಳಗಿನದೊಂದು ಕೇಳಲು ಸಂಗೀತದ ತೀರ ವಿಶಿಷ್ಟ ಆಸಕ್ತಿಯ ಏಲೆಂಟು ನೂರು ಜನ ಶ್ರೋತೃಗಳು. ಅಣ್ಣಾ ಅವರು ಎರಡು ಮೂರು ದಿನ ಮೊದಲೇ ಮುಕ್ಕಾಮಿಗೆಂದೇ ಬಂದಿದ್ದರು. ತಬಲಜಿ ಇನ್ನಿತರ ಸಹವಾದ್ಯಕಾರರು ಎಲ್ಲವೂ ಅವರು ಹೇಳಿದಂತೆಯೇ ಎಲ್ಲವೂ ಅತ್ಯಂತ ಶಿಸ್ತುಬದ್ಧ. ಆದರೆ ಏಕೋ ಅವರು

ಮಾತ್ರ ತುಂಬ ಅಸ್ವಸ್ಥರಾಗಿಯೇ ಕಾಣುತ್ತಿದ್ದರು. ರಾತ್ರಿ ಒಂದು ಸಣ್ಣ 'ಖಟ್' ಎಂಬ ಸಪ್ಪಳವಾದರೂ ನನಗೆ ಎಚ್ಚರವಾಗಿಬಿಡುತ್ತದೆ. ಎದ್ದು ನೋಡಿದರೆ ಅಣ್ಣಾ ಅತ್ತಿಂದಿತ್ತ ಸುತ್ತಾಡುತ್ತಿದ್ದರು.

"ಏನಾತು? ಏನಾರ ಬೇಕೇನು ಅಣ್ಣಾ"

"ಏನಿಲ್ಲ, ನೀವು ಮಲಕೋಳ್ರಿ"

ತುಸು ಹೊತ್ತಿನ ನಂತರ ಮತ್ತೆ ನೋಡಿದರೆ ಅವರು ಇನ್ನೂ ಮಲಗಿರಲಿಲ್ಲ.

"ಅಣ್ಣಾ ಚಹಾ ಮಾಡಿ ಕೊಡ್ಲೇನು?"

"ನೀವ್ಯಾಕ ತ್ರಾಸು ತೊಗೋತಿರಿ? ಇದೇನು ಚಹಾದ ವ್ಯಾಳ್ಯಾನ? ನೀವು ಮಲಕೋರಿ"

"ಅದರಾಗೇನದ ಅಣ್ಣಾ"

ಎಂದು ನಾನು ಚಹಾ ಮಾಡಿಕೊಟ್ಟೆ. ನಾವಿಬ್ಬರು ಚಹಾ ಕುಡಿಯುತ್ತ ಕುಳಿತೆವು.

"ಯಾಕ ಬರೋಬರಿ ಅನಸವಲ್ತೇನು? ನೀವ್ಯಾಕೋ ಅಸ್ವಸ್ಥರಾಧಾಂಗ ಕಾಣಸ್ತದ"

"ಛೆ,ಛೆ, ಹಂಗೇನಿಲ್ಲ ತಾಯೀ, ಏನೂ ಆಗಿಲ್ಲ, ಎಲ್ಲಾ ಆರಾಮದ. ಆದ್ರ ನೀವು ಇಷ್ಟೊಂದು ಮಂದಿನ್ನ ಕೂಡಿಸಿ, ಇಷ್ಟು ದೊಡ್ಡ ಕಾರ್ಯಕ್ರಮ ಮಾಡಲಿಕ್ಕೆ ತಯಾರಾಗಿರಿ.

ಎಲ್ಲಾ ಸರಿಯಾಗಿ, ಛಂದಾಗಿ, ಆಗಬೇಕಲ್ಲಾ"

ಎಂದು ಅವರು ಎಂದಿನಂತೆ ನಕ್ಕರು. ಆದರೆ ಧ್ವನಿಯಲ್ಲಿ ಮುಖದಲ್ಲಿ ಚಿಂತೆ ಎದ್ದು ಕಾಣುತ್ತಿತ್ತು.

ಆ ಮೂರೂ ದಿನ ಸಂಗೀತ ಬೈಠಕ್ಕುಗಳು ದೃಷ್ಟಿ ತಾಗುವಷ್ಟು ಸುಂದರವಾದವು. ಕೇಳಲು ಬಂದವರಿಗೆಲ್ಲ ಧನ್ಯತೆ ಎನ್ನಿಸಿತು. ಇಂದಿಗೂ ಜನರು ಆ ಹಾಡಿನ ನೆನಪು ಹೆಣೆಯುತ್ತಲೇ ಇರುತ್ತಾರೆ. ಆ ಎಲ್ಲ ಕಾರ್ಯಕ್ರಮಗಳು ಮುಗಿದ ರಾತ್ರಿ ಅಣ್ಣಾ, ಗಾಢವಾಗಿ ನಿದ್ರೆ ಮಾಡಿದರು. ಮರುದಿನ ಮುಂಜಾನೆ ಯಾಕೆ ಅವರಿನ್ನೂ ಏಳಲೊಲ್ಲರು? ಎಂದು ನಮಗೆಲ್ಲ ಚಿಂತೆಯಾಯಿತು. ಅಷ್ಟು ಗಾಢವಾಗಿ ಅವರು ಮಲಗಿದ್ದರು. ಜೀವನದುದ್ದಕ್ಕೂ ನೂರಾರು ಸಂಗೀತ ಕಚೇರಿಗಳನ್ನು ನಡೆಸಿದ ಈ ಸಿದ್ಧಸ್ವರದ ಗಾಯಕ, ಈ ಮೂರೂ ದಿನಗಳ ಕಾರ್ಯಕ್ರಮಗಳಲ್ಲಿ ತಮ್ಮ ಜೀವನದ ಅಖಂಡ ಸಾಧನೆಯ ತಪಸ್ಸನ್ನೇ ಪಟಕ್ಕಿಟ್ಟು ಹಾಡಿದರೆಂಬುದು ನಮಗೂ ಎನ್ನಿಸಿತು. ನಾವೆಲ್ಲ ಅವರ ಮೇಲೆಯೇ ಭಾರ ಹಾಕಿ ಯೋಜಿಸಿದ ಕಾರ್ಯಕ್ರಮ ಅದಾಗಿತ್ತು. ಅದು ಸರಿಯಾಗಿ ಆಗಬೇಕು ಎಂಬ 'ಪ್ರೆಶರ್' ಕೂಡ ಅವರಿಗೂ ಇತ್ತು. ಅದನ್ನವರು ಒಂದು ಸಲ ಹೇಳಿಯೂ ಇದ್ದರು.

ನಾವು ಧಾರವಾಡವನ್ನು ಮುಟ್ಟಿದೆವು. ಕೆಲವು ತಿಂಗಳ ಹಿಂದಷ್ಟೇ ಅವರು ಮೂತ್ರಪಿಂಡಗಳ ಜೀವ ಹಿಂಡುವ ನೋವಿನಿಂದ ಹೊರಗೆ ಬಂದಿದ್ದರು. ಅದು ಕಡಿಮೆಯಾದ ನಂತರ ಕೆಲವೆಡೆಗೆ ಅವರ ಗಾಯನವೂ ನಡೆದಿತ್ತು. ಪುಣೆಗೆ ಬಂದಾಗಲೇ ಅವರಲ್ಲಿ ಉಂಟಾಗಿದ್ದ ಅಶಕ್ತತೆ, ನಮಗೂ ಸ್ವಲ್ಪ ತಿಳಿದಿತ್ತು. ಆದರೆ ಈ ಕೊನೆಯ ಭೇಟಿಯಲ್ಲಿ ಅವರನ್ನು ನೋಡುವಂತಿರಲಿಲ್ಲ. ಸಾವು ತನ್ನ ಹಿಡಿತವನ್ನು ಅವರ ಮೇಲೆ ಆಗಲೇ ಸಾಧಿಸತೊಡಗಿತ್ತು.

ಅವರಿಗೆ ಕ್ಯಾನ್ಸರ್ ಆಗಿದೆ ಎಂದು ಅವರಿಗೆ ಹೇಳಿರಲಿಲ್ಲ. ಆದರೆ ಅವರಿಗೆ ತಾವಿನ್ನು ಆ ಜಡ್ಡಿನಿಂದ ಪಾರಾಗುವುದಿಲ್ಲವೆಂದು ತಿಳಿದಿತ್ತು. ಮಠಕ್ಕೆ ಹೋಗಿ ಸೇವೆ ಸಲ್ಲಿಸಿ ಬರುವ ಆಶೆಯನ್ನು ಅವರು ಒಂದು ಸಲ ವ್ಯಕ್ತಪಡಿಸಿದ್ದರು. ಅಲ್ಲಿಗೆ ಹೋಗಿ ಎಂಟು-ಹತ್ತು ನಿಮಿಷ ಹಾಡಿಯೂ ಬಂದಿದ್ದರು. ಕೇವಲ ಮನಸ್ಸಿನ ಸಮಾಧಾನ, ಆಗ ಅವರ ಧ್ವನಿ ಎಷ್ಟು ಕ್ಷೀಣವಾಗಿತ್ತೆಂದರೆ, ಅವರ ಹಾಡನ್ನು ಧ್ವನಿಮುದ್ರಿಸಿಕೊಳ್ಳಲೂ ಆಗಲಿಲ್ಲ.

"ಅಣ್ಣಾ, ನೀವು ಅವತ್ತು ಮಠಕ್ಕೆ ಹೋದಾಗ ಏನು ಹಾಡಿದಿರಿ?"

ಬಸವೇಶ್ವರರ ಆ ಕನ್ನಡದ ವಚನವನ್ನು ಹೇಳಿ, ನಂತರ ಅದರ ಮರಾಠಿ ಅರ್ಥವನ್ನು ಹೇಳಿದರು ಅಣ್ಣಾ.

"ಚಂದ್ರ ಮತ್ತು ಸಮುದ್ರ ಇವರ ನಡುವೆ ಎಂಥ ಗಾಢ ಸ್ನೇಹ. ಇಬ್ಬರ ಸಂಬಂಧವೂ ಅತ್ಯಂತ ಆಪ್ತವಾದುದು. ಆದರೆ ರಾಹು-ಕೇತುಗಳು ಚಂದ್ರನನ್ನು ಬಂಧಿಸಿದರೆ, ಆಗ ಆ ಸಮುದ್ರವೂ ಚಂದ್ರನಿಗೆ ಯಾವ ಸಹಾಯವನ್ನೂ ಮಾಡಲಾರದು. ಸಮುದ್ರವು ಉಕ್ಕೇರಿದಾಗ ಆಗಸ್ತಿ ಇಡೀ ಕಡಲನ್ನೇ ಕುಡಿದುಬಿಡುತ್ತಾಳೆ. ಆಗ ಚಂದ್ರನೂ ಏನೂ ಸಮುದ್ರಕ್ಕೆ ಸಹಾಯ ಮಾಡಲಾರ. ಕೊನೆಗೂ ಇಲ್ಲಿ ಯಾರಿಗೂ ಯಾರೂ ಇಲ್ಲ. ಈ ದಾರಿಯನ್ನು ನಾವು ನಾವೇ ಸವೆಸಬೇಕು".

ಅಣ್ಣಾ ಅವರ ಆ ಕೊನೆಯ ಭೇಟಿಯ ಸಂದರ್ಭದಲ್ಲಿ, ಅವರಿಗೆ ನಮ್ಮಿಂದ ತ್ರಾಸಾಗಬಾರದೆಂಬ ರೀತಿಯಲ್ಲೇ ಅವರ ಜೊತೆ ಕಾಲ ಕಳೆದೆವು. ಅವರ ಸಂಬಂಧಿಕರಿಗೆ, ಡಾಕ್ಟರರಿಗೆ ಭೇಟಿಯಾದೆವು. ಅವರು ಹೇಳಿದ್ದನ್ನೆಲ್ಲ ತಿಳಿಯಲು ಪ್ರಯತ್ನಿಸಿದೆವು. ಏನಿದ್ದರೂ ಇದು ಅವರ ಕೊನೆಯ ಭೇಟಿ ಎಂಬುದು ಸ್ಪಷ್ಟವಾಯಿತು.



ದಿಲ್ಲಿಯಲ್ಲಿ ಅಣ್ಣಾ ಅವರ ಮೊದಲ ಭೇಟಿಯಾದಾಗ ನಾನವರಿಗೆ ನಮಸ್ಕರಿಸಿದ್ದೆ. ಆದರೆ ಆ ನಂತರ ಈ ನಮಸ್ಕಾರ-ಚಮತ್ಕಾರಗಳ ಪ್ರಸಂಗವೇ ಬರಲಿಲ್ಲ. ಆದರೆ ಈಗ ಧಾರವಾಡದಿಂದ ಹೊರಡುವಾಗ ಅವರ ನಿರೂಪ ಪಡೆಯಲು ಅವರ ಬಳಿ ಹೋಗಿ ಕೈಮುಗಿದು ನಮಸ್ಕರಿಸಿದೆ. ಮನಸ್ಸು ತುಂಬ ನಮಸ್ಕರಿಸಿದೆ. ಅವರೂ ಕೈಮುಗಿದರು. ಕಣ್ಣು ಮುಚ್ಚಿದರು. ಬಹುಶಃ ನನಗನ್ನಿಸುವಂತೆ ಅವರು ನನಗೆ ಮಾಡಿದ ಕೊನೆಯ ನಮಸ್ಕಾರವೇ ಅದಾಗಿತ್ತು.

ನಮಸ್ಕಾರವಲ್ಲ ಅದು. ಬೀಳ್ಕೊಡುತ್ತ ಹೇಳುವ 'ರಾಮ ರಾಮ' ದ ಸಂಕೇತವಾಗಿತ್ತು. ಈ ಕೊನೆಯ ಭೇಟಿಯಲ್ಲೇ ಇನ್ನೂ ಒಂದು ವಿಷಯ ತಿಳಿಯಿತು. ಅಣ್ಣಾ ಒಮ್ಮೆಯೂ ಆಗ ನಕ್ಕಿರಲಿಲ್ಲ. ಮಠದಲ್ಲಿ ಅಂದು ಅವರು ಹಾಡಿದ ಆ ಬಸವಣ್ಣನ ವಚನದ ಜೊತೆಗೆ ಅವರ ಸ್ವರವೂ, ಅವರ ಅಂಗಭೂತವಾಗಿದ್ದ ಸ್ವರವೂ ಅಂದೇ ಮೂಕವಾಯಿತು. ಬಸವೇಶ್ವರರ ಆ ವಚನದ ಅರ್ಥ ಮಾತ್ರ, ಅವಶ್ಯಕತೆಗಿಂತ ಹೆಚ್ಚು ತನ್ನ ಪದರುಗಳನ್ನು ಬಿಡಿಸಿ ತೋರಿಸುತ್ತ ನನ್ನನ್ನು ಕಾಡತೊಡಗಿತು. ಕಣ್ಮುಂದೆ ಕುಣಿಯತೊಡಗಿತು.

ವಸಂತಾ ಹೋದ, ಕುಮಾರ ಹೋದ, ಈಗ ಅಣ್ಣಾ ಕೂಡ ಹೋದರು. ತಮ್ಮ ತಮ್ಮ ಧ್ವನಿಮುದ್ರಿತ ಗಾಯನವನ್ನು ಹಿಂದೆ ಬಿಟ್ಟು ಹೋದರು. ಗಾಯಕರು ಹೋದರೂ ಗಾಯನವು ಉಳಿಯುತ್ತಲೇ ಇರುತ್ತದೆ. ಅಲ್ಲಿ ಹೊಸ ಹೊಸ ಶಕ್ತಿಗಳ ಸಂಚಲನವೂ ನಡೆಯುವಂತಹದೇ. ಆದರೆ ನಮ್ಮ ಮನೆಯೊಳಗಿನ ಸಂಗೀತ ಮಾತ್ರ ಅಂದು ಮುಗಿಯಿತು. ಅಣ್ಣಾ ಅವರ ಜೊತೆಗೆ ಅವರ ಆ ಕುಶಲ ನಗುವೂ ಮುಗಿಯಿತು.

ಮೂಲ : ಸುನಿತ ದೇಶಪಾಂಡೆ ಅನು: ಆನಂದ ಝುಂಜರವಾಡ

ಟಿಪ್ಪಣಿ : ಮರಾಠಿಯ ಖ್ಯಾತ ಬಹುಮುಖೀ ಕಲಾವಿದ ಪು.ಲ. ದೇಶಪಾಂಡೆಯವರ ಹೆಂಡತಿ ಸುನೀತಾ ದೇಶಪಾಂಡೆ ಕೂಡ ಅತ್ಯಂತ ಪ್ರಖರ ಕಲಾಕರ್ಷಣೆಯುಳ್ಳ ಧೀಮಂತ ಚಿಂತಕರಾಗಿದ್ದರು. 1925 ಜುಲೈ 2ರಂದು ರತ್ನಾಗಿರಿಯಲ್ಲಿ ಠಾಕೂರ ಮನೆತನದಲ್ಲಿ ಹುಟ್ಟಿದ ಸುನೀತಾ ಅವರು ಮುಂಬಯಿಯ ದಾದರಿನಲ್ಲಿದ್ದ ಓರಿಯಂಟಲ್ ಹೈಸ್ಕೂಲಿನಲ್ಲಿ ಶಿಕ್ಷಣ ಪಡೆದರು. ಅದೇ ಶಾಲೆಯ ಶಿಕ್ಷಕರಾಗಿದ್ದ ಪು.ಲ. ದೇಶಪಾಂಡೆಯವರನ್ನು ಪ್ರೀತಿಸಿ ಮದುವೆಯಾದರು. ಮದುವೆಯ ಮೊದಲು ಸ್ವಾತಂತ್ರ್ಯ ಚಳುವಳಿಯಲ್ಲೂ ತೀವ್ರವಾಗಿ, ಉಗ್ರಗಾಮಿ ಬಗೆಯಲ್ಲಿ ಭಾಗವಹಿಸಿದ್ದರು. ಮದುವೆಯ ನಂತರದ ಅವರ ಇಡೀ ಬದುಕು, ಒಬ್ಬ ಪ್ರಚಂಡ ಶಕ್ತಿಯ ಕಲಾವಿದನ ಸಂಗಾತಿಯಾಗಿ ಪಡೆದ ಅನುಭವಗಳಿಂದ, ಆ ಅನುಭವಗಳ ಮೂಲಕ ಕಲೆ ಮತ್ತು ಬದುಕುಗಳ ಅರ್ಥವನ್ನು ಅರಿಯಲು ಅವರ ಭಾವಪೂರ್ಣ ಪ್ರಜ್ಞೆ ನಡೆಸಿದ ಚಿಂತನ ಪ್ರಕ್ರಿಯೆಗಳಿಂದ, ಶ್ರೀಮಂತವಾಯಿತು.



ಸುನೀತಾ ದೇಶಪಾಂಡೆ ಬರೆಯಲು ತೊಡಗಿದ್ದೇ ಬಹಳ ತಡವಾಗಿ, ಅವರೇ ಬರೆದ ಅವರ ಆತ್ಮಕತೆ "ಆಹೇ ಮನೋಹರ ಹರಿ...." 1990ರಲ್ಲಿ ಪ್ರಕಟವಾಯಿತು. (ಇದರ ಕನ್ನಡ ಅನುವಾದವನ್ನು ಉಮಾ ಕುಲಕರ್ಣಿಯವರು "ಬಾಳು ಸೊಗಸಾದರೂ..." ಎಂಬ ಶೀರ್ಷಿಕೆಯಡಿ ಮಾಡಿದ್ದಾರೆ) 1992ರಲ್ಲಿ 'ಸಮಾಂತರ ಜೀವನ' ಈ ಮರಾಠಿ ಅನುವಾದ ಕೃತಿ ಪ್ರಕಟವಾಯಿತು. ಇಂಗ್ಲೀಷಿನಲ್ಲಿ ಫಿಲಿಪ್ಸ್ ರೋಘ ಅವರು ಬರೆದ "ಪ್ಯಾರಲಲ್ ಲಯವ್ವಜ"

ಎಂಬ ಕೃತಿಯ ಅನುವಾದವಿದು. 'ಮದುವೆ' ಎಂಬ ಸಂಸ್ಥೆಯಲ್ಲಿ ಅನಿವಾರ್ಯವಾಗುವ ವಿಘಟನೆ, ಮತ್ತು ಇಂಥ ಎಲ್ಲ ಬಗೆಯ ವಿಘಟನೆಗಳಲ್ಲೂ ಅಲ್ಲಿ ಅಪಾಯ, ಸಂಕಟವನ್ನು ಅನುಭವಿಸಬೇಕಾಗುವದು ಹೆಣ್ಣೇ, ಎಂಬುದನ್ನು ಚಿತ್ರಿಸುವ, ಐದು ಇಂಗ್ಲೀಷ್ ಲೇಖಕರ ದಾಂಪತ್ಯ-ಕಥನಗಳಿರುವ ಕೃತಿ ಇದು. ಥಾಮಸ್ ಕಾರ್ಲೈಲ - ಜೆನ್ ಕಾರ್ಲೈಲ, ಜಾನ್ ರಸ್ಕಿನ್-ಎಫೀಗ್ರೆ, ಜಾನ್ ಸ್ಟುವರ್ಟ್ ಮಿಲ್ - ಹ್ಯಾಲಿಯಟ್ ಟೇಲರ್, ಚಾರ್ಲ್ಸ್ ಡಿಕನ್ಸ್ - ಕಯಾಥರಿನ್ ಹೊಗಾರ್ಥ್, ಜಾರ್ಜ್ ಹೆನ್ರಿ ಲುಯಿಸ್ - ಜಾರ್ಜ್ ಇಲಿಯಟ್, ಈ ಜೋಡಿಗಳ ಜೀವನ-ಚಿತ್ರಣ ಇದರಲ್ಲಿದೆ. 1998ರಲ್ಲಿ ಅವರ ಗದ್ಯ ಲೇಖನಗಳ ಸಂಗ್ರಹ 'ಸೋಯರೆ ಸಕಳ' ಪ್ರಕಟವಾಯಿತು. 2002ರಲ್ಲಿ ಇನ್ನೊಂದು ಗದ್ಯಲೇಖನಗಳ ಸಂಗ್ರಹ 'ಮಧ್ಯಾಚಿ ಮಾಳ' ಪ್ರಕಟವಾಯಿತು. ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಮೂರು ದಶಕಗಳ ಕಾಲ ಇಂಗ್ಲೀಷ್ ಅಧ್ಯಾಪಕರಾಗಿದ್ದ, ಮರಾಠಿಯ ಖ್ಯಾತ ಕತೆಗಾರ ಜಿ.ಎ. ಕುಲಕರ್ಣಿಯವರಿಗೆ ಬರೆದ ಪತ್ರಗಳ ಸಂಗ್ರಹ 'ಪ್ರಿಯ ಜಿ.ಎ' 2003ರಲ್ಲಿ ಹೊರಬಂದಿತು. ಜಿ.ಎ. ಕುಲಕರ್ಣಿಯವರು ಮರಾಠಿಯ ವಿವಿಧ ಲೇಖಕರಿಗೆ ಈ ಮೂರು ದಶಕಗಳ ಕಾಲ ಬರೆದ ವಿವಿಧ ಪತ್ರಗಳ ನಾಲ್ಕು ಸಂಪುಟಗಳು ಈಗ ಹೊರಬಂದಿವೆ. ಅದರ ಮೊದಲ ಸಂಪುಟ ಸಂಪೂರ್ಣವಾಗಿ ಜಿ.ಎ. ಕುಲಕರ್ಣಿಯವರು ಸುನೀತಾ ದೇಶಪಾಂಡೆಯವರಿಗೆ ಬರೆದ ಪತ್ರಗಳಿಗೇ ಮೀಸಲಾಗಿದೆ. ಸುನೀತಾ ಸೆಪ್ಟೆಂಬರ್ 8, 2009ರಲ್ಲಿ ಪುಣೆಯಲ್ಲಿ ತೀರಿಕೊಂಡರು.

ಸುನೀತಾ ಅವರ ಈ ಎಲ್ಲ ಬರವಣಿಗೆಗಳ ಮುಖ್ಯ ಒಳನೋಟದ ಗುಣವೆಂದರೆ ಅವರ ಭಾವ ಜಗತ್ತು ಮತ್ತು ವೈಚಾರಿಕ ತುಡಿತಗಳು, ಸಾಧಿಸಿಕೊಂಡ ಒಂದು ಅಪೂರ್ವ ಪರಕಾಯ-ಪ್ರವೇಶದ ಶಕ್ತಿ ಎಂದೇ ಎನ್ನಬೇಕು. ಮರಾಠಿ ಸಂಸ್ಕೃತಿಯ ವಿಶಿಷ್ಠ ಚರಿತ್ರೆಯಿಂದಾಗಿ, ಮರಾಠಿ ಸಾಹಿತ್ಯ-ಪ್ರಶ್ನೆಗೆ ಒದಗಿದ ಈ ಬಗೆಯ ಶಕ್ತಿ ಕನ್ನಡದ ಸಾಂಸ್ಕೃತಿಕ ಚಿಂತನೆಗೆ, ಬರಹಕ್ಕೆ, ವಿಚಿತ್ರವಾಗಿಯೇ ಕಂಡಿತು. ಜನಪ್ರಿಯತೆ, ಸೂಕ್ಷ್ಮತೆಗಳ ನಡುವಿನ ಕಂದಕವನ್ನು ಅತ್ಯಂತ ಹಿಡಿತದಲ್ಲಿಟ್ಟುಕೊಳ್ಳಲು ಮರಾಠಿಗರಿಗೆ, ಅವರಿಗೊದಗಿದ ಶಿಕ್ಷಣ, ಫುಲೆ, ಅಗರಕರಂಥವರ ಚಿಂತನ ಪರಂಪರೆಯ ಸಾಹಿತ್ಯ, ಧರ್ಮದಂತಹ ಮೌಲ್ಯಗಳ ಬಗೆಗೆ ಮೊದಲಿನಿಂದಲೂ ಬೆಳೆದು ಬಂದ ಒಂದು ಉದಾರ-ತಿಳುವಳಿಕೆ, ಇವುಗಳಿಂದಲೇ ಹೆಚ್ಚು ಸಾಧ್ಯವಾಗಿದೆ. ಮರಾಠಿ ಭಾಷೆಯ ಲೇಖಕರು ರೂಢಿಸಿಕೊಂಢಿರುವ 'ಲಲಿತ-ಗದ್ಯ' ವೆಂಬ ಶೈಲಿ ಈ ಅರ್ಥದಲ್ಲಿ ತೀರ ವಿಶಿಷ್ಟವಾದುದು.

ಖ್ಯಾತ ಗಾಯಕ ಮಲ್ಲಿಕಾರ್ಜುನ ಮನ್ಸೂರರು ತೀರಿಕೊಂಡಾಗ ಬರೆದ ಸುನೀತಾ ದೇಶಪಾಂಡೆಯವರ ಈ ಲೇಖನವನ್ನು ಅವರ 'ಸೋಯರೆ ಸಕಳ' ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಇದು ಈ ಮೊದಲೆ 1992 ಡಿಸೆಂಬರ್ 28ರ 'ಮಹಾರಾಷ್ಟ್ರ ಟಾಯಿಮ್ಸ್' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಮನ್ಸೂರರ ವ್ಯಕ್ತಿ ಚಿತ್ರವನ್ನು ಹಲವು ಆಯಾಮಗಳಿಂದ ಅರ್ಥ ಮಾಡಿಕೊಳ್ಳಲು ಹೊರಡುವ ಈ ಬರಹದ ಹಿಂದಿರುವ ಅಂತಃಕರಣ ಮತ್ತು ವೈಚಾರಿಕ ಆಯಾಮಗಳು, ತುಂಬ ಧ್ವನಿಪೂರ್ಣವಾಗಿವೆ. ಕನ್ನಡದ ಮನಸ್ಸುಗಳಿಗೆ ಇದು ಅನುಭವಕ್ಕೊದಗಬೇಕೆಂಬ ದೃಷ್ಟಿಯಿಂದ ಅನುವಾದವು. 'ಪತಿವ್ರತೆ'ಯಾಗಿರುವದಕ್ಕಿಂತ 'ಚೆಲುವೆ'ಯಾಗಿರಬೇಕೆಂಬ ರೀತಿಯಲ್ಲಿ ಅನುವಾದಿಸಿದ್ದೇನೆ. ಸಾಧ್ಯವಿದ್ದಷ್ಟು 'ಸ್ವೈರವಾಗದೇ 'ಮುಕ್ತ'ವಾಗಿರಲು ಯತ್ನಿಸಿದ್ದೇನೆ.

●

ಕೋಡಿಗುದ್ದಿನ ಧ್ಯಾನ

– ಚಂದ್ರಶೇಖರ ತಾಳ್ಯ

ನಾನೊಬ್ಬನೇ ಇದ್ದೆ
ಆಗಾಗ
ಅತ್ತಿತ್ತ ಸುಳಿವವರ
ನಗುವವರ, ಅಳುವವರ
ಗಮನವಿರದೆ
ನಾನೊಬ್ಬನೇ ಇದ್ದೆ.

ಸುತ್ತ ಗಿಡ ಮರ ಬಳ್ಳಿ
ಕೋಡಿಗುದ್ದಿನ ಶಿವಸದನದ
ಬಳಿ ದೀಪದ ಬೆಳಕು
ಸಂಜೆ ಮಬ್ಬಿಗೆ ಹರಡಿ
ಹಕ್ಕಿಗಳ ಕಲರವಕೆ ಏನೋ ಮೋಡಿ

ಲಿಂಗ ಮುದ್ರೆಯ ಧ್ಯಾನ

ಅಂಗ ಅಂಗ ಒಳಸರಿವ ಮೌನ
ಭಂಗವಿರದ ಸ್ವಪ್ನಲೋಕದ ನಿಜಕೆ
ನನ್ನ ಆಕೃತಿಯ ಕರಗಿ
ನಾನೊಬ್ಬನೇ ಅಲ್ಲಿ, ನಾನೂ ಇಲ್ಲದಲ್ಲಿ
ಜನವಿದೂರದ ಸ್ಮಶಾನದಲ್ಲಿ
ಈಶ್ವರನ ಅನಂತ ಅಸ್ತಿತ್ವದಲ್ಲಿ.
2
ಹೊರಗೆ ಸದ್ದುಗದ್ದಲದ ಸಂಭ್ರಮ
ಭೀಮಗದೆ ತುರುಸಲ್ಲಿ
ಸುಯೋಧನನ ಉಸಿರಲ್ಲಿ
ಕ್ಷೇತ್ರ ತುಂಬಿದೆ ಬಿಂಬ ಬಿಂಬಗಳ ರಣೋತ್ಸಾಹ

ಹೆರಳು ಬಿಚ್ಚಿ ಕುಂತಿದ್ದಾಳೆ ಪಾಂಚಾಲಿ
ಕೆಂಗಣ್ಣುಗಳ ಬಟ್ಟೆಯಲ್ಲಿ
ರಕ್ತ ನಾಲಿಗೆ ಚಾಚಿ
ಕೊಡು ರಕ್ತ ಕುಡಿ ರಕ್ತ

ಚಂದ್ರಶೇಖರ ತಾಳ್ಯ, 'ಪಲ್ಲವಿ', ಕಾಲೇಜು ರಸ್ತೆ, ಬಸವ ಲೇಔಟ್, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ

ರಕ್ತೋಲ್ಲಾಸ
ಸ್ವರ್ಗಾರೋಹಣಕ್ಕಿದೇ ದಾರಿ
ಏರಿದ್ದು ಇಳಿದದ್ದು ಎಷ್ಟೋ ಬಾರಿ

ಈಚೆ ವೃತ್ತ ಗೆರೆಯಾಚೆ ಕುಂತವನು
ಥಟ್ಟನೆಗರಿದೆ ಮತ್ತೆ ಗುದ್ದಿನೇಕಾಂತಕ್ಕೆ

3
ಕೋಡಿಗುದ್ದಿನ ತುಂಬ ಚೆಲ್ಲಾಡಿದೆ ನಿಶ್ಯಬ್ದ
ಲಂಟಾನು, ತಂಗಟೆ, ಕುರುಚಲು ಹೂ ಚೆಲ್ಲಿ
ಆಗಿನ್ನು ಹೂತ ಹೊಚ್ಚ ಹೊಸ ಹೆಣದ ಗುಡ್ಡೆಯ ಮೇಲೆ
ಬೊಂಬು, ಅಡಿಕೆ ದಬ್ಬೆಯ ಸಿದಿಗೆ ತುದಿಗೆ
ತಾಜಾ ಎಳೆನೀರು, ಬಾಳೆ ಫಲ

ಆಚೆ ಜೀವ ಕಳೆಯುಕ್ಕುವ ಕೆರೆ
ಈಚೆ ತೆಂಗು, ಕಂಗು, ಕಿತ್ತಳೆ,
ಕಂಚಿ, ಮೂದಳ, ನಿಂಬೆ ದಾಳಿಂಬೆ ಪರಿಮಳ
ನಡುವೆ ಬಯಲಿನ ಶೂನ್ಯ ಗುದ್ದಿನಲ್ಲಿ

4
ಎಷ್ಟೋ ಜೀವಗಳ ಒಡಲಿಗಳಿಸಿದೆ ಗುದ್ದು
ಬುದ್ಧ ನಗೆಯೊಳಗಿದ್ದು
ಸಿದ್ಧ ಸಂತರ ನೊದ್ದು
ಶಿವನ ಕೈಂಕರ್ಯಕ್ಕೆ ಸಾಗಿಸುತ್ತಲೇ ಇದೆ ಜೀವ ಸಂಕುಲ
ತೇದು ಚಂದನ, ಸುವಾಸನೆಯ ಅಗರುಬತ್ತಿ
ಜಲ, ಅಗ್ನಿ ವಾಯು, ಮೃತ್ತಿಕೆಯಿಂದ ಗಗನಕ್ಕೆ
ನೆಗೆವ ಒಂದೇ ತಪದಲ್ಲಿ
ಇದ್ದೇನೆ ಒಬ್ಬಂಟಿ
ಅವರಿವರ ಸುಳಿವರಿಯದೆ
5
ಸದ್ದು
ಯಾರದು, ಯಾರದು
ದೇವರು ಬರುತ್ತಿದ್ದಾರೆ
ಜೀವ ಉಕ್ಕುವ ಏರುಸೆಲೆಯಲ್ಲೆ
ಕುಣಿಕೆ ಪಾಶವ ಹಿಡಿದು
ಸದ್ದು
ಯಾರದು
ಯಾರದು !

ಅಗುಳು ಕದ್ದ ನುಡಿ

– ಆದೂರು ಪ್ರಕಾಶ್

ಅಗೋ
ಬೀಸುತ್ತಿದೆ ಗಾಳಿಯು
ಹುಚ್ಚೆದ್ದು ಕುಣಿಯುವ ಕಡಲ
ಅಲೆಗಳ ಮ್ಲೆಲೆ
ಬೆಂದು ಬೆವರುತ್ತಿರುವ
ಬಡವನ ಕಡೆಗೆ ದಿಕ್ಕು ಬದಲಿಸಿ
ಬೆನ್ನು ತೋರಿಸಿದೆ ಗಾಳಿ

ಬೆಳಕು ಚೆಲ್ಲಿದೆ
ಮುಗಿಲೆತ್ತರಕ್ಕೂ ಮೆತ್ತಿಕೊಂಡ ಕಟ್ಟಡಗಳಿಗೆ
ಅಂಬಾನಿಯ ಅರಮನೆಗಳಿಗೆ
ಮಾನವನ ಕೊಲ್ಲುವ
ಅಣು ಬಾಂಬಿನ ಕಡೆಗೆ
ಅನ್ನದಾತನ ಅಗುಳು ಕದ್ದು
ಸೈನಿಕನ ಸಾವು ತಂದು
ಎ.ಸಿ.ಕೋಣೆಗಳಲ್ಲಿ ಮಲಗಿಕೊಂಡಿದೆ ಬೆಳಕು

ಅನ್ನ ಯಾಕೋ
ಆನಂದದಿಂದ ಕಾಲುವೆಯಲ್ಲಿ
ಹರಿದು ಹೋಗುತ್ತಿದೆ

ಹಸಿದ ಒಡಲು ಆಕಳಿಸಿದರೆ
ಕಸದ ರಾಶಿಗೆ ಕೊಳೆಯಲು
ಸರಸರನೆ ನಡೆಯುತ್ತಿದೆ.

ನಿಂತ ನೀರಿಗೆ
ಪಾಷಾಣ ಹಾಕಿಕೊಂಡು
ಕುಡಿದ ಮೇಲೆ
ಪಗಡೆ ಹಾಕಿ
ಅದೃಷ್ಟವ ಹುಡುಕಿದ್ದಾರೆ
ವಾಂತಿಯ ನಂತರ
ಸಾವು ಖಚಿತ
ಗುಣಿಯ ಅಣಿಗೊಳಿಸಿ ಎನ್ನುತ್ತಿದೆ
ನಿಂತ ನೀರು

ಆದೂರು ಪ್ರಕಾಶ್, ಇಂಡ್ಲುವಾಡಿ ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ

ಬಾಬಾ ನಾಗಾರ್ಜುನ

– ಪ್ರೊ॥ ಬಿ.ವೈ. ಲಲಿತಾಂಬ

'ಬಾಬಾ' ಅನ್ನುವುದಿದೆಯಲ್ಲ ಅದೊಂದು ಸಮಾಜಶಾಸ್ತ್ರದ ಬಳಕೆಯ ಪದ. ಆ ಪದದಲ್ಲಿ ಒಂದು ಅತ್ಮೀಯತೆ ಇದೆ, ನನ್ನದು, ನಮ್ಮವರು ಅಂತ ಅನ್ನುವುದಿದೆ ಅಷ್ಟಲ್ಲದೆ, ಆ ಪದದ ಜೊತೆಗೆ ಮಕ್ಕಳು, ಅಥವಾ ಸಂಸಾರೊಂದಿಗರು ಕೂಡ, ಆ ಬಾಬಾ ಜೊತೆ ಸಲಹೆ ಕೇಳಬಹುದು, ಕಷ್ಟ ಸುಖ ಹಂಚಿಕೊಳ್ಳಬಹುದು.

ನಮ್ಮಲ್ಲಿ ಸಾಮಾನ್ಯ ಜೋಗಿಗಳಿಗೆ ಆ ಪದವನ್ನ ಬಳಸುತ್ತಾರೆ, ಹಿಂದಿಯಲ್ಲಿ ತಂದೆ–ಹಿರೀಕರು ಅನ್ನುವ ಅರ್ಥದಲ್ಲಿ ಉದ್ದೇಶಿಸುವ ಪದ.

ಈ ಬಾಬ ಅನ್ನುವ ಅನ್ವರ್ಥಕವಾದ ಪದ ಹಿಂದಿಯ ಆಧುನಿಕ ಕವಿ ಅಂದರೆ ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯೋತ್ತರ ಕಾಲದವರೆವಿಗೂ ಮಣ್ಣಿನ ಜೊತೆ ಬದುಕಿ ಬಾಳಿದ, ಮಣ್ಣಿನ ಜನರಿಗಾಗಿ ದುಡಿದೊಬ್ಬ ಕವಿ ನಾಗಾರ್ಜುನನಿಗೆ ಸಿಕ್ಕ ಬಿರುದು ಅದು.

ಈಗ ದೇಶದಲ್ಲಿ ಬಾಬಾ ನಾಗಾರ್ಜುನರ ಶತಮಾನೋತ್ಸವವನ್ನು ಆಚರಿಸುತ್ತಿದ್ದಾರೆ. ಈ ವರ್ಷ ಶಮಶೇರ್ ಬಹಾದುರ ಸಿಂಹ, ನರೇಂದ್ರ ಶರ್ಮಾ, ಆಜ್ಞೇಯ ಎಲ್ಲರೂ ಹುಟ್ಟಿದ ವರ್ಷವೇ. ಎಲ್ಲರದೂ ಶತಮಾನೋತ್ಸವವೇ.

ಅಂದರೆ ನಾಗಾರ್ಜುನರು ಹುಟ್ಟಿದ ವರ್ಷ 1911 ಅಂತೆ. ನಿಖರವಾದ ದಿನಾಂಕ ಮಾತ್ರ ಯಾರಿಗೂ ಗೊತ್ತಿಲ್ಲ.

ಈ ಬಾಬಾ ಅನ್ನಿಸಿಕೊಂಡ ವ್ಯಕ್ತಿ ಈ ದೇಶದ ಕಷ್ಟಪಡುವ ಜನರಿಗಾಗಿ ಮರುಗಿ, ಮೋಸ ವಂಚನೆ ಮಾಡುವವರನ್ನ ಪ್ರತಿಭಟಿಸಿ ರಾಜಕೀಯದ ನೇಕಾರರ ತಪ್ಪುಗಳನ್ನೆಲ್ಲ ಹೆಸರು ಹಿಡಿದು ಹೇಳಿ ಬೈಮ, ಅದಕ್ಕಾಗಿ ಜೈಲುವಾಸ ಅನುಭವಿಸಿ, ಆಗಲೂ ತನ್ನ ವಾಣಿ, ಮಾತನ್ನ ಕೊನೆಗಾಣಿಸದೆ ಬದುಕಿದ ವ್ಯಕ್ತಿ.

ಕ್ರಾಂತಿಕಾರಿ ವ್ಯಕ್ತಿತ್ವದ ಕವಿ ಆತ.

ನಾಗಾರ್ಜುನ ಹುಟ್ಟಿ–ಬದುಕಿದ್ದು ಬಿಹಾರದ ಭೂಮಿಯಲ್ಲಿ. ಮಧುಬನಿ ಬಳಿ, ಆತನ ವಿಷಯ ತಿಳಿಯಕ್ಕೆ ಹೋದರೆ ಆತ ಹುಟ್ಟಿದ್ದು ಒಂದು ಬ್ರಾಹ್ಮಣ ಪರಿವಾರದಲ್ಲಿ, ಆತನ ತಂದೆ ಕೊಟ್ಟ ಹೆಸರು ಬೈಜನಾಥ ಮಿಶ್ರ ಅಂತ, ಮೈಥಿಲಿ ಬ್ರಾಹ್ಮಣರ ಸಂಸ್ಕೃತ ಪಂಡಿತರ ಪರಿವಾರಕ್ಕೆ ಸೇರಿದ ವ್ಯಕ್ತಿ ಅವರು, ಹೊಲ–ಉಳಿಮೆ ಇದೇ ಕಸಬು. ಓದಿದ್ದು ಸಂಸ್ಕೃತ ಪಾಠಶಾಲೆಯಲ್ಲಿ. ಆಮೇಲೆ ಆಂಗ್ಲ ಶಾಲೆ–ಕಾಲೇಜು–ಯೂನಿವರ್ಸಿಟಿ ಯಾವುದರ ಮುಖವನ್ನೂ ನೋಡಲಿಲ್ಲ, ಯಾವ ಪರೀಕ್ಷೆಗಳನ್ನು ಪಾಸು ಮಾಡಲಿಲ್ಲ. ಜೀವನದ ಪಾಠ ಕಲಿತದ್ದು, ಕಣ್ಣಿಂದ ನೋಡಿ ಕಲಿತದ್ದೆಷ್ಟೋ ಅಷ್ಟೇ ಬರೆದದ್ದು ತೀವ್ರ ಪ್ರಾಮಾಣಿಕತೆಯಿಂದ.

ಪ್ರೊ. ಬಿ.ವೈ ಲಲಿತಾಂಬ, 1304, 2ನೇ ಹಂತ, 9ನೇ ವಿಬಾಗ, ನಾಗರಬಾವಿ, ಬೆಂಗಳೂರು–72

ಚಿಕ್ಕಂದಿನಿಂದಲೇ ಮೇಲು-ಕೀಳಿನ ಭಾವನೆಯನ್ನ ಬಿಟ್ಟು ಎಲ್ಲಾ ತರಹೆಯ ಎಲ್ಲಾ ಜಾತಿಯ ಮಕ್ಕಳ ಜೊತೆ ಕೂಡಿ ಆಟ-ಪಾಠ ಮಾಡಿದ್ದು. ಓದುವಾಗ ಕಾಶಿಯಲ್ಲಿ ಹಾಸ್ಟೆಲ್‌ನಲ್ಲಿದ್ದಾಗಿನ ಒಂದು ಘಟನೆ ವಿವರಿಸಿದರೆ ನುಡಿದಂತೆ ನಡೆದ ಈ ಕವಿಯನ್ನ, ಆತನ ಕೃತಿಗಳನ್ನ, ಅವುಗಳ ಮುಖಾಂತರ ಆತನನ್ನ ಅರ್ಥ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತೆ.

ಆತ ಇದ್ದ ಹಾಸ್ಟೆಲ್ ಕೆಳಗೆ ಒಂದು ಧರ್ಮಛತ್ರ ಇತ್ತಂತೆ. ಒಂದು ಹೆಣ ಕೊಳೆತ ವಾಸನೆ ಅಲ್ಲಿ ಹರಡಿತ್ತು. ಆದರೆ ಹೆಣದ ಬಳಿಗೆ ಹೋಗುವ ಧೈರ್ಯ ಮಾತ್ರ ಯಾರಿಗೂ ಇರಲಿಲ್ಲ. ನಾಗಾರ್ಜುನ ಹೋದರು. ಅಲ್ಲಿ ಒಬ್ಬ ಮುದುಕಿಯ ಹೆಣ ಅವರಿಗೆ ಕಾಣಿಸಿತು. ಒಬ್ಬ ಸ್ನೇಹಿತನಿಗೆ ಹೇಳಿ ಒಂದು ದುಪ್ಪಟೆಯನ್ನ ತರಿಸಿದರು. ಅದರಲ್ಲಿ ಆ ಹೆಣವನ್ನ ಸುತ್ತಿದರು, ಇಬ್ಬರು ಸ್ನೇಹಿತರೂ ಸೇರಿ ಆ ಹೆಣವನ್ನ ಒಪ್ಪ ಮಾಡಿ ಬಂದರು.

ಅದಾಯಿತಲ್ಲ ಚಿಕ್ಕ ವಯಸ್ಸಿಗೇ ಅವರಪ್ಪ ಇವನಿಗೆ ಮದುವೆ ಮಾಡಿ ಬಿಟ್ಟರು. ಆದರೆ ಈ ಹುಡುಗನ ಕಾಲಿಗೆ-ತಲೆಗೆ ಎರಡಕ್ಕೂ ಚಕ್ರ ಕಟ್ಟಿತ್ತು. 1934ರಲ್ಲಿ ಈತ ಸಿಂಹಳಕ್ಕೆ ಹೊರಟು ಹೋಗುವುದೇ? ಅಲ್ಲಿ 41ರವರೆಗೂ ಇದ್ದು ಅಲ್ಲಿ ಬೌದ್ಧ ಧರ್ಮ ಸ್ವೀಕರಿಸಿ ಬಿಟ್ಟರು. ಪಾಲಿ ಭಾಷೆ ಕಲಿತು ಅದರಲ್ಲಿ ಪಂಡಿತರಾದರು, ಮನೆ ಹಾಗೂ ಪ್ರದೇಶದ ಭಾಷೆ ಮೈಥಿಲಿ ಇದ್ದೇ ಇತ್ತು. ಅಪ್ಪ ಕೊಟ್ಟ ಭಾಷೆ ಸಂಸ್ಕೃತ ಇದಲ್ಲದೆ ಅರ್ಧ ಮಾಗಧಿ ಅಪಭ್ರಂಶ, ಸಿಂಹಳಿ, ತಿಬ್ಬತಿ, ಮರಾಠಿ, ಗುಜರಾತಿ, ಬಂಗಾಳಿ, ಪಂಜಾಬಿ, ಸಿಂಧಿ ಏನೆಲ್ಲ ಭಾಷೆಗಳಲ್ಲಿ ಆತ ಪ್ರಭುತ್ವ ಪಡೆದುಕೊಂಡರು, ಎಲ್ಲಾ ಭಾಷೆಗಳಲ್ಲೂ ಬರೆದರು.

ಬರೆದದ್ದು ಏನು ಅಂದರೆ ಸಮಾಜದ ಸಕಾರಾತ್ಮಕ ಪರಿವರ್ತನೆಗಾಗಿ ಆತ ಭಾಷೆಯನ್ನ ಬಳಸಿಕೊಂಡರು.

ಸಿಂಹಳದಲ್ಲಿದ್ದಾಗ ಲಂಕೆಯ 'ನಮ್ಮ ಸಮಾಜದ ಎಡ ಪಂಥೀಯ ನೇಕಾರರ ಜೊತೆ ಪರಿಚಯವನ್ನ ಬೆಳಸಿಕೊಂಡರು, ಭಾರತದ 'ಕಿಸಾನ್ ಸಭಾ' ಮುಖಂಡ ಸಹಜಾನಂದರ ಜೊತೆ ಪತ್ರ ವ್ಯವಹಾರ ನಡೆಸಿದರು, ಸುಭಾಷ್ ಚಂದ್ರ ಬೋಸರ ಜೊತೆ ಪತ್ರ ವ್ಯವಹಾರ ನಡೆಸಿದರು.

ಭಾರತಕ್ಕೆ ಹಿಂದಿರುಗಿದ ಮೇಲೆ ಬಿಹಾರದ ಅಸವಾರಿಯಲ್ಲಿ ಜಮೀಂದಾರರ ವಿರುದ್ಧ ರಾಹುಲ್ ಸಾಂಸ್ಕೃತ್ಯಾಯನರು ಹೋರಾಡುತ್ತಿದ್ದದನ್ನ ಅವರು ನೋಡಿದರು, ಸಾಂಸ್ಕೃತ್ಯಾಯನರು ಬೋಳುತಲೆ, ನೇತೃತ್ವ ಶಕ್ತಿ ನೋಡಿದರು, ಅವರ ತಲೆ ಮೇಲಿನ ಏಟು ನೋಡಿ ಇವರ ಉತ್ಸಾಹ ಚಿಮ್ಮಿತು, ಇವರೂ ತಮ್ಮ ಕೇಶ ಮುಂಡನ ಮಾಡಿಸಿಕೊಂಡರು. ರೈತರ ಮುಖಂಡತ್ವ ನಡೆಸಿದರು, ಅದಕ್ಕಾಗಿ ಅವರನ್ನ ಹಿಡಿದು ಜೈಲಿಗೆ ದೂಡಿದರು.

ಆಗ ಅವರು ಕಮ್ಯುನಿಸ್ಟ್ ಪಾರ್ಟಿಯ ಸದಸ್ಯ ಕೂಡ ಆದರು,

ಒಂದು ಸಾರಿ ಅಂಡರ್‌ಗ್ರೌಂಡ್‌ನಲ್ಲಿ ಇದ್ದಾಗ ಪೋಲಿಸರು ಅವರನ್ನ ಹಿಡಿದು ಭಾಗಲಪುರದ ಜೈಲಿನಲ್ಲಿ ಎಂಟು ತಿಂಗಳು ಇರಿಸಿದ್ದರು.

ಹೀಗೆ ದೇಶ, ದೇಶದ ಜನರಿಗಾಗಿ ಅವರು ಜೈಲಿಗೆ ಹೋಗಿದ್ದು ಎಷ್ಟು ಸಾರಿಯೋ.

ಆಮೇಲೆ ಅವರು ಕಮ್ಯುನಿಸ್ಟ್ ಪಾರ್ಟಿಯಿಂದ ಕೂಡ ಹೊರಕ್ಕೆ ಬಂದು ಬಿಟ್ಟರು.

ಅವರು ತಮಗೆ ಎಷ್ಟೆಷ್ಟೋ ಹೆಸರುಗಳನ್ನು ಕೊಟ್ಟುಕೊಂಡಿದ್ದರು, ಅದರಲ್ಲಿ ಅತಿ ಪ್ರಿಯವಾದ ಹೆಸರು ಅಂದರೆ 'ಯಾತ್ರಿ' ಅನ್ನುವುದು. 'ಯಾತ್ರಿ' ಹೆಸರಿನಲ್ಲಿ ಅಂದರೆ ತನ್ನ ಐಡೆಂಟಿಟಿಯನ್ನ ಮರೆಮಾಡಿ ಮೈಥಿಲಿ ಭಾಷೆಯಲ್ಲಿ 'ಪಾರೊ' 'ನದತುರಿಯಾ' ಅನ್ನುವ ಕಾದಂಬರಿಗಳನ್ನ ಬರೆದರು. 'ಚಿತ್ರಾ' ಅನ್ನುವ ಕವನ ಸಂಕಲವನ್ನೂ ಪ್ರಕಟಪಡಿಸಿದ್ದರು. ಈ ಕೃತಿಗಳು 'ಯಾತ್ರಿ'ಗೆ ಒಳ್ಳೆಯ ಖ್ಯಾತಿಯನ್ನ ತಂದುಕೊಟ್ಟವು.

ಆತನ ಪ್ರಯೋಗಶೀಲ ಪ್ರವೃತ್ತಿಯ ಒಂದು ಘಟನೆಯನ್ನಿಲ್ಲಿ ಹೇಳಬೇಕು. 'ಸರಸ್ವತಿ' ಆ ದಿನಗಳಲ್ಲಿ ಹಿಂದಿಯ ಅತ್ಯುತ್ತಮ ಮಟ್ಟದ ಒಂದು ಪತ್ರಿಕೆಯಾಗಿತ್ತು. ಅದರಲ್ಲಿ ಉದ್ದನೆಯ ಮೀಸೆ ಬಿಟ್ಟು ಬೋಳು ತಲೆಯ ಒಬ್ಬ ಮನುಷ್ಯನ ಚಿತ್ರ ಪ್ರಕಟವಾಯಿತು. 'ಯಾತ್ರಿ'ಯ ಹೆಸರಲ್ಲಿ ಕವನ ಮುದ್ರಿತವಾಯಿತು. ಅದರ ಕೆಳಗೆ ಕವಿಯ ಪರಿಚಯ ನೀಡುವಾಗ ಯಾತ್ರಿಯವರು ಚರ್ಚಿನ ಒಬ್ಬ ಲಾಮಾ, ಅವರು ಹಿಂದಿಯಲ್ಲಿ ಬರೆಯುತ್ತಾರೆ ಅಂತ ಬರೆದಿದ್ದರು.

ಸ್ವಾತಂತ್ರ್ಯ ಸಿಕ್ಕ ಮೇಲೂ ಅವರು ಮೂರು ಸಾರಿ ಜೈಲು ವಾಸವನ್ನ ಅನುಭವಿಸಿದ್ದರು.

ನಾಗಾರ್ಜುನರಿಗೆ ಗಾಂದೀಜಿ ಬಗ್ಗೆ ಬಹಳ ಗೌರವ ಇತ್ತು. ಮಿಕ್ಕವರ ಬಗ್ಗೆ ಆತ ಆರೋಪಿ, ಯಾವುದೇ ನೇತಾರ ಅಥವಾ ಅವರ ಕಾರ್ಯಕ್ರಮಗಳಿಂದ ಅವರಿಗೆ ಪೂರ್ತಿ ತೃಪ್ತಿ ಸಿಕ್ಕಿದ್ದಿಲ್ಲ.

ಸಾಹಿತಿಯಾಗಿ ಅವರು ಕತೆಗಾರರು, ಕವಿ, ಕಾದಂಬರಿಕಾರರು ಪ್ರಬಂಧಗಳನ್ನ ಬರೆದಿದ್ದರು.

'ಯುಗ ಪ್ರಭಾತ' 'ಪ್ಯಾಸಿ ಪಥರಾಯಿ ಆಂಖೇ', 'ಸತರಂಗೇ ಪಂಖೋವಾಲಿ', 'ತಾಲಾಖ್ ಕೀ ಮಛಲಿಯ್ಯಾ, ಕಾಮದಹನ ಕುರಿತಂತೆ ಅವರ ಪೌರಾಣಿಕ ಕಂಡ ಕಾವ್ಯ 'ಭಸ್ಮಾಂಕುರ' ಇವು ಅವರ ಪ್ರಮುಖ ಕಾವ್ಯ ಕೃತಿಗಳು.

ಬಾಬಾ ಬಟೇಸರ್‌ನಾಥ್' ರತಿನಾಥ್ ಕೀ ಚಾಚಿ' 'ಉಗ್ರತಾರಾ', 'ಇಮರತಿಯಾ', 'ಬಲಚನಮಾ', 'ಕುಂಭೀಪಾಕ ಇವೆಲ್ಲಾ ಅವರ ಕಾದಂಬರಿಗಳು 'ನಿರಾಲಾ' ಅವರನ್ನು ಕುರಿತು ನೆನಪಿನ ಚಿತ್ರಗಳನ್ನ ಬರೆದಿದ್ದಾರೆ.

ಅನೇಕಾನೇಕ ಕತೆಗಳು, ಪ್ರತಿಯೊಂದೂ 'ಮಿಲ್ ಕಾದತ್ಥರ್' ಮೈಲಿಗಲ್ಲುಗಳೇ,

ಪ್ರಭಾಕರ ಮಾಚವೇ ಅವರು ಹೇಳುವ ಹಾಗೆ ಮುಂದಿನ ಪೀಳಿಗೆ ನಾಗಾರ್ಜುನರನ್ನ ಅವರ ರಾಜಕೀಯ ವ್ಯಂಗ್ಯ ಕೃತಿಗಳಿಗಾಗಿ ನೆನಪು ಮಾಡಿಕೊಳ್ಳುತ್ತದೆ.

ಒಟ್ಟಿನಲ್ಲಿ ಅನೇಕ ಮುಖೀ ವ್ಯಕ್ತಿತ್ವದ ಪ್ರಭಾವ ಪೂರ್ಣವಾದ, ಅನುಭವಿಸಿ, ಕಂಡು ದುಡಿದ ಈ ಯುಗದ ಅತಿ ಮಹತ್ವದ ಕವಿಗಳಾದವರು ನಾಗಾರ್ಜುನರು.

ಆಂಧ್ರದ ನಾಗಾರ್ಜುನ ಬೌದ್ಧ ಋಷಿಯಾಗಿ ಬಾಳಿ ಯುಗಗಳು ಕಳೆದರೂ ಆತನ ಹೆಸರಿನ ಬೆಟ್ಟ ಉಳಿದಿರುವಂತೆ, ವಿಶ್ವವಿದ್ಯಾಲಯಗಳು, ರಾಸಾಯನಿಕ ಪ್ಲಾಂಟ್‌ಗಳು ಆತನ ಹೆಸರನ್ನು ಬಳಸಿಕೊಂಡು ಬದುಕುತ್ತಿರುವಂತೆ,

ಆತನಿಂದ ಕೂಡ ಪ್ರೇರಣೆ ಪಡೆದು, ಆತನ ಹೆಸರನ್ನ ತನ್ನದಾಗಿಸಿಕೊಂಡು ನೈಜ ಬದುಕನ್ನ ಬಾಳಿದ ವ್ಯಕ್ತಿತ್ವ–ಸಾಹಿತಿ ನಾಗಾರ್ಜುನರು.

ಉದಾಹರಣೆಗಾಗಿ ಆತನ ವಾಣಿಯ ಕೆಲವು ತುಣುಕುಗಳನ್ನು ನಾನಿಲ್ಲಿ ಬಳಸಿಕೊಳ್ಳುತ್ತಿದ್ದೇನೆ.

ಹಸಿವಿಂದ ಸಾಯಿ ನೋನೀ
ಧಾವಿಸುತ್ತ ಬರುವ ಥಾನೇದಾರ ಬರೆಸಿಕೊಳ್ಳುವ
ಮನೆಯವರಿಂದ ಅವನಂತೂ 'ರೋಗಿಯಾಗಿದ್ದವ',
ನಾಲಿಗೆ ಕತ್ತರಿಸಿದೆ ಭಾರತ ಮಾತೆಯ ಮಾಡಲಾರಳು,
ಗಲಾಟೆ ನೋಡು ಗುಳಿಬಿದ್ದ ಈ ಕಣ್ಣುಗಳು, ಅಂಟಿ
ಗುಳಿಹೋದ ಕೆನ್ನೆ ಯಾರು ಹೇಳುವ ಸ್ವಾತಂತ್ರ
ಬಂದು ಕಳೆದವು ಹದಿಮೂರು ವರ್ಷಗಳೆಂದು ಲಕ್ಷ
ಲಕ್ಷ ಕಾರ್ಮಿಕರ ಕತ್ತ ಕತ್ತರಿಸುತ್ತಿರುವವ ಯಾರು ಕಿತ್ತುಕೊಂಡಿದೆ
ಕೋಟ್ಯಂತರ ರೈತರ ಭೂಮಿ ಯಾರ ತಾಕತ್ತಿನಿಂದ ಕುಣಿಯುತ್ತಿದೆ
ಅಧಿಕಾರದ ಪ್ರೇತಗಳು

ಇನ್ನೊಂದು

ಪ್ಯಾಟನ್ ಟ್ಯಾಂಕ್ ಮುರಿದರು ಅವರು
ತುಟ್ಟಿಯ ಟ್ಯಾಂಕ್ ಒಡೆಯುವವರಾರು
ಸೈಬರ್ ಜೆಟ್ ವಿಮಾನ ಉರುಳಿಸಿದವು ಆ ಕೈಗಳು
ಜಾತಿವಾದದ ಸಂಪಾತಿಯ ಕೊಕ್ಕನ್ನುದುರಿಸುವವರ್‍ಯಾರು
ನಿಂತಿದ್ದಾರವರು ಭೂಗೋಳದ ಎಲ್ಲೆಗಳಲ್ಲಿ
ಆರ್ಥಿಕ ಹಿತದ ಎಲ್ಲೆಗಳ ರಕ್ಷಿಸುವವರ್‍ಯಾರು?
ಹೊಡೆತ ತಿಂದು ಓಡಿದರು ಹೊರಗಣ ಶತ್ರುಗಳು
ಆದರೆ ಒಳಗಣ ಶತ್ರುಗಳ ಇಲ್ಲಿ ಅರೆಯುವವರಾರು?
ಹೊರ ಹೊರಗೆ
ಎಚ್ಚರದ ಕಾವಲುಗಾರರು ಹೊತ್ತು ಬಂದೂಕ ಹೆಗಲ ಮೇಲೆ ಸಂಭಾಳಿಸಲಿ
ಒಳಗೊಳಗೆ
ಗಿಡಗಳ ಹಸಿರ ಪೂರ್ತಿಯಾಗಿ ನೆಕ್ಕುವರು ಬಂದೂಕರು

2

ಅವರು ಮತ್ತು ನೀವು

ಅವರು ಕಬ್ಬಿಣ ಕುಟ್ಟುತ್ತಿದ್ದಾರೆ
ನೀನು ಮನ ಕುಟ್ಟುತ್ತೀ
ಅವರು ಕಲ್ಲು ಕುಟುಕುವರು
ನೀ ಸ್ವಪನ ಜೋಡಿಸುತಿರುವಿ
ಅವರ ಕೊರಗು ಅಟ್ಟಹಾಸದಲ್ಲಿ ತೊಳೆದು ಹೋಗುತ್ತೆ
ಮತ್ತೆ ನಿನ್ನ ಕೊರಗು?
ಅರೆ ನಿದ್ದೆಯ ಕ್ಷಣಗಳಲ್ಲಿ ಕಳೆಯುತ್ತದೆ.

ಅವರು ಉಲ್ಲಾಸದಿಂದಿರುವ
ತಮ್ಮದೇ ಫಸಲುಗಳಲ್ಲಿ ಮುಳುಗಿದ್ದಾರೆ
ನೀ ಉಲ್ಲಾಸಿ
ಕಣಸುಗಳ ಬೆಳದಿಂಗಳಲ್ಲಿ ಮುಳುಗಿರುವೆ
ಅವರಿಗಿದೆ ದುಃಖ
ಹೊಸ ಮಾವಿನ ಹೂಗಳಿಗೆ ಆಲಿಗಲ್ಲು ಬಿದ್ದಿದೆ
ನಿನಗಿದೆ ದುಃಖ
ಕವನ ಸಂಕಲನಕೆ ಗೆದ್ದಲು ಕಟ್ಟಿದೆಯೆಂದು.

ಕೊನೆಯಲ್ಲಿ,
ಜಮೀಂದಾರ, ಸಾಹುಕಾರ, ಬನಿಯಾ ವ್ಯಾಪಾರಿಗಳಿದ್ದಾರೆ
ಒಳಗೊಳಗೆ ಎಲ್ಲರೂ ಭಯಂಕರ ಕಟುಕರು
ಹೊರಗೆಲ್ಲ ಖದ್ದರ್ ಧಾರಿಗಳು
ಎಲ್ಲ ನುಗ್ಗಿ ಬಂದಿದ್ದಾರೆ ತುಂಬಿ ಹೋಗಿದೆ
ಭಾರತ ಮಾತೆಯ ಮಂದಿರ
ಒಮ್ಮೆ ಜಾರಿದ ನಾಯಕ
ಜಾರುತ್ತಿದ್ದಾರೆ ಮತ್ತೆ ಮತ್ತೆ ಮತ್ತೆ.

ಆಧಾರ : 'ನಾಗಾರ್ಜುನ' – ಡಾ|| ಪ್ರಭಾಕರ ಮಾಚ್ವೆ

ಪ್ರ: ರಾಜಪಾಲ್ ಅಂಡ್ ಸನ್ಸ್, ನವದೆಹಲಿ

ಕಾಳಿದಾಸ

ಹಿಂದಿ ಮೂಲ : ನಾಗಾರ್ಜುನ

ಕಾಳಿದಾಸ, ನೀ ನಿಜ ನುಡಿ
ಇಂದು ಮತಿ ಸಾವ ಶೋಕದಲಿ
ಅಜ ಅತ್ತನೋ ನೀ ಅತ್ತೆಯೋ?
ಕಾಳಿದಾಸ, ನೀ ನಿಜ ನುಡಿ
    ಶಿವನ ಮೂರನೆ ಕಣ್ಣಿಂದ
    ಹೊರ ಮೂಡಿ ಮಹಾಜ್ವಾಲೆ
    ಘೃತ ಮಿಶ್ರಿತ ರುಕ್ಷ ಸೌದೆ ತೆರನ
    ಕಾಮದೇವ ಭಸ್ಮವಾದ
    ರತಿ ಕ್ರಂದನ ಕೇಳಿ ಕಣ್ಣೀರಿಂದ
    ನೀ ತಾನೆ ಕಣ್ಣು ತೊಳೆದುದು
    ಕಾಳಿದಾಸ ನೀ ನಿಜ ನುಡಿ
    ರತಿ ಅತ್ತಳೋ ನೀ ಅತ್ತೆಯೋ?
ಮಳೆಗಾಲದ ತೇವದ ನೆಲ
ಮೊದಲ ದಿನ ಆಶಾಢ ಮಾಸದ್ದು
ನೋಡಿ ಆಕಾಶ ಕವಿದ ಮೋಡ
ವಿಧುರ ಯಕ್ಷನ ಮನ ಹರಿದಾಗ
ನಿಂತು ನಿಂತೇ ಆಗ ಕೈ ಜೋಡಿಸಿ
ಚಿತ್ರಕೂಟದ ರಮಣೀಯ ಶಿಕರದ ಮೇಲೆ
ಆ ಬಡಜೀವ ಕಳಿಸಿತ್ತು
ಯಾರ ಮೂಲಕವೋ ಸಂದೇಶ
ಆ ಪುಷ್ಕರಿಣಿ ಆವರಿಸಿ ಮೇಘಗಳ
ಮಿತ್ರನಾಗಿ ಹಾರುವ
ಕಾಳಿದಾಸ, ನೀ ನಿಜ ನುಡಿ
ಪರಪೀಡೆಯಿಂದ ತುಂಬಿ
ಆಯಾಸ ಹೊಂದಿ ನಿರಾಶೆಗೊಂಡು
ಅಮಲ ಧವಳ ಗಿರಿಯ ಶಿಖರಗಳ ಮೇಲೆ
ಪ್ರಿಯಕರ, ನೀ ಏ ವರೆಗೆ ಮಲಗಿದ್ದೆ
ಅತ್ತ ಯಕ್ಷನೋ, ಇಲ್ಲ ನೀ ಅತ್ತೆಯೋ?
ಕಾಳಿದಾಸ, ನೀ ನಿಜ ನುಡಿ!

ಅನು: ಬಿ.ವೈ.ಲಲಿತಾಂಬ

ಡಾ. ಪ್ರಭಾ ಅತ್ರೆಯವರೊಡನೆ ಆಪ್ತಸಂವಾದ

– ಬಿ.ಟಿ. ಜಾಹ್ನವಿ

ಮಾನವ ಬದುಕಿನ ಅವಿಭಾಜ್ಯ ಅಂಗವೇ ಸಂಗೀತ. ದೈನಂದಿನ ಒತ್ತಡಗಳು, ನಿರಂತರ ದುಡಿಮೆ ಮತ್ತು ಬದುಕಿನ ಏಕತಾನತೆಯನ್ನ ಸಹ್ಯವಾಗಿಸುವ ದಿವ್ಯೌಷಧ ಈ ಗಂಧರ್ವ ಕಲೆ. ಪ್ರಾರ್ಥನೆಯಿಂದ ಮನೋರಂಜನೆಯವರೆಗೆ ವಿವಿಧ ಮಟ್ಟದಲ್ಲಿ ಸಂಗೀತ ಮಾನವನ ಒಡನಾಡಿ. ಅವನ ಭಾವನೆಗಳ ಅಭಿವ್ಯಕ್ತಿಗೆ ವೇದಿಕೆ. ಇಂತಹ ಸಂಗೀತವೇ ಇಲ್ಲದೆ ಹೋಗಿದ್ದರೆ...? ನಿರಂತರ ಈ ವಾಹಿನಿಯನ್ನು ಹರಿಸಲು ಹಗಲು ರಾತ್ರಿ ಸಾಧನೆ ಮಾಡುವ ಸಂಗೀತಸಾಧಕರು ಇಲ್ಲದೆ ಹೋಗಿದ್ದರೆ..? ಬದುಕು ಅದೆಷ್ಟು ಅಸಹನೀಯವಾಗಿರುತ್ತಿತ್ತು ನೆನೆದರೆ ಮೈ ಕಂಪಿಸುತ್ತದೆ. ಆದ್ದರಿಂದಲೇ ಸಂಗೀತಗಾರರಿಗೆ ನಾವೆಂದು ಚಿರಋಣಿಗಳಾಗಿರಬೇಕು. ಅಂತೆನೇ ಈ ಲೇಖನ ಬರೆಯುವ ಹಾಗು ಸಂಗೀತ ಸಾಮ್ರಾಜ್ಞಿ, ಸಂಗೀತ ವಿದುಷಿ, ಪದ್ಮಶ್ರೀ, ಪದ್ಮಭೂಷಣ ಹಾಗು ಸಂಗೀತ, ನಾಟಕ ಅಕಾಡಮಿ ಪ್ರಶಸ್ತಿ ವಿಜೇತೆ ಡಾ. ಪ್ರಭಾ ಅತ್ರೆಯವರು ನನಗೆ ಬಿಡುವಾಗಿ ಸಿಕ್ಕಿದ್ದು, ಮಾತಾಡಿದ್ದು, ಅವರನ್ನು ಪರಿಚಯಿಸಲು ನನಗೆ ಒದಗಿ ಬಂದಿರುವ ಈ ಅವಕಾಶ ಎಲ್ಲಾ ನನ್ನ ಸೌಭಾಗ್ಯ ಎಂದೇ ಭಾವಿಸುತ್ತೇನೆ.

ಎಲ್‌ಕೆ.ಜಿ.ಯಿಂದ ಬಿ.ಐ.ಇ.ಟಿಯಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್‌ವರೆಗೆ ದಾವಣಗೆರೆಯಲ್ಲಿ ಓದಿ, ದೆಹಲಿ ಐಐಟಿಯಲ್ಲಿ ಪಿಹೆಚ್‌ಡಿ ಮಾಡಿ ಈಗ ಸಧ್ಯ ಮುಂಬೈನ

ಬಿ.ಟಿ.ಜಾಹ್ನವಿ, ನಂ. 1966/43, ಮಾಲತೇಶ್ವರ ನಿಲಯ, 9ನೇ ಕ್ರಾಸ್, 'ಎ' ಬ್ಲಾಕ್, ಎಸ್.ಎಸ್. ಲೇಔಟ್, ದಾವಣಗೆರೆ – 4

ಖಾಸಗಿ ಕಾಲೇಜೊಂದರಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಡಾ.ಎಂ.ಡಿ.ಭಾರತಿ ಮಹಾನ್ ಸಂಗೀತ ಪ್ರೇಮಿ. ಯಾವುದಕ್ಕೂ ಹಿಂಜರಿಯದ ಸಾಹಸಿ. ಅಂದುಕೊಂಡದ್ದನ್ನು ಸಾಧಿಸಿಯೇ ತೀರುವ ಛಲಗಾತಿ. ಇದ್ದದ್ದು ಇದ್ದಂತೆ ಮುಖಕ್ಕೆ ಆಡುವ ನೇರನುಡಿ. ಒಳ್ಳೆಯದಾಗುತ್ತೆ ಅನ್ನೋದಾದ್ರೆ ನಿಷ್ಠುರ ಆಗೋಕೆ ಹಿಂದೆಮುಂದೆ ನೋಡಬಾರದು ಎಂಬ ನಿಲುವು. ಕಿರಣ್ ಬೇಡಿಯವರ ಕಟ್ಟಾ ಅಭಿಮಾನಿ. ಅವರೊಡನೆ ಇದ್ದು ಅವರೊಂದಿಗೆ ಕೆಲಸ ಮಾಡುವ ಹಂಬಲವೇ ಅವಳನ್ನು ದೆಹಲಿಯ ಐಐಟಿಯತ್ತ ಸೆಳೆದದ್ದು. ಓದುತ್ತಲೇ ಅವರೊಂದಿಗೆ ಸೇರಿ, ಅವರ ಎಲ್ಲಾ ಯೋಜನೆಗಳಲ್ಲಿ ಕೂಡಿ ಕೆಲಸ ಮಾಡುತ್ತಾ ಅಲ್ಲಿಯೇ ಒಂದು ನಂಟು ಅಂಟಿಕೊಳ್ಳುತ್ತಿದ್ದ ಸಮಯದಲ್ಲೇ ಹುಬ್ಬಳ್ಳಿಯ ಸಂಗೀತ ಕಛೇರಿಯೊಂದರಲ್ಲಿ ಡಾ. ಪ್ರಭಾ ಅತ್ರೆಯವರ ಗಾಯನ ಕೇಳಿ, ಮರುಳಾಗಿ ಮರುಳಂತೆ ಅವರು ಹೋದಲೆಲ್ಲಾ ಅವರನ್ನ ಹಿಂಬಾಲಿಸಿ, ಸ್ನೇಹ ಗಳಿಸಿ ವಯಸ್ಸಾದ ತಾಯಿಯೊಂದಿಗೆ ಮುಂಬೈಯಲ್ಲಿ ಒಂಟಿಯಾಗಿ ನೆಲೆಸಿದ್ದ ಪ್ರಭಾ ಅತ್ರೆಯವರ ಜತೆಗೂಡಿದಳು. ಅವರ ಎಲ್ಲವೂ ಇವಳು, ಇವಳ ಎಲ್ಲವೂ ಅವರು ಎನ್ನುವಂತಿರುವ ಈ ಮಧುರ ಬಾಂಧವ್ಯಕ್ಕೆ ಹೆಸರು ಕೊಡಲಿಚ್ಛಿಸುವುದಿಲ್ಲ ನಾನು. ಎಲ್ಲವನ್ನು ಮೀರಿದಂತಹ, ಅನಿರ್ಬಂಧಿತ ಪ್ರೀತಿ, ತ್ಯಾಗ, ಮಮತೆಯ ಎಳೆಗಳಿಂದ ಬೆಸೆದಿರುವ ಬಿಗಿ ಬಾಂಧವದು. ತುಂಬಾ ಅಪರೂಪದ ಅನನ್ಯ ಅನುಬಂಧವದು. ಭಾವ, ತಾಳ, ಮೇಳ, ಮಾಧುರ್ಯ ಹೇಗೆ ಉತ್ತಮ ಸಂಗೀತದ ತಳಹದಿಯೋ ಹಾಗೆಯೇ ಸ್ನೇಹ, ಸಲುಗೆ, ವಿಶ್ವಾಸ, ಗೌರವಾದರಗಳು ಈ ಅನುಪಮ ಅನುಬಂಧದ ಬುನಾದಿಯಾಗಿ ಬಂಧುರವಾಗಿವೆ. ಹೆಚ್ಚು ಮಾತಾಡದ, ತಮ್ಮಷ್ಟಕ್ಕೆ ತಾವಿರುವ ಅತ್ಯಂತ ಸಂಕೋಚದ ಸ್ವಭಾವದ ಪ್ರಭ ಅತ್ರೆಯವರ ಜೀವನದಲ್ಲಿ ದಬದಬ ಓಡಾಡಿಕೊಂಡು, ಚಟಪಟ ಮಾತಾಡಿಕೊಂಡು ದಡಬಡ ಕೆಲಸ ಮಾಡಿ ಮುಗಿಸುವ ಭಾರತಿಯ ಪ್ರವೇಶದಿಂದ ಅನೇಕ ಹೊಸ ಸಾಧ್ಯತೆಗಳು ತೆರೆದುಕೊಂಡು ಅವರು ಇಂದು ಕೈಗೊಂಡಿರುವ ಎಲ್ಲಾ ಕೆಲಸಗಳು ಸಾಧ್ಯವಾಗಿವೆ. ಇದನ್ನು ಸ್ವತಃ ಪ್ರಭಾರವರೆ ಖುಷಿಯಿಂದ, ಹೆಮ್ಮೆಯಿಂದ ಹೇಳುತ್ತಾರೆ. ಅಂತೆಯೇ ಈ ಲೇಖನ ಕೂಡ ಸಾಧ್ಯವಾದದ್ದು ಆಕೆಯಿಂದಲೇ.

2ನೇ ತಾರೀಕು ಬೆಳಗ್ಗೇನೆ ನನ್ನ ಬಾಲ್ಯದ ಗೆಳತಿ ಭಾರತಿಯ ಫೋನ್ ಬಂತು. ಮುಂಬೈಯಿಂದ ಅಂದುಕೊಂಡೆ. 'ಬಂದೀನ್ ಬಾರೆ..' ಅಂದಳು. 'ಇತ್ಲಾಗ್ ಬರದಿದ್ರೆ ನೀನೆ ಬಂದ್ಬಿಡೆ ಅತ್ಲಾಗೆ...' ಅಂದೆ ನಾನು. 'ಮೇಡಂ ಬಂದಾರೆ. ಸಂಜೆ ಏಳ್ಗಂಟೆತನ ಫ್ರಿ. ಹೊಂಟು ಬಂದ್ಬಿಡು ಈಗ್ಲೇ..' ಅಂದಳು. ನಾನು ದಿಗ್ಗನೆದ್ದೆ. ಮೇಡಂ ಅಂದ್ರೆ ಸಂಗೀತ ಸಾಮ್ರಾಜ್ಞಿ, ಸಂಗೀತ ವಿದುಷಿ ಡಾ. ಪ್ರಭಾ ಅತ್ರೆಯವರು! ಡಿಸಂಬರ್ 31ರಂದು ಧಾರವಾಡದಲ್ಲಿ ಸಂಗೀತಾಚಾರ್ಯ ಡಾ.ಮಲ್ಲಿಕಾರ್ಜುನ್ ಮನ್ಸೂರರ ಜನ್ಮಶತಮಾನೋತ್ಸವದ ಅಂಗವಾಗಿ ಡಾ. ಮಲ್ಲಿಕಾರ್ಜುನ ಮನ್ಸೂರ ರಾಷ್ಟ್ರೀಯ ಸಮ್ಮಾನ ನೀಡಿ ಅವರನ್ನು ಗೌರವಿಸಲಾಗಿತ್ತು. ಅಂದು ಅವರ ಗಾಯನವೂ ಇತ್ತು. ಅಲ್ಲಿಂದ ಸೀದಾ ದಾವಣಗೆರೆಗೆ ಭಾರತಿ ಮನೆಗೆ ಬಂದಿದ್ದರು. 'ಮೇಡಂನ ಮಾತಾಡ್ಸನೇ... ಇರ್ತಿರಲ್ಲಾ?' ಅಂತ ಕೇಳಿದೆ ಭಾರತಿನ. 'ಇವತ್ತು, ನಾಳೆ ಅನ್ಕಂಡೀವಿ. ಯಾವಾಗ್ಬೇಕರು ಹೊಂಡ್ಬಹುದು...' ಅಂದಳು. 'ಅದೆಂಗೆ ಯಾವಗ್ಬೇಕರು ಹೊಂಡ್ತಿರೀ ಟೈಮಿರಂಗಿಲ್ಲೇನು ಬಸ್ದರ, ರೈಲ್ದರ..' ಅಂತ ನಾನಂದಿದ್ದಕ್ಕೆ ನಕ್ಕಳಾಕೆ 'ಕಾರಲ್ಲಿ ಬಂದೀವೇ..' ಅಂತ. 'ಯಾರ್‍ಯಾರು..?' ಅಂದೆ. 'ನಾವೇ ಇಬ್ರು. ನಾನು ಸ್ವಲ್ಪ ಹೊತ್ತು, ಮೇಡಂ ಸ್ವಲ್ಪ ಹೊತ್ತು ಡ್ರೈವ್ ಮಾಡ್ಕಂಡು ಬಂದ್ವಿ.' ಅಂದು 'ಬಾ ಗಡ..' ಅಂತ ಫೋನಿಟ್ಟಳು. ಮುಂಬೈನಿಂದ ಇಬ್ರೇ ಡ್ರೈವ್ ಮಾಡಿಕೊಂಡು ಬರೋದು ಅಂದರೆ ಇವಳೇ ಬಲವಂತ ಮಾಡಿರ್ತಾಳೆ ಅವರಿಗೆ ಅಂದುಕೊಳ್ಳುತ್ತ ಹೊರಟೆ.

ಟಿವಿ ನೋಡುತ್ತಾ ಮರುಮುದ್ರಣಕ್ಕೆ ಹೋಗಲಿರುವ ಅವರದೇ ಪುಸ್ತಕ ಸ್ವರಮಯಿಯ ಕೆಲವು ನಕಲು ಪ್ರತಿಗಳನ್ನು ಹಿಡಿದುಕೊಂಡು ಪ್ರೂಫ್ ನೋಡುತ್ತಿದ್ದರು ಮೇಡಂ ನಾನು ಹೋದಾಗ. ಎರಡನ್ನೂ ಹೇಗೆ ಮಾಡುತ್ತಾರಿವರು ಅಂತ ಅಚ್ಚರಿ ಪಡುತ್ತ ಒಮ್ಮೆ ಟಿವಿಯನ್ನು ಒಮ್ಮೆ ಅವರ ಕೈಲಿದ್ದ ಹಾಳೆಗಳನ್ನು ನೋಡಿ 'ನಮಸ್ತೆ ಮೇಡಂ, ಹೇಗಿದ್ದೀರಿ? ಪ್ರೋಗ್ರಾಂ ಹೇಗಿತ್ತು?' ಅಂತ ಕೇಳಿದೆ ನಾನು. 'ನಮಸ್ತೆ. ಚನ್ನಾಗಿದ್ದೀನಿ. ನೀನು ಹೇಗಿದ್ದಿ? ಪ್ರೋಗ್ರಾಂ ಚನ್ನಾಗಿತ್ತು..' ಅಂದರು ನಕ್ಕು. ಹತ್ತನ್ನೆರಡು ವರುಷಗಳ ಹಿಂದೆ ದಾವಣಗೆರೆಯಲ್ಲಿ ಕಾರ್ಯಕ್ರಮ ಕೊಟ್ಟಾಗ ಮೊದಲು ನೋಡಿದ್ದು ಅವರನ್ನ ನಾನು. ಅದಾದ ಮೇಲೆ ಮುಂಬೈಗೆ ಹೋಗಿ ಅವರಲ್ಲೇ ಮೂರು ದಿನ ಉಳಿದಾಗ, ನಂತರ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ 2007ರಲ್ಲಿ. ಅವರ ಮುಖದ ಮೇಲಿನ ಆ ಮಂದಹಾಸ, ಆ ದಿವ್ಯ ಕಳೆ, ಆ ಪಳಕ ಅಂದಿನಂತೆ ಇಂದೂ ಅಷ್ಟೇ ಪ್ರಜ್ವಲ! ಅವರ ಕುರಿತು ವಿವರಗಳಿಗೆ ಹೋಗುವ ಮುನ್ನ ಮುಂಬೈಯಲ್ಲಿ ಪ್ರಭಾ ಅತ್ರೆಯವರ ಸಂಗಡವೇ ವಾಸಿಸುತ್ತಿರುವ ಭಾರತಿಯನ್ನು ನಾನು ಪರಿಚಯಿಸಲಿಚ್ಚಿಸುವೆ. ಯಾಕೆಂದರೆ ಅವಳಿಲ್ಲದೆ ಹೋದರೆ ಇದೆಲ್ಲವೂ ಅಪೂರ್ಣ ಆದ್ದರಿಂದ.

ಪ್ರಚಲಿತ ಪ್ರಖ್ಯಾತ ಹಿಂದುಸ್ಥಾನಿ ಗಾಯಕರಲ್ಲಿ ಕಿರಾನಘರಾನ ಗಾಯಕಿಯನ್ನು ಪ್ರತಿಬಿಂಬಿಸುವ ಭಾರತೀಯ ಶಾಸ್ತ್ರೀಯ ಸಂಗೀತ ವಲಯದಲ್ಲಿ ಡಾ. ಪ್ರಭಾ ಅತ್ರೆಯವರದು ಸುವಿಖ್ಯಾತ ಹೆಸರು. ಅಷ್ಟೇ ಉದಾತ್ತ ಮನೋಭಾವದ ಸೌಜನ್ಯದ ತುಂಬು ವ್ಯಕ್ತಿತ್ವ. ಪ್ರಗತಿಪರ ದೃಷ್ಟಿಕೋನ ಮತ್ತು ಸೌಂದರ್ಯ ದೃಷ್ಟಿಯಿಂದ ಸಂಗೀತವನ್ನು ಗ್ರಹಿಸಿರುವ ವಿಭಿನ್ನ ಗಾಯಕಿ ಹಾಗು ಚಿಂತಕಿ. ವಿಜ್ಞಾನ ಹಾಗು ಕಾನೂನು ಪದವಿಗಳ ಜತೆಗೆ ಸಂಗೀತವನ್ನೂ ಆಳವಾಗಿ ಅಭ್ಯಸಿಸಿ, ಪದವಿ ಪಡೆದು, ಡಾಕ್ಟರೇಟ್ ಗಳಿಸಿರುವ ಡಾ. ಅತ್ರೆ ಅಪರೂಪದ ಗಾಯಕರು, ಲೇಖಕರು, ಚಿಂತಕರು ಮತ್ತು ಬೋಧಕರು.

ಮಹಾರಾಷ್ಟ್ರದ ಪುಣೆಯ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ 1932ರಲ್ಲಿ ಜನಿಸಿದ ಇವರಿಗೆ ಮುಂದೊಂದು ದಿನ ತಾನೋರ್ವ ದೊಡ್ಡ ಸಂಗೀತಗಾರಳಾಗಬಹುದು ಎಂಬ ಕಲ್ಪನೆಯೂ ಇರಲಿಲ್ಲ. ತಂದೆ ತಾಯಿ ಇಬ್ಬರೂ ಶಿಕ್ಷಕರು. ಮಕ್ಕಳನ್ನು ಚೆನ್ನಾಗಿ ಓದುವಂತೆ, ಪಠ್ಯೇತರ ಚಟುವಟಿಕೆಗಳಲ್ಲೂ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರೆ ಹೊರತು ಸಂಗೀತ ಅದರಲ್ಲೂ ಶಾಸ್ತ್ರೀಯ ಸಂಗೀತದ ಗಂಧಗಾಳಿಯೂ ಇರಲಿಲ್ಲ. ಆದರೆ ತುಂಬಾ ಆಕಸ್ಮಿಕವಾಗಿ ತಾಯಿಯ ಅನಾರೋಗ್ಯದ ನೆಪದಲ್ಲಿ ಸಂಗೀತ ಇವರ ಮನೆಯನ್ನು ಪ್ರವೇಶಿಸಿತು. ಎದೆಗುಂದಿದ ತಾಯಿಯ ಮನಸನ್ನು ಉಲ್ಲಾಸಗೊಳಿಸಲು, ಅವರ ಮನಸನ್ನು ಬೇರತ್ತ ಸೆಳೆಯಲು ಸ್ನೇಹಿತರೊಬ್ಬರ ಸಲಹೆಯ ಮೇರೆಗೆ ತಾಯಿ ಹಾರ್ಮೋನಿಯಂ ಕಲಿಕೆ ಶುರು ಮಾಡಿದಾಗ ಬಾಲಕಿ ಪ್ರಭಾ ಅವರ ಪಕ್ಕದಲ್ಲಿ ಕೂತು ಆಲಿಸುತ್ತಿದ್ದಳಷ್ಟೆ. ಕೆಲ ದಿನಗಳ ನಂತರ ತಾಯಿ ಅಭ್ಯಾಸವನ್ನು ನಿಲ್ಲಿಸಿದಾಗ ಅದನ್ನು ಹಾಗೆ ಮುಂದುವರೆಸಿ ಗಾನಲೋಕ ಪ್ರವೇಶಿಸಿದ ಡಾ. ಅತ್ರೆಯವರು ನಂತರ ವಿಜಯ ಕರಂದೀಕರ್ ಅವರಲ್ಲಿ ಪ್ರಾರಂಭಕ್ಕೆ ಸಂಗೀತ ಕಲಿಯಲು ಆರಂಭಿಸಿ ಆನಂತರ ಸಾಂಪ್ರದಾಯಿಕ ಗುರುಶಿಷ್ಯ ವ್ಯವಸ್ಥೆಯಲ್ಲಿ ಖ್ಯಾತ ಸಂಗೀತಗಾರರಾದ ದಿವಂಗತ ಸುರೇಶ್‌ಬಾಬು ಮಾನೆ ಅವರಲ್ಲಿ, ಅವರ ನಿಧನದ ನಂತರ ಅವರ ಸಹೋದರಿ ಹೀರಾಬಾಯಿ ಬಡೋದೆಕರ್ ಅವರಲ್ಲಿ ಸಂಗೀತ ಕಲಿತರು. 1960ರಲ್ಲಿ ನಾಗಪುರದ ಆಕಾಶವಾಣಿ ಕೇಂದ್ರದಲ್ಲಿ ಕೆಲಸಕ್ಕಿದ್ದಾಗ ಉಸ್ತಾದ್ ಅಮೀರ್‌ಖಾನರ ಗಾನವೈಖರಿಯ ಪ್ರಭಾವಕ್ಕೆ ಒಳಗಾದರು. ಇದು ಅವರ ಸಂಗೀತ ಕೃಷಿಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿತು. ಹಾಗೆಯೇ ಇವರ ಮೇಲೆ ಪ್ರಭಾವ ಬೀರಿದ ಮತ್ತೋರ್ವ ಗಾಯಕರು ಉಸ್ತಾದ್ ಬಡೇ ಗುಲಾಮ್ ಅಲಿಖಾನ್.

"ಸಂಗೀತವನ್ನು ವಿವಿಧ ಕೋನಗಳಿಂದ ಅಭ್ಯಸಿಸಿ ಅನುಭವಿಸುವುದು ಗಾಯಕನಿಗೆ ಅತ್ಯವಶ್ಯ ಹಾಗು ಇಂತಹ ವಿಚಾರಗಳು, ಚಿಂತನೆಗಳು ಸೃಜನಶೀಲತೆಯನ್ನು ಉತ್ತೇಜಿಸುತ್ತವೆ; ಒಳ್ಳೆಯ ಕಂಠ ಹಾಗು ಉಸಿರಾಟವನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯ ಯಾವುದೇ ಹಾಡುಗಾರರಿಗೆ ತುಂಬಾ ಮುಖ್ಯ ಹಾಗೇನೆ ಸೌಂದರ್ಯವೂ ಕೂಡ ಅಷ್ಟೇ ಮುಖ್ಯ.." ಎಂದರು ಪ್ರಭಾ ಅತ್ರೆ ನಮ್ಮೊಡನೆ ಮಾತಾಡುತ್ತ. ಅವರ ಗಾಯನ ಕೇಳಿದಾಗ ಅದು ನಮ್ಮ ಅನುಭವಕ್ಕೇ ಬರುತ್ತದೆ. ಕಲಾವತಿ ರಾಗದ 'ತನ ಮನ ಧನ ತೊಪೆ ವಾರು..', ಮಧುರ ಕೌಂಸ್ ರಾಗದ 'ಪಾರ ಮೋರಿ ನಯ್ಯಾ..', ಮಾರು ಬಿಹಾಗದ 'ಜಾಗೂ ಮೈ ಸಾರೀ ರೈನಾ.., ಕಲ ನಹೀ ಆಯೇ..' ಭೈರವಿಯ 'ಮೋರಿ ಮೈಲಿ ಹೋಗಯಿ ರೇ ಚುನರೀಯಾ.. ಕೈಸೆ ಜಾಹುಂ ಮೈ ಪೀ ಕೀ ನಗರಿಯಾ..' ಅವರ ಕಂಠದಲ್ಲಿ ತೆರೆದುಕೊಳ್ಳುವ, ಹೊಮ್ಮುವ, ಪ್ರವಹಿಸುವ ಪರಿಯೇ ಪರಮಾನಂದ. ಚನ್ನಾಗಿ ಕೃಷಿ ಮಾಡಿದ ಸದೃಢ ಕಂಠ ಅವರದು. ತುಂಬಿ ಹರಿಯುವ ನಿನಾದ. ಒಬ್ಬ ಸಾಮಾನ್ಯ ಅನಭಿಜ್ಞ ಮನುಷ್ಯನನ್ನು ತನ್ನತ್ತ ಸೆಳೆದುಕೊಳ್ಳುವ ಚುಂಬಕ. ಪದಪದದಲ್ಲೂ, ಸ್ವರಸ್ವರದಲ್ಲೂ, ಪಲುಕುಪಲುಕಿನಲ್ಲೂ ಒಸರುವ ಮಾಧುರ್ಯ; ರಾಗದ ಭಾವ, ಬನಿ, ಮಾಧುರ್ಯವನ್ನು ಗಾಯನದುದ್ದಕ್ಕೂ ಕಾಯ್ದುಕೊಳ್ಳುವ ಕುಶಲತೆ ನಮ್ಮನ್ನು ಪರವಶಗೊಳಿಸಿ, ಅಲೌಕಿಕಕ್ಕೆ ಒಯ್ದು, ಆತ್ಮ ಸ್ಪರ್ಶಿಸಿ ಒಂದು ಚೇತೋಹಾರಿ ಅನುಭವ ನೀಡುತ್ತದೆ.

ನಾವು ಮಾತಿಗೆ ತೊಡಗಿದ್ದಂತೆ ಭಾರತಿ ಎಲ್ಲರಿಗೂ ಟೀ ಬಿಸ್ಕತ್ ತಂದಿಟ್ಟಳು. ಅವರದು ತುಂಬಾ ಲೈಟ್ ಟೀ. ಬೇರೇನೆ ಮಾಡಿದ್ದಳು. ಒಂದು ಗುಟುಕು ಕುಡಿದು 'ಚನ್ನಾಗಿಲ್ಲ. ಸಕ್ಕರೆ ಕಮ್ಮಿ, ತಣ್ಣಗಾಗಿದೆ..' ಅಂದು ಭಾರತಿ 'ಇರ್ಲಿ ಈಗ ಕುಡೀರಿ ನಾನು ಮತ್ತೆ ಮಾಡಿಕೊಡ್ತಿನಿ..' ಅಂತ ಹೇಳುತ್ತಿದ್ದರೂ 'ಏನೂ ಬೇಡ ನಾನೇ ಮಾಡ್ಕೋತಿನಿ...' ಅಂತ ರಚ್ಚೆ ಹಿಡಿದ ಸಣ್ಣ ಹುಡುಗಿಯಂತೆ ಲೋಟ ಹಿಡಿದು ಒಳಹೋಗಿ ಬಿಸಿ ಮಾಡಿಕೊಂಡು ಬಂದು ಕೆಳಗಿಟ್ಟು ಸುಮ್ಮನೆ ಕೂತರು. 'ಯಾಕೆ ಕುಡೀರಿ...' ಅಂದರೆ 'ತಣ್ಣಗಾಗ್ಲಿ ಸುಡುತ್ತೆ..' ಅಂದು ನಕ್ಕರು. ಭಾರತಿ ನಕ್ಕು 'ಪ್ರಭಾ ಅತ್ರೆ ಮೀನ್ಸ್ ಕಟ್‌ಕಟ್..' ಅಂದಳು. ತಕ್ಷಣ ಅವರು 'ಭಾರತಿ ಮೀನ್ಸ್ ಕಟ್‌ಕಟ್..' ಅಂದರು ನನ್ನ ನೋಡಿ. ನಾನು ಅದಕ್ಕೆ ನಗುತ್ತಾ 'ಬೋತ್ ಟುಗೆದರ್ ಬಡಾ ಕಟ್‌ಕಟ್..' ಅಂದಾಗ 'ಅಬ್ಸಲ್ಯೂಟ್ಲೀ..' ಅಂತ ಜೋರಾಗಿ ನಕ್ಕು ಮತ್ತೆ ತಮ್ಮ ಬಗ್ಗೆ ಹೇಳತೊಡಗಿದರು.

'ಓದುವಾಗ ಸಂಗೀತ, ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವಿತ್ತು. ಆದರೆ ನನ್ನ ಕಾಲೇಜು ಶಿಕ್ಷಣ ಮುಗಿದ ಮೇಲಷ್ಟೆ ನಾಟಕಗಳಲ್ಲಿ ಅಭಿನಯಿಸೋ ಅವಕಾಶ ನಂಗೆ ಒದಗಿದ್ದು. ನನ್ನ ಕಾಲೇಜು ಶಿಕ್ಷಣದೊಂದಿಗೆ ನನ್ನ ನೃತ್ಯವೂ ಕೊನೆಯಾಯ್ತು. ಕೆಲ ವರ್ಷಗಳ ನಂತರ ರಂಗದ ಮೇಲೆ ನಟಿಸುವುದೂ ಸಹ ಕೊನೆಗೊಳ್ತು. ನನಗೂ ನೃತ್ಯ ಮತ್ತು ನಾಟಕಗಳ ಬಗ್ಗೆ ಒಲವಿತ್ತು. ನೃತ್ಯದ ಬಗ್ಗೆಯಂತೂ ವಿಶೇಷ ಸೆಳೆತ ಇತ್ತು. ನೃತ್ಯದಲ್ಲಿ ಶರೀರದ ಲಾಸ್ಯಪೂರ್ಣ ಚಲನೆಯ ಜೊತೆ ಅಭಿನಯವೂ ಇದೆ, ಸಂಗೀತವೂ ಅದರಲ್ಲಿದೆ. ಸಂಗೀತ ನನ್ನ ಜೀವನ ಪ್ರವೇಶಿಸದಿದ್ದರೆ ಪ್ರಾಯಶಃ ನಾನು ನೃತ್ಯಗಾರ್ತಿಯಾಗಿರ್‍ತಿದ್ದೆ. ಒಲವಿದ್ದರೂ ನಾಟಕ ಅಥವಾ ನೃತ್ಯವನ್ನ ನನ್ನ ಕಾರ್ಯಕ್ಷೇತ್ರವನ್ನಾಗಿಸದೆ ಸಂಗೀತವನ್ನು ಆರಿಸಿಕೊಳ್ಳಲು ಕಾರಣ ಅದು ನನ್ನ ಹುಟ್ಟು ಗುಣ-ಸ್ವಭಾವಗಳಿಗೆ ಹೊಂದುತ್ತದೆಂದು" ಎಂದು ಹೇಳಿ ಅವರ ಮಾತು ಅವರ ಪ್ರಥಮ ಸಾರ್ವಜನಿಕ ಪ್ರದರ್ಶನ ಕುರಿತು ಅವರ ಅನುಭವ ಮತ್ತು ಅವರ ಅತ್ಯಂತ ಪ್ರೀತಿಯ ರಾಗದತ್ತ ಹರಿಯಿತು.

"ನನ್ನ ಪ್ರಥಮ ಸಾರ್ವಜನಿಕ ಪ್ರದರ್ಶನ ಸುಮಾರು 1945ರಲ್ಲಿ, ಪುಣೆಯಲ್ಲಿ ಆಯಿತು. ಮಹಾರಾಷ್ಟ್ರದಲ್ಲಿ ಹತ್ತು ದಿನ ಗಣೇಶೋತ್ಸವ ಆಚರಿಸುವ ಪರಂಪರೆಯಿದೆ. ಆರಂಭದಲ್ಲಿ ಸಹಜವಾಗಿಯೇ ಅಧೀರಳಾಗಿದ್ದೆ. ಆದರೆ ಶ್ರೋತೃಗಳ ಪ್ರೋತ್ಸಾಹದಿಂದ ವಿಶ್ವಾಸ ಪಡೆದೆ. ನನಗೆ ಯಮನ್, ಭೈರವ್ ರೀತಿಯ ಮೂಲ(ಜನಕ/ಸ್ವಯಂಭು) ರಾಗಗಳು ಹೆಚ್ಚು ಪ್ರಿಯ. ನಾನು ಒಂದು ರಾಗವನ್ನು ಅಭ್ಯಸಿಸುತ್ತಿದ್ದರೆ ಎಲ್ಲ ಕಚೇರಿಗಳಲ್ಲಿ ಹಲವಾರು ತಿಂಗಳು ಅದನ್ನೇ ಹಾಡ್ತೀನಿ. ಆನಂತರ ದೀರ್ಘ ಕಾಲ ಮತ್ತೆ ಅದನ್ನು ಹಾಡಲ್ಲ. ಆದ್ರೆ ಯಮನ್ ಮಾತ್ರ ಯಾವಾಗಲೂ ಹಾಡ್ಲಿಕ್ಕೆ ಸಂತೋಷಿಸುತ್ತೇನೆ. ಅದು ತನ್ನಷ್ಟಕ್ಕೆ ತಾನು ಸುಂದರ ಮತ್ತು ಗಂಭೀರ ರಾಗವಾಗಿರುವುದಷ್ಟೇ ಅಲ್ಲ; ಅದರ ಬಗ್ಗೆ ಚಿಕ್ಕಂದಿನ ಸಿಹಿ ನೆನಪುಗಳು ಇವೆ. ನನ್ನ ಗುರು ಸುರೇಶ್‌ಬಾಬುರವರಿಂದ ಕಲಿತ ಮೊದಲ ರಾಗ ಅದು." ಅಷ್ಟು ಹೇಳಿ ಅವರು ಸುಮ್ಮನಾದಾಗ ನಾವು ಅವರ ಗಮನವನ್ನು ಅವರ ಗಾಯನದ ಶೈಲಿ ಮತ್ತು ಅವರ ಕಿರಾಣಾ ಘರಾಣಾ ಗಾಯಕಿಯ ವೈಶಿಷ್ಟ್ಯದತ್ತ ಸೆಳೆದವು.

"ನನ್ನ ಶೈಲಿಯ ನೆಲೆಗಟ್ಟು ಕಿರಾಣಾ, ಆದರೆ ಅದಕ್ಕೆ ಆಧುನಿಕ ಕಾಲದ ಸಂದರ್ಭವುಂಟು. ಪ್ರಪಂಚದಾದ್ಯಂತದ – ಭಾರತೀಯ, ಭಾರತೀಯೇತರ ಸಂಗೀತ ಪ್ರಕಾರಗಳು ನನ್ನ ಚಿಂತನೆಯನ್ನು ಶ್ರೀಮಂತಗೊಳಿಸಿವೆ. ಎರಡನೆಯದಾಗಿ, ನನ್ನ ಸಶಕ್ತ ಶೈಕ್ಷಣಿಕ ಹಿನ್ನೆಲೆ, ತರಬೇತಿ ಮತ್ತು ಅನುಭವದಿಂದಾಗಿ ನಾನು ಯಾವುದನ್ನೂ ಪರಂಪರೆಯ ಹೆಸರಿನಲ್ಲಿ ಕಣ್ಣು ಮುಚ್ಚಿ ಸ್ವೀಕರಿಸುವುದಿಲ್ಲ. ವಸ್ತುನಿಷ್ಠತೆ, ವಿಶ್ಲೇಷಣಾತ್ಮಕ ಸಾಮರ್ಥ್ಯ, ಆಧುನಿಕತೆ, ಸಂವೇದನಾಶೀಲತೆ, ಅಲಿಪ್ತತೆ, ಆಯ್ಕೆಯ ಕ್ಷಮತೆ ನನ್ನ ಸಂಗೀತದಲ್ಲಿ ಎದ್ದು ತೋರುವ ಅಂಶಗಳು. ಇನ್ನು ಕಿರಾಣಾದ ಸ್ವರ ಮಾಧುರ್ಯ ಮನಸ್ಸಿನ ಮೇಲೆ ಹಿತಕರ ಪರಿಣಾಮ ಉಂಟುಮಾಡಿ ಅಲೌಕಿಕ ಭಾವನೆಗಳನ್ನು ಉದ್ದೀಪಿಸುತ್ತದೆ. ಧ್ವನಿ ನೇರವಾಗಿ ಹೃದಯ ಸ್ಪರ್ಶಿಸುತ್ತದೆ, ರೋಮಾಂಚನವಾಗುತ್ತದೆ. 'ಮಾಧುರ್ಯದೊಂದಿಗೆ ಪ್ರಶಾಂತತೆ' ಕಿರಾಣಾ ಶೈಲಿಯ ತಿರುಳು. ರಾಗದ ಸ್ವರಗಳನ್ನು ಒಂದೊಂದಾಗಿ ಅನಾವರಣಗೊಳಿಸುತ್ತ ರಾಗಬಂಧದ ಸೂಕ್ಷ್ಮ ವಿವರಗಳನ್ನು ಶೋಧಿಸುವುದು ಕಿರಾಣಾ ಶೈಲಿಯ ಗುಣ ವೈಶಿಷ್ಟ್ಯ. ತಾಲಾಕೃತಿಯಲ್ಲಿ ಸ್ವರಗಳು ಆರಾಮವಾಗಿ, ಸೌಹಾರ್ದಯುತವಾಗಿ ವಿಹರಿಸುತ್ತವೆ. ಪ್ರತಿ ಸ್ವರವೂ ಭಾವನೆಯಲ್ಲಿ ಅದ್ದಿ ಮೀಯಿಸಲ್ಪಟ್ಟಿದ್ದು ಸಂಗೀತ ನಿರ್ಮಾಣದಲ್ಲಿ ಸಾಮಾನ್ಯ ಶ್ರೋತೃವೂ ಸಹಭಾಗಿಯಾಗುತ್ತಾನೆ. ಒಂದು ರೀತಿಯಲ್ಲಿ, ಕಿರಾಣಾ ಶೈಲಿ ನಿರ್ಲಿಪ್ತ, ಅಂತರ್ಮುಖಿ. ಅದರಲ್ಲಿ ಆಡಂಬರ, ತೋರಿಕೆ, ಕ್ಷೋಭೆ, ಯಾವುದೂ ಇಲ್ಲ. ಕಿರಾಣಾ ಸಂಗೀತ ಸವಿಯೋಕೆ ಶಾಸ್ತ್ರ ತಿಳಿದುಕೊಂಡಿರ್ಲೇಬೇಕು ಅಂತೇನಿಲ್ಲ" ಎಂದರು.

ಪ್ರಭಾರವರ ಪಿಎಚ್‌ಡಿ ಅಧ್ಯಯನದ ವಿಷಯ ಸರಗಮ್. 1960ರಲ್ಲಿ ಅವರು ತಮ್ಮ ಗಾಯನದಲ್ಲಿ ಸರಗಮ್ ಬಳಸಲು ಪ್ರಾರಂಭಿಸಿದಾಗ ಮಹರಾಷ್ಟ್ರದಲ್ಲಿನ ಕೆಲ ವಿಮರ್ಶಕರಿಂದ, ವಿದ್ವಾಂಸರಿಂದ ಟೀಕೆಗೆ, ಆಕ್ಷೇಪಣೆಗೆ ಗುರಿಯಾದರು. ಆ ಕುರಿತು ನೀವು ಸರಗಮ್‌ನಲ್ಲಿ ಸಂಗೀತ ಪ್ರಸ್ತುತೀಕರಣವನ್ನು ಹೆಚ್ಚು ಸಂಪನ್ನ, ವೈವಿಧ್ಯಪೂರ್ಣ ಮಾಡಬಲ್ಲ ಸಾಮರ್ಥ್ಯವಿದೆ ಎಂಬ ಬಗ್ಗೆ ಪ್ರಚಾರ ಮಾಡಿರುವುದಷ್ಟೇ ಅಲ್ಲದೆ ಕಾರ್ಯಕ್ರಮಗಳ ಮೂಲಕ ತೋರಿಸಿಯೂ ಕೊಟ್ಟಿದ್ದೀರಿ. ಹಾಗಿದ್ದಾಗ್ಯೂ ಕೆಲವು ಹಿರಿಯ ಸಂಗೀತಗಾರರು ಕಚೇರಿಗಳಲ್ಲಿ ಸರಗಮ್‌ನ ಬಳಕೆಯನ್ನು ವಿರೋಧಿಸುತ್ತಾರಲ್ಲಾ...! ಎಂದು ಆ ಬಗ್ಗೆ ಪ್ರಸ್ತಾಪಿಸಿದಾಗ ಅವರು ಗಂಭೀರವಾಗಿ, ಖಾರವಾಗಿ ಪ್ರತಿಕ್ರಿಯಿಸಿದರು.

"ತಮ್ಮ ಜನಪ್ರಿಯತೆ, ಸ್ಥಾನಮಾನ ಬಳಸಿಕೊಂಡು ಕೆಲ ಸಂಗೀತಗಾರರು ಹಲವು ವಿಚಾರಗಳನ್ನು ತಮ್ಮ ಪ್ರತಿಷ್ಠೆಯ ವಿಷಯವಾಗಿಸಿದರೆ ಏನು ಮಾಡಲು ಸಾಧ್ಯ? ಸರಗಮ್ ಬಳಸಬಾರದು ಅನ್ನುವ ಸಂಗೀತಗಾರರಿಗೆ ತಮ್ಮ ಈ ವಾದವನ್ನು ಪುಷ್ಟೀಕರಿಸೋಕೆ ಯಾವ ತಾತ್ವಿಕ ಭೂಮಿಕೆ ಇದೆ..? ಸರಗಮ್ ಅವರಿಗೆ ಅಪ್ರಿಯವಾಗಿದ್ದಲ್ಲಿ ಅದವರ ವೈಯಕ್ತಿಕ. ಅದನ್ನು ತಮಷ್ಟಕ್ಕೇ ಇಟ್ಟುಕೊಬೇಕು. ಮಾಧ್ಯಮಗಳ ಮೂಲಕ ಇಂತಹ ವಿಚಾರಗಳನ್ನು ಪ್ರಕಟಿಸಿ ಇವರು ಹೊಸ ತಲೆಮಾರಿನ ಗಾಯಕರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಮಾತ್ರವಲ್ಲ ಸಂಗೀತ ಕಲೆಗೂ ಹಾನಿ ಮಾಡುತ್ತಿದ್ದಾರೆ. ಸರಗಮ್ ಬಗೆಗಿನ ನನ್ನ ಪಿಎಚ್.ಡಿ.ಯ ಸಂಶೋಧನಾ ಪ್ರಬಂಧದಲ್ಲಿ, ಪುಸ್ತಕಗಳಲ್ಲಿ ಸಂಗೀತ ಕಲಿಸುವಾಗ ಮತ್ತು ಗಾಯನದಲ್ಲಿ ಸರಗಮ್‌ನ ಬಳಕೆ ಹೇಗೆ ಯೋಗ್ಯ ಎಂಬುದನ್ನು ಉದಾಹರಣೆ ಸಹಿತ ಸಿದ್ಧಪಡಿಸಿ ತೋರಿಸಿದ್ದೇನೆ. ಸರಗಮ್‌ನ ಬಹುಮುಖೀ ವ್ಯಕ್ತಿತ್ವ ರಾಗ ಸಂಗೀತದಿಂದ ಹಿಡಿದು ಚಲನಚಿತ್ರ ಸಂಗೀತ, ಸುಗಮ ಸಂಗೀತ, ಪಾಪ್, ಫ್ಯೂಜನ್, ಜಿಂಗಲ್ಸ್, ಹೀಗೆ ಬಹುತೇಕ ಎಲ್ಲಾ ಸಂಗೀತ ಪ್ರಕಾರಗಳ ಒಂದು ಮಹತ್ವದ ಅಂಗವಾಗಿದೆ.

'ಆಲಾಪದಂತೆ ಸರಗಮ್‌ನ ಬಳಕೆ ಸಲ್ಲದು. ತಾನ್‌ನಂತೆ ಸರಗಮ್ ಅನ್ನು ಹಾಡಬೇಕು', 'ಶ್ರೋತೃಗಳಿಗೆ ಕೆಲವು ವಿಷಯಗಳನ್ನು ಸ್ಪಷ್ಟಪಡಿಸಿ ತೋರಿಸಲು ನಾವು ಸರಗಮ್ ಬಳಸುತ್ತೇವೆ' ಹೀಗೆ ಸರಗಮ್ ಸಂಬಂಧಿಸಿದಂತೆ ಕೆಲವು ಕಲಾವಿದರ ಟೀಕೆಗಳು ಕೇಳಿ ಬರುತ್ತಿವೆ. ಗಾಯನ ಕಾರ್ಯಕ್ರಮ ಮತ್ತು ಸ್ವಪ್ರಯೋಗ ವ್ಯಾಖ್ಯಾನ ಎರಡೂ ಬೇರೆ ಬೇರೆ ಉದ್ದೇಶಗಳನ್ನು ಈಡೇರಿಸುತ್ತವೆ. ಗಾಯನ ಕಾರ್ಯಕ್ರಮವನ್ನು ಸ್ವಪ್ರಯೋಗ ವ್ಯಾಖ್ಯಾನವಾಗಿಸುತ್ತಿದ್ದಾರೆ ಈ ಸಂಗೀತಗಾರರು. ಸಂಗೀತ ಸಾಮಗ್ರಿಗಳಲ್ಲಿ ಆಲಾಪ್, ತಾನ್, ಬೋಲ್‌ಗಳಂತೆಯೇ ಸರಗಮ್‌ಗೆ ತನ್ನದೇ ಆದ ವ್ಯಕ್ತಿತ್ವ, ಕರ್ತವ್ಯ, ಅಸ್ತಿತ್ವ ಮತ್ತು ವಿಶಿಷ್ಟ ಪರಿಣಾಮವಿದೆ. ಸರಗಮ್ ಸ್ವತಃ ಒಂದು ಶುದ್ಧ ಸಂಗೀತ ಸಾಮಗ್ರಿ ಅನ್ನೋದನ್ನ ಅರಿಯುವಲ್ಲಿ ವಿಫಲರಾಗಿದ್ದಾರೆ ಈ ಟೀಕಾಕಾರರು. ಅಷ್ಟೇ ಅಲ್ಲ ಸರಗವ್ ಹಾಡುವಾಗ ವಿಚಾರಪೂರ್ವಕವಾಗಿ, ಸೌಂದರ್ಯಪೂರ್ವಕವಾಗಿ ಹಾಡಬೇಕು. ಇಲ್ಲವೆ ಅದು ರಸಹೀನ, ರೂಕ್ಷ ವ್ಯಾಕರಣ ಅನಿಸುತ್ತದೆ. ಈ ವಿಷಯವಾಗಿ ತಮ್ಮ ಮಿತಿಗಳನ್ನು ಸಂಗೀತಗಾರರು ಸರಗಮ್‌ದ ಮಿತಿ ಅಂತ ತಿಳಿಯಬಾರದು. ಟೀಕಿಸುವ ಸಂಗೀತಗಾರರು ಗಂಭೀರವಾಗಿ ಈ ಬಗ್ಗೆ ವಿಚಾರ ಮಾಡುವರೆಂದು ಆಶಿಸುತ್ತೇನೆ. ಸ್ವತಃ ಸರಗಮ್ ಹಾಡುವುದು, ಬಿಡುವುದು ಪ್ರತಿಯೊಬ್ಬ ಸಂಗೀತಗಾರರ ಇಚ್ಛೆಗೆ ಬಿಟ್ಟಿದ್ದು. ಆದರೆ ಸರಗಮ್ ಬಳಕೆಯ ವಿರೋಧ ನಿಲ್ಲಬೇಕು".

ನೀವು ಫಿಲ್ಮ್, ಪಾಪ್, ಫ್ಯೂಜನ್ ಅಥವಾ ಅದರಂತಹ ಇತರ ಸಂಗೀತ ಕೇಳ್ತೀರ? ಏನನ್ನಿಸುತ್ತೆ..? ಅಂತ ಕೇಳಿದಾಗ ಮಾತು ಮತ್ತೆ ಮೆದುವಾದವು.

"ನನ್ನ ಪ್ರಕಾರ ಸಂಗೀತದಲ್ಲಿ ಎರಡೇ ಬಗೆ ಒಳ್ಳೆಯದು ಮತ್ತು ಕೆಟ್ಟದ್ದು. ಹೇಗೆ ಎಲ್ಲ ಶಾಸ್ತ್ರೀಯ ಸಂಗೀತ ಒಳ್ಳೆಯದಾಗಿರಲ್ವೊ ಹಾಗೇ ಎಲ್ಲ ಚಲನಚಿತ್ರ ಸಂಗೀತವೂ ಕೆಟ್ಟದ್ದಲ್ಲ. ನಮ್ಮ ಸಮಸ್ಯೆಯೆಂದರೆ ಸಂಸ್ಕಾರ. ಅದು ನಮ್ಮ ಕೇಳುವಿಕೆಯ ಅಭ್ಯಾಸಗಳಿಗೆ ನಾವು ನಾವಾಗೇ ಹಾಕಿಕೊಂಡಿರುವ ಮಿತಿ. ಚಲನಚಿತ್ರ ಸಂಗೀತದಿಂದ ಭಾರತೀಯ ಸಂಗೀತದ ಒಂದು ಹೊಸ ಮಗ್ಗಲು ಪ್ರಪಂಚದೆದುರು ತೆರೆದುಕೊಂಡಿದೆ ಮತ್ತು 'ಭಾರತೀಯ ಹಾರ್ಮನಿ' (ಒಂದೇ ಸಮಯಕ್ಕೆ ಒಂದಕ್ಕೊಂದು ಸಂಬಂಧವಿರುವ ಒಂದಕ್ಕಿಂತ ಹೆಚ್ಚು ಸ್ವರಗಳ ಒಟ್ಟಿಗೆ ಸಾದರೀಕರಣ)ಗೆ ಜನ್ಮ ಕೊಟ್ಟಿದೆ. ಧಾಟಿಗಳು, ವಾದ್ಯಗಳು, ತಾಳಗಳು, ಧ್ವನಿಯ ನಾದ ಗುಣ, ಧ್ವನಿಯ ನುಣುಪುಗಾರಿಕೆ, ಭಾವಾವಿಷ್ಕಾರ, ಇತ್ಯಾದಿಗಳ ಮುಖೇನ ಚಲನಚಿತ್ರ

ಸಂಗೀತ ನಮ್ಮ ಮುಂದೆ ಇರಿಸಿರುವ ವೈವಿಧ್ಯ ಬೆರಗುಗೊಳಿಸುತ್ತದೆ. ಆದರೆ ಪಾಪ್ ಮತ್ತು ಡಿಸ್ಕೊ ಸಂಗೀತ ಅಬ್ಬರವೆನಿಸುತ್ತೆ; ಕೆಲವೊಮ್ಮೆ ಕರ್ಕಶ ಕೂಡ. ಆದರದು ಶ್ರೀಸಾಮಾನ್ಯನನ್ನು ಸಂಗೀತದತ್ತ ತಿರುಗಿಸಿದೆ. ಕಾಲಕ್ರಮೇಣ, ಈ ಪ್ರಕಾರವೂ ಪಕ್ವಗೊಂಡು ಜನರಿಗೆ ನಾದ ಮತ್ತು ಲಯದ ಸೌಂದರ್ಯದ ಅರಿವು ಮೂಡಿಸುತ್ತೆ. ನಿಜ ಹೇಳಬೇಕೆಂದರೆ, ನಾವು ಈ ಲಘು ಪ್ರಕಾರಗಳ ಗರಿಷ್ಠ ಪ್ರಯೋಜನವನ್ನು ಪ್ರಜ್ಞಾಪೂರ್ವಕವಾಗಿ ಪಡೆದು ಶಾಸ್ತ್ರೀಯ ಸಂಗೀತವನ್ನು ಪ್ರಚುರಪಡಿಸಬೇಕು." ಎಂದರು.

ಭಾರತಿ ಅವರ ಬಂದಿಶ್‌ಗಳನ್ನು ಜಾಝ್ ಮತ್ತು ಫ್ಯೂಜನ್‌ಗೂ ಬಳಸಲಾಗಿರುವ ಬಗ್ಗೆ ಪ್ರಸ್ತಾಪಿಸಿ ಅವುಗಳಿಗಾಗಿ ಬೇರೆಯೇ ಬಂದಿಶ್‌ಗಳನ್ನು ರಚಿಸಬೇಕಾಯ್ತು..? ಅಂತ ಕೇಳಿದ್ದಕ್ಕೆ

"ಪ್ರತ್ಯೇಕ ಸಂಗೀತ ಪ್ರಕಾರದ ಸ್ವಭಾವಕ್ಕನುಗುಣವಾಗಿ ಬಂದಿಶ್ ಇರಬೇಕಾಗತ್ತೆ. ಬಂದಿಶ್‌ಗಳನ್ನು ಕೇಳಿಯೇ ಅವುಗಳ ಸಂಗೀತ ಪ್ರಕಾರವನ್ನು ಗುರುತಿಸಲು ಸಾಧ್ಯವಾಗುವಂತಾಗಬೇಕು. ಒಂದು ಪ್ರಕಾರಕ್ಕೆಂದು ರಚಿಸಲ್ಪಟ್ಟ ಬಂದಿಶ್ ಇನ್ನೊಂದು ಪ್ರಕಾರದ ಚೌಕಟ್ಟಿಗೆ ಹೊಂದಿಕೊಳ್ಳುತ್ತದೆ ಅಂತೇನೂ ಇಲ್ಲ. ಮುಖ್ಯವೆಂದರೆ ತಾಳದ, ಲಯದ ಪ್ರಶ್ನೆ ಎದುರಾಗುತ್ತೆ. ಬಂದಿಶ್‌ನ ತಿರುವುಗಳನ್ನೂ ಕೂಡ ಬದಲಿಸಬೇಕಾಗುತ್ತೆ. ಬಂದಿಶ್‌ನಲ್ಲಿ ಸಾಮರ್ಥ್ಯ, ಕ್ಷಮತೆ ಇದ್ದಲ್ಲಿ ಮಾತ್ರ ಇದು ಸಾಧ್ಯ. ಬಹುಶಃ ನನ್ನ ಬಂದಿಶ್‌ಗಳು ಮಾಧ್ಯಮಕ್ಕನುಗುಣವಾಗಿ, ಪ್ರಕಾರಕ್ಕನುಗುಣವಾಗಿ ಬಣ್ಣ ಧರಿಸಬಲ್ಲವು. ಹಾಲೆಂಡ್‌ನಲ್ಲಿನ ಜಾಝ್ ಗಾಯಕಿ, ನನ್ನ ಶಿಷ್ಯೆ ಸೂಸನ್ ಅಬುಹೆಲ್ ನನ್ನ ಬಂದಿಶ್ ಬಳಸಿದ ಧ್ವನಿಮುದ್ರಿಕೆ ಮಾರುಕಟ್ಟೆಯಲ್ಲಿದೆ. ಅದ ಕೇಳಿ ನನಗೆ ಬಹಳನೇ ಸಂತೋಷವಾಯ್ತು."

ಹೌದು.., 1970ರ ದಶಕದಷ್ಟು ಪೂರ್ವದಲ್ಲಿಯೇ ನೀವು ವಿದೇಶಕ್ಕೆ ಹೋಗಿ ಪ್ರದರ್ಶನ ಕೊಡುವಂತೆ ಮಾಡಿದ್ದೇನು?

"ಪಂಡಿತ್ ರವಿ ಶಂಕರ್ ವಿದೇಶೀಯರಿಗೆ ಭಾರತೀಯ ಸಂಗೀತವನ್ನು ಪರಿಚಯಿಸುವಲ್ಲಿ ದೊಡ್ಡ ಕಾರ್ಯ ಮಾಡಿರುವರು. ಆದರೆ ವಿದೇಶಿಯರು ಆಲಿಸುತ್ತಿದ್ದುದು ಮುಖ್ಯವಾಗಿ ವಾದ್ಯ ಸಂಗೀತವನ್ನು. ಒಂದು ಪೂರ್ಣಾವಧಿ ಗಾಯನ ಕಚೇರಿ ಅವರಿಗೆ ಆಗ ಹೊಸತು. 'ಕಂಠ್ಯ ಸಂಗೀತ ಭಾರತೀಯ ಸಂಗೀತದ ಆತ್ಮ'. ಶಾಸ್ತ್ರೀಯ ಗಾಯನದ ಸೌಂದರ್ಯಕ್ಕೆ ಅವರಿಗೆ ತೆರೆತ ಒದಗಿಸುವುದು ನನ್ನ ಪ್ರಯತ್ನವಾಗಿತ್ತು. ಪೂರ್ವ 70ರ ದಶಕದಲ್ಲಿ ಪಶ್ಚಿಮದಲ್ಲಿ ವ್ಯಾಪಕವಾಗಿ ಪಯಣಿಸಿ ಪೂರ್ಣಕಾಲದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಚೇರಿಗಳನ್ನು ನೀಡಿದ ಕಲಾವಿದರಲ್ಲಿ ಬಹುಶಃ ನಾನು ಮೊದಲಿಗಳು."

ನಮ್ಮ ಸಂಗೀತಕ್ಕೆ ಪಾಶ್ಚಿಮಾತ್ಯ ಶ್ರೋತೃಗಳ ಪ್ರತಿಕ್ರಿಯೆ ಹೇಗಿರುತ್ತದೆ?

"ಸಾಧಾರಣವಾಗಿ ಅಲ್ಲಿಯ ಜನ ಒಳ್ಳೆಯ ಗುಣಗ್ರಾಹಿಗಳು. ಶ್ರೋತೃಗಳ ಶಿಸ್ತು ಮತ್ತು ಗ್ರಹಣಾಕಾಂಕ್ಷೆ ನೋಡಿದರೆ ಮಾತ್ರ ತಿಳಿಯುವಂತಹುದು. ಅವರು ಅತಿ ನಿಷ್ಠ ಶ್ರೋತೃಗಳು. ಕಾರ್ಯಕ್ರಮಕ್ಕೆ ಬರುವಾಗ ಸ್ವಲ್ಪ ಮಟ್ಟಿಗೆ ನಮ್ಮ ಸಂಗೀತದ ಬಗ್ಗೆ ತಿಳಿದುಕೊಂಡು, ಅಭ್ಯಸಿಸಿ ಬರುತ್ತಾರೆ. ಕಾರ್ಯಕ್ರಮದ ನಂತರ ವಿಚಾರಿಸಿ, ಪ್ರಶ್ನಿಸುತ್ತಾರೆ."

ಈಗ ಹೆಚ್ಚು ಜನಪ್ರಿಯವಾಗಿರುವ ಫ್ಯೂಜನ್ ಸಂಗೀತದಲ್ಲಿ ಶಾಸ್ತ್ರೀಯ ಗಾಯಕ-ವಾದಕರು ತೊಡಗಿಸಿಕೊಳ್ಳುವ ಬಗ್ಗೆ ನಿಮ್ಮ ಅಭಿಪ್ರಾಯ...?

ಫ್ಯೂಜನ್ ಸಂಗೀತ ಪ್ರಕಾರ ಬಹಳ ಜನಪ್ರಿಯವಾಗಿರುವುದಕ್ಕೆ ಕಲಾವಿದರು ಅಂತೆಯೇ ಶ್ರೋತೃಗಳೂ ಜವಾಬ್ದಾರರು. ಇಂದಿನ ವ್ಯವಸಾಯ ಜಗತ್ತಿನಲ್ಲಿ ಸಂಗೀತ ಮಾರಾಟಕ್ಕಿಟ್ಟ ವಸ್ತು ಆಗಿದೆ. ಕಾಲದ ಬೇಡಿಕೆ ಅಂತ ಶಾಸ್ತ್ರೀಯ ಗಾಯಕರು–ವಾದಕರು ಫ್ಯೂಜನ್ ಕಡೆ ತಿರುಗಿರಬಹುದು. ಸೃಜನಶೀಲತೆಯ ಜೊತೆಗೆ ಇತರ ಕಾರಣಗಳೂ ಇದ್ದಿರಬಹುದು. ಮೂಲತಃ ಫ್ಯೂಜನ್ ಕೆಟ್ಟದ್ದು ಅಂತೇನೂ ಅಲ್ಲ. ಅದು ವಿಕಾಸಗೊಂಡು ಪರಿಪಕ್ವವಾಗಲು ನಾವು ಸಾಕಷ್ಟು ಸಮಯ ಕೊಡಬೇಕು. ಫ್ಯೂಜನ್‌ನಲ್ಲಿ ತೊಡಗಿಸಿಕೊಂಡಿರುವ ಕಲಾವಿದರು ಫ್ಯೂಜನ್ ಮುಖೇನ ಶಾಸ್ತ್ರೀಯ ಸಂಗೀತದ ಜನಪ್ರಿಯತೆ ಹೆಚ್ಚಿಸಲು ಸಹಾಯಕರಾಗಬೇಕು ಅನ್ನೋದು ನನ್ನ ಬಯಕೆ. ಪ್ರತಿಯೊಂದು ಪ್ರಕಾರವೂ ಕಾಲದ ಪರೀಕ್ಷೆಗೆ ತನ್ನನ್ನು ಒಡ್ಡಿಕೊಳ್ಳಲೇಬೇಕು. ನೋಡೋಣ ಏನಾಗುತ್ತೆ!

ಇಷ್ಟು ಹೇಳಿ 'ದೇವಸ್ಥಾನಕ್ಕೆ ಹೋಗಲು ತಡವಾಗುತ್ತದೆ ನಾನು ರೆಡಿಯಾಗಿ ಬರುತ್ತೇನೆ' ಎಂದು ಅವರು ರೆಡಿಯಾಗಿ ಬಂದ ಮೇಲೆ ಒಂದು ರೌಂಡು ಫೋಟೋ ಸೆಷನ್ ಮುಗಿಸಿ ಅವರು ಸಂಗೀತ ರಚನೆ ಮಾಡಲಾರಂಭಿಸಿದ ಬಗ್ಗೆ, ಲೇಖನ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡದ್ದು ಹೇಗೆ? ಏಕೆ? ಎಂಬುದರ ಕುರಿತು ಮಾತಾಡುತ್ತ ಹೋದರು.

"ನನ್ನ ಗುರು ಸುರೇಶ್‌ಬಾಬು ಮಾನೆಯವರ ಅಕಾಲಿಕ ನಿಧನಾನಂತರ ಬಂದಿಶ್ ರಚನೆ ನನ್ನ ಅವಶ್ಯಕತೆಯಾಯ್ತು. ಸುರೇಶ್‌ಬಾಬುರವರ ಮತ್ತು ನನ್ನ ಬಾಂಧವ್ಯ ನಿಕಟವಾಗಿದ್ದು ಅವರ ನಂತರ ಬೇರೆ ಯಾರ ಬಳಿಯೂ ಕಲಿಯಹೋಗಲು ನನ್ನ ಮನ ತಯಾರಿರಲಿಲ್ಲ. ಬಾಬೂರಾವ್‌ರವರ ಸ್ಥಳದಲ್ಲಿ ಬೇರಾರನ್ನೂ ನಾನು ಗುರುವಾಗಿ ಪ್ರತಿಷ್ಠಾಪಿಸಲು ಸಾಧ್ಯವಿರಲಿಲ್ಲ. ಹೀಗಾಗಿ ಏಕಲವ್ಯನಂತೆ ಸಂಗೀತದಲ್ಲಿ ಏಕಾಂಗಿಯಾಗಿ ಮುನ್ನಡೆಯಬೇಕಾಯ್ತು. ನನಗೆ ಇಷ್ಟವಾದ ಆದರೆ ಕಲಿಯದೆ ಇದ್ದ ರಾಗಗಳ ಬಂದಿಶ್‌ಗಳನ್ನು ದೊರಕಿಸಿಕೊಳ್ಳಬೇಕಿತ್ತು ಅಲ್ಲದೆ ಶಿಷ್ಯತ್ವ ಸ್ವೀಕರಿಸದೆ ನನಗೆ ಯಾವ ಗುರುವೂ ಕಲಿಸಲು ಸಾಧ್ಯವಿರಲಿಲ್ಲ. 1960ರ ದಶಕದಲ್ಲಿ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿರುವಾಗ ನನ್ನ ರಚನಾ ಸಾಮರ್ಥ್ಯ ಕಂಡುಕೊಂಡೆ. ಆರಂಭದಲ್ಲಿ ಅವಶ್ಯಕತೆಗಾಗಿ ರಚಿಸಿದರೂ ಬೇಗನೆ ರಚನಾ ಕಾರ್ಯದಲ್ಲಿ ಆಸಕ್ತಳಾದೆ, ಹೆಚ್ಚು ಕಡಿಮೆ ಗೀಳೇ ಹಿಡಿಯಿತೆನ್ನಿ. ಅದು ನನ್ನ ಸೃಜನಶೀಲತೆಗೆ ಹೊಸ ಆಹ್ವಾನವಾಗಿತ್ತು. ರಚಿಸುವ ಸಾಮರ್ಥ್ಯ ಹೊಂದಿರುವುದು ನಿಜಕ್ಕೂ ದೊಡ್ಡ ಲಾಭ. ನಿಮ್ಮ ಶೈಲಿ ಮತ್ತು ಮನೋಧರ್ಮಕ್ಕೆ ಹೊಂದಿಕೊಳ್ಳುವ ರಚನೆ ಹೊಂದಿರುವುದು ಅತಿ ಅವಶ್ಯಕವೆಂದು ನನ್ನ ಭಾವನೆ. ತನ್ನ ಅಗತ್ಯಗಳಿಗೆ ಹೊಂದಿಸಿಕೊಳ್ಳಲು ಇನ್ನೊಬ್ಬರ ರಚನೆಯನ್ನು ತಿರುಚುವುದು, ತುಂಡರಿಸುವುದು ತಪ್ಪು.

ನನ್ನ ಪ್ರಥಮ ರಚನೆ ಮಾರುಬಿಹಾಗ್ ರಾಗದಲ್ಲಿ 'ಜಾಗೂ ಮೈ ಸಾರೀ ರೈನಾ...' ಅಪಾರ ಜನಪ್ರಿಯತೆ ಗಳಿಸಿತು. ಮಾರುಬಿಹಾಗ್‌ದ ನಂತರ ಕಾರ್ಯಕ್ರಮಗಳಲ್ಲಿ ಖ್ಯಾಲ್, ತರಾನಾ, ಠುಮ್ರಿ, ದಾದ್ರ, ಭಜನ್, ಗೀತ್, ಗಝಲ್, ಯಾವುದೇ ಇರಲಿ ನಾನು ಕೇವಲ ನನ್ನ ಸ್ವಂತ ರಚನೆಗಳನ್ನು ಹಾಡಲಾರಂಭಿಸಿದೆ.

ಬರವಣಿಗೆಯು ಚಿಂತನೆಗೆ ಸ್ಪಷ್ಟತೆ ಮತ್ತು ನಿಖರತೆ ತಂದುಕೊಡುತ್ತದೆ. ನಾನು ಲೇಖನಗಳಲ್ಲಿ ನನ್ನ ವಿಚಾರಗಳು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವೆ. ನನ್ನ ಲೇಖನಗಳು ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಸಂಗೀತ ಮತ್ತು ಸಂಗೀತ ಸಂಬಂಧಿ ವಿಷಯಗಳನ್ನು ಕುರಿತು ಬರೆದವುಗಳು. 'ಸ್ವರಮಯಿ' ಕೆಲವು ಲೇಖನಗಳ ಸಂಕಲನ. ಇಂಗ್ಲೀಷ್‌ನಲ್ಲಿ

ನನ್ನ ಎರಡು ಪುಸ್ತಕಗಳಿವೆ 'Enlightening the Listener : Contemporary North Indian Classical Vocal Music Performance' ಮತ್ತು 'Along the Path of Music".

ಅನೇಕ ಶಾಸ್ತ್ರೀಯ ಸಂಗೀತಗಾರರು ತಮ್ಮ ಸಂಗೀತವನ್ನು ದಿವ್ಯ, ತಾವು ದೈವೀಶಕ್ತಿಯೊಂದಿಗೆ ಸಂಪರ್ಕ ಸಾಧಿಸಬಲ್ಲವರು ಅಂತೆಲ್ಲಾ ಘೋಷಿಸುತ್ತಾರೆ. ನೀವು ನಿಮ್ಮ ಸಂಗೀತದ ಬಗ್ಗೆ ಏನು ಹೇಳ್ತೀರಿ? ಅಂತ ಭಾರತಿ ಕೀಟಲೆಯ ನಗು ನಗುತ್ತಾ ಕೇಳಿದಾಗ ಅವರೂ ನಗುತ್ತಾ

"ನನಗೆ ಸಂಬಂಧಪಟ್ಟ ಹಾಗೆ ನಾನು ಉತ್ತಮ ಸಂಗೀತಗಾರಳಾಗಬಯಸ್ತೀನಿ. ನನ್ನ ಕಲೆ ಮತ್ತು ವ್ಯವಸಾಯದೊಂದಿಗೆ ಪ್ರಾಮಾಣಿಕಳಾಗಿ, ನಿಷ್ಠೆಯಿಂದಿರಬಯಸ್ತೀನಿ. ಇವತ್ತು ಸಂಗೀತ ವ್ಯಾಪಾರಿ ಸರಕಾಗಿದೆ. ವ್ಯವಸಾಯ ಕ್ಷೇತ್ರದ ಮುಂಚೂಣಿಯಲ್ಲಿರಲು ಸಂಗೀತಗಾರರು ಎಲ್ಲಾ ಮಾರಾಟ ತಂತ್ರಗಳನ್ನು ಬಳಸುವುದು ನೋಡಸಿಗುತ್ತೆ. ಮಿತಿ ಇರದ ಸಂಭಾವನೆ, ಪಂಚತಾರಾ ಹೋಟೆಲುಗಳು, ವಿಮಾನದ ಉತ್ತಮ ಶ್ರೇಣಿಯಲ್ಲಿ ಪ್ರವಾಸ, ಪ್ರಸಾರ ಮಾಧ್ಯಮಗಳ ಮುಖೇನ ಸತತ ಪ್ರಚಾರ ಇತ್ಯಾದಿ ಬೇಡಿಕೆಗಳೆಲ್ಲ ಸರ್ವವಿದಿತ. ಇವತ್ತು ದುಬಾರಿ ಕಲಾವಿದ ಬೇಡಿಕೆಯಲ್ಲಿರುವ ಕಲಾವಿದ ಆಗಿದ್ದಾನೆ. ಕಲಾವಿದ ಎಷ್ಟು ಹೆಚ್ಚು ಹಣ ತೆಗೆದುಕೊಳ್ಳುವನೊ, ಅಷ್ಟು ದೊಡ್ಡವ, ಹೆಚ್ಚು ಜನಪ್ರಿಯ, ಹೆಚ್ಚು ಮಂದಿ ಅವನ ಹಿಂಬಾಲಕರು! ನಾವು ಸಂಗೀತದ ವ್ಯವಸಾಯದಲ್ಲಿದ್ದೀವಿ. ಸಂಭಾವನೆ ತೆಗೆದುಕೊಂಡು ಕಾರ್ಯಕ್ರಮ ನೀಡ್ತಿದ್ದೀವಿ. ಆಯೋಜಕರು, ಶ್ರೋತೃಗಳ ಸಂಯಮದ ಕಟ್ಟೆ ಒಡೆಯುವಂತೆ ವರ್ತಿಸುತ್ತೀವಿ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಸಂಗೀತ 'ದೈವೀ' ಹೇಗೆ? ಸ್ವಾಮಿ ಹರಿದಾಸರಂತೆ ಏಕಾಂತದಲ್ಲಿ ಇಲ್ಲವೇ ಮಂದಿರದಲ್ಲಿ ದೇವರಿಗೆ ಸಂಗೀತ ಸೇವೆ ಮಾಡಿದರೆ ಅದು ದೈವೀ ಸಂಗೀತ. ನಮ್ಮಂತಹ ವ್ಯವಸಾಯಿಗಳ ಸಂಗೀತ ಕೇವಲ ಒಳ್ಳೆಯದು ಇಲ್ಲವೇ ಕೆಟ್ಟದ್ದಾಗಬಹುದು. ಅದಷ್ಟರ ಮಟ್ಟಿಗೆ ಸ್ವಂತದೊಂದಿಗೆ, ಕಲೆಯೊಂದಿಗೆ ಮತ್ತು ಶ್ರೋತೃಗಳೊಂದಿಗೆ ಪ್ರಾಮಾಣಿಕರಾಗಿದ್ದರೆ ಅದೇ ಬಹಳ ಆಯಿತು" ಅಂದರು.

ಹಾಗಾದರೆ ದೀಪಕ್ ರಾಗ ಹಾಡಿದಾಗ ದೀಪ ಹತ್ತುತ್ತದೆ, ಮಲ್ಹಾರ ಹಾಡಿದಾಗ ಮಳೆ ಬರುತ್ತದೆ ಅಂತಹ ಕಥೆಗಳು ಕೇಳ ಸಿಗುತ್ತವಲ್ಲಾ ನೀವು ಇವುಗಳಲ್ಲಿ ವಿಶ್ವಾಸ ಹೊಂದಿರುವಿರಾ? ಭಾರತಿ ಮತ್ತೆ ಕೆದಕಿದಳು.

"ಹಿಂದಿನ ಸಂಗೀತ ಸಾಧಕರಲ್ಲಿ ಬಹುಶಃ ಅಂತಹ ಶಕ್ತಿ ಇದ್ದಿರಬಹುದು. ನಾದದಲ್ಲಿ ಖಂಡಿತವಾಗಿಯೂ ಶಕ್ತಿ ಇದೆ. ಮನಸ್ಸಿನ, ನಿಸರ್ಗದ ಮೇಲೆ ಅದರ ಪರಿಣಾಮ ಕಂಡುಬರುತ್ತದೆ. ಅಂತೆಯೇ ನಾದ ಚಿಕಿತ್ಸೆಯ ಮಹತ್ವ ದಿನೇ ದಿನೇ ಹೆಚ್ಚುತ್ತಿದೆ. ಭವಿಷ್ಯದಲ್ಲಿ ನಾದದ ವಿಶಿಷ್ಟ ಸಂಯೋಗದಿಂದ ಮಳೆ ಬೀಳಲೂಬಹುದು. ಆದರೆ ಸದ್ಯಕ್ಕಂತೂ ಕಲಾವಿದರು ಹಾಡಿ ಮಳೆ ತಂದದ್ದು, ದೀಪ ಹೊತ್ತಿಸಿದ್ದು ನೋಡಲು, ಕೇಳಲು ಸಿಕ್ಕಿಲ್ಲ."

ರಿಯಾಲಿಟಿ ಶೋ'ಗಳ ಬಗ್ಗೆ ನಿಮ್ಮ ಅಭಿಪ್ರಾಯ ಮೇಡಂ...? ಅಂದೆ ನಾನು.

"ದೇಶದಲ್ಲಿನ ಪ್ರತಿಭಾನ್ವಿತ (ಯುವ) ಕಲಾಕಾರರ ಶೋಧನೆಗೆ ಇದೊಂದು ಉತ್ತಮ ಮಾರ್ಗ. ಇಷ್ಟೇ ಅಲ್ಲ ಈ ಶೋಗಳಲ್ಲಿ ಸ್ಪರ್ಧಾಳುಗಳಿಗೆ ತಮ್ಮ ಕಲೆಯನ್ನು ಪ್ರಸ್ತುತಿಗೊಳಿಸಬೇಕಾದ ರೀತಿ, ಪ್ರೇಕ್ಷಕ ವರ್ಗದೊಂದಿಗೆ ಸಂವಾದ, ಹಾವ-ಭಾವ, ಇತ್ಯಾದಿ ಅನೇಕ ಅವಶ್ಯಕ ವಿಷಯಗಳನ್ನು ತಿಳಿಸಿ ಕೊಡಲಾಗುತ್ತದೆ. ಆದರೆ ಕೆಲವೊಮ್ಮೆ ಇದೆಲ್ಲ ಅತಿರೇಕಕ್ಕೆ ಹೋಗುತ್ತಿರುವಂತೆ ಕಂಡು ಬರುತ್ತದೆ. ಇದರೊಟ್ಟಿಗೆ ನೃತ್ಯದ ಭಾಗವೂ

ಹೆಚ್ಚುತ್ತಿರುವುದರ ಬಗ್ಗೆ ಗಾಬರಿಯಾಗುತ್ತದೆ. ಕಲಾ ಪ್ರಸ್ತುತಿ ಮಾಡುವಾಗ ಪ್ರಸನ್ನಚಿತ್ತರಾಗಿ ಕಾಣಬೇಕು ನಿಜ. ಆದರೆ ಸಂಗೀತ ಪ್ರಾಥಮಿಕವಾಗಿ ಶ್ರವ್ಯ ಕಲೆ. ಅದು ಎಷ್ಟರ ಮಟ್ಟಿಗೆ ದೃಶ್ಯ ಕಲೆಯಾಗಿ ಮಾರ್ಪಾಡಾಗಬೇಕು? ಅದಕ್ಕೇನಾದರೂ ಮರ್ಯಾದೆ ಇರಬೇಕೊ, ಬೇಡವೊ? ಈ ಎಲ್ಲ ಪ್ರತಿಭಾನ್ವಿತ ಮಕ್ಕಳ ಭವಿಷ್ಯವೇನು? ಅವರ ಈ ಕಲೆ ಮುಂದೆ ಉಳಿದು, ಬೆಳೆಯುವುದೇ? ಏಕಾಏಕಿ ಸಿಕ್ಕ ಪ್ರಸಿದ್ಧಿ, ಹಣದಿಂದ ಅವರು ಕೊಚ್ಚಿ ಹೋಗುವುದಿಲ್ಲವೆಂದು ಯಾರು ಕಾಳಜಿ ತೆಗೆದುಕೊಳ್ಳುವರು? ಈ ಮಕ್ಕಳಿಗೆ ಉತ್ತಮ ಶಿಕ್ಷಣ, ತರಬೇತಿ ಮತ್ತು ಸಾಧನಾವಶ್ಯಕ ಸೌಕರ್ಯಗಳನ್ನು ದೊರಕಿಸಿಕೊಡುವುದು ಮಹತ್ವದ್ದು.

ಎರಡನೆಯದಾಗಿ, ಟಿ.ವಿ. ಚಾನೆಲ್‌ಗಳಲ್ಲಿ ಇಂದು ನಡೆಸಲಾಗುತ್ತಿರುವ ಸ್ಪರ್ಧೆಗಳಲ್ಲಿ ಚಲನಚಿತ್ರ ತುಂಬಿ ಹೋಗಿರುವುದು ಕಂಡು ಬರುತ್ತದೆ. ಫಿಲ್ಮೀ ಸಂಗೀತ ಇಂದು ಯಾವ ದಿಕ್ಕಿನಲ್ಲಿ ಹೋಗುತ್ತಿದೆಯೋ ಅದರಲ್ಲಿ ಭಾರತೀಯ ಸಂಗೀತ ಕಡಿಮೆಯಾಗುತ್ತಿದೆ. ಪಾಶ್ಚಾತ್ಯ ಸಂಗೀತದ ಹೆಚ್ಚು ಪ್ರಭಾವ ಕಂಡು ಬರುತ್ತಿದೆ. ಈ 'ಹೊಸ' ಸಂಗೀತ ಕೆಟ್ಟದೆಂದೇನೂ ಅಲ್ಲ. ಆದರೆ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಶಾಸ್ತ್ರೀಯ ಸಂಗೀತದ ಬಗ್ಗೆ ಯಾವುದೇ ಚಾನೆಲ್ ಕಳಕಳಿ, ಕಾಳಜಿ ತೋರುತ್ತಿಲ್ಲವೆಂಬುದು ಗೊತ್ತಾಗುತ್ತಿದೆ. ಇದರಿಂದಾಗಿ ನಾವು ನಮ್ಮ ಅಸ್ಮಿತವನ್ನು ಪ್ರತಿಬಿಂಬಿಸುವ ಸಂಗೀತವನ್ನು ಮರೆಯುತ್ತಿದ್ದೇವೇನೋ ಅನಿಸುತ್ತದೆ. ಈ ರಿಯಾಲಿಟಿ ಶೋಗಳಿಂದ ಸಾಮಾನ್ಯ ಮನುಷ್ಯನ ಮನಸ್ಸಿನ ಮೇಲೆ ಆಗುತ್ತಿರುವ ದಾಳಿಯಿಂದಾಗಿ ಅವರು ಭಾರತೀಯ ಸಂಗೀತದಿಂದ ಹೆಚ್ಚು ದೂರ ಹೋಗುತ್ತಿರುವುದು ಕಂಡುಬರುತ್ತಿದೆ."

'ಹಾಗಾದರೆ ಶಾಸ್ತ್ರೀಯ ಸಂಗೀತ ಆಧಾರಿತ ರಿಯಾಲಿಟಿ ಶೋಗಳಿಲ್ಲದಿರುವುದಕ್ಕೆ ಕಾರಣವೇನಿರಬಹುದು?'

ಶಾಸ್ತ್ರೀಯ ಸಂಗೀತವನ್ನು ನಾಲ್ಕೈದು ನಿಮಿಷಗಳಲ್ಲಿ ಸಾದರೀಕರಿಸುವುದು ಕಷ್ಟ ಸಾಧ್ಯ. ಅದಕ್ಕೆ ಬಹಳ ಪರಿಶ್ರಮ, ಪ್ರಭುತ್ವ ಮತ್ತು ಅನುಭವ ಬೇಕು. ಹಿಂದಿನ ತಲೆಮಾರಿನ ಹಿರಿಯ ಕಲಾವಿದರ ಧ್ವನಿ ಮುದ್ರಿಕೆಗಳಲ್ಲಿರುವಂತೆ ಮೂರ್‍ನಾಲ್ಕು ನಿಮಿಷಗಳ ಶಾಸ್ತ್ರೀಯ ಸಂಗೀತದ ಪ್ರಸ್ತುತಿ ಮಾಡುವುದು ಬಹಳೇ ಕಷ್ಟ. ಪ್ರತಿ ಸ್ಪರ್ಧಾಳುವಿಗೆ ಕನಿಷ್ಠ ಹತ್ತದಿನ್ನೈದು ನಿಮಿಷಗಳನ್ನಾದರೂ ಕೊಡಬೇಕಾಗುತ್ತದೆ. ಟಿ.ವಿ. ಚಾನೆಲ್‌ಗಳು ಇಷ್ಟು ಅವಧಿ ಕೊಡಲು ಸಾಧ್ಯವಾ? ಅವರಿಗೆ ಪ್ರಾಯೋಜಕರು ದೊರಕುತ್ತಾರ? ಇನ್ನೊಂದು ಮುಖ್ಯ ವಿಷಯವೆಂದರೆ ಶಾಸ್ತ್ರೀಯ ಸಂಗೀತದ ಶ್ರೋತೃ ವರ್ಗ ಸಣ್ಣದು. ಶಾಸ್ತ್ರೀಯ ಸಂಗೀತದ ಉತ್ತಮ ಕೇಳುಗನಾಗಲು ತರಬೇತಿ, ಹಿನ್ನೆಲೆ ಅವಶ್ಯಕ. ಕೇಳುಗನ ಬಳಿ ಅವಶ್ಯಕ ಇಚ್ಛೆ, ಸಮಯ, ವ್ಯವಧಾನ ಇರಬೇಕಲ್ಲ. ಭಾರತೀಯ ಶಾಸ್ತ್ರೀಯ ಕಲೆ, ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಸಾಮಾಜಿಕ–ಸಾಂಸ್ಕೃತಿಕ ಜವಾಬ್ದಾರಿ ಅಂತ ನೋಡುವಂತಾಗಬೇಕು. ಈ ಜವಾಬ್ದಾರಿಯನ್ನು ಪ್ರಜ್ಞಾಪೂರ್ವಕವಾಗಿ ಸರಕಾರದಿಂದ ಹಿಡಿದು ಸಾಮಾನ್ಯ ಮನುಷ್ಯನವರೆಗೆ ಎಲ್ಲರೂ ಹೊರುವಂತಾಗಬೇಕು. ನಮ್ಮ ಟಿ.ವಿ. ಚಾನೆಲ್‌ಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವಂತಾಗಬೇಕು."

ಶಾಸ್ತ್ರೀಯ ಸಂಗೀತ ಕಲಾವಿದೆಯಾಗಿ ನಿಮಗೆದುರಾದ ಅತಿ ದೊಡ್ಡ ಸವಾಲು ಯಾವುದು?

"ಶಾಸ್ತ್ರೀಯ ಸಂಗೀತಗಾರ ವಿಮರ್ಶಕರು, ಸಂಗೀತಜ್ಞರು, ರಸಿಕರು, ಅಪರಿಣಿತ ಶ್ರೋತೃಗಳು, ಇತ್ಯಾದಿ ಎಲ್ಲರನ್ನು – ತಾಂತ್ರಿಕ ಅಂಶಗಳ ತಿಳುವಳಿಕೆಯಲ್ಲಿ ಬೇರೆ ಬೇರೆ ಹಂತದಲ್ಲಿರುವ

ಸಮೂಹವನ್ನು ಎದುರಿಸಬೇಕಾಗುತ್ತದೆ. ಅವನು ಎಲ್ಲರನ್ನೂ ತಲುಪಬೇಕು ಮತ್ತು ಅವರೆಲ್ಲರನ್ನೂ ಸಂಗೀತ ನಿರ್ಮಿತಿಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಇದು ಶಾಸ್ತ್ರೀಯ ಸಂಗೀತಗಾರನಿಗೆ ದೊಡ್ಡ ಸವಾಲೆಂದು ನನ್ನ ನಂಬಿಕೆ."

75 ವರ್ಷಗಳನ್ನು ಪೂರ್ಣಗೊಳಿಸಿದಾಗ ನಿಮ್ಮ ಭಾವನೆ?

"75ನೇ ವರ್ಷದಲ್ಲಿಯೂ ನನ್ನ ಸಂಗೀತ ನನ್ನೊಂದಿಗೆ ಇದೆ ಎಂಬುದು ಅತ್ಯಂತ ಆನಂದದ ಸಂಗತಿ. ಸಾಧನೆಯ ಹಾದಿಯಲ್ಲಿ ಒಂದು ಹೆಜ್ಜೆಯನ್ನಿಡುವುದೂ ಕಷ್ಟ. ನಾನಾದರೊ ಬಹಳ ದೂರ ಕ್ರಮಿಸಿದ್ದೇನೆ. ಈ ಹಿರಿ ವಯಸ್ಸಿನಲ್ಲಿ ನಾನು ಒಂಟಿಯಲ್ಲ ಎಂಬ ಭಾವನೆ ಸಮಾಧಾನ ಕೊಡುವುದಾಗಿದೆ. ನನ್ನ ಅಭಿಮಾನಿಗಳು ಹಾಗು ಶಿಷ್ಯ ವರ್ಗ – ಹೀಗೆ ನನ್ನ ದೊಡ್ಡ ಸಂಗೀತ ಪರಿವಾರ ಇದೆ. ಮುಂದಿನ ಮಾರ್ಗದಲ್ಲಿಯೂ ಸಹ ಇವರು ಇದೇ ಪ್ರೀತಿಯಿಂದ ಇರುತ್ತಾರೆ ಎಂದು ನನ್ನ ವಿಶ್ವಾಸ."

ನಿಮಗೆ ಪ್ರೇರಣೆ ಏನು?

"ನನ್ನ ಧ್ಯೇಯ. ಯಾವುದನ್ನಾದರೂ ಸಾಧಿಸಲು ನಮ್ಮೆದುರು ಕನಸುಗಳಿರಬೇಕು. ಪೂರ್ಣತೆಯ ಬಗ್ಗೆ ಲಕ್ಷ್ಯ ಮತ್ತು ಅಪೂರ್ಣತೆಯ ಅರಿವಿನಿಂದಾಗಿ ನನ್ನ ಕೆಲಸ ಮುನ್ನಡೆಯುತ್ತಿದೆ. ಇದು ಒಂದು ಮುಗಿಯದ ಪಯಣ."

ನಿಮ್ಮ ಸಂಗೀತದ ಆದರ್ಶವೇನು?

"ನನ್ನ ಸಂಗೀತಕ್ಕೆ 'ಪ್ರಭಾ ಅತ್ರೆ' ಛಾಪಿರುವುದು. ನನ್ನ ಸಂಗೀತ ನನ್ನೊಂದಿಗೆ ಅನನ್ಯವಾಗಿರಬೇಕು – ಚಿಂತನೆ ಮತ್ತು ಸಂಗೀತ ಮೌಲ್ಯಗಳನ್ನು ಪ್ರತಿಬಿಂಬಿಸಬೇಕು ಎಂಬರ್ಥದಲ್ಲಿ. ಅದು ಹೃದಯ ಮತ್ತು ಬುದ್ಧಿಗಳೆರಡನ್ನೂ ತಲುಪಿ ಆನಂದ ಕೊಡುವ ಕ್ಷಮತೆ ಹೊಂದಿರಬೇಕು. ಕಾಲ/ಸಮಯ ಮತ್ತು ಸ್ಥಳಗಳ ಬಂಧನವಿಲ್ಲದೆ ವಿಶ್ವಾತ್ಮಕವಾಗಲು ಹೆಣಗಬೇಕು."

ನಿಮ್ಮನ್ನು ಕಾಡುವ ಭೀತಿ ಯಾವುದು?

"ವಯಸ್ಸಾದಂತೆ ನನಗೆ ಬೇಕಾದ ಹಾಗೆ ಹಾಡಲು ಅಸಮರ್ಥಳಾದರೆ?' ಎಂಬ ಭೀತಿ. ಇಂತಹ ಪರಿಸ್ಥಿತಿ ಎದುರಿಸಲು ನಾನು ಶಕ್ತಳಾಗುವೆನೋ ಇಲ್ಲವೋ ನಾನರಿಯೆ. ಇಂತಹುದೇನಾದರೂ ಸಂಭವಿಸುವ ಮುನ್ನವೆ ನನ್ನನ್ನು ಕರೆದೊಯ್ಯು ಎಂದು ದೇವರಲ್ಲಿ ನನ್ನ ಪ್ರಾರ್ಥನೆ."

ನಿಮ್ಮ ದಿನಚರಿ ಹೇಗಿರುತ್ತದೆ?

"ನಾನು ಬೆಳಿಗ್ಗೆ ಐದರ ಸುಮಾರಿಗೆ ಎದ್ದು ವ್ಯಾಯಾಮ, ಯೋಗ, ಸ್ನಾನ, ಪೂಜೆ ನಂತರ ತಂಬೂರಿ ತೆಗೆದುಕೊಂಡು ಕೂಡುತ್ತೇನೆ. ಆಮೇಲೆ ಸ್ವಲ್ಪ ಸಂಗೀತ ಕಲಿಸುವುದು, ಕೇಳುವುದು, ಮನೆಗೆಲಸ, ದೂರವಾಣಿ ಕರೆಗಳು, ಪತ್ರ ವ್ಯವಹಾರ, ಓದುವುದು, ಟಿ.ವಿ. ವೀಕ್ಷಿಸುವುದು, ಅತಿಥಿಗಳು, ಮತ್ತೆ ಕೆಲವು ವಿದ್ಯಾರ್ಥಿಗಳು, ಇನ್ನಷ್ಟು ರಿಯಾಜ಼, ಅಡಿಗೆ, ಇತ್ಯಾದಿ. ಅಷ್ಟೊತ್ತಿಗಾಗಲೆ ಮಲಗುವ ಸಮಯ. ಹೀಗೆ ನಾನು ಮಾಡುವುದೆಲ್ಲವೂ ಸಂಗೀತಕ್ಕೆ ಸಂಬಂಧಿಸಿದ್ದು. ಸಂಗೀತ 24 ಗಂಟೆಯ ಸಾಧನೆಯೆಂದು ನನ್ನ ನಂಬಿಕೆ."

ನೀವು ಧಾರ್ಮಿಕ ಪ್ರವೃತ್ತಿಯವರೆ?

"ಹೌದು. ನಾನು ದೈವೀಶಕ್ತಿಯನ್ನು ನಂಬುತ್ತೇನೆ. ದೇವನು ನನಗೆ ಅನರ್ಘ್ಯ ಕೊಡುಗೆ ಸಂಗೀತ ನೀಡಿದ್ದಾನೆ. ಸಂಗೀತ ನನ್ನ ಧರ್ಮ. ನಾನು ಸಂಗೀತವನ್ನು ಆರಾಧಿಸುತ್ತೇನೆ."

ಮನಃ ಜೀವನವನ್ನು ಆರಂಭಿಸುವ ಅವಕಾಶ ಸಿಕ್ಕರೆ ನೀವೇನಾಗಬಯಸುವಿರಿ? ಏಕೆ?

"ಖಂಡಿತವಾಗಿಯೂ ಸಂಗೀತಗಾರ್ತಿ ಆಗಬಯಸುವೆ. ನಾನಿನ್ನೂ ನನ್ನ ಆದರ್ಶದಿಂದ ಬಹು ದೂರವಿದ್ದೇನೆ. ಅದು ಅನೇಕ ಜನ್ಮಗಳ ಸಾಧನೆ. ನಾನು ಮೊದಲು ಸಾಧಕಿ ಆನಂತರ ಗಾಯಕಿಯಾಗಲು ಇಚ್ಛಿಸುವೆ."

ನೀವು ಹೇಗೆ ಸ್ಮರಿಸಲ್ಪಡಲು ಬಯಸುವಿರಿ?

"ಒಬ್ಬ ಉತ್ತಮ ಮನುಷ್ಯಳೆಂದು".

ಸಂಗೀತ ಹೊರತುಪಡಿಸಿ ಇತರೆ ಇಷ್ಟವಾದ ಆಸಕ್ತ ವಿಷಯಗಳು?

" ಡ್ರೈವಿಂಗ್, ವಿಂಡೋ ಶಾಪಿಂಗ್, ವಾಚಿಂಗ್ ಟಿವಿ".

ಇಷ್ಟು ಹೇಳಿ ಇನ್ನು ಹೇಳುವುದು ಮುಗೀತು ಎಂಬಂತೆ ಕಾರಿಂದಿಳಿದು ದೇವಸ್ಥಾನದ ಒಳಹೊಕ್ಕರು. ಕೈಮುಗಿಯುತ್ತ, ಪ್ರದರ್ಶನ ಹಾಕುತ್ತಲೇ ನಾನು ಭಾರತಿ ಮಾತು ಮುಂದುವರಿಸಿದೆವು. "ನಲವತ್ತು ವರ್ಷದಿಂದ ಡ್ರೈವ್ ಮಾಡಕತ್ತಾರೆ. ಡ್ರೈವಿಂಗ್ ಹುಚ್ಚು ಅಂದ್ರೂ ತಪ್ಪಲ್ಲ. ಬರುವಾಗ ಸುಮಾರು ದೂರ ಅವರೆ ಡ್ರೈವ್ ಮಾಡಿದ್ರಲ್ಲಾ ನನಗಿಂತಲೂ ಫಾಸ್ಟ್ ಮತ್ತು ಸ್ಟಡೀ ಅವರ ಡ್ರೈವಿಂಗ್..." ಅಂತ ಭಾರತಿ ಹೇಳಿದಾಗ ನಾನು 'ಹೌದಾ! ನಾನೆಲ್ಲೋ ನೀನೇ ಫೋರ್ಸ್ ಮಾಡಿರ್ತಿ ಅನ್ಕಂಡೆ..' ಅಂದೆ. 'ಇಲ್ಲ ಅವರಿಗದು ಬಹಳ ಇಷ್ಟ, ಬಹಳ ಖುಷಿ...' ಅಂದಳು. 'ಮತ್ತೆ ಟಿವಿ...' ಅನ್ನುತ್ತಿದ್ದೆ ನಕ್ಕಳಾಕೆ. ' ನೀನೆ ನೋಡಿದ್ಯಲ್ಲ ಟಿವಿ ಮುಂದೆ ಕುಂತು ಏನ್ಮಾಡ್ತಿದ್ರು ಅಂತ. ಟಿವಿ ವಾಚಿಂಗ್ ಏನು ಮುಖ್ಯ ಅಲ್ಲ. ಆ ಸದ್ದು ಕೇಳ್ತಿರ್ಬೇಕು. ನಿಶಬ್ಧ ಅವರಿಗಾಗಲ್ಲ. ನಮಗೆ ಅದು ಗಲಾಟೆ ಅನ್ನಿಸುತ್ತೆ.., ಅದನ್ನಿಟ್ಕಂಡು ಬೇರೆ ಕೆಲಸ ಮಾಡಕಾಗಲ್ಲ. ಆದರೆ ಇವ್ರು ಒಂಚೂರು ಡಿಸ್ಟರ್ಬ್ ಮಾಡ್ಕಳ್ದೆ ಅದರ ಮುಂದೆ ಕುಂತೇ ಅವರದೆಲ್ಲಾ ಕೆಲಸ, ಚಿಂತನೆಗಳು ನಡಸ್ತಿರ್ತರೆ. ಇನ್ನೂ ವಿಶೇಷ ಅಂದ್ರೇ ಮನಿ ತುಂಬಾ ಜನ ಇರ್ಬೇಕು ಆದ್ರೆ ಅವರನ್ನ ಅವರ ಪಾಡಿಗೆ ಬಿಡ್ಬೇಕು. ಹಂಗಂತ ಒಂದು ಕೋಣೆಗೆ ಬಾಗ್ಲಕ್ಕಂಡು ಒಬ್ರೆ ಕುಂದುರ್ತರೆ ಅಂತಲ್ಲ. ಎಲ್ಲರ ಜತೇಲೆ, ಎಲ್ಲರ ಮಧ್ಯನೇ ಇರ್ಬೇಕು; ಅವರ ಪಾಡಿಗೆ ಅವರೂ ಇರ್ಬೇಕು..' ಬಹಳ ಡಿಫೆರಂಟಾದ ವಿಶೇಷ ನಾನು ಮನಸಲ್ಲೇ ಅಂದುಕೊಂಡೆ ಪ್ರಸಾದ ತೆಗೆದುಕೊಳ್ಳುತ್ತ. ಭಾರತೀನೂ ಪ್ರಸಾದ ತೆಗೆದುಕೊಂಡು 'ಮತ್ತೊಂದು ಗೀಳು ಏನ್ಗೊತ್ತ..? ಕರ್ನಾಟಕಕ್ಕೆ ಬಂದರೆ ಕನ್ನಡದಲ್ಲೇ ಭಾಷಣ ಮಾಡ್ಬೇಕನ್ನೋದು. ಅವರು ಬರ್ದುಕೊಡೋ ಭಾಷಣನ ಕನ್ನಡಕ್ಕೆ ಅನುವಾದ ಮಾಡಿಕೊಡದಲ್ದೆ ಹತ್ತಿಪ್ಪತ್ತು ಸಾರಿ ಅದನ್ನ ಅವರೆದುರಿಗೆ ಕುಂತು ಓದ್ಬೇಕೆ ನಾನೇ..! ಅವರು ಓದಂಗಿಲ್ಲ. ಪೂರ ಉಲ್ಟಾ..' ನಾನು ನಗತೊಡಗಿದೆ. ಅದನ್ನು ನೋಡಿ ಮೇಡಂ ಹತ್ತಿರ ಬಂದರು. ನಾವು ಕನ್ನಡದಲ್ಲೇ ಮಾತಾಡ್ತಿದ್ವಿ, "ಯೇ ಕ್ಯಾ ಬೋಲ್ ರಹೀ ಹೈ...?" ಅಂತ ನನ್ನ ಕೇಳಿದರು. ತಟ್ಟನೆ ಭಾರತಿ " ಅರೇ ಮೇಡಂಜೀ ಮೈ ಆಪ್ ಕಿ ಡ್ರೈವಿಂಗ್ ಕೆ ಬಾರೆ ಮೇ ಬತಾ ರಹೀ ಹೂಂ..." ಅಂದರೆ ಅವರೂ ನಗುತ್ತ "ಚುಪ್, ಮುಝೆ ಮಾಲುಮ್ ಹೈ..." ಎಂದು ಪ್ರೀತಿಯ ಗದರಿಕೆ ಹಾಕಿ ಕಾರ್ಹತ್ತಿದರು.

ಶಿಕ್ಷಣ ಮತ್ತು ಹಣದ ಪ್ರಶ್ನೆಗಳು

– ಡಾ.ರಾಮಲಿಂಗಪ್ಪ ಟಿ. ಬೇಗೂರು

ಸಮಾಜದ ಅಧಿಕಾರ ಸಂಬಂಧಗಳು ಮತ್ತು ಶ್ರೇಣೀಕರಣಗಳು ಒಡೆದು ಹೋಗಲು ಪ್ರಭುತ್ವ ಮತ್ತು ಮೇಲ್ವರ್ಗಗಳು ಎಂದೂ ಬಿಡುವುದಿಲ್ಲ. ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದು ಅವುಗಳ ನಿರಂತರ ಹುನ್ನಾರವಾಗಿರುತ್ತದೆ. ಶಿಕ್ಷಣವೂ ಕೂಡ ಇಂತಹ ಹುನ್ನಾರಗಳಿಂದ ಹೊರಗಿರಲು ಸಾಧ್ಯವಿಲ್ಲ. ಮಹಾಭಾರತದ ಏಕಲವ್ಯನ ಪ್ರಸಂಗ ಮತ್ತು ರಾಮಾಯಣದ ಶೂದ್ರತಪಸ್ವಿಯ ವಧಾಪ್ರಸಂಗಗಳು ಇದಕ್ಕೆ ಉತ್ತಮ ಪ್ರತೀಕಗಳಾಗಿವೆ. ಸ್ವಪ್ರಯತ್ನದಿಂದ ವಿದ್ಯೆ ಕಲಿಯಲು ಯತ್ನಿಸುವ ಕೆಳವರ್ಗವನ್ನು ಮೇಲ್ವರ್ಗವು ಹತ್ತಿಕ್ಕುತ್ತ ಬಂದಿರುವುದಕ್ಕೆ ಇವು ರೂಪಕಗಳಾಗಿವೆ. ಸಮಾಜದ ಶಿಕ್ಷಣ ಕ್ರಮವು ಉಳ್ಳವರ ಮತ್ತು ಅಧಿಕಾರ ಸಂಬಂಧಗಳ ಮೂಲಕವೇ ಸದಾ ನಿರ್ಧಾರಿತ ಆಗುತ್ತಿರುತ್ತದೆ ಎಂಬುದು ಇವುಗಳಿಂದ ತಿಳಿಯುತ್ತದೆ.

ನಮ್ಮ ನಮ್ಮ ಜೀವನದ ದೃಷ್ಟಿಕೋನ ಮತ್ತು ನಮ್ಮ ಶಿಕ್ಷಣದ ವಿಧಾನಗಳ ನಡುವೆ ಸದಾ ಅನ್ಯೋನ್ಯ ಸಂಬಂಧ ಇರುತ್ತದೆ. ನಮ್ಮ ಬದುಕೇ ಮುಕ್ತ ವ್ಯಾಪಾರದ–ಖಾಸಗೀಕರಣದ ಪರವಾಗಿ ಇದ್ದರೆ ಶಿಕ್ಷಣವನ್ನು ಹೇಗೆ ಅದರಿಂದ ಹೊರಗಿಡಲು ಸಾಧ್ಯ? ಶಿಕ್ಷಣವನ್ನು ಬಂಡವಾಳ ಹೂಡಿ ಲಾಭ ಗಳಿಸಬಲ್ಲ ಒಂದು ಕೈಗಾರಿಕಾ ವಲಯವನ್ನಾಗಿ ನಾವು ಪರಿಗಣಿಸುವುದಾದರೆ ಶಿಕ್ಷಣದಲ್ಲಿ ಹೇಗೆ ನಾವು ಅಂಚಿನ ಜನತೆಯನ್ನು ಒಳಗೊಳ್ಳಲು ಸಾಧ್ಯ? ಶೇಕಡಾ 40ರಷ್ಟು ಜನರು ನಮ್ಮಲ್ಲಿ ಇನ್ನೂ ಬಡತನ ರೇಖೆಯ ಕೆಳಗೆ ಇದ್ದಾರೆ. ಹೀಗಿರುವಾಗ ಮುಕ್ತ ಮಾರುಕಟ್ಟೆಯಲ್ಲಿ ಶಿಕ್ಷಣವನ್ನು ಕೊಳ್ಳುವ ಶಕ್ತಿ ಅವರಿಗೆ ಹೇಗೆ ಇರಲು ಸಾಧ್ಯ? ಇಡೀ ಶಿಕ್ಷಣ ವ್ಯಾಪಾರವೆ ಹಣದ ಮೇಲೆ ನಿಂತಿರುವಾಗ ಬಡವರಿಗೆ ಅಲ್ಲಿ ಪ್ರವೇಶ ಸಾಧ್ಯವಿಲ್ಲ. ಅಂದರೆ ಸಮಸ್ಯೆ ಇರುವುದು ನಮ್ಮ ಶಿಕ್ಷಣ ಕ್ರಮದಲ್ಲಿ ಮಾತ್ರ ಅಲ್ಲ ನಮ್ಮ ಒಟ್ಟಾರೆ ಬದುಕಿನ ದೃಷ್ಟಿಕೋನದಲ್ಲಿ.

ಶಿಕ್ಷಣದ ಕೈಗಾರಿಕೀಕರಣ

ಸ್ಥಳೀಯ ಆಡಳಿತ ವ್ಯವಸ್ಥೆಗೆ ಇಂಗ್ಲೆಂಡಿನಿಂದ ಕಾರಕೂನರನ್ನು ಕರೆಸಿಕೊಂಡು ದುಬಾರಿ ಸಂಬಳ ಕೊಟ್ಟು ಆಡಳಿತ ನಡೆಸುವುದು ವ್ಯಾಪಾರಿ ದೃಷ್ಟಿಯಿಂದ ಲಾಭದಾಯಕವಲ್ಲ ಎಂಬ ತಿಳುವಳಿಕೆಯಿಂದ ಇಲ್ಲಿ ಇಂಗ್ಲೀಶ್ ಶಿಕ್ಷಣ ಕ್ರಮ ಜಾರಿಯಾಯಿತು. ಈಗಲೂ ಇದೇ ದೃಷ್ಟಿಕೋನವೇ ಅಲ್ಪ ಸ್ವಲ್ಪ ಬದಲಾವಣೆಯಿಂದ ಚಲಾವಣೆ ಆಗುತ್ತಿದೆ. ಅತಿಯಾದ ಜನಸಂಖ್ಯೆ ಮತ್ತು ಅನಕ್ಷರಸ್ಥರು ಇರುವ ಭಾರತದಲ್ಲಿ ಶಿಕ್ಷಣದ ಗ್ರಾಹಕರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ; ಅವರನ್ನು ಆಕರ್ಷಿಸಿ ಲಾಭಕ್ಕೆ ಶಿಕ್ಷಣವನ್ನು ಮಾರಿಕೊಳ್ಳಬಹುದು ಎಂಬುದು ಇಂದಿನ ಅನೇಕ ವಿದ್ಯಾಕಂಪೆನಿಗಳ ಉದ್ದೇಶವಾಗಿದೆ. ಹಾಗಾಗಿ ಇಂದು ಶಿಕ್ಷಣ ಎನ್ನುವುದು ಸಾಧಾರಣ ಬಂಡವಾಳ ಹೂಡಿ ಭಾರೀ ಲಾಭ ಮಾಡಬಹುದಾದ ಒಂದು ಬೃಹತ್ ಕೈಗಾರಿಕೆಯಾಗಿ ರೂಪಾಂತರಗೊಂಡಿದೆ.

ಇಂಡಸ್ಟ್ರಿಯಲೈಸ್ ಆರ್ ಪೆರಿಶ್ ಎಂಬ ನೆಹರೂ ಮಂತ್ರವು ಇಂದು ಕೃಷಿ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಹೀಗೆ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸುತ್ತಿದೆ. ಇಂಡಸ್ಟ್ರಿಯಲೈಸ್ ಅಂಡ್ ಪೆರಿಶ್ ಎಂಬಂತೆಯೇ ಆಗುತ್ತಿದೆ. ಹೊಟ್ಟೆಪಾಡಿಗಾಗಿ ಉದ್ಯೋಗಕ್ಕಾಗಿ ಶಿಕ್ಷಣವನ್ನು ಪಡೆಯುವ ಕ್ರಿಯೆಯು ಶಿಕ್ಷಣ ಮಾರುವ ಉದ್ಯೋಗವಾಗಿ ಪರಿವರ್ತನೆ ಆಗುತ್ತಿದೆ. ಇದರಿಂದಾಗಿ ನಮ್ಮಲ್ಲಿ ದಿನೇ ದಿನೇ ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತ ಹೆಚ್ಚುತ್ತ ಬರುತ್ತಿದೆ. ಪದವಿ ಕಾಲೇಜುಗಳೆಂದರೆ ವಿಶ್ವವಿದ್ಯಾಲಯಗಳೆಂದರೆ ನಿರುದ್ಯೋಗಿಗಳನ್ನು ಸೃಷ್ಟಿಸುವ ಕಾರ್ಖಾನೆಗಳೆ ಆಗುತ್ತಿವೆ. 2008-09ನೆ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಪದವಿ ಓದುತ್ತಿರುವವರ ಸಂಖ್ಯೆಯು 1,32,536. ಇದು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಲಿಯುತ್ತಿರುವವರ ಸಂಖ್ಯೆ ಮಾತ್ರ. ಖಾಸಗಿ ಕಾಲೇಜುಗಳಲ್ಲಿ ಕಲಿಯುತ್ತಿರುವವರು ಇದರ ಹತ್ತು ಪಟ್ಟು ಇದ್ದಾರೆ. ಅಂದರೆ ಇಷ್ಟು ಭಾರಿ ಸಂಖ್ಯೆಯ ನಿರುದ್ಯೋಗಿಗಳನ್ನು ನಾವು ಪ್ರತಿ ವರ್ಷವೂ ಉತ್ಪಾದಿಸುತ್ತಿದ್ದೇವೆ! ಯಾವುದೇ ಕಾರ್ಖಾನೆಗಳು ತಾವು ಉತ್ಪಾದಿಸಿದ ವಸ್ತುಗಳನ್ನು ಮಾರುವ ಬಗ್ಗೆ ಸಾಕಷ್ಟು ಶ್ರಮ ವಹಿಸುತ್ತವೆ. ಉತ್ಪಾದನೆ ಮಾಡುವುದು ಎಷ್ಟು ಮುಖ್ಯವೋ ಮಾರುವುದೂ ಕೂಡ ಅಷ್ಟೇ ಮುಖ್ಯ. ಇಲ್ಲದಿದ್ದರೆ ಉತ್ಪಾದಿಸಿ ಲಾಭವಿಲ್ಲ. ಆದರೆ ಶಿಕ್ಷಣದ ಕಾರ್ಖಾನೆಗಳಲ್ಲಿ ಜೀವಂತ ವಸ್ತುಗಳನ್ನು ಉತ್ಪಾದಿಸಲಾಗುತ್ತದೆ. ಆದರೆ ಇಲ್ಲಿ ಅವುಗಳನ್ನು ದಡ ಸೇರಿಸುವ ಜವಾಬ್ದಾರಿ ಈ ಕಾರ್ಖಾನೆಗಳಿಗೆ ಇಲ್ಲ. ಹಾಗಾಗಿ ಇಂದು ಈ ಶಿಕ್ಷಣ ವಲಯವು ಅರೆ ಜವಾಬ್ದಾರಿ ಇರುವ ಮತ್ತು ಸುಲಭವಾಗಿ ಲಾಭ ಮಾಡಬಹುದಾದ ವೃತ್ತಿ ಆಗಿದೆ.

ಪೇಮೆಂಟ್ ಕೋಟಾ ಮತ್ತು ಶಿಕ್ಷಣದ ಮಾರಾಟ

ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೇ% 25ರಿಂದ ಶೇ% 50ರವರೆಗೆ ಪೇಮೆಂಟ್ ಕೋಟಾ ಎಂಬ ನೀತಿಯನ್ನು ಇತ್ತೀಚೆಗೆ ಪಾಲಿಸಲಾಗುತ್ತಿದೆ. ಕ್ಯಾಪಿಟೇಶನ್ ಶುಲ್ಕದ ಮಾರುವೇಷವಿದು. ಸರ್ಕಾರಿ ಸಂಸ್ಥೆಗಳಿಗೂ ಈ ರೋಗ ಈಗ ವ್ಯಾಪಿಸಿದೆ. ಇದು ಹಣ ಉಳ್ಳವರಿಗೆ ಶಿಕ್ಷಣವನ್ನು ಮಾರುವ ನೀತಿಯಲ್ಲದೆ ಬೇರೆಯಲ್ಲ. ಹಾಗಾದರೆ ಕಡಿಮೆ ಅಂಕ ಗಳಿಸುವ ಬಡ ವಿದ್ಯಾರ್ಥಿ ಅವಕಾಶದಿಂದ ವಂಚಿತನಾಗುವುದಿಲ್ಲವೆ? ಬಡವನೊಬ್ಬ ಕಡಿಮೆ ಅಂಕ ಗಳಿಸಲು ಅವನಲ್ಲಿನ ಅಪೌಷ್ಟಿಕತೆ, ಬಡತನ, ಸೌಲಭ್ಯಗಳ ಕೊರತೆ ಇವೆಲ್ಲ ಕಾರಣ ಆಗಿರಬಹುದಲ್ಲ? ಬುದ್ಧಿವಂತಿಕೆ ಎಂಬುದು ಜೈವಿಕವಾದದ್ದಲ್ಲವಲ್ಲ, ಅದು ಸಮಾಜೋ ಆರ್ಥಿಕ ಮತ್ತು ಸಾಂಸ್ಕೃತಿಕ-ರಾಜಕೀಯ ಕಾರಣಗಳಿಂದ ಉಂಟಾಗುವುದಲ್ಲವೆ? ಹೀಗಿರುವಾಗ ಇಂಥಲ್ಲಿ ಸರ್ಕಾರ ಮತ್ತು ಸಮಾಜದ ಹೊಣೆ ಏನು? ಮೆರಿಟ್ ಇಲ್ಲದ ಬಡವರಿಗೆ ಅವಕಾಶ ವಂಚಿಸುವುದು ಸರಿಯೆ? ಸರ್ಕಾರವು ತನ್ನ ಆರ್ಥಿಕ ಹೊರೆಯನ್ನು ಇಳಿಸಿಕೊಳ್ಳಲು ಇಂತಹ ನೀತಿಗಳನ್ನು ಪಾಲಿಸುವುದೇ ಮೊದಲಿಗೆ ತಪ್ಪು. ದುರಂತವೆಂದರೆ ನಮ್ಮಲ್ಲಿ ಮಠ ಮಾನ್ಯಗಳಿಗೆ ಶಾಶ್ವತ ಅನುದಾನ ನೀಡುವ ಕಾನೂನುಗಳು ಇಲ್ಲಿ ಜಾರಿಯಾಗುತ್ತವೆ. ಆದರೆ ಕೆಲವು ಶಾಲೆ ಕಾಲೇಜು ಸ್ಥಾಪನೆಗೆ ಶಾಶ್ವತ ಅನುದಾನ ರಹಿತ ಎಂದೇ ಅನುಮತಿ ನೀಡಲಾಗುತ್ತದೆ! ಇದು ವಿಪರ್ಯಾಸವಲ್ಲವೆ? ಯಾವುದಕ್ಕೆ ಹೇಗೆ ಹಣ ಬಳಸಬೇಕೆಂಬ ವಿವೇಚನೆ ನಮಗೆ ಬೇಡವೆ? ನಮ್ಮ ಆರ್ಥಿಕ ನೀತಿಯು ಮತಬ್ಯಾಂಕ್ ರಾಜಕಾರಣದಿಂದ ನಿರ್ಧಾರ ಆಗಬೇಕೆ?

ಖಾಸಗೀಕರಣ ಮತ್ತು ವ್ಯಾಪಾರೀಕರಣ

ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ತನ್ನ ರಾಷ್ಟ್ರೀಯ ಉತ್ಪನ್ನದ ಶೇ% 6ರಷ್ಟನ್ನು ಖರ್ಚು ಮಾಡುತ್ತಿದ್ದೇನೆ ಎಂದು ಹೇಳುತ್ತಿದೆ. ಆದರೆ ಅದು ಶೇ% 3ನ್ನೂ ಮುಟ್ಟುತ್ತಿಲ್ಲ! ಕನಿಷ್ಟ ಶೇ% 10ರಷ್ಟಾದರೂ ಶಿಕ್ಷಣದ ಮೇಲೆ ಖರ್ಚು ಮಾಡಲು ಆಗುವುದಿಲ್ಲವೆ? ದುರಂತವೆಂದರೆ ಈಗಲೂ ಪ್ರಪಂಚದ ಶೇ% 50ರಷ್ಟು ನಿರಕ್ಷರಿಗಳು ಭಾರತ ಒಂದರಲ್ಲೆ ಇದ್ದಾರೆ. (ಹೆಚ್ಚಿನ ವಿವರಗಳಿಗೆ ನೋಡಿ: ಶತಮಾನದ ಅಂಚಿನಲ್ಲಿ ಶಿಕ್ಷಣ–ಪ್ರೊ.ಕೆ.ಕೆ. ಥೆಕೇಡತ್, ಪು. 75–76) ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಇಂದು ಶಿಕ್ಷಣವು ಖಾಸಗಿ ಮತ್ತು ಸರ್ಕಾರಿ ಎಂದು ಎರಡಾಗಿ ಒಡೆದು ಹೋಗಿದೆ. ಸರ್ಕಾರಿ ಶಿಕ್ಷಣ ಕೀಳು ಮತ್ತು ಖಾಸಗಿ ಮೇಲು ಎಂಬ ದಂತಗೋಪುರ ಕಲ್ಪನೆ ಇಂದು ವ್ಯಾಪಕವಾಗಿ ಹಬ್ಬಿದೆ. ಇದರಿಂದ ಶಿಕ್ಷಣದ ವ್ಯಾಪಾರಿಗಳಿಗಂತು ಹಬ್ಬವೇ ಆಗಿದೆ. 1986ರ ನಮ್ಮ ಹೊಸ ಶಿಕ್ಷಣ ನೀತಿಯೂ ಶಿಕ್ಷಣದ ಖಾಸಗೀಕರಣವನ್ನೆ ಶಿಫಾರಸು ಮಾಡಿದುದು ನಮ್ಮ ದುರಂತವಾಗಿದೆ.

ಸರ್ಕಾರಿ ವ್ಯವಸ್ಥೆಯಲ್ಲಿನ ಸೋಮಾರಿತನ, ನಿರ್ಲಕ್ಷ್ಯ, ಬ್ರಷ್ಟಾಚಾರ ಇವೆಲ್ಲವುಗಳಿಗೆ ಖಾಸಗೀಕರಣವೆ ಮದ್ದು ಎಂದು ಅನೇಕರು ವಾದಿಸುತ್ತಾರೆ. ಅಷ್ಟೆ ಅಲ್ಲ ಖಾಸಗಿ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತದೆ ಎಂದೂ ಕೆಲವರು ವಾದಿಸುತ್ತಾರೆ. ಮೆರಿಟ್ ಇರುವ ವಿದ್ಯಾರ್ಥಿಗಳನ್ನೆ ತಮ್ಮ ಕಾಲೇಜಿಗೆ ಸೇರಿಸಿಕೊಳ್ಳುವ, ಉತ್ತಮ ತಂತ್ರಜ್ಞಾನ–ಸೌಕರ್ಯಗಳನ್ನು ಹೊಂದಿರುವ, ಕಡಿಮೆ ಸಂಬಳಕ್ಕೆ ಶಿಕ್ಷಕರನ್ನು ಶೋಷಿಸುವ ಖಾಸಗಿ ಕಾಲೇಜುಗಳು ಕೆಲವೊಮ್ಮೆ ಗುಣಮಟ್ಟದ ಶಿಕ್ಷಣ ನೀಡಲೂಬಹುದು. ಆದರೆ ಅದು ಎಷ್ಟೋ ವೇಳೆ ನೀಡಿದ ಶಿಕ್ಷಣ ಆಗಿರುವುದಿಲ್ಲ. ಪಡೆದುಕೊಂಡ ಶಿಕ್ಷಣ ಆಗಿರುತ್ತದೆ. ಏನೇ ಆದರೂ ಖಾಸಗಿ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪನೆಯಾಗುವುದಿಲ್ಲ. ಕಡಿಮೆ ಅಂಕ ಗಳಿಸಿದವರಿಗೆ–ಬಡವರಿಗೆ ಪ್ರವೇಶ ನೀಡುವುದಿಲ್ಲ, ಹಾಗಾಗಿ ಇವು ಸಾಮಾಜಿಕ ಸವಾಲುಗಳನ್ನೆ ಎದುರಿಸದ ಸಂಸ್ಥೆಗಳು. ಸಾಮಾಜಿಕ ಹೊಣೆಗಾರಿಕೆ ಇಲ್ಲದ ವ್ಯಾಪಾರಿ ಸಂಸ್ಥೆಗಳು. ಉಳ್ಳವರಿಗೆ ಒಳ್ಳೆಯ ಶಿಕ್ಷಣ ನೀಡುವ ವ್ಯಾಪಾರಿಗಳು ಸಮಾಜದ ಸಮಗ್ರ ಅಭಿವೃದ್ಧಿಯ ಹೊಣೆ ಹೊರುವುದಿಲ್ಲ ಎನ್ನುವುದಾದರೆ, ತಾರತಮ್ಯ ನಿವಾರಣೆಯ ಹೊಣೆ ಹೊರುವುದಿಲ್ಲ ಎನ್ನುವುದಾದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರ ಗುಣಮಟ್ಟದಿಂದ ಯಾರಿಗೆ ಪ್ರಯೋಜನ? ಶ್ರೇಷ್ಠ ಗುಣಮಟ್ಟದ ಶಿಕ್ಷಣ ನಿಜವಾಗಿಯೂ ಯಾರಿಗೆ ಸಿಗಬೇಕೋ ಅವರಿಗೆ ಸಿಗದಿದ್ದರೆ ಪ್ರಜಾಪ್ರಭುತ್ವಕ್ಕೆ ಏನು ಅರ್ಥವಿದೆ? ಅಲ್ಲದೆ ಅತಿ ಹೆಚ್ಚಿನ ಹಣ ತೆತ್ತರೆ ವ್ಯಾಪಾರದಲ್ಲಿ ಒಳ್ಳೆಯ ವಸ್ತುವೇ ಸಿಗುತ್ತದೆ ಎಂಬುದೆಲ್ಲ ಭ್ರಮೆ. ಇದೊಂದು ಶ್ರೀಮಂತರ ಅಂತಸ್ತಿನ ಐಲು. ಹಣ ಹೆಚ್ಚು ಹೆಚ್ಚು ತೆತ್ತು ಕೊಳ್ಳುವ ವಸ್ತುಗಳೆಲ್ಲ ಹೆಚ್ಚಿನ ಗುಣಮಟ್ಟ ಹೊಂದಿರುತ್ತವೇನು?

ಶಿಕ್ಷಣದ ಆಂಗ್ಲೀಕರಣ – ದುಬಾರೀಕರಣ

ಇಂಗ್ಲೀಶ್ ಮಾಧ್ಯಮವೇ ಭಾರತದಾದ್ಯಂತ ವ್ಯಾಪಕವಾಗಿ ಬೆಳೆಯಲು ಮತ್ತು ಆ ಮೂಲಕ ದೇಸೀ ಭಾಷೆಗಳು ಸೊರಗಲು ಶಿಕ್ಷಣದ ಖಾಸಗೀಕರಣವು ಬಹು ಮುಖ್ಯವಾದ ಕಾರಣವಾಗಿದೆ. ಇಂಗ್ಲಿಶ್ ಶಿಕ್ಷಣಕ್ಕು ವ್ಯಾಪಾರಿ ದೃಷ್ಟಿಗೂ ನೇರವಾದ ಸಂಬಂಧವಿದೆ. ಶಿಕ್ಷಣದ ಆಂಗ್ಲೀಕರಣವೆಂದರೆ ಅದರ ದುಬಾರೀಕರಣವೇ ಆಗಿದೆ. ಅದನ್ನು ಭಾರತದಲ್ಲಿ ಬಡವರು ಪಡೆಯಲು ಆಗುತ್ತಿಲ್ಲ. ಇಂದು ಇಂಗ್ಲೀಶ್ ಕಲಿಯುವ ಮತ್ತು ಬಳಸುವವರು ಶ್ರೀಮಂತರು ದೇಶ ಭಾಷೆ ಬಳಸುವವರು ಬಡವರು ಎಂಬಂತಹ ವರ್ಗೀಕರಣವೊಂದು ನಿರ್ಮಾಣವಾಗಿದೆ. ಇವತ್ತು ಫ್ರಿಜ್ಜು, ಕಾರು,

ಎ.ಸಿ ಸೌಕರ್ಯಗಳೆಲ್ಲ ಐಷಾರಾಮಗಳು. ನೀವು ಓರಿಫ್ಲೇಮ್ ಸೋಪು ಬಳಸುವುದು ಜಿಲೆಟ್ ಬ್ಲೇಡ್ ಬಳಸುವುದು ನಿಮ್ಮ ಅನುಕೂಲಕ್ಕಲ್ಲ. ಐಷಾರಾಮಕ್ಕೆ. ಅವೆಲ್ಲ ಅನಿವಾರ್ಯ ಅಲ್ಲ. ಆದರೂ ಉತ್ಪಾದಕರು ವ್ಯಾಪಾರಿಗಳು ಅವನ್ನು ಮಾರಲು ಅವು ನಮಗೆ ಅನಿವಾರ್ಯ ಎಂದು ನಂಬಿಸುತ್ತಿದ್ದಾರೆ. ಹಾಗೆಯೆ ಇಂಗ್ಲೀಶು ಕೂಡ ನಮಗಿಂದು ಅನಿವಾರ್ಯ ಅಲ್ಲ. ಅದೊಂದು ವ್ಯಾಪಾರಿಗಳು ಸೃಷ್ಟಿಸಿರುವ ಸ್ಥಿತಿ ಅಷ್ಟೆ. ಮಾರುಕಟ್ಟೆ ರಾಜಕಾರಣದ ಬಲಿಪಶು ಆಗಿ ಇಡೀ ಸಮಾಜವು ತಿಕ್ಕಲತ್ತ ಹೋಗುತ್ತಿರುವಾಗ ಆ ತಿಕ್ಕಲು ಶಿಕ್ಷಣ ಕ್ಷೇತ್ರಕ್ಕು ಹಬ್ಬುತ್ತಿದೆಯಷ್ಟೆ. ಆದರೆ ಈ ತಿಕ್ಕಲು ತುಂಬಾ ಕಾಸ್ಟ್ಲಿ. ಬಡವರಿಗಿಲ್ಲಿ ಬಾಳಿಲ್ಲ.

ಈಗ್ಗೆ 30–35 ವರ್ಷಗಳ ಹಿಂದೆ ನಾವು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾಗ ವರ್ಷಕ್ಕೆ ಒಂದೂವರೆ ರೂಪಾಯಿ ಫೀಜು ಇರುತ್ತಿತ್ತು. ಅಮ್ಮಮ್ಮಾ ಅಂದರೆ ಆಗಿನ ನಮ್ಮ ಒಂದು ವರ್ಷದ ಖರ್ಚು; ಪಾಟಿಚೀಲ, ಸ್ಲೇಟು–ಬಳಪ, ಸೀಸದ ಕಡ್ಡಿ, ಎಕ್ಸರ್ಸೈಜು, ಬಟ್ಟೆಬರೆ ಎಲ್ಲ ಸೇರಿ 50 ರೂಪಾಯಿ ಮೀರುತ್ತಿರಲಿಲ್ಲ. ಆದರೆ ಇಂದು ಶಿಕ್ಷಣ ಎಷ್ಟೊಂದು ದುಬಾರಿ ಆಗಿದೆ ಎಂದರೆ ಬೆಂಗಳೂರಿನ ಕೆಲವು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕಿಂಡರ್‌ಗಾರ್ಟನ್ ಪ್ರವೇಶಕ್ಕೆ 50 ಸಾವಿರದಿಂದ ಎರಡು ಲಕ್ಷದವರೆಗೆ ಡೊನೇಶನ್–ಪ್ರವೇಶ ಶುಲ್ಕ ನೀಡಬೇಕು. ಖಾಸಗಿ ವ್ಯಾಪಾರಿ ಶಾಲೆಗಳಲ್ಲಿ ಶಿಕ್ಷಣವು ಇಷ್ಟೊಂದು ದುಬಾರಿ ಆದರೆ ಬಡವರು ಇದನ್ನು ಪಡೆಯಲು ಸಾಧ್ಯವೆ?

ಅಸಮಾನತೆಯೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ತಾಂಡವ ಆಡುತ್ತಿದೆ. ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆಗಳು, ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳು ಹೊಂದಿರುವ ಸವಲತ್ತುಗಳನ್ನೆ ನಮ್ಮ ಸಾರ್ಕಾರಿ ಶಾಲೆಗಳು ಹೊಂದಿದ್ದಾವೆಯೆ? ಆಶ್ರಮ ಶಾಲೆಗಳು, ಬಾ ಮರಳಿ ಶಾಲೆಗೆ ಎಂಬ ಆರ್.ಬಿ.ಸಿ.ಗಳು(ರೆಸಿಡೆನ್ಸಿಯಲ್ ಬ್ರಿಡ್ಜ್ ಕೋರ್ಸ್‌ಗಳು) ಹೊಂದಿದ್ದಾವೆಯೆ? ದೇಶಾದ್ಯಂತ ಎಲ್ಲ ಶಿಕ್ಷಣ ಸಂಸ್ಥೆಗಳೂ ಸಮಾನ ಸೌಲಭ್ಯಗಳನ್ನು ಹೊಂದುವಂತೆ ಕಾನೂನು ರೂಪಿಸಿ ಜಾರಿಗೊಳಿಸಲು ಆಗುವುದಿಲ್ಲವೋ? ಕನಿಷ್ಟ ಪಕ್ಷ ಪ್ರಾಥಮಿಕ ಶಿಕ್ಷಣ–ಪ್ರೌಢ ಶಿಕ್ಷಣಗಳನ್ನಾದರೂ ರಾಷ್ಟ್ರೀಕರಣ ಮಾಡಲು ಆಗುವುದಿಲ್ಲವೊ? ಶಿಕ್ಷಣದಲ್ಲಿ ಸಮಾನ ಶಿಕ್ಷಣ ನೀತಿ ಎಂಬ ಕಲ್ಪನೆಯೆ ಇವತ್ತು ಇಲ್ಲವಲ್ಲ! ಕನಿಷ್ಟ ಪದವಿ ಶಿಕ್ಷಣಕ್ಕಾದರೂ ಏಕರೂಪ ಶುಲ್ಕ ನೀತಿಯನ್ನು ದೇಶಾದ್ಯಂತ ಜಾರಿಗೊಳಿಸಲು ನಮ್ಮಿಂದ ಆಗುತ್ತಿಲ್ಲವಲ್ಲ ಯಾಕೆ? ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವೂ ಸಮಗ್ರವಾಗಿ ಇದುವರೆಗೆ ಜಾರಿಯಾಗಿಲ್ಲವಲ್ಲ ಯಾಕೆ?

ಖಾಸಗೀಕರಣವೆಂದರೆ ವ್ಯಾಪಾರೀಕರಣವೆ ಅಲ್ಲವೆ? ಖಾಸಗಿ ವ್ಯಾಪಾರದ ಶಿಕ್ಷಣವೆಂದರೆ ಅಸಮಾನತೆಯ ಸ್ಥಿರೀಕರಣವೇ ಅಲ್ಲವೆ? ಆರ್ಥಿಕ ತಾರತಮ್ಯವೇ ವಿದ್ಯೆಯ ತಾರತಮ್ಯವೂ ಆಗಿ ಪರಿಣಮಿಸಬೇಕೆ? ಬರಿ ಒಂದು ಭಾಷೆಯಾಗಿ ಇಂಗ್ಲೀಷನ್ನು ಒಂದನೆ ತರಗತಿಯಿಂದ ಸರ್ಕಾರಿ ಶಾಲೆಗಳಲ್ಲಿ ಕಲಿಸುವ ಕಾನೂನು ಜಾರಿಯಾಗಲು ಕರ್ನಾಟಕದಲ್ಲಿ ಎಷ್ಟೆಲ್ಲ ರಾದ್ಧಾಂತವಾಯಿತಲ್ಲ ಯಾಕೆ? ಇಂಗ್ಲೀಶನ್ನು ಒಂದು ಭಾಷೆಯಾಗಿ ಕಲಿಯುತ್ತಲೆ ಕನ್ನಡಕ್ಕೆ ಅನ್ನವನ್ನು ತಂದುಕೊಡಬಲ್ಲ ಶಕ್ತಿಯನ್ನು ನಾವೆಲ್ಲ ತಂದುಕೊಡುವುದು ಯಾವಾಗ? ಕೈಗಾರಿಕೀಕರಣ, ವ್ಯಾಪಾರೀಕರಣ, ಉದಾರೀಕರಣ, ನಗರೀಕರಣ, ಶಿಕ್ಷಣದ ಆಂಗ್ಲೀಕರಣ ಇವೆಲ್ಲವೂ ಕನ್ನಡಕ್ಕೆ ಇರುವ ಅನ್ನ ನೀಡಬಲ್ಲ ಆ ಶಕ್ತಿಯನ್ನು ಇಲ್ಲವಾಗಿಸುವ ಕಾರಣಗಳೇ ಅಲ್ಲವೆ? ಸಾಮಾಜಿಕ ನ್ಯಾಯವನ್ನು ಗಾಳಿಗೆ ತೂರುವ; ಸಾಮಾಜಿಕ ಅಸಮಾನತೆಯನ್ನು ಯಥಾಸ್ಥಿತಿಯಲ್ಲಿ ಇಡುವ ಶಿಕ್ಷಣ ಕ್ರಮವನ್ನೇಕೆ ನಾವೆಲ್ಲ ಒಪ್ಪಿ ಬಾಳುತ್ತಿದ್ದೇವೆ? ಆಂಗ್ಲ

ಮಾಧ್ಯಮದ ಕೇಂದ್ರೀಯ ಪಠ್ಯಕ್ರಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವುದು ಇಂದು ಮಧ್ಯಮವರ್ಗದ ಶ್ರೀಮಂತರಿಗೆ ಪ್ರತಿಷ್ಠೆಯ ಪ್ರಶ್ನೆ ಆಗಿದೆ. ನಮ್ಮ ಮಕ್ಕಳ ತಿಂಗಳ ಫೀಜು ಹೆಚ್ಚಾದಷ್ಟೂ ನಾವು ಅದನ್ನು ನೆರೆಹೊರೆಯವರಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವಲ್ಲ! ನಾವೆಲ್ಲ ಎತ್ತ ಸಾಗುತ್ತಿದ್ದೇವೆ?

ಸ್ವಾಯತ್ತತೆ ಎಂಬ ಉಳ್ಳವರ ಪರ ನೀತಿ

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಬೇಕು ಎಂಬುದು ಇತ್ತೀಚಿನ ನೀತಿಯಾಗಿದೆ. ಕೆಲವೆಡೆ ಕರ್ನಾಟಕದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೂ ಈ ಸ್ವಾಯತ್ತತೆ ನೀಡಲಾಗಿದೆ. ಅಯ್ಯೋ ನಮ್ಮ ಡೀಮ್ಡ್ ಯೂನಿವರ್ಸಿಟಿ ಎಂಬ ಕಲ್ಪನೆಯೆ ಉಳ್ಳವರ ಪರವಾದ ನೀತಿಯಾಗಿದೆ. ಖಾಸಗಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ 1997ರಲ್ಲಿ ರಾಜ್ಯಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಲಾಯಿತು. ಅದರ ಸಾರವೇನು ಗೊತ್ತೆ? ಅದರ ಪ್ರಕಾರ 10 ಕೋಟಿ ರೂಪಾಯಿ ಕೊಡಬಲ್ಲ ಸಂಸ್ಥೆಗಳು ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬಹುದಂತೆ! ಈ ವಿದ್ಯೆಯ ಅಂಗಡಿಗಳನ್ನು ಯಾವಾಗ ಬೇಕಾದರೂ ಮುಚ್ಚಬಹುದಾದ ಅಧಿಕಾರವೂ ಸೇರಿದಂತೆ ಎಲ್ಲ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಅಧಿಕಾರಗಳೂ ದೇಣಿಗೆದಾರರಿಗೇ ಇರುತ್ತವೆ. ಇದೆಂತಹ ನೀತಿ? ಸಮಾಜದ ವಿಕಾಸಕ್ಕೆ ತಕ್ಕಂತೆ ವಿಶ್ವವಿದ್ಯಾಲಯಗಳನ್ನು ಸರ್ಕಾರವೇ ಸ್ಥಾಪಿಸುವ ಬದಲು ಶಿಕ್ಷಣ ಕಾರ್ಖಾನೆಗಳಿಗೆ ಮಾರುಕಟ್ಟೆ ಒದಗಿಸುವ ಪ್ರಯತ್ನ ಇದಾಗಿದೆ! (ಶತಮಾನದ ಅಂಚಿನಲ್ಲಿ ಶಿಕ್ಷಣ–ಪ್ರೊ. ಕೆ.ಕೆ.ತೇಕೇಡತ್, ನವಕರ್ನಾಟಕ ಪ್ರಕಾಶನ, 1997. ಪು. 72)

ನಮಗೆ ಎಂತಹ ಶಿಕ್ಷಣ ಬೇಕು ಎಂಬುದೇ ನಮಗಿನ್ನೂ ಸ್ಪಷ್ಟವಾಗಿಲ್ಲ! ಮಹಾನಗರಗಳಲ್ಲಿ ಇರುವ ಹಲವಾರು ಡೀಮ್ಡ್ ವಿಶ್ವವಿದ್ಯಾಲಯಗಳು ತಮ್ಮದೇ ಪಠ್ಯಕ್ರಮ–ಬೋಧನಾ ಕ್ರಮಗಳನ್ನು ಹೊಂದಿವೆ. ವಿಶೇಷವೆಂದರೆ ಇವೆಲ್ಲವೂ ಶಿಕ್ಷಣವನ್ನು ವೃತ್ತಿಪರ ಕೋರ್ಸುಗಳನ್ನಾಗಿ ಪರಿವರ್ತಿಸುತ್ತಿವೆ. ಕೆಲವೊಂದು ಪದವಿಗಳನ್ನು ಮಾತ್ರ ಇವು ನೀಡುತ್ತವೆ. ಮ್ಯಾನೇಜ್‌ಮೆಂಟ್ ಶಿಕ್ಷಣ, ಕಂಪ್ಯೂಟರ್ ಶಿಕ್ಷಣ, ಕೆಲವೇ ತಾಂತ್ರಿಕ ಮತ್ತು ಅನ್ವಯಿಕ ವಿಜ್ಞಾನದ ಶಿಕ್ಷಣ ಬಿಟ್ಟರೆ ಇಲ್ಲೆಲ್ಲ ಬೇರೆ ಕೋರ್ಸುಗಳೇ ಇಲ್ಲ. ನಾಮಕೇವಾಸ್ತೆ ಕೆಲವೆಡೆ ಇದ್ದರೂ ಅವಕ್ಕೆ ಹೆಚ್ಚು ಪ್ರಾಶಸ್ತ್ಯ ಇಲ್ಲ. ಇಂತಹ ಕಾಲೇಜು ವಿ.ವಿ.ಗಳಲ್ಲಿ ಮ್ಯಾನೇಜ್‌ಮೆಂಟ್ ಪದವಿಗಳಿಗೆ ಪ್ಯಾಕೇಜುಗಳೂ ಉಂಟು. ಈ ಪದವಿಗಳು ಶ್ರೀಮಂತರ ಉದ್ಯೋಗ ಖಾತ್ರಿ ಯೋಜನೆಗಳಾಗಿ ಪರಿವರ್ತನೆ ಆಗುತ್ತಿವೆ.

ಹಲವಾರು ಮ್ಯಾನೇಜ್‌ಮೆಂಟ್ ಕೋರ್ಸುಗಳಲ್ಲಿ ಪಠ್ಯಕ್ರಮವನ್ನು ಮತ್ತು ಕಲಿಕಾ ವಿಧಾನಗಳನ್ನು ಶಿಕ್ಷಣತಜ್ಞರು ರೂಪಿಸುತ್ತಿಲ್ಲ; ಕೈಗಾರಿಕೋದ್ಯಮಿಗಳು ರೂಪಿಸುತ್ತಿದ್ದಾರೆ. ಕೈಗಾರಿಕೆಗಳ–ಮಲ್ಟಿನ್ಯಾಶನಲ್ ಕಂಪೆನಿಗಳ ದುಡಿಮೆ ಬೇಡಿಕೆಗೆ ತಕ್ಕಂತೆ ಕೆಲಸಗಾರರನ್ನು ಉತ್ಪಾದಿಸುವ ಹಾಗೆ ಕಾಲೇಜು ಕಲಿಕೆ ಇಲ್ಲೆಲ್ಲ ರೂಪಗೊಳ್ಳುತ್ತಿದೆ. ಹಾಗೆ ಕಲಿತವರಿಗೆ ಕೈಗಾರಿಕೆಗಳಲ್ಲಿ ಖಾತ್ರಿಯಾಗಿ ಉದ್ಯೋಗಗಳನ್ನು ನೀಡುತ್ತೇವೆ ಎಂಬ ಪ್ಯಾಕೇಜಿನೊಂದಿಗೆ ಅವರಿಂದ 8–10 ಲಕ್ಷಗಳನ್ನು ಒಟ್ಟು ಕೋರ್ಸಿನ ಶುಲ್ಕವಾಗಿ ಪಡೆಯಲಾಗುತ್ತಿದೆ. (ಈ ಕೈಗಾರಿಕೆಗಳು ಒಂದು ವೇಳೆ ಮುಚ್ಚಿಹೋದರೆ ನಿರ್ಧಿಷ್ಟ ಕೌಶಲ್ಯ ಮಾತ್ರ ಕಲಿತವರು ಆಮೇಲೆ ಅಪ್ರಯೋಜಕರಾಗುತ್ತಾರೆ!) ಆದರೂ ಹೀಗೆ ದುಬಾರಿ ಪ್ಯಾಕೇಜಿನ ಉದ್ಯೋಗ ಖಾತ್ರಿ ಶಿಕ್ಷಣವು ಯಾರಿಗಾಗಿ? ಇಂತಹ ಶಿಕ್ಷಣ ಪಡೆಯಲು ಬಡವರು ಏನು ಮಾಡಬೇಕು? ಹಣವೇ ಶಿಕ್ಷಣದ ನಿರ್ಧಾರಕ ಸೂತ್ರವೋ?

ಎಲ್ಲಿ ಹೆಚ್ಚು ಹಣ ಸಂಪಾದಿಸಬಹುದೋ, ಎಲ್ಲಿ ಹೆಚ್ಚಿನ ಗೌರವ ಮತ್ತು ಅಧಿಕಾರಗಳನ್ನು ಹೊಂದಬಹುದೋ ಅಂತಹ ವಿದ್ಯೆಗಳನ್ನು ಕೊಂಡುಕೊಳ್ಳಲು ಜನ ಮುಗಿ ಬೀಳುತ್ತಿದ್ದಾರೆ. ಇಂದಿನ ಬಹುತೇಕ ವಿದ್ಯಾರ್ಥಿಗಳ ಮನೋಭಾವವೇ ಹೇಗಾಗಿದೆ ಎಂದರೆ; ಇಂದು ನೀವು ಶಿಕ್ಷಣ ಪಡೆಯುತ್ತಿರುವುದು ಯಾಕೆ ಎಂದು ಕೇಳಿದರೆ ವಿದ್ಯಾರ್ಥಿಗಳು ಭಾರೀ ಸಂಬಳ ಪಡೆಯುವ ಕೆಲಸ ಗಿಟ್ಟಿಸಲು, ಐಷಾರಾಮಿಯಾಗಿ ಜೀವನದಲ್ಲಿ ಸೆಟ್ಲ್ ಆಗಲು ಎಂದೇ ಹೇಳುತ್ತಾರೆ! ಅಪಾರ ಹಣ ಮಾಡಬಲ್ಲ ಶಿಕ್ಷಣವನ್ನು ರೂಪಿಸಬೇಕು ಮತ್ತು ಪಡೆಯಬೇಕು ಎಂಬುದು ಇಂದು ಮೌಲ್ಯವೆ ಆಗಿಬಿಟ್ಟಿದೆಯಲ್ಲ! ಅಯ್ಯೋ ಶಿವನೆ ಹಣದ ಬೆನ್ನು ಹತ್ತುವ ಐಶಾರಾಮದ ಬೆನ್ನು ಹತ್ತುವ ರೋಗ ನಮಗೆ ಬಡಿದುಕೊಂಡಿದೆಯಲ್ಲ! ಹಾಸಿಗೆಗೆ ಆಗುವಷ್ಟು ಕಾಲು ಚಾಚುವ ನೆಮ್ಮದಿಯ ಬದುಕು ಬಾಳುವ ರೈತಾಪಿ ಜನರ ಬದುಕನ್ನು 'ಪರ್ಸಿಸ್ಟೆಂಟ್ ಎಕಾನಮಿ' ಎಂದು ಬಯ್ಯುವ ಖಾಯಿಲೆ ನಮಗೆಲ್ಲ ಬಡಿದುಕೊಂಡಿದೆಯಲ್ಲ! ಯಾರಿಂದ ಈ ಖಾಯಿಲೆ ಬಂತು? ಯಾಕೆ ಈ ರೋಗ ಉಲ್ಬಣಿಸುತ್ತಿದೆ? ಅಯ್ಯೋ ದುರಂತವೇ! ಇದಕ್ಕೆ ಮದ್ದೇನೆಂದು ನಾವೇಕೆ ಯೋಚಿಸುತ್ತಿಲ್ಲ?

ನೋಡಿ ಶಿಕ್ಷಣ ನೀತಿಯು ನಮ್ಮ ಹೊಸ ಆರ್ಥಿಕ ನೀತಿಯ ಒಂದು ಉಪ ಉತ್ಪನ್ನವೆ ಆಗಿದೆ. ವಿದೇಶೀ ಬಂಡವಾಳದ ಒಳಹರಿವಿಗೆ ಮುಕ್ತ ಅವಕಾಶ ನೀಡುವ, ಕಾರು ಗಣಕಯಂತ್ರ-ಡಿ.ವಿ.ಡಿ ಇತ್ಯಾದಿಗಳಿಗೆ ಸುಂಕ ರಿಯಾಯಿತಿ ನೀಡುವ, ರೈಲ್ವೆ, ರಸ್ತೆ ಸಾರಿಗೆ, ಬ್ಯಾಂಕ್ ಮೊದಲಾದವುಗಳನ್ನು ಗಣಕೀಕರಿಸುವ, ಸಾರ್ವಜನಿಕ ಆರೋಗ್ಯ, ಸಾರಿಗೆ, ಸಾರ್ವತ್ರಿಕ ಶಿಕ್ಷಣಗಳನ್ನು ಖಾಸಗೀಕರಿಸುವ ಇತ್ಯಾದಿ ಇತ್ಯಾದಿ ಕ್ರಿಯೆಗಳ ಪರಿಣಾಮವಾಗಿಯೆ ಕಾಲೇಜು ಸ್ವಾಯತ್ತತೆ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ ಸ್ಥಾನಮಾನ ನೀಡಿಕೆ ಕಲ್ಪನೆಗಳು ಜಾರಿಯಾಗಿವೆ. ಇವೆಲ್ಲವುಗಳ ಒಟ್ಟು ಉದ್ದೇಶವೇ ವಿದ್ಯಾರ್ಥಿಗಳ ಕಲಿಕೆಯ ವೆಚ್ಚವನ್ನು ಸರ್ಕಾರ ಕ್ರಮೇಣ ನಿಲ್ಲಿಸಿ ಕೈತೊಳೆದುಕೊಳ್ಳುವುದು. ಈಗ ಖಾಸಗಿ ಶಾಲೆಗಳ ಹಂತದಲ್ಲಿ ಇರುವ ಲಕ್ಷಾಂತರ ರೂಪಾಯಿ ಸುಲಿಯುವ ಆಂಗ್ಲಮಾಧ್ಯಮ ಖಾಸಗಿ ಶಾಲೆಗಳ ವ್ಯಾಪಾರವನ್ನು ಉನ್ನತ ಶಿಕ್ಷಣಕ್ಕೂ ವಿಸ್ತರಿಸುವುದು. ಹೀಗೆ ನಮ್ಮ ಶಿಕ್ಷಣ ಹಣದ ಪ್ರಶ್ನೆಯಿಂದಲೆ-ಉತ್ಪಾದಕ ಅನುತ್ಪಾದಕ ತಿಳುವಳಿಕೆಯಿಂದಲೆ ರೂಪಗೊಳ್ಳುವುದು ನಮ್ಮ ಆರ್ಥಿಕ ನೀತಿಯ ಫಲವೇ ಆಗಿದೆ. ಜ್ಞಾನಕ್ಕಾಗಿ ಶಿಕ್ಷಣ, ಸರಳವಾಗಿ ಬದುಕುವುದಕ್ಕಾಗಿ ಶಿಕ್ಷಣ, ನೈತಿಕ ಶಿಕ್ಷಣ, ಸಾಮಾಜಿಕ ನ್ಯಾಯಕ್ಕಾಗಿ ಶಿಕ್ಷಣ-ಸಮಾನತೆಗಾಗಿ ಶಿಕ್ಷಣ, ಅನ್ನಕ್ಕಾಗಿ ಶಿಕ್ಷಣ, ಅಂಚಿನ ಜನತೆಯ ಸರ್ವೋದಯಕ್ಕಾಗಿ ಶಿಕ್ಷಣ ಎಂಬ ಕಲ್ಪನೆಗಳೆಲ್ಲ ಇಲ್ಲವಾಗಿ ಅಥವಾ ಗೌಣವಾಗಿ ಹಣದಿಂದ ಶಿಕ್ಷಣ ಮತ್ತು ಹಣಕ್ಕಾಗಿ ಶಿಕ್ಷಣ ಎಂಬುದೇ ಸಾರ್ವತ್ರಿಕ ಆಚಾರ ಆಗುತ್ತಿದೆಯಲ್ಲ! ನಮ್ಮ ಶಿಕ್ಷಣ ಎತ್ತ ಸಾಗುತ್ತಿದೆ?

ಎತ್ತ ಸಾಗುತ್ತಿದ್ದೇವೆ?

1992-93ರಲ್ಲಿ ನೇಮಕವಾದ ಪುನ್ನಯ್ಯ ಸಮಿತಿಯು 'ಜೀವನದ ವೆಚ್ಚದಲ್ಲಿ ಆಗುವ ಏರಿಕೆಗೆ ಹೊಂದಿಕೊಂಡಂತೆ ಆಗಾಗ ಶುಲ್ಕವನ್ನು ಪುನರ್ವಿಮರ್ಶಿಸಬೇಕಾಗುತ್ತದೆ' ಎಂದು ಹೇಳಿದೆ. ಆದರೆ ಈಗ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಪಾಲಿಟೆಕ್ನಿಕ್ ನೀತಿಯ ಪ್ರಕಾರ ಈಗಿರುವ ಶುಲ್ಕವನ್ನು ನಾಲ್ಕು ಪಟ್ಟು ಹೆಚ್ಚಿಸಲು ತೀರ್ಮಾನಿಸಲಾಗಿದೆ! (ಪ್ರಜಾವಾಣಿ ವಾರ್ತೆ; 07-02-11) ಗ್ರಾಮೀಣ ಪ್ರದೇಶಗಳಲ್ಲಿ ನೂತನ ಪಾಲಿಟೆಕ್ನಿಕ್ ಕಾಲೇಜುಗಳನ್ನು ಸ್ಥಾಪಿಸಲು 5 ಎಕರೆ ಭೂಮಿಯನ್ನು ಕಡ್ಡಾಯಗೊಳಿಸಲಾಗಿದೆ. ಪ್ರವೇಶಕ್ಕೆ ಕನಿಷ್ಠ ಶೇ% 50 ಅಂಕ ನಿಗದಿಪಡಿಸಲಾಗಿದೆ. ಇದೆಲ್ಲ ಯಾಕೆ? ನಾವು ಎತ್ತ ಸಾಗುತ್ತಿದ್ದೇವೆ? ಮೆರಿಟ್ ಮೆರಿಟ್

ಅಂತ ಬಡಕೊಳ್ಳುವ ನಾವು ಬುದ್ದಿಮತ್ತೆ ಕೇವಲ ಬಯಲಾಜಿಕಲ್ ಅಲ್ಲ ಅದು ಸೋಶಲಾಜಿಕಲ್ ಮತ್ತು ಎಕನಾಮಿಕಲ್ ಎಂದು ಯಾಕೆ ಅರ್ಥ ಮಾಡಿಕೊಳ್ಳುವುದಿಲ್ಲ? ಬಡಮಕ್ಕಳ ಬೌದ್ಧಿಕ ವಿಕಾಸಕ್ಕೆ ಬೇಕಾದ ವಾತಾವರಣ ನಿರ್ಮಿಸುವ ಜವಾಬ್ದಾರಿ ಸರ್ಕಾರಕ್ಕೆ ಬೇಡವೊ? ನಾಗರೀಕರಿಗೆ ಬೇಡವೊ? ಇತ್ತೀಚೆಗೆ ಶಾಲಾ ಕಾಲೇಜುಗಳ ಹಾಸ್ಟೆಲ್‌ಗಳನ್ನು ಕೂಡ ಖಾಸಗೀಕರಿಸುವ ಪ್ರಯತ್ನಗಳು ಆಗುತ್ತಿವೆ! ಸರ್ವ ಶಿಕ್ಷಾ ಅಭಿಯಾನದಲ್ಲಿ ಎನ್.ಜಿ.ಒ.ಗಳ ಯೋಜನೆ ಸಹಭಾಗಿತ್ವದಲ್ಲಿ ಪೂರಕ ಶಿಕ್ಷಣ, ಲಿಂಕ್ ಲೈಬ್ರರಿಗಳ ಸ್ಥಾಪನೆಗೆ ಸರ್ಕಾರ ಧನವಿನಿಯೋಗ ಮಾಡುತ್ತಿದೆ. ಉನ್ನತ ಶಿಕ್ಷಣದಲ್ಲು ಇಂದು ಆಪ್ತಮಿತ್ರ, ಹೊಸ ಹೆಜ್ಜೆ, ಸಂಪರ್ಕ, ಆಂಗ್ಲ, ಮಾನವತೆ ಇಂತಹ ಹಲವು ಯೋಜನೆಗಳನ್ನು ಜಾರಿ ಮಾಡಲಾಗುತ್ತಿದೆ. ಇವೆಲ್ಲವೂ ಪಿ.ಪಿ.ಪಿ.ಗಳು. ಅಂದರೆ ಪ್ರೈವೇಟ್ ಪಾರ್ಟನರ್‌ಶಿಪ್ ಪ್ರೋಗ್ರಾಮ್‌ಗಳು. ಈಗಾಗಲೇ WAYE ಎಂಬ ಖಾಸಗಿ ಸಂಸ್ಥೆಯಿಂದ ಮಾನವತೆ ಕಾರ್ಯಕ್ರಮ ಅನುಷ್ಠಾನ ಆಗುತ್ತಿದೆ. (ವಿವರಕ್ಕೆ ನೋಡಿ: ಸರ್ಕಾರಿ ಪತ್ರ ಸಂಖ್ಯೆ: ಇ.ಡಿ/70/ಎಚ್‌ಪಿಸಿ/2010, ದಿನಾಂಕ 10–02–2011) ಇದು ರವಿಶಂಕರ್ ಗುರೂಜಿಯವರ ಸಂಸ್ಥೆ ಆಗಿದ್ದು ಇದರ ಮೂಲಕ ಪುರೋಹಿತಶಾಹಿ ಮೌಲ್ಯಗಳನ್ನೆ ವಿದ್ಯಾರ್ಥಿಗಳಲ್ಲಿ ಬಿತ್ತಲಾಗುತ್ತಿದೆ! (ಖುರ್ಶಿದ್ ಬಾಟ್ಲಿವಾಲ ಮತ್ತು ದಿನೇಶ್ ಘೋಡ್ಕೆ ಇದರ ಸ್ಥಾಪಕರು) (WAYE ಈ ಸಂಸ್ಥೆಯ ವಿವರಕ್ಕೆ ನೋಡಿ, http://www.wayeonline.org) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಆಂಗ್ಲ ಎಂಬ ಮಾತಿಂಗ್ಲೀಶ್ (ಮಾತಿನ ಇಂಗ್ಲೀಶ್) ಕಲಿಸುವ ಕೋರ್ಸಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಇದನ್ನೂ ಯಾವುದಾದರು ಕೇಸರಿ ಸಂಸ್ಥೆಗೆ ಮುಂದೆ ಸರ್ಕಾರ ವಹಿಸಬಹುದು. (ಪುರೋಹಿತಶಾಹಿ ಸಂಸ್ಥೆಗಳಿಗೆ ಕೆಲಸ ಕೊಡುವ ಮೂಲಕ ಮತ್ತು ಸರ್ಕಾರವೆ ಇಂತಹ ಕೆಲಸಕ್ಕೆ ನೌಕರರನ್ನು ನೇಮಿಸಿಕೊಳ್ಳದೆ ಖಾಸಗಿ ಸಂಸ್ಥೆಗಳಿಗೆ ಹೊರಗುತ್ತಿಗೆ ಕೊಡುವ ಮೂಲಕ) ಏಕಕಾಲಕ್ಕೆ ಒಂದು ಕಡೆ ಶಿಕ್ಷಣದ ಕೇಸರೀಕರಣ ಇನ್ನೊಂದು ಕಡೆ ಮೀಸಲಾತಿಯನ್ನು ಬೈಪಾಸ್ ಮಾಡುವ ಹುನ್ನಾರ ಎರಡೂ ಇದರಿಂದ ಸಾಧಿತವಾಗುತ್ತಿದೆ! ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಹೆಸರಿನಲ್ಲಿ ನಡೆಯುತ್ತಿರುವ ಸರ್ಕಾರಿ ಸಾಂಸ್ಕೃತಿಕ ರಾಜಕೀಯ ಇದು! ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸಬಹುದಾದ ಅವಕಾಶವನ್ನು ಸರ್ಕಾರವೆ ಖಾಸಗಿ ಸಹಯೋಗಕ್ಕೆ ವಹಿಸುವುದು ಸಾಮಾಜಿಕ ಅನ್ಯಾಯ ಅಲ್ಲವೆ? ಕಾರ್ಪೋರೇಟ್ ವಲಯದ ಹೊರಗುತ್ತಿಗೆ ಪರಿಕಲ್ಪನೆ ಸರ್ಕಾರದಲ್ಲು ಸದ್ದಿಲ್ಲದೆ ಜಾರಿಯಾಗುತ್ತಿದೆ. ಪರೋಕ್ಷವಾಗಿ ಸರ್ಕಾರಿ ವಲಯದ ಮೀಸಲಾತಿಯನ್ನು ಬುಡಮೇಲು ಮಾಡಿ ಬೇಕಾದವರಿಗೆ ಕೆಲಸ ನೀಡುವ ಯೋಜನೆಗಳಿವು. ಉನ್ನತ ವರ್ಗದ ಡಿಸ್‌ಪ್ಲೇಸ್ಡ್ ಆ್ಯಂಗರ್ ಹೀಗೆ ವ್ಯಕ್ತವಾಗುತ್ತಿದೆ! ದಿಸ್ ಈಸ್ ದಿ ರಿಯಲ್ ಎಂಪವರ್‌ಮೆಂಟ್ ಆಫ್ ಯೂಥ್!!

ಇಂದು ಒಂಬತ್ತು ಹತ್ತನೆ ತರಗತಿಯ ಒಬ್ಬ ವಿದ್ಯಾರ್ಥಿಗೆ ಮಧ್ಯಾಹ್ನದ ಒಂದು ಊಟಕ್ಕೆ ಸರ್ಕಾರ ನೀಡುವ ಖರ್ಚು ಕೇವಲ ಐದು ರೂಪಾಯಿ 43 ಪೈಸೆ ಮಾತ್ರ, ಆದರೆ ಬೆಂಗಳೂರಿನ ಪರಪ್ಪನ ಅಗ್ರಹಾರದ ಒಬ್ಬ ಖೈದಿಯ ಒಂದು ದಿನದ ಊಟಕ್ಕೆ ಸರ್ಕಾರ 35 ರೂಪಾಯಿಗಳನ್ನು ಖರ್ಚು ಮಾಡುತ್ತಿದೆ! ಯಾಕೀ ತಾರತಮ್ಯ? ಬಡಮಕ್ಕಳ ಊಟಕ್ಕೆ ನಾವು ಹಣ ಕಡಿಮೆ ಮಾಡಬೇಕೆ? ಅದು ಅನುತ್ಪಾದಕ ಬಂಡವಾಳವೊ?

ಬುಡಕಟ್ಟು ಮಕ್ಕಳಿಗೆ ನಮ್ಮಲ್ಲಿ ಎಷ್ಟು ಗಮನ ಕೊಡುತ್ತಿದ್ದೇವೆ ಎಂಬುದಕ್ಕೆ ಒಂದು ಉದಾಹರಣೆ ನೋಡಿ; ಚಾಮರಾಜನಗರ ಜಿಲ್ಲೆ ಕೆರೆದಿಂಬ ಮತ್ತು ಗೊಂಬೆಕಲ್ಲು ಪೋಡುಗಳು ಅರಣ್ಯಪ್ರದೇಶದಲ್ಲಿವೆ. ಇಲ್ಲಿ ಸೋಲಿಗರು ಕಾಡು ಕುರುಬರು, (ಬೆಟ್ಟಕುರುಬರು) ಇದ್ದಾರೆ.

ಇಲ್ಲಿ 6 ರಿಂದ 14 ವಯಸ್ಸಿನ 40 ಮಕ್ಕಳು ಇದ್ದರು. ಸ್ವಾತಂತ್ರ್ಯಪೂರ್ವದಿಂದ ಇಲ್ಲಿ ಎಂದೂ ಶಾಲೆ ತೆರೆದಿರಲಿಲ್ಲ. 2000ನೇ ಸಾಲಿನಲ್ಲಿ ಇಲ್ಲೊಂದು ಶಿಕ್ಷಣ ಖಾತ್ರಿ ಯೋಜನೆ ಕೇಂದ್ರ (EGS ಶಾಲೆ) ತೆರೆಯಲಾಯಿತು. ಇಲ್ಲಿಗೆ 40 ಮಕ್ಕಳೂ ಪ್ರವೇಶ ಪಡೆದರು. ಈ ಕೇಂದ್ರದ ಸ್ವಯಂ ಸೇವಕರಿಗೆ ನೀಡುತ್ತಿದ್ದ ತಿಂಗಳ ಗೌರವ ಧನ 1000 ರೂಪಾಯಿ. ಬಿಸಿಯೂಟ ತಯಾರಿಸುವ ನೌಕರರಿಗೆ ನೀಡುತ್ತಿದ್ದ ಸಂಬಳ 500 ರೂಪಾಯಿ. ಬಿಸಿಯೂಟಕ್ಕೆ ಸಾಮಗ್ರಿ ಸರಬರಾಜು ಆಗುತ್ತಿದ್ದದ್ದು ಮೂರು ತಿಂಗಳಿಗೊಮ್ಮೆ. ಇದೂ ಸಮರ್ಪಕವಾಗಿ ಆಗದೆ 2003ರಲ್ಲಿ ಈ ಕೇಂದ್ರ ಮುಚ್ಚಲ್ಪಟ್ಟಿತು. (ನೋಡಿ; ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು–ಪಿ.ವೀರಭದ್ರ ನಾಯಕ: ಹಂಪಿ ವಿ.ವಿ. 2010. ಪು.11) ಹೀಗೆ ಇಲ್ಲಿ ಶಾಲೆ ಬಿಟ್ಟವರಲ್ಲಿ 61% ಮಕ್ಕಳು ಕಾಫಿ ಎಸ್ಟೇಟ್‌ಗೆ ಕೆಲಸಕ್ಕೆ ಹೋಗುತ್ತಾರೆ. ಅವರಿಗೆ ದಿನವೊಂದಕ್ಕೆ ಕೂಲಿ 50 ರೂಪಾಯಿ.

ಬುಡಕಟ್ಟು ಮಕ್ಕಳಿಗೆ ನಮ್ಮ ಸರ್ಕಾರ ಎಷ್ಟೊಂದು ಖರ್ಚು ಮಾಡುತ್ತಿದೆ ಅಲ್ಲವೆ? ಅದೇ ನಮ್ಮ FDI ನೋಡಿ; cumulative amount of FDI inflow during august 1991 to march 2010 is 1,32,428 million US dollars according to the DIPP (department of industrial policy and promotion) ಜೂನ್ 2010ರ ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್‌ನಲ್ಲಿ ಕರ್ನಾಟಕ ಸರ್ಕಾರ 3.29 ಲಕ್ಷ ಕೋಟಿ ರೂಪಾಯಿಗಳಷ್ಟು ಹೂಡಿಕೆಗೆ ಸುಮಾರು 400 MOUಗಳಿಗೆ ಸಹಿ ಮಾಡಿದೆ. ಇದರಿಂದ 1.2 ಲಕ್ಷ ಉದ್ಯೋಗಗಳು ಸೃಷ್ಟಿ ಆಗುತ್ತವಂತೆ. ಇದಕ್ಕಾಗಿ 2010ರಲ್ಲೆ 63000 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಇದಲ್ಲದೆ ಇನ್ನೂ 40,000 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲು ಯೋಜಿಸಲಾಗಿತ್ತು! ನಮಗೆ ಗೊತ್ತಿರುವಂತೆ ಒಂದು ಎಕರೆ ಬೂಮಿಯಲ್ಲಿ 5 ಜನರ ಕುಟುಂಬ ನೆಮ್ಮದಿಯಿಂದ ಬಾಳಬಲ್ಲದು. ಅಂದರೆ ಒಂದು ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಂಡರೆ 5 ಜನ ಕೆಲಸ ಕಳೆದುಕೊಳ್ಳುತ್ತಾರೆ ಎಂದಾಯಿತು. ಸರಾಸರಿ ಒಂದು ಲಕ್ಷ ಎಕರೆ ಭೂಮಿ ಕಳೆದುಕೊಂಡರೆ 5 ಲಕ್ಷ ಜನ ಅನಾಥರಾಗುತ್ತಾರಲ್ಲ. ನೀವು ಮೂರು ಲಕ್ಷ ಕೋಟಿ ಬಂಡವಾಳ ಹೂಡಿ ಸೃಷ್ಟಿಸುವುದು 1.29 ಲಕ್ಷ ಉದ್ಯೋಗಗಳನ್ನು. (ಅದೂ ಕನಸಿನ ಮಾತು) ಈಗ ಮತ್ತೆ ಸರ್ಕಾರ 2011ರ ಜೂನ್‌ನಲ್ಲಿ 3 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಆಹ್ವಾನಿಸುತ್ತಿದೆ! ಈ ಆರ್ಥಿಕ ಒಳಹರಿವು ನಮಗೆ ಬೇಕಾ? ಬೆಳವಣಿಗೆ ಅಂದರೆ ಏನು? ಅಭಿವೃದ್ಧಿ ಅಂದರೆ ಏನು? ಕೈಗಾರೀಕರಣವಾ? ವ್ಯಾಪಾರೀಕರಣವಾ? ಬಡವರನ್ನು ಇನ್ನೂ ಇನ್ನೂ ಅಧೋಗತಿಗೆ ಇಳಿಸುವುದಾ?

ಉದ್ಯೋಗ ಸೃಷ್ಟಿ ಹೆಸರಿನಲ್ಲಿ ಉದ್ಯೋಗಗಳನ್ನು ನಾಶ ಮಾಡುವ ಆರ್ಥಿಕ ನೀತಿಯಲ್ಲು ಜಾಗತೀಕರಣವೆ ಒಂದು ಕಡೆ ರಾಕ್ಷಸಾಕಾರವಾಗಿ ನುಗ್ಗಿ ಬರುತ್ತಿದೆ. ನಿರುದ್ಯೋಗಿಗಳನ್ನು ಸೃಷ್ಟಿಸುವ ಶಿಕ್ಷಣ ವ್ಯಾಪಾರವೂ ಇನ್ನೊಂದು ಕಡೆ ರಾಕ್ಷಸಾಕಾರವಾಗಿ ಉಲ್ಬಣಿಸುತ್ತಿದೆ. ನಾವು ಎತ್ತ ಕಡೆ ಸಾಗುತ್ತಿದ್ದೇವೆ? ನಮ್ಮ ಅರಣ್ಯದ ಮಕ್ಕಳು–ಬುಡಕಟ್ಟು ಮಕ್ಕಳಿಗೆ ಶಿಕ್ಷಣ ನೀಡಲು ವಿಶೇಷ ಶಾಲೆ ತೆರೆದು, ವಿಶೇಷ ಬಜೆಟ್ ಇಟ್ಟು, ಅದಕ್ಕಾಗೆ ವಿಶೇಷ ನೇಮಕಾತಿ ಮಾಡಿಕೊಂಡು ಮುಂದುವರಿಯದೆ ಅಸಡ್ಡೆ ಮಾಡುವ ಸರ್ಕಾರ ಮಿಲಿಯಾಂತರ ಡಾಲರುಗಳ ಬಂಡವಾಳ ಒಳಹರಿವಿಗೆ ಅವಕಾಶ ಮಾಡಿಕೊಡುತ್ತದೆ. ಯಾರ ಅಭಿವೃದ್ಧಿಗಾಗಿ ಈ ಬೆಳವಣಿಗೆ? ಯಾರ

ಉದ್ಧಾರಕ್ಕಾಗಿ ಈ ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ ಇವೆಲ್ಲ?

ಕೆಲವು ಸಲಹೆಗಳು

ಎಲ್ಲ ಬುದ್ಧಿಮಾಂದ್ಯ–ದೈಹಿಕ ನ್ಯೂನತೆಯವರಿಗೆ ವಿಶೇಷ ಶಿಕ್ಷಣ ವ್ಯವಸ್ಥೆ ಇರುವಂತೆ ಮೂರನೆ ಲಿಂಗಿಗಳಿಗೂ ಸರ್ಕಾರವೆ ರಾಷ್ಟ್ರಾದ್ಯಂತ ವಿಶೇಷ ಶಾಲೆ ಕಾಲೇಜುಗಳನ್ನು ತೆರೆಯಬೇಕು. ಮೂರನೆ ಲಿಂಗಿಗಳು ಭಿಕ್ಷುಕರಾಗಿಯೊ, ಲೈಂಗಿಕ ಕಾರ್ಯಕರ್ತರಾಗಿಯೊ ಮಾತ್ರವೆ ಇರಬೇಕೆ? ಅವರಿಗೂ ಸಮಾನ ಅವಕಾಶ ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇರಬೇಕಲ್ಲವೆ? ಮೊದಲಿಗೆ ನಮ್ಮಲ್ಲಿ ಶಿಕ್ಷಣದ ವ್ಯಾಪಾರೀಕರಣ–ಕೈಗಾರಿಕೀಕರಣ ನಿಲ್ಲಬೇಕು. ಇದಕ್ಕೆ ಶಿಕ್ಷಣದ ವಿಕೇಂದ್ರೀಕರಣ ಆಗಬೇಕು. ಕನಿಷ್ಠ ಪ್ರಾಥಮಿಕ–ಪ್ರೌಢ ಶಿಕ್ಷಣದ ರಾಷ್ಟ್ರೀಕರಣವಾದರೂ ಆಗಬೇಕು. ಎಲ್ಲ ಅಲ್ಪಸಂಖ್ಯಾತ–ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ನಿಯಂತ್ರಣ ಇರಬೇಕು. ಅಲ್ಲೆಲ್ಲ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಪ್ರವೇಶದಲ್ಲು ಮೀಸಲಾತಿ ಜಾರಿ ಆಗಬೇಕು. ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ಅವರವರ ಜನಸಂಖ್ಯೆ ಆಧರಿಸಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮಾತ್ರ ಸರ್ಕಾರ ಅನುಮತಿ ನೀಡಬೇಕು. ರಾಷ್ಟ್ರಾದ್ಯಂತ ಸಮಾನ ಶಿಕ್ಷಣ ಸವಲತ್ತುಗಳು ಇರಬೇಕು. ಬುಡಕಟ್ಟು, ಗುಡ್ಡಗಾಡು–ಬೆಟ್ಟಕಾಡು ಪ್ರದೇಶಗಳಲ್ಲಿ ವಾಸಿಸುವ ಮಕ್ಕಳ ಶಾಲೆಗಳಿಗೆ ವಿಶೇಷ ಸವಲತ್ತುಗಳಿರಬೇಕು. ಈ ಶಾಲೆ ಕಾಲೇಜುಗಳಿಗೆ ವಿಶೇಷ ನೇಮಕಾತಿ ಪ್ರಕ್ರಿಯೆ ನಡೆಯಬೇಕು.

ರಾಷ್ಟ್ರೀಯ ಸಮಾನ ಶುಲ್ಕ ನೀತಿ, ರಾಷ್ಟ್ರೀಯ ಏಕರೂಪ ಪರೀಕ್ಷಾ ನೀತಿ, ಮೌಲ್ಯಮಾಪನ ನೀತಿಗಳು ಜಾರಿಯಾಗಬೇಕು. ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಮಗ್ರವಾಗಿ ಜಾರಿಮಾಡುವ ಯೋಜನೆಗಳನ್ನು ರೂಪಿಸಬೇಕು. ಇಂಗ್ಲಿಶನ್ನು ಒಂದು ಬಳಕೆಯ ಭಾಷೆಯಾಗಿ ಕಲಿಸುವುದನ್ನು ರಾಷ್ಟ್ರಾದ್ಯಂತ ಕಡ್ಡಾಯವಾಗಿ ಜಾರಿ ಮಾಡಬೇಕು. ಕ್ರೀಮಿ ಲೇಯರನ್ನು ಪ್ರತಿ ಎರಡು ತಲೆಮಾರಿಗೆ ಮೀಸಲಾತಿಯಿಂದ ಹೊರಗಿಡುವ ವ್ಯವಸ್ಥೆ ಆಗಬೇಕು, ಪಡೆದವರೇ ಮತ್ತೆ ಮತ್ತೆ ಮೀಸಲಾತಿಯನ್ನು ಪಡೆಯುವ ದುಷ್ಟಪದ್ಧತಿ ನಿಲ್ಲಬೇಕು. ಅವರವರ ಮನೆ ಪಕ್ಕದ ಶಾಲೆಗಳಿಗೇ ಕಡ್ಡಾಯವಾಗಿ ಎಲ್ಲರೂ ತಮ್ಮ ಮಕ್ಕಳನ್ನು ಸೇರಿಸುವ ನೀತಿ ಜಾರಿಯಾಗಬೇಕು. ಖಾಸಗೀಕರಣ, ಸ್ವಾಯತ್ತತೆ, ಪೇಮೆಂಟ್ ಕೋಟಾ, ಕ್ಯಾಪಿಟೇಶನ್‌ಗಳೆಲ್ಲ ರದ್ದಾಗಬೇಕು. ಇವೆಲ್ಲದರ ಜಾರಿಗೆ ಬೇಕಾದ ಕಾನೂನು ರೂಪಿಸಿ ಜಾರಿಗೊಳಿಸುವ ಇಚ್ಛಾಶಕ್ತಿ ತೋರಿಸಬೇಕು.

ಅಷ್ಟೆ ಅಲ್ಲ ನಮ್ಮ ಆರ್ಥಿಕ ನೀತಿ, ಬದುಕಿನ ದೃಷ್ಟಿಕೋನಗಳನ್ನೆ ನಾವೆಲ್ಲ ಬದಲಾಯಿಸಿಕೊಳ್ಳಬೇಕಾಗಿದೆ. ಬಂಡವಾಳಶಾಹಿ ಧೋರಣೆಯನ್ನು ಕೈಬಿಡಬೇಕಾಗಿದೆ. ಆಗ ಶಿಕ್ಷಣವು ಹಣದ ಮುಷ್ಟಿಯಿಂದ ಬಿಡುಗಡೆಗೊಂಡು ಸಾಮಾಜಿಕ ನ್ಯಾಯದ, ಸಮಾನತೆಯ ಸಾಧನವಾಗಿ ಬಳಕೆಯಾಗಬಹುದು.

●

"ಆದರೆ ಟ್ರಾಟ್‌ಸ್ಕಿ ತಿಳಿದಂತೆ ಸಿಮೋನ್‌ವೇಲ್ ಕೇವಲ ಕನಸುಗಾರಳಲ್ಲ. ಸತತವಾಗಿ ದುಡಿಯುತ್ತಾ ಕಾರ್ಮಿಕರ ಜತೆ ಊಟ ಮಾಡುತ್ತಾ ಅವರ ಜೊತೆ ಬದುಕುತ್ತಾ ತನ್ನ ಕ್ಲಿಷ್ಟವಾದ ತಾತ್ವಿಕ ಗ್ರಂಥಗಳನ್ನು ನಮಗೆ ಬಿಟ್ಟುಹೋದವಳು"

– ಯು.ಆರ್. ಅನಂತಮೂರ್ತಿ

ಚಿಕ್ಕ ತಿಮ್ಮನ ಇವಾಹ ಎಂಬ ಪುರಾಣೇವು ಪ್ರಸಂಗವು

– ಕೆ.ಎಸ್. ಮಧುಸೂದನ್

ತಮ್ಮಾಪುರಕ್ಕೆ ಹೋಗುವ ಓಣಿಯಲ್ಲಿರುವ ಗುಮ್ಮಳಾಪುರದ ಕುಂಚಿಟಿಗರ ಕುಲ ದೈವವಾದ ಮಾಂಕಾಳಿ ಮದ್ದೂರಮ್ಮನಿಗೆ ಭಯಬಕುತಿಗಳಿಂದ ಸಿರಸಾ ಕೈ ಮೊಕ್ಕಿ ನಮಸ್ಕರಿಸಿ ಈ ಇವಾಹ ಪರಸಂಗವನ್ನು ಹೇಳುವೆನು. ನಮ್ಮೂರಿನಲ್ಲಿದ್ದ ಕುಂಚಿಟಿಗರ ತಲೆಶಿರೋಮಣಿ ಚಿಕ್ಕತಿಮ್ಮನು ನಮ್ಮ ಹೊಲಗಳನ್ನು ಮಾಡಿಕೊಂಡಿದ್ದ ರೈತರಲ್ಲಿ ಒಬ್ಬನು. ಅವನಿಗೆ ಇಬ್ಬರು ತಮ್ಮಂದಿರಿದ್ದರು. ಮೊದಲನೆಯವನು ಪುಟ್ಟತಿಮ್ಮ. ಎರಡನೆಯವನು ಸಣ್ಣತಿಮ್ಮ. ಪುಟ್ಟತಿಮ್ಮನಿಗೆ ನಡುಕಲ ಎಂದೂ ಸಣ್ಣತಿಮ್ಮನಿಗೆ ಸಣಕಲ ಎಂದೂ ನಮ್ಮೂರಿನ ಜನ ಅವರನ್ನು ಕರೆಯುತ್ತಿದ್ದುದು ವಾಡಿಕೆ. ನಡುಕಲನು ವಾರಕ್ಕೆ ಮೂರು ಸಲ–ಸೋಮವಾರ, ಗುರುವಾರ ಮತ್ತು ಶನಿವಾರ ರಾತ್ರಿ ಎಂಟೂವರೆ ಗಂಟೆಗೆ ತಪ್ಪದೆ ನಮ್ಮ ಮನೆಗೆ ಹಾಜರಾಗುತ್ತಿದ್ದನು. ನಮ್ಮ ತಾಯಿ ಮತ್ತು ತಂದೆಯವರು ಆ ಮೂರೂ ದಿನಗಳಂದು ರಾತ್ರಿ ಫಲಹಾರ ಮಾಡುವರು. ಫಲಹಾರ ಎಂಬುದು ಫಲಾಹಾರ ಶಬ್ದದ ಸವೆದ ರೂಪ. ಫಲಹಾರವೆಂದರೆ ಹೆಸರು ಸೂಚಿಸುವಂತೆ ಹಣ್ಣುಗಳ ಸ್ವೀಕಾರ ಅಲ್ಲ. ಮುಸುರೆಯಲ್ಲದ ತಿನ್ನುವ ಪದಾರ್ಥ. ಅಕ್ಕಿ, ಬೇಳೆಯಲ್ಲಿ ಮಾಡಿದ್ದು ಮುಸುರೆ. ಅಕ್ಕಿಯ ಹಿಟ್ಟಿನಲ್ಲಿಯೊ, ಅಕ್ಕಿಯ ತರಿಯಲ್ಲಿಯೋ ಅಣಿಗೊಳಿಸಿದ ತಿನಿಸು ಮುಸುರೆಯಲ್ಲ. ಉದಾಹರಣೆಗೆ ಅನ್ನ, ಹುಳಿ, ಕೂಟು, ಸಾರು–ಇವುಗಳು ಮುಸುರೆ. ಪಲ್ಯ, ಚಟ್ನಿ, ಗೊಜ್ಜು–ಇವುಗಳು ಮುಸುರೆಯಲ್ಲ. ದೋಸೆ, ರೊಟ್ಟಿ, ಉಪ್ಪಿಟ್ಟು, ಉಸುಳಿ–ಇವುಗಳು ಮುಸುರೆಯಲ್ಲ. ಇವು ಫಲಹಾರ ಯೋಗ್ಯ ಪದಾರ್ಥಗಳು. ಹೀಗೆ ಅ ಮೂರು ದಿನಗಳು ರಾತ್ರಿ ನಮ್ಮ ಮನೆಯಲ್ಲಿ ಮುಸುರೆಯಲ್ಲದೆ ಮೇಲ್ಕಂಡ ಪದಾರ್ಥಗಳು ತಯಾರಾಗಿರುತ್ತಿದ್ದವು. ಏನೂ ಇಲ್ಲದಿದ್ದರೆ ಹುರಿದ ರಾಗಿಯ ಹಿಟ್ಟಿಗೆ ಬೆಲ್ಲ, ತುಪ್ಪ, ಕಾಸಿದ ಹಾಲು ಇವುಗಳನ್ನು ಕಲಸಿ ತಯಾರಿಸಿದ ಅರಳಿಟ್ಟು–ಇದಾದರೂ ಇರುತ್ತಿತ್ತು. ಈ ಫಲಹಾರದ ಐಟಂಗಳು ಬಹಳ ರುಚಿಯಾಗಿರತ್ತಿದ್ದುವೆಂಬುದು ನಮ್ಮ ಅನುಭವದ ಸಂಗತಿಯಾಗಿತ್ತು. ಹುಡುಗರಾದ ನಮಗೆ ಡಬಲ್ ಅಡ್ವೇಂಟೇಜು ಇರುತ್ತಿತ್ತು. ನಾವು ಊಟವನ್ನೂ ಹೊಡೆದು ಫಲಾಹಾರವನ್ನೂ ಭುಂಜಿಸುತ್ತಿದ್ದೆವು. ಈ ಫಲಹಾರದ ಆಮಿಷಕ್ಕಾಗಿಯೇ ನಡುಕಲನು ಆ ದಿನಗಳು ರಾತ್ರಿ ನಮ್ಮ ಮನೆಗೆ ಬರುತ್ತಿದ್ದುದು. ನಡುಕಲನು ನಮ್ಮ ಮನೆಗೆ ಆ ರಾತ್ರಿಗಳಂದು ಬರುವಾಗ ಕೈಯಲ್ಲಿ ಹತ್ತು ಹಸಿ ಮೆಣಸಿನ ಕಾಯಿಯನ್ನೋ ಎರಡು ಎಸಳು ಕೊತ್ತಂಬರಿ ಸೊಪ್ಪನ್ನೋ ನಾಲ್ಕು ವೀಳೆಯದೆಲೆಯನ್ನೋ ಏನೂ ಇಲ್ಲದಿದ್ದರೆ ಒಂದೆರಡು ಕರಿಬೇವಿನ ಸೊಪ್ಪಿನ ಎಸಳನ್ನೋ ಹಿಡಿದು ತಂದು 'ಅಮ್ಮಣ್ಣಿ, ಒಂದು ಮಕ್ಕರಿ ತತ್ತಾರಿ' ಎನ್ನುವನು. ತಾಯಿಯವರು ಒಂದು ಮಕ್ಕರಿ ತಂದಿರಿಸುವರು. ಆಗ ಅವನು ತುಂಬಾ ಭಾರ ಇಳಿಸುವಂತೆ ಟವೆಲನ್ನು ಒದರುತ್ತಿದ್ದನ್ನು. ಆಗ ಮಕ್ಕರಿಗೆ ಮೂರೋ ನಾಲ್ಕೋ ಮೆಣಸಿನಕಾಯಿ ಬೀಳುವುದು.

ಕೆ.ಎಸ್. ಮಧುಸೂದನ, 155ವೈ, 3ನೇ ಮೈನ್, 7ನೇ ಬ್ಲಾಕ್, 4ನೇ ಫೇಸ್, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು 560 085.

'ಮಕ್ಕರಿ ಒಳಗಿಡ್ರಿ ಅಮ್ಮಣ್ಣಿ, ಯಾರಾದ್ರೂ ನೋಡ್ಯಾರು, ಆವ್ಯಾಕ್ಕ ಅವರ್ರೂ ಕೊಡಬೇಕಾಯ್ತದೆ' ಎನ್ನುತ್ತಾ ಅದೇ ಟವೆಲಿನಿಂದ ನೆಲ ಜಾಡಿಸುತ್ತಾ ಕೂಡುತ್ತಿದ್ದನು. ಕೊಂಚ ಹೊತ್ತು ಅದೂ ಇದೂ ಮಾತನಾಡುವನು. ನಂತರ ತಾಯಿಯವರು ಅಡುಗೆ ಮನೆಯಲ್ಲಿ ಒಗ್ಗರಣೆ ಹಾಕಿ ಕಾವಲಿ ಮೇಲೆ ದೋಸೆ ಹುಯ್ಯುವರು. ಅದರ ಚುಂಯ್ ಶಬ್ದಕ್ಕೆ ನಡುಕಲನ ಕಿವಿ ನೆಟ್ಟಗಾಗಿ, ಅಮ್ಮಣ್ಣಿಯವರು ದೋಶೆ ಶುಡೋಂಗದೆ, ಅಮ್ಮಣ್ಣಿ ಕೈ ದೋಶೆ ತಿಂದು ಶಾನೆ ದಿನ ಆಯ್ತಿ' ಎನ್ನುವನು. ಎರಡು ದಿನಗಳ ಹಿಂದೆಯಷ್ಟೆ ಮೂರು ಮೆಂತ್ಯದ' ದೋಶೆ,' ಪುದೀನಾ ಚಟ್ನಿ ಹಾಗೂ ನಾಲ್ಕು ಮಿಳ್ಳೆ ತುಪ್ಪ-ಇವುಗಳನ್ನು ಹಾಕಿಕೊಂಡು ದಂಚಿದ್ದನ್ನು ಅತ್ಯಂತ ಚಾಕಚಕ್ಯತೆಯಿಂದ ಮರೆತುಬಿಟ್ಟಿರುತ್ತಿದ್ದನು. ಅವನು ಹೀಗೆಂದ ಕೂಡಲೇ ಮುಗುಳ್ನಗುತ್ತಿದ್ದ ತಂದೆಯವರ ಆಜ್ಞೆಯ ಮೇರೆಗೆ ಕೂಡಲೇ ಒಂದು ಎಲೆಯಲ್ಲಿ ಒಂದು ಜೊತೆ 'ದೋಶೆ' ನಡುಕಲನ ಮುಂದೆ ಪ್ರತ್ಯಕ್ಷವಾಗುವುದು. ಅದರ ಮೇಲೆ ತೆಂಗಿನಕಾಯಿ ಚಟ್ನಿ ಹಾಗೂ ನಾಲ್ಕು ಮಿಳ್ಳೆ ತುಪ್ಪ. ನಡುಕಲನು ಒಂದು ದೋಶೆಯನ್ನು ಅಡ್ಡಡ್ಡ ಉದ್ದುದ್ದ ಮಡಿಚಿ ಸೀಳಿ ಕರೆಕ್ಟಾಗಿ ನಾಲ್ಕು ಹೋಳು ಮಾಡಿ ಎರಡೆರಡು ಹೋಳುಗಳನ್ನು ತೆಂಗಿನಕಾಯಿ ಚಟ್ನಿಯಲ್ಲಿ ಅದ್ದಿ ಒಂದೇ ಗುಕ್ಕಿಗೆ ಹೊಟ್ಟೆಯೊಳಕ್ಕೆ ಇಳಿಬಿಡುತ್ತಿದ್ದನು. ನಂತರ ಅವನೇ ನೀಡಿದ್ದ ವೀಳೆದೆಲೆಯಲ್ಲಿ ಎರಡನ್ನು ಈಸಿಕೊಂಡು ಎಲೆಡಕೆ ಹಾಕಿಕೊಂಡು ಮೆಲ್ಲುತ್ತಾ ಮೆಲ್ಲಗೆ ಕತ್ತಲೆಯಲ್ಲಿ ಮರೆಯಾಗುವನು. ಹೀಗೆ ಏನು ತಪ್ಪಿದರೂ ಸೋಮವಾರ, ಗುರುವಾರ ಮತ್ತು ಶನಿವಾರ ರಾತ್ರಿ ನಡುಕಲನು ನಮ್ಮ ಮನೆಗೆ ಬರುತ್ತಿದ್ದುದು ತಪ್ಪುತ್ತಿರಲಿಲ್ಲ.

ಈ ನಡುಕಲನ ಅಣ್ಣ ಚಿಕ್ಕತಿಮ್ಮನು ಮದುವೆಯಾದದ್ದು ನಮ್ಮ ಊರಿನಲ್ಲಿ ಬಲು ತಮಾಷೆಯ ವಿಷಯವಾಗಿತ್ತು. ಚಿಕ್ಕತಿಮ್ಮನು ಅಂತಹ ಚೆಲುವನೇನೂ ಅಲ್ಲ. ಅಷ್ಟೇ ಅಲ್ಲ, ಅವನದು ಬೋಳು ತಲೆ, ಕುರುಚಲು ಗಡ್ಡ. ಹತ್ತಾರು ಗುಂಡಿಗಳಿರುವ ಕಾಕಿ ಬನಿಯನ್ನೆಂದರೆ ಅವನಿಗೆ ಶಾನೆ ಕಾಯಿಷ್ಟು. ಯಾವಾಗಲೂ ಅಂತಹ ಕಾಕಿ ಬನಿಯನ್ನೊಂದನ್ನು ಧರಿಸಿರುತ್ತಿದ್ದನು. ಆ ಬನಿಯನ್ನು ಎಷ್ಟು ಉದ್ದವಾಗಿರುತ್ತಿತ್ತೆಂದರೆ ಅದು ಅನು ಚೆಡ್ಡಿ ಹಾಕಿದ್ದಾನೋ ಇಲ್ಲವೋ ಎಂಬುದು ಅವನು ಕೂತಾಗ ಮಾತ್ರ ಗೊತ್ತಾಗುತ್ತಿತ್ತು. ಪುಣ್ಯಕ್ಕೆ ಅದೇ ಬಣ್ಣದ ಚೆಡ್ಡಿ ಹಾಕಿರುತ್ತಿದ್ದನು. ತಿಂಗಳೊಂದೆರಡು ತಿಂಗಳಿಗೆ ಒಗೆತ ಅದಕ್ಕೆ ತಾನು ಕುರೂಪಿಯಾಗಿದ್ದರೂ ತಾನು ಮದುವೆಯಾಗುವ ಹುಡುಗಿ ಮಾತ್ರ ಚೆಲುವೆಯಾಗಿರಬೇಕೆನ್ನುವುದು ಅವನ ಆಸೆ. ಅಷ್ಟೇ ಅಲ್ಲ, ಪಕ್ಕದ ಹಳ್ಳಿ ಪಾಳ್ಯೇವಿನ ದೊಡ್ಡತಿಮ್ಮನ ಮಗಳು ಕೆಂಪೇರಿ ಅವನ ಮನಸಿನಲ್ಲಿದ್ದಳು. ಅವಳು ತುಂಬಾ ಚೆಲುವೆ ಎಂಬುದು ನಮ್ಮೂರ ಪುರುಷಪ್ರಪಂಚದ ಸರ್ವಾನುಮತದ ತೀರ್ಪಾಗಿತ್ತು.

ಚಿಕ್ಕತಿಮ್ಮನಿಗೆ ಒಬ್ಬ ಅಕ್ಕ ಇದ್ದಳು. ಅಕ್ಕನಿಗೆ ಮಗಳೊಬ್ಬಳಿದ್ದಳು. ಅವಳ ಹೆಸರು ಈರಿ. ಈರಿ ಚೆಲುವೆಯಲ್ಲದಿದ್ದರೂ ಕುರೂಪಿಯೇನಲ್ಲ. ಆದರೆ ಅವಳ ಎಡಗಾಲಿನ ಪಾದ ಕೊಂಚ ತಿರುಗಿಕೊಂಡಿತ್ತು. ಗ್ರಹಣದ ಪರಿಣಾಮವೋ ಎಂದೇನೋ ಅವರಮ್ಮ ಹೇಳುತ್ತಿದ್ದಳು. ಹೀಗಾಗಿ ಈರಿ ಒಂದು ಚೂರು ಕುಂಟುತ್ತಿದ್ದಳು. ತಮ್ಮನಾದ ಚಿಕ್ಕತಿಮ್ಮನಿಗೆ ಈರಿಯನ್ನು ಕೊಟ್ಟು ಮದುವೆ ಮಾಡಬೇಕೆಂದು ಅಕ್ಕ ಮುನಿಯೆಂಗಟಮ್ಮನಿಗೆ ಇಷ್ಟ. ಏಕೆಂದರೆ ಚಿಕ್ಕತಿಮ್ಮನು ಪುಟ್ಟತಿಮ್ಮನಂತೆ ತಿಂಡಿಪೋತನೂ ಹೊಟ್ಟೆಬಾಕನೂ, ಅಲೆಮಾರಿಯೂ, ಸೋಮಾರಿಯೂ ಆಗಿರಲಿಲ್ಲ. ತನ್ನ ಸ್ವಂತ ಹೊಲ ಮತ್ತು ತಾನು ಸಾಗುವಳಿಗೆ ಹಾಕಿಕೊಂಡಿದ್ದ ನಮ್ಮ ಹೊಲಗಳಲ್ಲಿ ಕಷ್ಟಪಟ್ಟು ಮೈಮುರಿದು ದುಡಿಯುತ್ತಿದ್ದನು. ಶ್ರಮಜೀವಿ. ಇಂತಹವನಿಗೆ ಈರಿಯನ್ನು ಕೊಟ್ಟರೆ ಅವಳು ಸುಖವಾಗಿರಬಹುದು ಎಂಬ ಆಸೆ ಮುನಿಯೆಂಗಟಮ್ಮನಿಗೆ. ಜತೆಗೆ ತವರಿನ ಸಂಬಂಧ

ಬೇರೆ. ಯಾರು ತಾನೇ ಕುಂಟಿಯಾದ ತನ್ನ ಮಗಳು ಈರಿಗೆ ತಾಲಿ ಕಟ್ಟುತ್ತಾರೆ? ಹೀಗಾಗಿ ಅವಳು ಆಗಾಗ ಚಿಕ್ಕತಿಮ್ಮನೊಂದಿಗೆ ಮತ್ತೆ ಮತ್ತೆ 'ಣಗ್ನ (ಲಗ್ನ) ಇಸ್ಯ' ಪ್ರಸ್ತಾಪಿಸುತ್ತಿದ್ದಳು. ಆಗ ಚಿಕ್ಕತಿಮ್ಮನಿಗೆ ಮನಸ್ಸಿಗೆ ಕಿರಿಕಿರಿಯೂ ಮುಜುಗರವೂ ಉಂಟಾಗುವುದು. ಈರಿ ಕುಂಟಿ, ಜತೆಗೆ ಪಾಳ್ಯೆವಿನ ದೊಡ್ಡತಿಮ್ಮನ ಮಗಳು ಕೆಂಪೇರಿಯಷ್ಟು ಚಲುವೆಯೇನಲ್ಲ. ಚೆಂಡುಮಲ್ಲಿಗೆ ಹೂವಿನ ದಿಂಡು ಹಾಗೂ ಕಣಗಿಲೆಯ ಕುಚ್ಚು ಕಟ್ಟಿಕೊಳ್ಳುವ ಚೆಲುವೆ ಕೆಂಪೇರಿಯ ಮುಂದೆ ಬಿಡುಜಡೆಯ ತುಸು ಉಬ್ಬಲ್ಲಿನ ಕರಿಪಿ ಈರಿಯನ್ನು ನೀವಾಳಿಸಬೇಕು. ಆದರೆ ಅಕ್ಕನ ಯಾಚನೆಯ ಮಾತುಗಳು. ಏನೇ ಆಗಲಿ ಚಿಕ್ಕತಿಮ್ಮನು ಗಟ್ಟಿ ಮನಸ್ಸು ಮಾಡಿಕೊಂಡು ಅಕ್ಕನಿಗೆ ಖಡಾಖಂಡಿತವಾಗಿ ತಾನು ಈರಿಯನ್ನು ಮದುವೆಯಾಗುವುದಿಲ್ಲವೆಂದು ಹೇಳಿಬಿಟ್ಟಿದ್ದನು. ಇಷ್ಟರಲ್ಲೇ ಪಾಳ್ಯೆವಿನ ದೊಡ್ಡತಿಮ್ಮನೊಂದಿಗೆ ಅವನ ಮಗಳು ಕೆಂಪೇರಿಯ ಜತೆ ತನ್ನ 'ಳಗ್ನ' ದ' ಇಸ್ಯ' ಪ್ರಸ್ತಾಪ ಮಾಡುವುದರಲ್ಲಿದ್ದನು.

ಚಿಕ್ಕತಿಮ್ಮನ ಅಮ್ಮ ಬೊಂಕಮ್ಮನಿಗೆ ದೇವ್ರು, ದಿಂಡ್ರು, ಸಾಸ್ತ್ರ, ಐನೋರು ಇತ್ಯಾದಿಗಳಲ್ಲಿ ಬಹಳ ನಂಬಿಕೆ, ಬಯ' ಮತ್ತು ಬಕುತಿ. ನಿಜ ಹೇಳಬೇಕೆಂದರೆ 'ಬಯ' ವೇ ಹೆಚ್ಚು. ನಮ್ಮೂರ ಸಮೀಪದ ಇನ್ನೊಂದು ಹಳ್ಳಿಯಾದ ಡಿ.ಟಿ.ಹಳ್ಳಿಯಲ್ಲಿ ಒಬ್ಬ 'ಐನೋರು' ಇದ್ದನು. ಡಿ.ಟಿ.ಹಳ್ಳಿ ಎಂದರೆ ದೊಡ್ಡ ತಿಪ್ಪನಹಳ್ಳಿ. ನಮ್ಮೂರ ಕಡೆ ಬ್ರಾಹ್ಮಣರನ್ನೂ, ಲಿಂಗಾಯತರನ್ನೂ, 'ಐನೋರು' ಎಂದು ಕರೆಯುವುದು ವಾಡಿಕೆ. ಆದರೆ ಈ 'ಐನೋರು' ಬ್ರಾಹ್ಮಣನೂ ಅಲ್ಲ, ಲಿಂಗಾಯತನೂ ಅಲ್ಲ. ಅವನು 'ಶಾಸ್ತ್ರ' ಹೇಳುತ್ತಿದ್ದುದರಿಂದ ಜನ ಅವನಿಗೆ ಸ್ವಯಂಪ್ರೇರಣೆಯಿಮದ 'ಐನೋರು' ಎಂಬ ಬಿರುದನ್ನು ನೀಡಿಬಿಟ್ಟಿದ್ದರು. ಆ 'ಐನೋರು' ಆ ಪದವಿಯನ್ನೇನೂ ನಿರಾಕರಿಸಿರಲಿಲ್ಲ. ಮೌನವಾಗಿ ಮುಗುಳ್ನಗೆಯೊಂದಿಗೆ ಸ್ವೀಕರಿಸಿಯೇ ಬಿಟ್ಟಿದ್ದನು.

ಈ 'ಅಯ್ನೋರ' ಬಳಿ ಅನೇಕರು 'ಶಾಸ್ತ್ರ' ಇಚಾರಿಸುವವರು ಹೋಗುತ್ತಿದ್ದರು. ಏನಾದರೂ ಕಳ್ಳತನವಾದರೆ, ದನಜಾನವಾರು ತಪ್ಪಿಸಿಕೊಂಡರೆ, ಮಳೆ ಬೀಳದಿದ್ದರೆ–ಜನ 'ಅಯ್ನೋರ' ಬಳಿ ಹೋಗುತ್ತಿದ್ದರು. ಮೊದಲೇ ಹೇಳಿದ ಹಾಗೆ ಚಿಕ್ಕತಿಮ್ಮನ ಅಮ್ಮ ಬೊಂಕಮ್ಮನಿಗೆ 'ಅಯ್ನೋರ' ನ್ನು ಕಂಡರೆ 'ಬಯ'. ಅವರು ಹೇಳಿದ 'ಶಾಸ್ತ್ರ'ದ ಮಾತಿಗೆ ಎದುರು ಹೋಗುತ್ತಿರಲಿಲ್ಲ. ಮನೆಯ ಯಾವುದೇ ಕೆಲಸಕ್ಕೂ 'ಅಯ್ನೋರ' 'ಶಾಸ್ತ್ರ'ದ ಮಾತೇ ವೇದ ವಾಕ್ಯ. ಹೀಗಾಗಿ ಚಿಕ್ಕತಿಮ್ಮನ 'ಇವಾಹ'ದ ಇಸಯ'ಕ್ಕೂ ಅವಳು' ಅಯ್ನೋರ'ಬಳಿ' ಶಾಸ್ತ್ರ' ಕೇಳಲು ತನಗೆ ' ಬಯ' ವಾದ್ದರಿಂದ ಚಿಕ್ಕತಿಮ್ಮನನ್ನೇ ಕಳಿಸಿದಳು. ಚಿಕ್ಕತಿಮ್ಮನು ಡಿ.ಟಿ.ಹಳ್ಳಿಗೆ ಅತ್ಯುತ್ಸಾಹದಿಂದ ಹೊರಟನು. ದಾರಿಯಲ್ಲಿ ಅನೇಕ ಅಪಶಕುನಗಳಾಗಲಿಲ್ಲ. ಆದ್ದರಿಂದ ಧೈರ್ಯಗೊಂಡ ಚಿಕ್ಕತಿಮ್ಮನು ಇನ್ನಷ್ಟು ಉತ್ಸಾಹದಿಂದ ಪಯಣ ಬೆಳೆಸಿದನು. ದಾರಿಯಲ್ಲಿ ಅವನಿಗೆ ಕೆಂಪೇರಿಯನ್ನು ಕುರಿತ ಅನೇಕ ಮಧುರ ಭಾವನೆಗಳು ಉಕ್ಕುತ್ತಿದ್ದವು. ಹಾಗೆ ಅವಳ ಮುಖವನ್ನು ನೆನಸಿಕೊಳ್ಳೋಣವೆನ್ನುವ ಹೊತ್ತಿಗೆ ದಾರಿಯಲ್ಲಿ ಯಾರೋ ಮುದುಕಿಯರ ದರ್ಶನವಾಗಿಬಿಟ್ಟು ಅವನಿಗೆ ಆಶಾಭಂಗವಾಗುತ್ತಿತ್ತು. ಒಮ್ಮೆ ಕೆಂಪೇರಿಯ ಚಿತ್ರ ಮನಸಿನಲ್ಲಿ ಪೂರ್ಣಪ್ರಮಾಣದಲ್ಲಿ ಮೂಡಿಬಿಟ್ಟಿತೆನ್ನುವ ಹೊತ್ತಿಗೆ ಇದ್ದಕ್ಕಿದ್ದಂತೆ ಅವನ ಮನಃಪಟಲದಲ್ಲಿ ತನ್ನ ಅಕ್ಕ ಮುನಿಯೆಂಗಟಮ್ಮನ ಮಗಳು ಕುಂಟಿಯಾದ ಈರಿಯ ಚಿತ್ರ ಬಂದುಬಿಟ್ಟಿತು. ಹೀಗೆ ರಸಭಂಗದ ಪುನರಾವರ್ತನೆಯಾಗುತ್ತಿರಲು ಅಂತೂ ಇಂತೂ ದಾರಿ ಕಳೆದು ಡಿ.ಟಿ.ಹಳ್ಳಿಗೆ ಬಂದು' ಐನೋರ'ನ್ನು ಕಂಡನು. ಚೀಲದಲ್ಲಿ ಬೊಂಕಮ್ಮನು ಕಳಿಸಿದ್ದ' ಎಲಡೀಕೆ, ಅಣ್ಣು, ಊವ, ಕಾಯಿ, ದಕ್ಷಿಣೆ' ಅವರೆದುರು ಮಡಗಿ ಅವರಿಗೆ ಅಡ್ಡಬಿದ್ದನು.' ಅಯ್ನೋರು' ಎಲಡೀಕೆ

ಆಕಿಕೊಂಡು ದಂ ಎಳೆಯುತ್ತಾ ಸುಖಾಸೀನನಾಗಿದ್ದನು. ಒಬ್ಬ' ಸಿಸ್ಯ'ನು ಕಾಲೊತ್ತುತ್ತಿದ್ದನು. ಅವನು' ಹಾಯ್' ಎನ್ನುತ್ತಿದ್ದನು. ಚಿಕ್ಕತಿಮ್ಮನ ಬಗ್ಗೆ ಇಚಾರಿಸಿಕೊಂಡು ಅವರ ಅಮ್ಮನ ಎನ್ಕೈವಲಿ ಮಾಡಿದನು. ಅವರೆಲ್ಲರ ಯೋಗಕ್ಷೇಮ ವಿಚಾರಿಸಿಕೊಂಡನು.

ಚಿಕ್ಕತಿಮ್ಮನ ಬೇಸಾಯ, ಬೆಳೆ, ಕಾಳು, ಕಡ್ಡಿ ಬಗ್ಗೆ ವಿಚಾರಿಸಿಕೊಂಡನು. ಕಣದ ಕಾಲದಲ್ಲಿ ಎಷ್ಟು ಧ್ಯಾನ ಕೇಳಬಹುದೆಂದು ಲೆಕ್ಕವನ್ನೂ ಹಾಕಿಕೊಂಡನು. ನಂತರ ನೇರವಾಗಿ ವಿಷಯಕ್ಕೆ ಬಂದನು.' ಏನ್ ತಿಮ್ಮಣ್ಣಾ, ಏನ್ ಇಸ್ಯಾ? ಅಣ್ಣು, ಊವಾ ಬೇರೆ ತಂದಿದ್ದೀಯಾ, ಏನ್ ಕತೆ?' ಎಂದನು. ಚಿಕ್ಕತಿಮ್ಮನು ನಾಚಿಕೆಯಿಂದ' ಅದೇ ಬುದ್ಧಿ, ನನ್ನ' ಳಗ್ಣ'ದ ಇಸ್ಯಾ ಬುದ್ದಿ,' ಎಂದು ನಾಚಿಕೆಯಿಂದ ತಲೆ ಬಗ್ಗಿಸಿದನು. ಅದಕ್ಕೆ' ಅಯ್ನೋರು' ಎಲಾ ಬಡ್ಡೀಮಗನೇ, ನಿನ್ನ ಳಗ್ನಕ್ಕ ನೀನೇ' ಸಾಸ್ತ್ರ'ಕೇಳಾಕ್ ಬರೋದಾ? ಊಂ, ಆಗಲಿ, ಸಂತೋಸ, ನೀನ್ ವುಟ್ಟಿದ್ ಯಾವತ್ತೋ ?' ಎಂದನು. ಸಿಗ್ಗಾದ ಚಿಕ್ಕತಿಮ್ಮನು' ಬ್ರೇಸ್ತಾರ ಬುದ್ದಿ' ಎಂದನು. ಮತ್ತೆ ಅಯ್ನೋರು' ನಿನ್ನ ಅಮ್ಮ ವುಟ್ಟಿದ್ ವಾರ ಯಾವತ್ತೋ' ಎಂದನು. ತನ್ನ ಮದುವೆಯ ವಿಷಯಕ್ಕೂ ತನ್ನ ಹುಟ್ಟಿದ ವಾರದ ದಿವಸಕ್ಕೂ ಏನು' ಸಂಬಂಜ' ಎಂದು ಕೇಳಬೇಕೆಂದೂ ಆ ಮಂದಬುದ್ಧಿಯವನಾದ ಚಿಕ್ಕತಿಮ್ಮನಿಗೆ ಹೊಳೆಯಲಿಲ್ಲ. ಆದರೂ ಅವನ ಮನಸ್ಸಿನಲ್ಲಿ ತಾನು ಮದುವೆಯಾಗಲಿರುವ ಹುಡುಗಿ ಯಾರೆಂದು ಕೇಳುವ ಬದಲು ಇದೇನೇನೋ ಪ್ರಶ್ನೆಗಳನ್ನು ಅಯ್ನೋರು ಕೇಳುತ್ತಿದ್ದಾನಲ್ಲ ಎನ್ನಿಸದಿರಲಿಲ್ಲ. ಅವನ ಅಮ್ಮ ಹುಟ್ಟಿದ ವಾರ' ಆಯ್ತಾವ್ರ ಬುದ್ದಿ' ಎಂದನು. ಅಯ್ನೋರು ಕಣ್ಣುಗಳನ್ನು ಮುಚ್ಚಿ ಕೈಬೆರಳುಗಳನ್ನು ಎಣಿಕೆ ಮಾಡಿ ಏನನ್ನೋ ಗೊಣಗುತ್ತಾ ಇದ್ದಕ್ಕಿದ್ದಂತೆ ಮಂದಸ್ಮಿತನಾಗಿ ಕಣ್ಣು ಬಿಟ್ಟು ಚಿಕ್ಕತಿಮ್ಮನನ್ನು ಕುರಿತು' ಎಲಾ, ಕಳ್ಳ ಬಡ್ಡೀ ಮಗನೆ, ಪರ್ವಿಲ್ಲೋ ನೀನು, ಎಳ್ಡು ಳಗ್ಣದ ಯೋಗ ಐತಲ್ಲೋ ಣಿಂಗೆ' ಎಂದು ತಾಂಬೂಲ ಮೆಲ್ಲಿದ್ದರಿಂದ ಹೀಗೆ ಹೇಳಿದನು. ಅವಾಕ್ಕಾದ ಚಿಕ್ಕತಿಮ್ಮನು ಅರ್ಥವಾಗದವನಂತೆ ಆತುರದಿಂದ' ಅಂಗಂದ್ರೆ' ಎನ್ನಲು ಅಯ್ನೋರು ಮುಂದುವರೆಯುತ್ತಾ ಹೇಳಿದನು.' ನಿಂಗೆಲ್ಲೋ ಅರ್ಥ ಆಯ್ತದೆ. ನಿನಗೆ ಒಂದು ಇವಾಹ ಆಯ್ತದೆ, ಆದ ಆರೇ ತಿಂಗಳ್ಕ ನಿನ್ನೆಂಡ್ರು ತೀರ್ಕೊಂತಾಳೆ, ಆಮ್ಯಾಕ್ಕೆ ಇನ್ನೊಂದು ಳಗ್ಣದ ಯೋಗ ಐತೆ – ಎಳ್ಡನೇ ಉಡುಗಿ ಒಳ್ಳೇ ಉಡ್ಗಿ ಸಿಕ್ತಾಳೆ. ಮೂರು ಜನ ಮಕ್ಕಳ ಯೋಗ ಐತೆ. ಓಗ್, ಗುರು ನನ್ ಕೈನಾಗ್ ಇಸ್ಟೇ ಏಳ್ಲೋದು. ಗುರೂಕ ಮೊಕ್ಕಿ ಮನೀಕ್ ಓಗ್' ಎಂದನು. ಅಯ್ನೋರು ಹೇಳಿದಂತೆಯೇ ಚಿಕ್ಕತಿಮ್ಮನು ಅಲ್ಲೇ ಒಂದು ಮಣೆಯ ಮೇಲಿದ್ದ ದಿಗಂಬರ ವ್ಯಕ್ತಿಯೊಬ್ಬನ ಚಿತ್ರವಿದ್ದ ಪಟಕ್ಕೆ ಮೊಕ್ಕಿ ಊರಿನ ಕಡೆ ಪಯಣ ಬೆಳೆಸಿದನು. ಅಯ್ನೋರು ಚಿಕ್ಕತಿಮ್ಮನಿಂದ ದಕ್ಷಿಣೆಯ ಜೊತೆಗೆ ನಾಲ್ಕು ಗಣೇಶ ಬೀಡಿಯನ್ನೂ ಒಂದು ಬೆಂಕಿಪೊಟ್ಟಣವನ್ನೂ ಈಸಿಕೊಳ್ಳುವುದನ್ನು ಮರೆಯಲಿಲ್ಲ.

ಹಿಂದಿರುಗುತ್ತಿದ್ದ ಚಿಕ್ಕತಿಮ್ಮನಿಗೆ ದಾರಿಯಲ್ಲಿ ಯೋಚನೆಯೋ ಯೋಚನೆ. "ಕೆಂಪೇರಿಯನ್ನು ಮದುವೆಯಾದರೆ ಆರು ತಿಂಗಳೊಳಗೆ ಸತ್ತುಹೋಗುತ್ತಾಳೆ. ಆ ಮೇಲೆ ಯಾರು ಗಂಟು ಬೀಳುತ್ತಾರೋ ಕಂಡವರ್ಯಾರು? ತನಗೋ ಕೆಂಪೀರಿ ಎಂದರೆ ಇಷ್ಟ. ಹಾಗಾದರೆ ಕೆಂಪಿಯನ್ನು ಮೊದಲು ಮದುವೆಯಾಗಬಾರದು. ಬೇರೆ ಯಾರನ್ನಾದರೂ ಮೊದಲು ಮದುವೆಯಾಗಿ ಆರು ತಿಂಗಳೊಳಗೆ ಅವಳು ಸತ್ತ ನಂತರ ಕೆಂಪೀರಿಯನ್ನು ಮದುವೆಯಾಗಿ ಸುಖವಾಗಿರುವುದು. ಹೌದು ಹೀಗೆ ಮಾಡಬೇಕು. ಆದರೆ ಮೊದಲು ಯಾರನ್ನು ಮದುವೆಯಾಗುವುದು? ಕೊಂಚ ಹೊತ್ತು ತಲೆಯನ್ನು ಕೆರೆದುಕೊಂಡು ಒಂದು ಗಣೇಶ ಬೀಡಿ ಅಂಟಿಸಿ ಹೊಗೆ ಎಳೆದ ನಂತರ ಅವನ ವದನಾರವಿಂದದಲ್ಲಿ ನಗೆಯ ಗೆರೆಗಳು ಕಾಣಿಸಿಕೊಂಡವು.

"ಹೌದು, ಅಕ್ಕ ಮುನಿಯೆಂಗಟಿ ಹೇಗಿದ್ದರೂ ಅವಳ ಮಗಳು ಈರಿಯನ್ನು ಮದುವೆಯಾಗೆಂದು ಪೀಡಿಸುತ್ತಿದ್ದಾಳೆ, ಆ ಕುಂಟಿ ಈರಿಯನ್ನು ಯಾರು ತಾನೇ ಮದುವೆಯಾಗುತ್ತಾರೆ? ತಾನು ಮೊದಲು ಅವಳನ್ನು ಮದುವೆಯಾಗಿಬಿಟ್ಟು ಆರು ತಿಂಗಳು ಹೇಗೋ ಕಾಲ ತಳ್ಳಿಬಿಡೋಣ. ಆರು ತಿಂಗಳೊಳಗೆ ಅವಳು ಅಯ್ನೋರು ಏಳ್ದಂಗೆ ತೀರಿಕೊಂಡುಬಿಡುತ್ತಾಳೆ. ಆ ಮೇಲೆ ನಿರಾಳವಾಗಿ ಪಾಳ್ಯೇವಿನ ದೊಡ್ಡತಿಮ್ಮನ ಕಾಲು ಹಿಡಿದು ಕೇಳಿಕೊಂಡು ಕೆಂಪೀರಿಯನ್ನು ಳಗ್ಣವಾಗಿಬಿಡುವುದು. ಆಹಾ? ಇದೇ ಸರಿಯಾದ ದಾರಿ!!" ಎಂದು ನಿಶ್ಚಯಿಸಿಕೊಂಡು ಊರಿಗೆ ಹಿಂದಿರುಗಿದ ಚಿಕ್ಕತಿಮ್ಮನು ಸೀದಾ ತನ್ನ ಮನೆಗೆ ಹೋಗದೆ ಮುನಿಯಂಗಟಕ್ಕನ ಮನೆಯ ಕಡೆ ಹೆಜ್ಜೆ ಹಾಕಿದನು.

ಮೊದಲು ತನ್ನ ಮನೆಗೆ ಬರುತ್ತಿದ್ದ ಆದರೆ ತನ್ನ ಮಗಳು ಈರಿಯನ್ನು ಇವಾಹವಾಗು ಎಂದು ತಾನು ಹೇಳಲಾರಂಭಿಸಿದ ಮೇಲೆ ತನ್ನ ಮನೆಗೆ ಬರುವುದನ್ನು ನಿಲ್ಲಿಸಿದ್ದ ತಮ್ಮನಾದ ಚಿಕ್ಕತಿಮ್ಮನು ತನ್ನ ಮನೆಗೆ ತಾನು ಗೋಗರೆಯದೆ ಕರೆಯದಿದ್ದರೂ ಈಗ ಹಠಾತ್ತನೆ ಬಂದದ್ದನ್ನು ಕಂಡ ಮುನಿಯೆಂಗಟಮ್ಮನು ಚಕಿತಳಾದಳು. ಅವನನ್ನು ಅದರದಿಂದ ಬರಮಾಡಿಕೊಂಡಳು. ಸಂತಸದ ಮುಖಭಾವನೆಯುಳ್ಳ ಚಿಕ್ಕತಿಮ್ಮನು ಅಕ್ಕ ಮುನಿಯೆಂಕಟಮ್ಮ ಮತ್ತು ಭಾವ ಒಡಮಲಯ್ಯ–ಇವರಿಬ್ಬರಿಗೂ ಮೊದಲು ದೀರ್ಘದಂಡ ನಮಸ್ಕಾರ ಹಾಕಿಬಿಟ್ಟನು. ಅವರಿಬ್ಬರೂ 'ಭಾವ' ಪರವಶರಾದರು. ಅವರು ಏನೂ ಬೈಯಲಿಲ್ಲವೆಂದು ಅವನಿಗೂ ಸಂತಸವಾಗಿ 'ಭಾವು' ಕತೆಯಿಂದ ಕಪೋಲಗಳು ನೆನೆದವು. ಅಕ್ಕನು ಉಕ್ಕಿದ ಪಿರೀತಿಯಿಂದ' ಏನು ಚಿಕ್ಕು ಇಂಗಾಗಿಬಿಟ್ಟಿದ್ದೀಯಾ, ತುಂಬಾ ಇಳಿದುಹೋಗಿದ್ದಿಯಲ್ಲೋ' ಎಂದು ಕಾಪಿ ಮುಂತಾದ ಪದಾರ್ತಗಳಿಂದ ತಮ್ಮನನ್ನು ಉಪಚರಿಸಿದಳು.' ಈರೀನ ಳಗ್ಣ ಅಗ್ದಿದ್ರೂ ಪರ್ವಿಲ್ಲ ಕನ, ಆದರೆ ಮನೆ ಕಡೆ ಯಾಕೋ ತಿಮ್ಮು ಬರಲ್ಲ, ಅದ್ ಬೇರೆ, ಇಸ್ವಾಸ ಬೇರೆ ಅಲ್ಲೇನೋ ಕಣ್ಲಾ, ನೀನು ನಿಂಗಿಸ್ಟ ಬಂದೋರ್ನ ಮದ್ವೆ ಆಗು, ಅದ್ರೆ ಮಾತ್ರ ಈ ಕಡೆ ಬರೋದು ಬಿಡಬೇಡ ತಮ್ಮಾ' ಎಂದು ಅವನ ಬೆನ್ನನ್ನು ಸವರಿದಳು. ಭಾವ ಒಡಮಲಯ್ಯನು," ಅಲ್ಲಾ ಕಣ್ಲಾ ತಿಮ್ಮಾ, ನಿನಕ ಬುದ್ದೀ ಏನಾರ ಐತೇನ್ಲಾ, ನಾವೇನನ್ಕೊಂಬಿಟ್ವಿ, ಏಳೋ ನೀನೇ, ಅಲ್ಲಪ್ಪ, ನಿಮ್ಮನೇನಿಂಕ ಅಸ ತಂದಿದ್ವಿ, ಕರ ಕಳ್ಸೋಣ ಅನ್ಕೊಂಡ್ವಪ್ಪ, ತಪ್ಪೇನು ಅಂತೇಳ್ಲಾ ಅದ್ರಾಗ, ಏಳ್ ಮತ್ತೆ ಅಂತೀನಪ್ಪ, ತಿಳ್ದೋರೇಳ್ಲಿ, ಆಯ್ತಪ್ಪ, ಕರ ತೊಗೊಂಡೋಗೋಕ್ ನಿನಗಿಸ್ಟ್ವಲ್ಲನ್ನು, ಬೇರೆ ಕರಾನ ಇಡ್ಕೊಂಡ್ಬರ್ತ್ಯ ಅಸ್ಟೇ ತಾನೇ, ಅದರಾಗೇನ್ಲಾ ತಪ್ಪು, ನಮ್ಕರಾನ ಅಗ್ಗ ಇಡ್ಕೊಂಡಿ ಇನ್ನೊಂದ್ಮನೆಕ ಬಿಟ್ಬಂದ್ರಾಯ್ತಪ್ಪ. ಏನ್ ಗಂಟೋಯ್ತು ಅಂತೀನಿ, ಏಳು ನೀನೇ, ಸುಮ್ಕೆ ನೆಗ್‌ನೆಗ್ತಾ ನಿನ್ನಕ್ಕನ್ಮನೆ ತಾನಿದ, ಓಡಾಡ್ಕೊಂಡಿರೋದ್ಬಿಟ್ಬಿಟ್ಟಿ, ಬುದ್ಯೈತಾ ನಿನಕ, ಇನ್ಮೇಕ ಸುಮ್ನೆ ಮನೆ ತಾವ್ ಬಂದೋಯ್ತಾ ಇರು ಕನ್ಲಾ ತಿಮ್ಮ, ಸಂಬಂಜಾ ಕಣ್ಲಾ ಸಂಬಂಜ ಮುಕ್ಯ ಒಟ್ನಾಗ ತಿಳ್ಕಾ, ಏನೋ ಏಳ್ ತಿರ್‍ತ್ಯಾ,' ಮದಪ್ಪೋರು ಮಾದೇವಪ್ನೋರು ಅವರ ಬುಕ್ಕು ಕುಸುಮಬಾಲೇಗ ಸಂಬಂಜ ಕಣಾ ಮುಕ್ಯ ಅಂತೇಳವ್ರೆ' ಅಂತೇಳ್ತಿದ್ದೆ, ಇಸ್ಟೇನೇನ್ಲಾ ನೀನು ಆ ಬುಕ್ನ ಅರ್ತ ಮಾಡ್ಕೊಂಡಿರೋದು, ಓಗ್ಲಿ ಎಲ್ಲಾ ಮರ್ರು ಕೈಕಾಲ್ತೊಳಕೊಂಡು ಯಿಟ್ಟುಣ್ಣೋಗು, ಯೆಂಗ್ಬಿ ತಣಿಗೇಗ ಯಿಟ್ಟು ಮಡಗವ್ಳೆ, ಓಗೋಗು" ಎಂದು 'ಭಾವು'ಕತೆಯಿಂದ ಒಂದೇ ಸಮನೆ ನುಡಿದನು.

ಅಕ್ಕ ಭಾವಂದಿರಿಬ್ಬರಿಗೂ ಚಿಕ್ಕತಿಮ್ಮ ಒಂದು ಗುಂಜೆಳ್ಳು ಹಾಕಿ ಕೆನ್ನೆಗಳಿಗೆ ಟಪಟಪ ಹೊಡೆದುಕೊಂಡು ನಾಲ್ಕು ಬಸ್ಕಿ ಹೊಡೆದು ಒಂದಷ್ಟು ಕಣ್ಣೀರನ್ನೂ ಸುರಿಸಿಬಿಟ್ಟು 'ಅಕ್ಕ' ಏನೋ ಉಡುಗುಬುದ್ದಿ, ಗೊತ್ತಿಲ್ದೆ ತಪ್ಪು ಮಾಡಿಬಿಟ್ಟೆ, ಒಟ್ಟೆಕಾಕ್ಕೋಳ್ರಿ, ಈಗ ನಾನು ಅದಕ್ಕಲ್ಲ

ಬಂದದ್ದು, ನನಕೀಗ ಬುದ್ಧಿ ಬಂದೈತೆ, ಏನೋ ಗೊತ್ತಿಲ್ದೆ ಈರೀನ ಳಗ್ನ ಆಗೊಲ್ಲ ಅಂದಿದ್ದೆ, ಅವಳ್ಕ ಬೇರೇ ಯಾವೋನ್ನಾದ್ರೂ ನೋಡ್ಬಿಟ್ಟಿದ್ದೀರ, ಯಾಕಂದ್ರೆ ಈಗ ನನಕ ಅಮ್ಮಾನು ಏಳಿದ್ಲು ಅವಳೇ ಳಗ್ನ ಆಗ್ಬೇಕಂತ ಮನಸಾಗ ಬಂದೈತೆ, ಬೇರೆ ನೋಡಿದ್ರೆ ಬಿಟ್ಬಿಡ್ರಿ ಎಂದನು. ಒಡಮಲಯ್ಯನು ನೋಡು ತಿಮ್ಮಣ್ಣ, ನಿಂತಾವ ಏನು ಸುಳ್ಳೇಳಾದು? ನೆನ್ನೆ ತಾನೇ ಮುಮಚೂಡಪ್ಪನ ಮಗ ಬಡಕಲನ್ನ ಮನಸಾಗಿಟ್ಕೊಂಡು ಊವ, ಅಣ್ಣು, ಕಾಯಿ ತಕ್ಕೊಂಡು ಡಿ.ಟಿ.ಅಳ್ಳಿ' ಅಯ್ನೋರ ತಾವ ಓಗಿ ಈ ಇಸ್ಯ ಏಳ್ದಿವಿ. ಅಯ್ನೋರು ಕಣ್ ಮುಚ್ಕೊಂರು ಊಂ ಇಲ್ಲ, ಉಹುಂ ಇಲ್ಲ. ಯಾಕೋ ಯೆದರಿಕೊಂಡು ವಾಪಸ್ ಬಂದ್ಬಿಟ್ವಿ. ಇದೇ ಯೋಚ್ನೆ ಮಾಡೋವಾಗ್ಲೇ ನೀನೂ ಬಂದಿದ್ದೀಯಾ. ಎಂಗೂ ಗುಡಿ ಗಂಟೆ ಬಾರಿಸ್ತು, ಕೇಳಿಸ್ತಾ. ನಾವೇನೋ ಕಣ್ ಮುಚ್ಕೊಂಡು ಒಪ್ಕೊಂತೀವಿ. ನಿನಕಿಸ್ಟ್ವಿದ್ದರೆ ಮುಂದಿನ್ ತಿಂಗಳು ಶ್ರಾವಣದಾಗ ಓಲಗಾ ಊದಿಸ್ಬಿಡೋಣ ಏಳು' ಎಂದನು. ಮುನಿಯಂಗಟಮ್ಮನೂ ಆನಂದಪರವಶಳಾದಳು. ಗುಮ್ಮಳಾಪುರವನ್ನು ಸದಾ ಕಾಯುವ ಗುಂಡು ಗೌರಮ್ಮನಿಗೆ ಹರಕೆ ಹೊತ್ತಳು. ಅಂತೂ ಇಂತೂ ಹಾಗೋ ಹೀಗೋ ಹೇಗೋ ಮುಂದಿನ ವಾರವೇ " ಶ್ರೀಮತಿ ಬೊಂಕಮ್ಮ ಮತ್ತು ಶ್ರೀ ಜಜ್ಜೂರಿಗಣ್ಣನವರ ಪಿರತಮ ಪುತ್ರರತುನೇವು ಆದಂಥಾ ಚಿ.ರಾ. ಚಿಕ್ಕತಿಮ್ಮಪ್ಪ ಆಗೂ ಶ್ರೀಮತಿ ಮುನಿಯೆಂಗಟಮ್ಮ ಮತ್ತು ಶ್ರೀ ಒಡಮಲಯ್ಯನವರ ಏಕೈಕ ಪುತ್ರಿ ಚಿ.ಸೌ. ಈರಮ್ಮ"– ಇವರಿಬ್ಬರಿಗೂ ನಿಸ್ತಾಂಬೂಲ ಊರ ಗೌಡ ಮೂಡಲಗಿರಿಯಪ್ಪನವರ ಸಮ್ಮುಖದಲ್ಲಿ ನಿಸ್ಚಯವಾಯಿತು. 'ಳಗ್ನ'ದ ದಿನವೂ ಗೊತ್ತಾಯಿತು. ಎಲ್ಲರಿಗೆ ಲಗ್ನಪತ್ರಿಕೆ ಹಂಚಿದರು. ಕೆಂಪೀರಿಯ ಅಪ್ಪ ಪಾಳ್ಯೇವಿನ ದೊಡ್ಡತಿಮ್ಮನ ಮನೆಗೆ ಪತ್ರಿಕೆ ಹೋಗಲಿಲ್ಲ ಎಂಬುದನ್ನು ಹೇಳಬೇಕಿಲ್ಲವಷ್ಟೇ.

'ಳಗ್ನ'ಕ್ಕೆ ಗೋಯಿಂದು–ಎಂಗ್ಟೇಸು ತಂಡ ಒಡಮಲಯ್ಯ ಆರ್ಥಿಕ ಮುಗ್ಗಟ್ಟಿನ ಆಸಾಮಿಯಾದ್ದರಿಂದ ಫ್ರೀ ಸೇವೆಗೆ ಮುಂದಾಗಿ ಮಾದರಿಯಾದರು. ಹೀಗೆಯೇ ಊರಿನ ಇತರ ಮುಕ್ಯ ವ್ಯಕ್ತಿಗಳಾದಂತ ಚಳ್ಳಪಿಳ್ಳಿಗ, ಬಕಡಿಗ, ಕಾಕತಿಮ್ಮಯ್ಯ, ಪೆರೇಸಂದ್ರದ ಯೆಂಕಟ್ಸಾಮಿ, ಬುಡಿಗೆ ರಂಗಪ್ಪ, ಮೇಲ ಉಪ್ಪ ಮುಂತಾದವರು ಸುಣ್ಣದ ಸೇವೆ, ಮೈಕ್ ಸೆಟ್ ಸೇವೆ, ನೀರಿನ ಸೇವೆ, ಸೀರಿಯಲ್ ಲೈಟ್ ಸೇವೆ, ಪಾತ್ರೆ ಸೇವೆ ಮುಂತಾದ ಸೇವೆಗಳಿಗೆ ಒಪ್ಪಿಕೊಂಡರು. ನನ್ನ ತಂದೆಯವರೂ ಸೇವೆಯ ವಿಷಯದಲ್ಲಿ ಹಿಂದೆ ಬೀಳಲಿಲ್ಲ. ಏಕೆಂದರೆ ಅವರು ವಾಲಂಟರಿಯಾಗಿ ಪೌರೋಹಿತ್ಯದ ಸೇವೆಗೆ ಆಫರ್ ಮಾಡಿಕೊಂಡರು ಮತ್ತು ಒಡಮಲಯ್ಯ ಒಪ್ಪಿಕೊಂಡೂ ಬಿಟ್ಟನು. ಏಕೆಂದರೆ ಅವನಿಗೆ ಮಾಮೂಲಿ ಪುರೋಹಿತನು ಸಿಕ್ಕಿರಲಿಲ್ಲ. ನಮ್ಮೂರ ನರಸಿಂಹಸ್ವಾಮಿ ಗುಡಿಯ ಅರ್ಚಕ ಐಯಂಗಾರಿ ವೆಂಕಟರಂಗನು ಗುಡಿಯ ಹಜಾರದಲ್ಲಿ ಕಾಸಿಲ್ಲದೆ ಇವಾಹ ಮಾಡಿಕೊಳ್ಳಬಹುದೆಂದು ಉದಾರವಾಗಿ ಹೇಳಿದನು. ಹೀಗೆ ಈ ಔದಾರ್ಯ ಯಾವ ಹಂತ ತಲುಪಿತೆಂದರೆ ಒಡಮಲಯ್ಯನಿಗೆ ಮಗಳ ಮದುವೆ ಫ್ರೀಯಾಗಿ ಆದದ್ದಲ್ಲದೆ ಒಂದಷ್ಟು ಗಿಟ್ಟುಬಡಿಯೂ ಆಯಿತು. ಅವನು ತನಗೆ ಒಬ್ಬಳೇ ಮಗಳಲ್ಲಾ ಎಂದು ಪರಿತಪಿಸಿದನು.

ಶ್ರಾವಣ ಮಾಸದ ಒಂದು ಶುಭದಿನದಂದು ಚಿಕ್ಕತಿಮ್ಮ ಮತ್ತು ಈರಿಯರಿಗೆ ಭರ್ಜರಿಯಾಗಿ ಮದುವೆ ನೆರವೇರಿತು. ತಂದೆಯವರು ಕೆಂಪು ಮಗುಟ ಉಟ್ಟು ಮೇಲ್ವಸ್ತ್ರ ಧರಿಸಿ ಮದುವೆ ಮಂಟಪದಲ್ಲಿ ಓಡಾಡಿದ್ದೂ ಓಡಾಡಿದ್ದೇ. ಅವರು ಹೇಳಿದ ಅನೇಕ ಮಂತ್ರಗಳನ್ನು ನಾನು ಯಾರ ಯಾವ ಮದುವೆಯಲ್ಲೂ ಕೇಳಿರಲಿಲ್ಲ. ಅಂತೂ ಎಲ್ಲರಿಗೂ ನನ್ನ ತಂದೆಯವರು ಚೆನ್ನಾಗಿ ಮದುವೆ ಮಾಡಿಸಿದರೆಂಬ ತೃಪ್ತಿ.

ಮದುವೆ ಮುಗಿಸಿಕೊಟ್ಟು ಬಂದ ತಂದೆಯವರು ಮನೆಯಲ್ಲಿ ಊಟ ಮಾಡುತ್ತಿದ್ದಾರೆ. ಹುಳಿಯನ್ನು ಅನ್ನದೊಂದಿಗೆ ಕಲೆಸಿ ತುಪ್ಪ ಸುರುವಿ ದಂಚುತ್ತಿದ್ದಾರೆ, ಊಟ ರುಚಿಯಾಗಿದ್ದ ಕಾರಣ ಅವರ ಮುಖದಲ್ಲಿ ಒಂದು ತೃಪ್ತ ಭಾವವಿದೆ. ಆಗ ಯಾರೋ ಬಾಗಿಲು ತಟ್ಟಿದರು. ಯಾರೆನ್ನಲು ಜಜ್ಜೂರಿಗನೆಂಬುದು ಗೊತ್ತಾಯಿತು. ತಂದೆಯವರು ಊಟ ಮಾಡುತ್ತಲೇ 'ಏನಪ್ಪ ಜಜ್ಜೂರಿ, ಹುಡುಗನ ತಂದೆಯೇ ಬಂದುಬಿಟ್ಟಿದ್ದೀಯಲ್ಲಯ್ಯಾ, ಏನು ಸಮಾಚಾರ' ಎನ್ನಲು ಜಜ್ಜೂರಿಗನು, "ಏನ್ಸಾಮಿ, ಮದುವೆ ಏನೋ ಮಾಡಿ ಬಂಧ್ಬಿಟ್ರಿ, ತಾಲಿ–ಅರ್ಥಾತ್ ಮಾಂಗಲ್ಯಾನೆ ಕಟ್ಟಿಸ್ಲಿಲ್ಲಾ ಬುದ್ದಿ" ಎನ್ನಲು ತಂದೆಯವರು ಹೌಹಾರಿ,' ಏನಯ್ಯ ಜಜ್ಜೂರಿ ಹೌದಾ? ಹಾಗಿದ್ದರೆ ಈ ಊಟ ಮುಗಿಸಿ ಬಂದು ಕಟ್ಟಿಸ್ ಬಿಡ್ತೀನಿ ಇರು' ಎನ್ನಲು ಅವನು ಹಾಗೆಯೇ ತಂದೆಯವರಿಗೆ ಕಾಯುತ್ತಾ ಕೂತನು. ಊಟ ಮುಗಿಸಿದ ತಂದೆಯವರು ಜಜ್ಜೂರಿಗನ ಜೊತೆಯಲ್ಲಿ ನರಸಿಂಹಸ್ವಾಮಿ ಗುಡಿ ಬಳಿ ವಿವಾಹಮಂಟಪದ ಕಡೆ ಹೊರಟರೆ ದಾರಿಯಲ್ಲೇ ಮದುವೆಯ ದಿಬ್ಬಣ ವಧೂವರರೊಂದಿಗೆ ಆಗಮಿಸುತ್ತಿತ್ತು. ಅಲ್ಲಿ ಏನಾಗಿತ್ತೆಂದರೆ ತಾಲಿ ಕಟ್ಟುವವರೆಗೆ ಊಟ ಮಾಡುವಂತಿರಲಿಲ್ಲ. ನಮ್ಮೂರಿನ ಬಹು ಮಂದಿ ಹೊಟ್ಟೆಬಾಕರೂ, ತಿಂಡಿಪೋತರೂ, ಸಾಪಾಟರಾಮರೂ ಆಗಿರುವುದರಿಂದ ಊಟಕ್ಕೆ ಗಲಾಟೆ ಶುರು ಆಯಿತು. ಆಗ ಸ್ವಲ್ಪ ಪೌರೋಹಿತ್ಯ ಕಲಿತಿದ್ದ ಬ್ರಾಹ್ಮಣೇತರ ಜೋಯಿಸ ಬಳ್ಳಕ್ಕಿ ಪುಟ್ಟನೇ ಸರ್ವಾನುಮತ ಬಹುಮತ ಗಿಟ್ಟಿಸಿಕೊಂಡು ಮಾಂಗಲ್ಯಧಾರಣೆಯನ್ನು ಮಾಡಿಸಿಬಿಟ್ಟು ಮದುವೆಯ ಪಾರ್ಟಿಯವರೆಲ್ಲಾ ಊಟೋಪಚಾರ ಮುಗಿಸಿ ಹಿಂದಿರುಗಲು ನೆರವು ನೀಡಿದ್ದನು.

ಮದುವೆಯಾಗಿ ಚಿಕ್ಕತಿಮ್ಮ ಈರಿಯರು ಸಂಸಾರ ಆರಂಭಿಸಿದರು. ಒಂದು ತಿಂಗಳಾಯಿತು, ಎರಡು ತಿಂಗಳಾಯಿತು, ಕೊನೆಗೆ ಆರು ತಿಂಗಳೂ ಆಯಿತು, ವರ್ಷವಾಯಿತು, ಈರಿ ಸಾಯಲೇ ಇಲ್ಲ. ಅಷ್ಟರಲ್ಲಿ ಪಾಳ್ಯೇವಿನ ದೊಡ್ಡತಿಮ್ಮನ ಮಗಳು ಕೆಂಪೀರಿಗೆ ನಮ್ಮೂರಿನ ತಿಮ್ಮರಾಯಪ್ಪನ ಮಗ ಟಿ. ಮುನಿಯನೊಂದಿಗೆ ಮದುವೆಯೂ ಆಗಿಹೋಗಿತ್ತು. ಮುಂದೇನಾಯಿತಪ್ಪ ಎಂದರೆ ಈರಿ ಕಾಲ ಕಾಲಕ್ಕೆ ಬಸುರಿಯಾಗಿ ಒಂದು ಹೆಣ್ಣು ಮಗಳನ್ನೂ ಇಬ್ಬರು ಗಂಡು ಮಕ್ಕಳನ್ನೂ ಹಡೆದಳು. ಮಗಳಿಗೆ ಚಿಕ್ಕತಿಮ್ಮನು 'ಕೆಂಪೀರಿ' ಎಂದೇ ಹೆಸರಿಟ್ಟನು. ಅವಳಿಗೆ ಎಡಗಾಲಿನ ಪಾದವು ಅಮ್ಮನಂತೆ ಕೊಂಚ ತಿರುಗಿಕೊಂಡಿದೆ. ಚಿಕ್ಕತಿಮ್ಮನು ಕೆಂಪೀರಿಗೆ ವೈನಾದ ಗಂಡು ಮದ್ನಗಿರಿಯ ಜತೆ ಮದುವೆ ಮಾಡಿಸಿ ಅವಳು ಸುಖವಾಗಿದ್ದಾಳೆ. ಮಗಳಿಗೆ ಗಂಡು ಹುಡುಕುವಾಗ ಚಿಕ್ಕತಿಮ್ಮನು ಡಿ.ಟಿ.ಹಳ್ಳಿಯ 'ಅಯ್ನೋರ' ಬಳಿ ಮಾತ್ರ ಮತ್ತೆ 'ಸಾಸ್ತ್ರ' ಕೇಳಲು ಹೋಗಲಿಲ್ಲ.

ಈ ವಿಷಯಗಳನ್ನೆಲ್ಲ ನನಗೆ ಚಿಕ್ಕತಿಮ್ಮನೇ 'ಅಯ್ನೋರು' ಸತ್ತು ಹೋಗಿದ್ದರೂ ಅವನಿಗೆ 'ಅಯ್ನೋರ' ಮೇಲಿನ ಕೋಪ ಇನ್ನೂ ಆರಿರಲಿಲ್ಲ. ಏಕೆಂದರೆ 'ಅಯ್ನೋರಿ'ಗೆ ಆ ರೀತಿ 'ಸಾಸ್ತ್ರ' ಹೇಳುವಂತೆ ಪ್ರೇರೇಪಿಸಿದ್ದವಳು ಚಿಕ್ಕತಿಮ್ಮನ ಅಕ್ಕನಾದ ಮುನಿಯೆಂಗಟಮ್ಮನೇ. ಅವಳು 'ಅಯ್ನೋರಿ'ಗೆ ಐದು ಕೊಳಗ ರಾಗಿ, ಐದು ರುಪಾಯಿ ಚಿಳ್ಳರೆ, ಐದು ತೆಂಗಿನಕಾಯಿ, ಐದು ದೊಡ್ಡಚ್ಚು ಬೆಲ್ಲ–ಇಷ್ಟು ಪದಾರ್ಥಗಳನ್ನು ಎಲಡೀಕೆ, ಅಣ್ಣು ಊವ ಮತ್ತು ಗಣೇಶ ಬೀಡಿಯೊಂದಿಗೆ ಕೊಡಲು ಮರೆತಿರಲಿಲ್ಲ.

ಕೆ.ಸುಜಾತ ಅವರ ಎರಡು ಕವಿತೆ

ನೆಲದ ಮರೆಯ ನಿಧಾನ

ಒಳಗಣ್ಣಿನ ನೋಟಕ್ಕೆ
ಪೊರೆಹಿಡಿಯದ ಮುನ್ನ
ವಿಲೋಚನಾ ತಿಳಿಯಾಗಿ
ದೃಶ್ಯ ಜಗದೊಳಗೆ
ನೆಲದ ಮರೆಯಲಡಗಿದ
'ನಿಧಾನವ'-ಮಡಿಲೊಳಗೆ ತೆಕ್ಕೈಸಿ
ಸಂತ ವಿಡಿದು ಅದ್ಭುತ ರಹಸ್ಯ
ವಿಹಂಗಮ ನೋಟಕ್ಕೆ ತೆರೆದಿಟ್ಟು
ವಿಚಾರಶೀಲ, ಜಿಜ್ಞಾಸೆಗಳ
ಅಂಗೈಯಲ್ಲಿಟ್ಟು ಸಲಹು
ಕಣ್ಣೆದುರಿಗೆ ಬೆಟ್ಟವಿದೆ.
ಕಡಿದಾದ ಮೆಟ್ಟಿಲುಗಳ
ಸರಾಗ ಹತ್ತಿಸಿ, ಎಚ್ಚರಿಸಿ
ಮದಸೋಂಕೇರಿ ತೂರಾಡುವ ಮನಕೆ
ಆಳ ಹುಣ್ಣಿನ ನೋವು
ತಡೆಯಲಾರದೆ ಒದ್ದಾಡುವ ದೇಹಕೆ



ಕೆ. ಸುಜಾತ, ನಂ.13, 15ನೇ ತಿರುವು, 5ನೇ ಮುಖ್ಯರಸ್ತೆ, ಲಕ್ಕಸಂದ್ರ, ಬೆಂಗಳೂರು-30.

ಹಾದಿ ತಪ್ಪಿದೆ
ಓಡುತ್ತಾ, ಹುಡುಕುತ್ತಾ ತೇಲುತ್ತಾ
ಅಂಡಲೆವ ಆತ್ಮಗಳಿಗೆ
ನೆಲೆಯೂರುವ ತವಕ
ಗತಿಗಾಣಿಸಿ ಜೀವ ಬಂಧುರಕೆ
ಹೊಸಕಟ್ಟು ಕಟ್ಟಿ,
ಇಲ್ಲಿ ಇಲ್ಲಿಯೇ
ಹೊಸ ಹುಟ್ಟಿಗೆ, ನವದೃಷ್ಟಿಗೆ
ಮನವನರಳಿಸು.

ಕವಡೆ ಮಾತಿನ ಕಿಮ್ಮತ್ತು

ಅಂದು ಮುಸ್ಸಂಜೆ ಹೊತ್ತು
ನೀನು ಹೊತ್ತು ಬಂದದ್ದೆಲ್ಲಾ ಸವಕಲು
ಮಾತಿನ ಮೂಟೆ.

ಹರಟಿ ಹರಟಿ ಸಾಕಾಗಿ
ಕವಡೆ ಆಡಲು ಕುಳಿತರೆ
ಅಲ್ಲೂ ಅದೇನೋ ಪಿರಿಪಿರಿ.
ಮೋಸದಾಟವೆಂದು ಅರಿವಾಗಿ
ಎದ್ದು ಹೋದವಳನ್ನು
ಕರೆಯದೆ, ಒಳಗೊಳಗೆ ನಕ್ಕು
ಸುಮ್ಮನಾಗಿದ್ದು ಸುಳ್ಳೇ?
ಇಂದು ಮುಂಜಾವಿನ
ತಣ್ಣನೆ ಬೆಳಕಲ್ಲಿ
ನೀನಾಡಿದಾಟದ ಲೆಕ್ಕವ
ಗುಣಿಸಿ, ಕೂಡಿಸಿ, ಕಳೆದರೆ
ಸಿಕ್ಕಿದ್ದು ಸೊನ್ನೆ.

ಅಂದು ನೀನಾಡಿದ ಮೋಸದಾಟ
ಬಿದ್ದ ಕವಡೆಗೆ ಗೊತ್ತಿರಲಿಲ್ಲ
ಹೇಳದಿದ್ದರೂ ಬಿಡು
ಬಂದು ಬಿಟ್ಟು ಹೋಗು
ನಿನ್ನ ಆ 'ಕರೀ ಕವಡೆ'ಯ
ಅದರ ಕಿಮ್ಮತ್ತೇನೆಂದು ಹೇಳಲು
ಕಾದು ಕುಳಿದ್ದಿದ್ದೇನೆ
ಹಾದಿ ನೋಡುತ್ತಾ ....

ಭಾಷಾ ಚಳುವಳಿ ಮತ್ತು ಸಾಹಿತಿಗಳು

– ಬಿ.ಸಿ.ದೇಸಾಯಿ

The leaves cry. It is not a cry of devine attention,
Nor the smoke-drift of puffed-out heroes, nor human cry
It is the cry of leaves that do not transcend them-selves
In the absence of fantasia, without meaning more
Than they are in the final finding of the air, in the thing
It self, until, at last the cry concerns no one at all.

- Wallace Stevens

ಸಾಹಿತಿಗಳಿಗೆ, ಕಲಾವಿದರಿಗೆ, ಸಾಹಿತ್ಯಾಭ್ಯಾಸಿಗಳಿಗೆ ಮತ್ತು ವಿಮರ್ಶಕರಿಗೆ ಗ್ರೀಕ್ ದಾರ್ಶನಿಕ ಪ್ಲ್ಯಾಟೋ ಒಬ್ಬ ಖಳನಾಯಕನಂತೆ ಗೋಚರಿಸಬಹುದು. ಯಾಕೆಂದರೆ ಅವನ ರಾಜ್ಯದಲ್ಲಿ ಇವರಿಗೆ ಎಳ್ಳಷ್ಟೂ ಸ್ಥಾನವಿಲ್ಲ. ಒಂದು ವೇಳೆ ಅವನ ಕಲ್ಪನೆಯ 'ಆದರ್ಶ ರಾಜ್ಯ'ವೇನಾದರೂ ಸಾಧ್ಯವಾಗಿದ್ದರೆ ಆತ ಇವರನ್ನೆಲ್ಲ ಹದ್ದು ಪಾರು ಮಾಡುತ್ತಿದ್ದ. ಪ್ಲ್ಯಾಟೋ ಕಲೆಯನ್ನು ಯಾಕಿಷ್ಟು ದ್ವೇಷಿಸುತ್ತಿದ್ದ ಎಂಬುದಕ್ಕೆ ಎರಡು ಕಾರಣಗಳನ್ನು ಕೊಡುತ್ತಾನೆ.

1) ಕಲೆ, ಸಾಹಿತ್ಯ 'ಸತ್ಯ'ದಿಂದ ಎರಡಾವರ್ತಿ ದೂರವಾಗಿರುತ್ತದೆ. (Twice removed from the reality.) ಒಂದು ಉದಾಹರಣೆಯಿಂದ ಹೀಗೆ ಇದನ್ನು ಸ್ಪಷ್ಟಪಡಿಸಬಹುದಾಗಿದೆ: ಒಬ್ಬ ಚಿತ್ರಕಾರ ಹತ್ತು ರೂಪಾಯಿ ನೋಟಿನ ಚಿತ್ರವೊಂದನ್ನು ತೆಗೆಯುತ್ತಾನೆ ಎಂದುಕೊಳ್ಳೋಣ. ಮೊದಲನೆಯದಾಗಿ ಇದು ಹತ್ತು ರೂಪಾಯಿಯ ಖರೆ ನೋಟು ಅಲ್ಲ. ಎರಡನೆಯದಾಗಿ ಮತ್ತು ತುಂಬ ಮುಖ್ಯವಾಗಿ ಹತ್ತು ರೂಪಾಯಿಯ ನೋಟೆಂದರೆ ಅದು ಹತ್ತು ರೂಪಾಯಿಯ ಹಣವಲ್ಲ. ಅದು ಹತ್ತು ರೂಪಾಯಿ 'ಹಣ ಎಂಬ' ಅಮೂರ್ತ ಪ್ರತಿಕ್ರಿಯೆಯ ಭೌತಿಕ ಅಭಿವ್ಯಕ್ತಿ ಮಾತ್ರ, ಹೀಗಾಗಿ ಈ ಚಿತ್ರ ಎರಡಾವರ್ತಿ ಸತ್ಯದಿಂದ ದೂರವಾಗುತ್ತದೆ.

ಸಾಹಿತಿಯೊಬ್ಬ ಚಮತ್ಕಾರವೊಂದರ ಕಥೆಯನ್ನು ಬರೆದಾಗ ಅದು 'ರಮಣಿ' ಕತೆಯಾಗುತ್ತದೆ. ಯಾಕೆಂದರೆ ಮೊದಲನೆಯದಾಗಿ ಅದು ಗಂಡು ಮತ್ತು ಹೆಣ್ಣಿನ ನಡುವೆ ನಡೆದ ನೈಜ ದಾರುಣ ಅನುಭವ ಅಲ್ಲ. ಎರಡನೆಯದಾಗಿ ಬಲಾತ್ಕಾರ ಜರಗುವ ಜಟಿಲ ಪ್ರಕ್ರಿಯೆಯ (A meaning buried deeper than words and gestures, deeper than the immediate fate of the characters who live this fate without

---

ಬಿ.ಸಿ. ದೇಸಾಯಿಯವರು ತುಂಬ ಅಪರೂಪದ ಲೇಖಕರಾಗಿದ್ದರು. ಅವರ ಈ ಲೇಖನವನ್ನು ಇಪ್ಪತ್ಮೂರು ವರ್ಷಗಳ ಹಿಂದೆ ಪ್ರಕಟಿಸಿದ್ದೆ. ಈಗ ಮತ್ತೊಮ್ಮೆ ಕೆಲವು ಗೆಳೆಯರ ಸಲಹೆ ಮೇರೆ ಪ್ರಕಟಿಸುತ್ತಿರುವೆ. – ಸಂ.

ever being able to reflect on it) ವಿಮರ್ಶಾತ್ಮಕ ತಿಳುವಳಿಕೆಯ ನಿರೂಪಣೆಯೂ ಅದಾಗಿರುವುದಿಲ್ಲ. ಯಾಕೆಂದರೆ 'ವಿಮರ್ಶಾತ್ಮಕ ತಿಳುವಳಿಕೆ' ಎಂದರೆ ಈ ಘಟನೆಯ ಹಿಂದೆ ಕ್ರಿಯಾಶೀಲವಾಗಿರುವ ಇಡೀ ಸಮಾಜದ ಆಲೋಚನಾಕ್ರಮ ಅಥವಾ mode of false-consciousness ನ್ನು ಪ್ರಶ್ನಿಸುವುದೇ ಆಗಿರುತ್ತದೆ. ಆದರೆ ಅದು ಅಮೂರ್ತವಾಗಿರುತ್ತದೆ. ಹೀಗಾಗಿ ಈ ಕಥೆ ಕೂಡ ಎರಡಾವರ್ತಿ ಸತ್ಯದಿಂದ ದೂರವಾಗುತ್ತದೆ.

2) ಕಲೆ ಕುರಿತಂತೆ ಪ್ಲ್ಯಾಟೋನ ಎರಡನೆಯ ಅಕ್ಷೇಪವೆಂದರೆ ಅದು ಭಾವನೆಯನ್ನು ಉದ್ರೇಕಿಸುತ್ತದೆ. ಪ್ಲ್ಯಾಟೋ ಮನುಷ್ಯನ ಆಂತರಿಕ ಬದುಕಿನಲ್ಲಿ ಬುದ್ಧಿಗಿಂತ ಕೆಳಗಿನ ಸ್ಥಾನವನ್ನು ಭಾವನೆಗೆ ಕೊಡುತ್ತಾನೆ. ಯಾಕೆಂದರೆ ಭಾವನೆ ಸಾರ್ವತ್ರಿಕ (Universal) ಅಲ್ಲ. ಒಂದು ಗಂಡು ಹೆಣ್ಣಿಗೆ ತೋರಿಸುವ ಭಾವನೆ ಗಂಡನ ಭಾವನೆಯಾಗಬೇಕಾದರೆ, ಅಥವಾ ಒಂದು ಹೆಣ್ಣು ಕೂಸೊಂದಕ್ಕೆ ತಾಯಿಯ ಭಾವನೆ ತೋರಬೇಕಾದರೆ ಮೊದಲು ಆ ವ್ಯಕ್ತಿಗಳು ಗಂಡನಾಗಿ, (being husband) ಅಥವಾ ತಾಯಿಯಾಗಿ (being mother) ಇರಬೇಕಾಗುತ್ತದೆ. ಹೆಚ್ಚು ಬೆಳೆಸದೆ ಹೇಳುವುದಾದರೆ ಅಮೂರ್ತವಾದ ಸಂಸ್ಥೆಗಳ ಮೂಸೆಯಲ್ಲಿ ಆಕಾರ ಹೊಂದಿದಾಗ ಮಾತ್ರ ಒಂದು ಭಾವನೆ ಮನುಷ್ಯನ ಅರ್ಥಪೂರ್ಣ ಅನಿಸಿಕೊಳ್ಳುತ್ತದೆ. ಸಂಸ್ಥೆಗಿರುವ ವಿಶಿಷ್ಟ ಆಲೋಚನ ಕ್ರಮ (idealogy) ಮಾತ್ರ ಭಾವನೆಯನ್ನು ಮನುಷ್ಯ ಸಂಬಂಧದ ಅರ್ಥವಂತಿಕೆಯಲ್ಲಿ ರೂಪಿಸುತ್ತದೆ. ಹೀಗಿದ್ದಾಗ ಭಾವನೆಯ ಜಟಿಲ, ಅಮೂರ್ತ ಪ್ರಕ್ರಿಯೆಯ ಅರಿವಿಲ್ಲದೆ ಅದರ ಉದ್ರೇಕಕ್ಕೆ ಕಾರಣವಾಗುವುದೆಂದರೆ ಅರಾಜಕತೆಯನ್ನು ಹುಟ್ಟು ಹಾಕುವುದು ಎಂದೇ ಅರ್ಥ.

ಗ್ರೀಕ್ ಸಂಸ್ಕೃತಿ ಶೈಶವಾವಸ್ಥೆಯಲ್ಲಿದ್ದಾಗ ಅಲ್ಲಿನ ಜನರು ಅಮೂರ್ತ ಪರಿಕಲ್ಪನೆಗಳಲ್ಲಿ ವಿಚಾರ ಮಾಡಲು ಅಸಮರ್ಥರಾಗಿದ್ದರು. ಆದರೆ 'ರಾಜ್ಯ', 'ನಾಗರಿಕತ್ವ', 'ಪ್ರೇಮ' ಮುಂತಾದ ಅಮೂರ್ತ ಪ್ರಕ್ರಿಯೆಗಳು ಆ ಜನರ ಅಂತರಾಳದಲ್ಲಿ ವೈಚಾರಿಕ ಚೌಕಟ್ಟುಗಳಾಗಿ (categories) ನಿರ್ಮಾಣವಾಗದೆ ಹೋಗಿದ್ದರೆ ಆ ಸಂಸ್ಕೃತಿ ಉಳಿಯುವುದೇ ಸಾಧ್ಯವಿರಲಿಲ್ಲ. ಯಾವುದೇ ಸಂಸ್ಕೃತಿ ಉಳಿಯಬೇಕಾದರೆ ತನ್ನದೇ ಆದ idealogical categories ಗಳನ್ನು ನಿರ್ಮಿಸಿ ಕೊಳ್ಳಲೇಬೇಕಾಗುತ್ತದೆ. ಉದಾಹರಣೆಗೆ Capital ಮತ್ತು Money ಪರಿಕಲ್ಪನೆಗಳಿಲ್ಲದೆ ಬಂಡವಾಳ ಶಾಯಿ ಸಂಸ್ಕೃತಿ ಉಳಿಯುವುದಿಲ್ಲ. ಈ ಸಾಂಸ್ಕೃತಿಕ ಅವಶ್ಯಕತೆಯುನ್ನು ಪೂರೈಸಲು ಪ್ಲ್ಯಾಟೋನ ತಾತ್ವಿಕತೆ ನಿರ್ಮಾಣವಾಗಿ Form ಮತ್ತು Idea ದಂಥ ಪರಿಕಲ್ಪನೆಗಳು ನಿರ್ಮಾಣವಾಗಿವೆ. (ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ಶೈಶವಾವಸ್ಥೆಯಲ್ಲಿದ್ದ ಗ್ರೀಕ್ ಸಂಸ್ಕೃತಿಗಿಂತ ನಮ್ಮ ಹಳ್ಳಿಗಳ ಸ್ಥಿತಿ ಬೇರೆಯೇನೂ ಇಲ್ಲ. ನಮ್ಮ ಹಳ್ಳಿಗಳಲ್ಲಿನ ಜನರು ಅಮೂರ್ತ ಪರಿಕಲ್ಪನೆಗಳ ವೈಚಾರಿಕತೆಯಲ್ಲಿ ವ್ಯವಹರಿಸಲಾರರು. ಆದ್ದರಿಂದಲೇ ಅವರಿಗಿನ್ನೂ ರಾಜ್ಯ, ನಾಗರಿಕತ್ವ, ವರ್ಗ, ಜಾತಿ-ಯಂಥ ಕಲ್ಪನೆಗಳಿಗಿರುವ ಅಮೂರ್ತ ಸ್ವರೂಪದ ತಿಳುವಳಿಕೆ ಇರುವುದಿಲ್ಲ. ಅದಕ್ಕಾಗಿಯೇ ಎಡಪಂಥೀಯರು ಕೃಷಿಕರನ್ನು ಪ್ರತಿಗಾಮಿಗಳು ಎಂದು ವಿಚಾರ ಮಾಡುವುದು. ನಮ್ಮ ಸಮಾಜದ ವಿರೋಧಾಭಾಸಗಳು ಈ ಮಟ್ಟದ ಅರಿವಿಗೆ ಬಂದಿರದೇ ಇರುವುದರಿಂದಲೇ ಇಲ್ಲಿ ಕ್ರಾಂತಿಯ ಕಲ್ಪನೆ ಹುಸಿ ಹೋಗುತ್ತದೆ.)

ಇಂದು ಯಾವುದೇ ಸಾಮಾಜಿಕ ಚಳುವಳಿ ನಡೆದರೆ ಅದರ ಮುಂಚೂಣಿಯಲ್ಲಿ ಲೇಖಕರು, ಕಲಾವಿದರು ಕಾಣುತ್ತಾರೆ. ಆ ಚಳುವಳಿಯ 'ಜ್ಞಾನೇಂದ್ರಿಯ' ದಂತೆ ಕ್ರಿಯಾಶೀಲರಾಗಿರುತ್ತಾರೆ. ಹೀಗಿರುವುದರಿಂದಲೇ ಇವರ ಮುಂದಾಳತ್ವ ಮಹತ್ವದ್ದಾಗುತ್ತದೆ. ಆದರೆ ನಿಜವಾಗಿಯೂ

'ವಿಮರ್ಶಾತ್ಮಕ ಅರಿವಿನ' ಆಳದಿಂದ ಇವರು ವ್ಯವಹರಿಸುತ್ತಾರೆಯೇ ಎಂಬುದು ಮುಖ್ಯ ಪ್ರಶ್ನೆಯಾಗಿ ಉಳಿಯುತ್ತದೆ.

ಗೋಕಾಕ ವರದಿ ಜಾರಿಗೆ ಬರಲಿ ಎಂಬ ಭಾಷಾ ಚಳವಳಿಯಲ್ಲಿ ಮುಂದಾಳತ್ವವಹಿಸಿ ಮಾತನಾಡಿದ ಸಾಹಿತಿಗಳ ಮಾತುಗಳು ಪ್ಲ್ಯಾಟೋನ ಆಕ್ಷೇಪಣೆಗಳನ್ನು ಮೀರಿದಂತೆ ಕಾಣುವುದಿಲ್ಲ. ವೈಯಕ್ತಿಕ ಕ್ಷುದ್ರ ಜಗಳಗಳೂ ಈ ಸಂದರ್ಭದಲ್ಲಿ ನಡೆದವು. ಮತ್ತೆ ಕೆಲವರು ಬೇರೆ ಬೇರೆ ರೀತಿಯಲ್ಲಿ ತಮ್ಮ ವಾದವನ್ನೂ ಮಂಡಿಸಿದರು. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದರೆ ಭಾಷೆಯ ಬಗ್ಗೆ ಆಳವಾಗಿ ಆಲೋಚಿಸಿ ತಾತ್ವಿಕ ನಿಲುವೊಂದನ್ನು ಮುಟ್ಟಲು ಇದುವರೆಗೂ ಸಾಧ್ಯವಾಗಿಲ್ಲ ಎಂದೇ ಅನಿಸುತ್ತದೆ. ಭಾಷೆ ಒಂದು (Fetish) ಆಗಿ ಇಂದು ಪರಿಣಮಿಸಿರುವುದೇ ದೊಡ್ಡ ದುರಂತವಾಗಿದೆ. (Fetish–ಆದಿಮ ಕಾಲದ ವಸ್ತು ಪೂಜೆ. ಮನುಷ್ಯ ನಿರ್ಮಿಸಿದ ವಸ್ತುಗಳೇ ಆತನನ್ನು ಆಳುವುದು. ಆದರೆ ಸಮಾಜ ಉತ್ಕ್ರಾಂತಿ ಹೊಂದಿದಂತೆ ಮನುಷ್ಯನ ಸುಳ್ಳು ಅರಿವು ಪೂಜೆಯ ವಸ್ತುವಾಗಿ, ಅವನ ಪ್ರಗತಿಗೆ, ಇತಿಹಾಸದ ಗತಿಶೀಲತೆಗೆ ಕಾರಣವಾಗುವ ನೈಜ ವಿಚಾರಧಾರಣೆಯನ್ನು ಅರಳಬೇಕಾದ ಹೊಸ ಮನುಷ್ಯ ಸಂಬಂಧಗಳನ್ನು ಕುಂಠಿತಗೊಳಿಸುತ್ತದೆ, ಅಥವಾ ಇತಿಹಾಸದ ಸಹಜಗತಿಯನ್ನು ಮರೆಮಾಡಿ ಮನುಷ್ಯನ ಕ್ರಿಯೆಯ ಒತ್ತನ್ನು ಸ್ಥಳಾಂತರಿಸುತ್ತದೆ. Fetishism is the mechanism which conceals the real functioning (the real movement) of the dominant structure in the social formation i.,e it is the constitutive `dislocation' between the idealogical practice and other practices.) ಭಾಷೆಯು ಮನುಷ್ಯನ ಕ್ರಿಯೆಯ ನಿರ್ಧಾರಕ (determinant) ಆದಾರ ಅಲ್ಲ ಉದಾಹರನೆಗಾಗಿ 'ಬಂಡವಾಳ ಅಥವಾ 'ಜಾತಿ' ಒಂದು ಸಮಾಜದ ಅದು ಒಳಗೊಂಡ ಜನರ ಸಂಬಂಧಗಳನ್ನು, ಭವಿಷ್ಯವನ್ನು, ಕ್ರಿಯೆಯನ್ನು ನಿರ್ಧರಿಸುವಂತೆ ಭಾಷೆ ನಿರ್ಧರಿಸಲಾರದು. ಒಬ್ಬ ಕಾರ್ಮಿಕ ಯಾವುದೆ ಭಾಷೆ ಮಾತನಾಡಲಿ ಅವನ ಅಸ್ತಿತ್ವವನ್ನು ಭಾಷೆಯ ವ್ಯತ್ಯಾಸ ನಿರ್ಧರಿಸಲಾರದು. ಒಬ್ಬ ಹೊಲೆಯನನ್ನು, ಸವರ್ಣಿಯನನ್ನು, ರಾಷ್ಟ್ರವಾದಿಯನ್ನು, ಕಾಂಗ್ರೈದವನನ್ನು, ಬಿ. ಜೆ. ಪಿ ಮನುಷ್ಯನನ್ನು, ಅವನ ವಿಶಿಷ್ಟ ಬದುಕಿನ ಪ್ರಕ್ರಿಯೆಯನ್ನು ಅದನ್ನು ಬೆಳಗಿಸುವ ವೈಚಾರಿಕತೆಯನ್ನು ಭಾಷೆಯ ವ್ಯತ್ಯಾಸ ನಿರ್ಣಯಿಸುವುದಿಲ್ಲ. ಹೀಗಿದ್ದಾಗ್ಯೂ ಭಾಷೆಗೆ ಇತಿಹಾಸವನ್ನು ಆಳುವ ಮುಖ್ಯ ಸ್ಥಾನವನ್ನು ಯಾಕೆ ಕಲ್ಪಿಸುತ್ತಿದ್ದೇವೆ? ಈ ಕಲ್ಪಿಸುವಿಕೆಯೇ ಸತ್ಯವಾಗಿದ್ದರೆ ಇಲ್ಲಿ ಮಾರ್ಕ್ಸ್, ಲೋಹಿಯಾ, ಗೋಳವಲ್ಕರ ಮುಂತಾದವರು ವಿಶಿಷ್ಟ ವಿಚಾರಧಾರೆಯನ್ನು, ನಿರ್ಮಿಸುವ ಶಕ್ತಿಗಳಿಗಾಗಿ ಹೇಗೆ 'ಜೀವಂತ'ವಾಗಿದ್ದಾರೆ ? ಇವರ್‍ಯಾರೂ ಕನ್ನಡದ 'ಉಪ್ಪು' ತಿಂದವರಲ್ಲ. ನಮ್ಮಲ್ಲಿ ನವ್ಯ ಸಾಹಿತ್ಯ ಬಂದುದು ಹೇಗೆ ? 'ದಲಿತ ಸಾಹಿತ್ಯ' ನೀಗ್ರೊಗಳಿಂದ ಪ್ರೇರಣೆ ಪಡೆಯುವುದೇಕೆ ? 'ಬಂಡಾಯ'ದವರು ಮಂಡೇಲ, ನೇರುಡಾಗಳನ್ನು ಗೌರವಿಸುವುದೇಕೆ? ಕೇವಲ ಕನ್ನಡ ಮಾತಾಡುವವರಲ್ಲಿ ಇಷ್ಟು ಗೌರವಗಳಿಸಬಲ್ಲ, ಸ್ಫೂರ್ತಿ ನೀಡುವ ವ್ಯಕ್ತಿಗಳೇ ಇಲ್ಲವೇ? ಚಿತ್ರನಟ ರಾಜ್‌ಕುಮಾರ ಒಬ್ಬರೇ ಬೃಹತ್ ಸಂಖ್ಯೆಯಲ್ಲಿ ಜನಜಂಗುಳಿಯನ್ನು ಆಕರ್ಷಿಸುವುದು ಹೇಗೆ ? ಕೂಡಿದ ಜನತೆ ರಾಜಕುಮಾರರಿಂದ ವಿಚಾರ ಪ್ರಣಾಲಿಯನ್ನು ಅಪೇಕ್ಷಿಸದೆ ಹಾಡಿಗೆ ಒತ್ತಾಯಿಸುವುದು ದುರಂತವಲ್ಲವೆ ? ಇತಿಹಾಸದ, ಭವಿಷ್ಯದ ದಿಕ್ಕನ್ನು ಕುರಿತು ಗಂಭೀರವಾಗಿ ಯೋಚನೆ ಮಾಡುವವರು ಈ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರ ಶೋಧಿಸಬೇಕಾಗಿದೆ.

ಇಲ್ಲಿ ನನಗೆ ಇನ್ನೊಂದು ಪ್ರಶ್ನೆ ಮುಖ್ಯವೆನಿಸುತ್ತದೆ. ತುಂಬ ಶ್ರೀಮಂತವಾಗಿದ್ದ ಸಂಸ್ಕೃತ

ಭಾಷೆ (ಕಾಮಸೂತ್ರದಿಂದ ಹಿಡಿದು ವಿಮರ್ಶೆ, ತತ್ವಜ್ಞಾನ, ಕಾವ್ಯ ಎಲ್ಲವೂ ಈ ಭಾಷೆಯಿಂದಲೇ ಪ್ರಾದೇಶಿಕ ಭಾಷೆಯಲ್ಲಿ ಬಂತು) ಜನರು ವ್ಯವಹರಿಸುವ ಭಾಷೆ ಯಾಕಾಗಲಿಲ್ಲ ? ಅಥವಾ ಉರ್ದು ವಿದ್ಯಾರ್ಥಿ ಕನ್ನಡ ಕಲಿಯಲು ಅಥವಾ ಕನ್ನಡ ವಿದ್ಯಾರ್ಥಿ ಭಾರತದ ಬೇರಾವುದೇ ಭಾಷೆಯನ್ನು ಕಲಿಯಲು ಆತುರನಾಗದೆ ಇಂಗ್ಲಿಷ್‌ನ್ನೆ ಕಲಿಯಲು ಯಾಕೆ ಮುಂದಾಗುತ್ತಾನೆ? ಈ ಎರಡನೆಯ ಪ್ರಶ್ನೆಗೆ ಯಾರು ಏನೇ ಉತ್ತರ ಕೊಡಲಿ ನನಗನಿಸುವಂತೆ ಭಾಷೆ ಮನುಷ್ಯನಿಗೆ ಸಾಧನವೂ ಅಲ್ಲ, ಪ್ರತ್ಯೇಕಪಡಿಸುವ ಅಂಶ (attribute) ವೂ ಅಲ್ಲ. ಅದು constitutive faculty. (Language is then, positively, a distinctively human opening off and opening to the world : not a distinguishable or instrumental but a constitutive faculty.

-Raymond Williams)

ಅದ್ದರಿಂದ ಚರಿತ್ರೆಯ ವಿಶಿಷ್ಟ ಹಂತದಲ್ಲಿ ಮನುಷ್ಯ ಬದುಕುವ ಪ್ರಕ್ರಿಯೆ, ಅವನ ಅರಿವು ಮತ್ತು ವೈಚಾರಿಕತೆಗಳ ವ್ಯಕ್ತರೂಪ ಅಥವಾ ಮಟ್ಟವಾಗಿ ಭಾಷೆ ಇರುತ್ತದೆ. ಭಾಷೆ ಬೆಳೆಯುವುದು ಸಾಮಾಜಿಕವಾಗಿ ಬದುಕು ಬೆಳೆದಾಗ ಮಾತ್ರ. ಅದು ತನ್ನ ಗತಿಕಾಲತೆಯನ್ನು ಕಳೆದುಕೊಂಡಾಗ ರ್‍ಯಾಡಿಕಲ್ ಆದ ಅರ್ಥದಲ್ಲಿ ಮನುಷ್ಯ, 'ಮನುಷ್ಯನ' ಮಟ್ಟಕ್ಕಿಂತ ಕೆಳಗಿರುತ್ತಾನೆಂದು ಹೇಳುವ ಸ್ಟೈನರ್‌ನ ಮಾತು ಮಹತ್ವದ್ದಾಗುವುದೇಕೆಂದರೆ ಸುಳ್ಳು ಅರಿವಿನ (False-consciouness) ಗುಲಾಮರಾಗಿ ಜನರು ಬದುಕಿನ ಪ್ರಕ್ರಿಯೆಯ ಮೇಲೆ, ಇತಿಹಾಸದ ಮೇಲೆ ಹಿಡಿತ ತಪ್ಪಿಸಿಕೊಂಡವರಾಗಿರುತ್ತಾರೆ. ಅಂದರೆ ಗತಿಶೂನ್ಯ ಇತಿಹಾಸದಲ್ಲಿ ಮಹತ್ವದ ಕರ್ತೃ (true human subject) ಗಳಾಗದೆ ವಿಧೇಯ ಪದ (predicate) ಗಳಾಗಿ ಬಿಡುತ್ತಾರೆ. ಇದನ್ನೆ Less human ಅಥವಾ absent from existence ಅನ್ನುವುದು. ಹೀಗಿರುವಾಗ ಒಂದು ಭಾಷೆ ಬಳಕೆಗೆ ಯಾಕೆ ನಿರುಪಯುಕ್ತವಾಗುತ್ತದೆ ಅಥವಾ ಮತ್ತೊಂದು ಭಾಷೆ ಕಲಿಯಬೇಕೆನ್ನುವಷ್ಟು ಯಾಕೆ ಮಹತ್ವದ್ದಾಗುತ್ತದೆ ಎನ್ನುವುದಕ್ಕೆ ಬಹುಮುಖ್ಯ ಕಾರಣವೆಂದರೆ (ಅನೇಕ ಕಾರಣಗಳಿವೆ. ಅವುಗಳನ್ನು ಚರ್ಚಿಸುವುದಿಲ್ಲಿ ಅನಗತ್ಯ. ಯಾಕೆಂದರೆ Energy of syntax ದಂಥ ಭಾಷಾ ಶಾಸ್ತ್ರೀಯ ಸಮಸ್ಯೆಗಳನ್ನು ನಾವಿನ್ನೂ ಎದುರಿಸಿಯೇ ಇಲ್ಲ) ನಮ್ಮ ಭಾಷೆ ಇತಿಹಾಸದ ಮುನ್ನಡೆಗೆ (ಹೀಗೆಂದರೇನು ಎಂಬುದರ ದೀರ್ಘ ವಿಶ್ಲೇಷಣೆಗೂ ಇಲ್ಲಿ ಸ್ಥಳವಿಲ್ಲ. ಸದ್ಯಕ್ಕೆ ಆ ಕುರಿತು ವಿವಾದಾಸ್ಪದ ಚರ್ಚೆ ಏಳದವರೆಗೆ ಅದು ಅಗತ್ಯವೂ ಅಲ್ಲ.) 'ಸೂಚಿ' ಯಾಗುವುದಿಲ್ಲ. ಹೀಗಿದ್ದಾಗ ಗೋಕಾಕ ವರದಿಯ ಒಂದು ಮುಖ್ಯ ಅಂಶವಾದ ಕಡ್ಡಾಯವಾದ ಭಾಷೆಗಿರಬೇಕಾದ ಅಂಕಗಳೆಷ್ಟು ಅಂದರೆ ಅದನ್ನು ಕಲಿಯಲು ಎಷ್ಟು ಕಾಲವ್ಯಯ ಮಾಡಬೇಕು ಎಂಬ ಸಮಸ್ಯೆಯನ್ನೇ ತಪ್ಪಾಗಿ ಪೋಜ್ ಮಾಡುತ್ತಿದ್ದೇವೆ ಅನ್ನಿಸುತ್ತದೆ. ಇದನ್ನು ನಮ್ಮ ಭಾಷೆಯಲ್ಲಿ ಈಗಿರುವ ಜ್ಞಾನದ ಮೊತ್ತ ಎಷ್ಟು ಎಂಬುದನ್ನು ಆಧಾರವಾಗಿಟ್ಟುಕೊಂಡು–ಮೇಲಿನ ಸಮಸ್ಯೆಯನ್ನು–ನಿರ್ಧರಿಸಬೇಕಾಗಿದೆ. ಕನ್ನಡದ ಅಭಿಮಾನವಿದ್ದ ಬುದ್ಧಿ ಜೀವಿಗಳು ಈವರೆಗೆ ನಿಜವಾಗಿಯೂ ಪರಿಶ್ರಮಿಸಿದ್ದರೆ ಇಂದು ಎಲ್ಲವನ್ನೂ ಕನ್ನಡದಲ್ಲಿಯೇ ಕಲಿಯಬಹುದಾಗಿತ್ತು. ಅಷ್ಟೇ ಅಲ್ಲ ಉಳಿದ ಭಾಷೆಯವರು ಕೂಡ ಕನ್ನಡ ಕಲಿಯಲು ಉತ್ಸುಕರಾಗಬಹುದಿತ್ತು. ದುರ್ದೈವದಿಂದ ಕನ್ನಡ ಬುದ್ಧಿ ಜೀವಿಗಳ ನಿರ್ಲಕ್ಷ್ಯದಿಂದಾಗಿ ನಮ್ಮ ಜ್ಞಾನದ ಮೊತ್ತ ತುಂಬ ಚಿಕ್ಕದಾಗಿದೆ ಎಂದು ಒಪ್ಪುವುದೇ ಪ್ರಾಮಾಣಿಕವಾದುದು. ಒಂದು ಭಾಷೆಯಲ್ಲಿ (ಉಳಿದ ಪ್ರಗತಿ ಭಾಷೆಗಳಿಗೆ ಹೋಲಿಸಿದಾಗ) ಇಪ್ಪತ್ತೈದು ಅಂಕಗಳಷ್ಟು ಮಾತ್ರ ಕಲಿಯುವ ಜ್ಞಾನದ ಮೊತ್ತವಿದೆ ಎಂದುಕೊಳ್ಳೋಣ. ಆ

ಭಾಷೆಯನ್ನು ಒಂದು ನೂರಾ ಐವತ್ತು ಅಂಕಗಳಷ್ಟು ಅಥವಾ ಎರಡು ನೂರು ಅಂಕಗಳಷ್ಟು (ಸಮಯ ಬಳಸಿ) ಕಲಿಯಲು ವಿದ್ಯಾರ್ಥಿಯನ್ನು ಒತ್ತಾಯಿಸಿದರೆ ಅವನ ಬೆಳವಣಿಗೆಗಿಂತ, ಪುನರಾವೃತ್ತಿಯೆ ಜಾಸ್ತಿಯಾಗುತ್ತದೆ. ಇದರ ಪರಿಣಾಮದ ಬಗ್ಗೆ ಅಂದರೆ ದೇಶದ ಜನತೆಯ ಮೇಲಾಗುವ ಪರಿಣಾಮಗಳ ಬಗೆಗೆ ಸಾರಾಸಾರವಾಗಿ ಯೋಚಿಸಬೇಕಾದುದು ಎಲ್ಲ ಬುದ್ಧಿವಂತರ ಕರ್ತವ್ಯವಾಗಿದೆ.

ಇಂದು ನಮ್ಮಲ್ಲಿ ಅನೇಕ ಪ್ರಗತಿಪರ ಚಳುವಳಿಗಳಿವೆ. 'ದಲಿತ ಸಂಘರ್ಷ'ವಿದೆ, ಬಂಡಾಯವಿದೆ, ಶ್ರಮಿಕ ಶಕ್ತಿಯಂಥ ಕಾರ್ಮಿಕ ಸಂಘಟನೆ ಇದೆ, ರಯತ ಚಳುವಳಿ ನಡೆದಿದೆ. ಒಂದು ರೀತಿಯಲ್ಲಿ ಅರಿವಿನ ಪುನರುತ್ಥಾನವೇ ನಡೆದಿದೆ. ಇಂಥ ಗಳಿಗೆಯಲ್ಲಿ ಸಣ್ಣ ಅಥವಾ ತಪ್ಪು ವೈಚಾರಿಕ Category ಗಳು ಈ ಅರಿವಿನ ಪುನರುಜ್ಜೀವನವನ್ನು ಮೊಳಕೆಯಲ್ಲಿಯೇ ಕಮರಿಸಬಹುದಾಗಿದೆ. ಒಬ್ಬ ಕನ್ನಡ 'ಶೂದ್ರ', 'ದಲಿತ', 'ಕಾರ್ಮಿಕ' ಸಾಧಿಸಬಹುದಾಗಿರುವ ಸಾರ್ವತ್ರಿಕ ಗುರುತು ಅಥವಾ ಪರಿಚಯವನ್ನು ಇಂಥ ತಮ್ಮ Category ಗಳು ಸಂದಿಗ್ಧ ಮಾಡಿಬಿಡಬಹುದಾಗಿದೆ. ದೇವನೂರ ಮಹಾದೇವ ದಯಾ ಪವಾರರನ್ನು ಭೆಟ್ಟಿ ಮಾಡುವ, ಒಬ್ಬ ಸುಧೀರ ಬೇಡೇಕರರನ್ನು ಬರಗೂರು ಅಥವಾ ಶೂದ್ರ ಶ್ರೀನಿವಾಸ್ ಕಾಣುವ ಸಾಧ್ಯತೆಯೇ ಕುಸಿದೇ ಹೋಗುತ್ತದೆ. ನಮ್ಮ ಭವಿಷ್ಯದ ದೃಷ್ಟಿಯಿಂದ ಇವು ದೊಡ್ಡ ಅನಾಹುತಗಳಾದವು ಎನಿಸುತ್ತದೆ.

ಇಂಥ ಸಮಯದಲ್ಲಿ ಯಾವ ಸಾಹಿತಿ ಏನು ತಪ್ಪು ಮಾಡಿದ ಎಂಬುದನ್ನು ಎಣಿಸುತ್ತ ಕೂಡುವುದು ಕ್ಷುದ್ರತನ ಮಾತ್ರ.

ಆದರೂ ನನಗೆ ಆತ್ಮೀಯರಾದ ಇಬ್ಬರು ಗೆಳೆಯರ 'ಹೇಳಿಕೆ ಪ್ರತಿಕ್ರಿಯೆ ಮಾಡಬೇಕಾಗಿದೆ. ಯಾಕೆಂದರೆ ಈ ಇಬ್ಬರೂ ಒಂದು ಕ್ರಾಂತಿಕಾರಕ ತತ್ವಜ್ಞಾನದ ಬಗ್ಗೆ ತಪ್ಪು ತಿಳುವಳಿಕೆಯಿಂದ ಮಾತನಾಡಿದ್ದಾರೆ.

ಶ್ರೀ ಬರಗೂರು ರಾಮಚಂದ್ರಪ್ಪ ಮಾರ್ಕ್ಸಿಸ್ಟ್‌ರಾಗಿ ಸಂವಿಧಾನ ಸುಡುವ ಮಾತನ್ನಾಡಬಾರದಿತ್ತು. ಸಂವಿಧಾನವೆಂದರೆ ಕೇವಲ ಮುದ್ರಿತ ಕಾಗದವಲ್ಲ. ನಮ್ಮ ಚರಿತ್ರೆಯ ಇಂದಿನ ಹಂತದ ರಾಷ್ಟ್ರ (Nation) ಪರಿಕಲ್ಪನೆಯ ಸೂತ್ರ ಸಂವಿಧಾನವಾಗಿದೆ. ಇದರ ಒಂದು ಮುಖವನ್ನು ಸರಳೀಕರಿಸಿ ಹೀಗೆ ಹೇಳಬಹುದು : ವ್ಯಕ್ತಿ ಸ್ವತಂತ್ರವಾಗಿರುವುದೆಂದರೆ ಆತ ತನ್ನನ್ನು ಸ್ವಂತ ಒಪ್ಪಿಗೆಯಿಂದಲೆ ಆಡಳಿತಕ್ಕೆ ಒಪ್ಪಿಸಿಕೊಳ್ಳುವುದು. ಒಪ್ಪಿಸಿಕೊಂಡ ನಂತರ, ಈ ಯಂತ್ರವನ್ನು ಮೀರಿದಾಗ ಮಾತ್ರ ನಾನು ನಿಜವಾದ 'ವ್ಯಕ್ತಿ'ಯಾಗುತ್ತೇನೆ ಎಂದು ಅನಿಸತೊಡಗಿದರೆ ಮತ್ತು ಹಾಗೆ ಮೀರಲು ಪ್ರಯತ್ನಪಟ್ಟರೆ ಅವನನ್ನು ಬಗ್ಗಿಸಲು, ನಿಯಂತ್ರಿಸಲು ಕಾಯಿದೆಯಂಥ ಅಮೂರ್ತ ಸಂಸ್ಥೆಯಿದೆ. 'ಶಾರೀರಿಕ'ವಾಗಿ ದಂಡನೆ ನೀಡಲು ಮಿಲಿಟರಿ, ಪೋಲಿಸ್ ಸಂಸ್ಥೆಗಳಿವೆ. ಹೀಗಿದ್ದಾಗ 'ಸಂವಿಧಾನ' 'ಸುಡು'ವುದೆಂದರೇನು ಎಂಬುದನ್ನು ರಾಮಚಂದ್ರಪ್ಪ ಅರ್ಥಮಾಡಿಕೊಳ್ಳಬೇಕಿತ್ತು. ಇತಿಹಾಸದ ನಿಜವಾದ ಕರ್ತೃ ಕಾರ್ಮಿಕ ಎಂದು ಮಾರ್ಕ್ಸಿಸ್ಟ್‌ರಾಗಿ ಅವರು ನಂಬುವುದಾದರೆ ಅವನಿಗೆ ಸಾರ್ವತ್ರಿಕ ಭಾಷೆ ಇರುತ್ತದೆ ಎಂಬುದು ಅವರಿಗೇಕೆ ತಿಳಿಯಲಿಲ್ಲ?

ಡಾ॥ ಯು.ಆರ್. ಅನಂತಮೂರ್ತಿ ಅನೇಕ ವಿಷಯಗಳ ಬಗ್ಗೆ ತುಂಬ ಪ್ರಬುದ್ಧವಾಗಿ ಯೋಚಿಸಬಲ್ಲ ಮನುಷ್ಯ. ಇಂಥವರು ತಮ್ಮ ವಿಚಾರ ಮಂಡಿಸಿದಾಗಲೆಲ್ಲ ಅದಕ್ಕೊಂದು 'ಪ್ರಜ್ಞೆ'ಯ ಬೆಲೆ ಇರುತ್ತದೆ. 'ರುಜುವಾತು'ವಿನ ಆರನೆಯ ಸಂಚಿಕೆಯಲ್ಲಿ ಸಂಪಾದಕೀಯ

ಬರೆಯುತ್ತ ಅನಂತಮೂರ್ತಿ, "ಸ್ವಂತ ಜೀವನಕ್ಕೆ ಮಾರ್ಪಡಿಸಿಕೊಳ್ಳುತ್ತ ಹೋಗುವ, ಹೃದಯ ಪರಿವರ್ತನೆಯಲ್ಲಿ ನಂಬುವ, ಗಾಂಧಿಯ ಮಾರ್ಗ ರಾಜಕೀಯ ಕ್ರಿಯೆಗೆ ಒಂದು ಮಾಡೆಲ್ಲಾದರೆ. ಇನ್ನೊಂದು. ಇಡೀ ಸಮಾಜದ ಆರ್ಥಿಕ ಬುನಾದಿಯನ್ನೇ ಬದಲು ಮಾಡುವುದರ ಮುಖಾಂತರ ಪ್ರತಿ ವ್ಯಕ್ತಿಯೂ ಅನಿವಾರ್ಯವಾಗಿ ಬದಲಾಗಲೇಬೇಕಾದ ಮಾರ್ಕ್ಸ್‌ವಾದೀ ಸಮೂಹ ಬದಲಾವಣೆಯ ಮಾಡೆಲ್. ಈ ಎರಡೂ ಒಂದಕ್ಕೊಂದು ಹೆಣೆದುಕೊಳ್ಳುವ ಹೊರತು ಯಾವ ಸಮಾಜವೂ ಸರ್ವಹಿತದ ಉದ್ದೇಶವನ್ನು ಈಡೇರಿಸಿಕೊಳ್ಳದೇನೋ ?" ಎಂದಿದ್ದಾರೆ. 'ಆಂತರಿಕ', 'ಬಾಹ್ಯ', 'ವ್ಯಕ್ತಿ', 'ಸಮೂಹ' ಹೀಗೆ ಏನೇನೋ ಭಾಗಗಳನ್ನು ನಿರ್ಮಿಸಿ, ಮನುಷ್ಯನ ಸಂಸ್ಥಾತ್ಮಕ Institutionl relations) ಸಂಬಂಧವ್ಯೂಹದ ಸೂಕ್ಷ್ಮ ವಿಶ್ಲೇಷಣೆ ನೀಡದೆ ತಾತ್ವಿಕ ಗೊಂದಲ ನಿರ್ಮಿಸುತ್ತಾರೆ. ಪ್ರಸ್ತುತದಲ್ಲಿ ಜಗತ್ತಿನ ಮುಖ್ಯ ಮಾರ್ಕ್ಸ್‌ವಾದಿ ತತ್ವಜ್ಞಾನಿ ಆಲ್ಥೂಸರ್ (Althussar) ನ ಕೆಲ ಮಾತುಗಳನ್ನು ಗೆಳೆಯ ಅನಂತಮೂರ್ತಿಯವರ ಹೇಳಿಕೆಗೆ ಉತ್ತರವಾಗಿ ಬರೆಯಬೇಕೆನಿಸುತ್ತದೆ : "Since Copernicus, we have known that the earth is not the `centre' of the universe. Since Marx we have known that the human subject, the economic, political or philosophical ego is not the `centre' of history and even in opposition to philosophers of the Enlightenment and to Hegel, that history has no `centre' except in ideological misrecognition. In return Frued has discovered for us that the real subject, the individual in his unique essence, has not the form of an ego, centred on the ego', on `consciousness' or an `existence' of the for-itself, of the body-proper or `behaviour'- that the human subject is decentred by a structure which has no centre either, except in the imaginery misrecognition of the `ego', i.e, in the ideological formations in which it `recognizes' itself.

It must be clear that this has opened up one of the ways which may perhaps lead us some day to a better understanding of this `structure of misrecognition' which is of particular concern for all investigation in to ideology."

From "Frued and Lacan"
Essay in
`LENIN AND PHILOSOPHY'
By Althussar.

●

ಸ್ವಾತಂತ್ರ್ಯೋತ್ತರ ಸಣ್ಣ ಕಥಾ ಸಾಹಿತ್ಯ

ವಸ್ತು ಮತ್ತು ಅಭಿವ್ಯಕ್ತಿಯ ವಿಧಾನದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು

– ಡಾ.ಎಚ್. ಶಶಿಕಲಾ

ಭಾರತದ ಸ್ವಾತಂತ್ರ್ಯವೆಂಬ, ರಾಜಕೀಯ ಬದಲಾವನೆಯು ಜೀವನದ ಎಲ್ಲ ಕ್ಷೇತ್ರದಲ್ಲಿ ಪರಿಣಾಮ ಬೀರಿದಂತೆ ಸಾಹಿತ್ಯದ ಮೇಲೂ ತನ್ನ ಛಾಪನ್ನು ಒತ್ತಿದೆ. 1950ರ ನಂತರದ ಕಾಲಘಟ್ಟದಲ್ಲಿ ಸಾಹಿತ್ಯದ ವಸ್ತುವಿನಲ್ಲಿ ಅಭಿವ್ಯಕ್ತಿ ಕ್ರಮದಲ್ಲಿ ಬದಲಾವಣೆಯನ್ನು ತಂದದ್ದು ಈಗ ಚಾರಿತ್ರಿಕ ಸತ್ಯ ಮತ್ತು ಇದೊಂದು ಸಹಜ ಪ್ರಕ್ರಿಯೆಯೂ ಆಗಿತ್ತು. ಕನ್ನಡ ಸಾಹಿತ್ಯವು ಇಂತಹದ್ದೊಂದು ಬದಲಾದ ಸಂವೇದನೆಯನ್ನು ಹೇಗೆ ಹಿಡಿದಿಟ್ಟಿದೆ ಎಂಬುದನ್ನು ಸಣ್ಣ ಕತೆಯನ್ನು ಕೇಂದ್ರವಾಗಿಟ್ಟುಕೊಂಡು ನೋಡಿದಾಗ ಹೊಳೆಯುವ ಅಂಶಗಳು ಇವು.

***

ಸಾಹಿತ್ಯದ ವಸ್ತುವಿನ ಅಭಿವ್ಯಕ್ತಿಯ ಕ್ರಮದಲ್ಲಿ ಅಸ್ತಿತ್ವವಾದ, ಅಸಂಗತವಾದತಂಹ ತಾತ್ವಿಕತೆಯು ಪಾಶ್ಚಿಮಾತ್ಯ ತಾತ್ವಿಕತೆಯ ಪರಿಣಾಮವೇ ಆದರೂ ಕನ್ನಡದ ಬರಹಗಾರರು ಇಂತಹ ಪ್ರಭಾವವನ್ನು ತಮ್ಮದೇ ಆದ ವೈಶಿಷ್ಟತೆಯ ಹಿನ್ನಲೆಯಲ್ಲಿ ನೋಡಿದರು. ಅನಂತಮೂರ್ತಿ, ಲಂಕೇಶ, ತೇಜಸ್ವಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ ಇಂತಹ ಬರಹಗಾರರನ್ನು ಈ ಹಿನ್ನಲೆಯಲ್ಲಿ ಗುರುತಿಸಬಹುದು. ವ್ಯಕ್ತಿ ವಿಶಿಷ್ಟ ಪ್ರಜ್ಞೆಯು ಲೋಕವನ್ನು ತನ್ನ ಕೇಂದ್ರದ ಮೂಲಕ ನೋಡುವಂತಾಗಿದ್ದು ಈ ಸಂದರ್ಭದಲ್ಲಿ ಕಂಡುಬಂದ ವಿಶೇಷ. ತನ್ನ ಅನುಭವವನ್ನು ಆಳವಾಗಿ ಬೆದಕಿ ನೋಡಿದ್ದು ಅದನ್ನು ಭಾಷೆಯ ಮೂಲಕ ಅನುಭವದ ಸಂಕೀರ್ಣತೆಯನ್ನು ಹಿಡಿಯಲು ಭಾಷೆಯನ್ನು ಸಜ್ಜುಗೊಳಿಸಿಕೊಂಡದ್ದು, ಇದರಿಂದಾಗಿ ಭಾಷೆಯ ಶಕ್ತಿಯನ್ನು ವಿಸ್ತರಿಸಿಕೊಳ್ಳುವಂತಾಗಿದ್ದು ಕನ್ನಡದ ಮಟ್ಟಿಗಂತೂ ಒಂದು ವಿಶೇಷತೆಯೇ ಆಗಿದೆ. ಸ್ವಾತಂತ್ರ್ಯಾ ನಂತರದಲ್ಲಿ ವ್ಯಕ್ತಿವಿಶಿಷ್ಟತೆಯು ರಾಜಕೀಯ ಕಾರಣದಿಂದಲೂ, ಶಿಕ್ಷಣದ ಪ್ರಸಾರದಿಂದಲೂ, ಆ ಸಂದರ್ಭದಲ್ಲಿ ಘಟಿಸಿದ ಅನೇಕ ಸಾಮಾಜಿಕ ಸ್ಥಿತ್ಯಂತರದಿಂದಾಗಿಯೂ ವ್ಯಕ್ತಿ ವಿಶಿಷ್ಟತೆಯು ಮುಂಚೂಣಿಗೆ ಬಂದಂತೆ, ಚರಿತ್ರೆಯಲ್ಲಿ ದಮನಿತ ದನಿಗಳು ತಮ್ಮ ಸಮುದಾಯದ ಸಾಮಾಜಿಕ ಹಿನ್ನೆಲೆಯೊಡನೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳತೊಡಗಿದವು. 20ರ ದಶಕದ ನಂತರ ಕಾಣಿಸಿಕೊಂಡ ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಮುಸ್ಲಿಂ ಸಂವೇದನೆಗಳು ಇಂತಹವು ಸಾಹಿತ್ಯದಲ್ಲಿ ತಮ್ಮ ಗುರುತುಗಳನ್ನು ದಾಖಲಿಸತೊಡಗಿದವು. ಆಯಾ ಸಮುದಾಯದ ಹಿನ್ನಲೆಯಿಂದ ಬಂದ ಬರಹಗಾರರ ಅನುಭವದ ವಿಶಿಷ್ಟತೆಯು ಲೋಕ ಗ್ರಹಿಕೆಯ ವಿಶಿಷ್ಟತೆಯೂ ಆಗಿರುತ್ತದೆ ಎಂಬ ವಾದಗಳು ಈ ಕಾಲಘಟ್ಟದಲ್ಲಿ ಪ್ರಬಲವಾಗಿ ಬೆಳೆದು ಬಂದಿತು. ಇಲ್ಲಿ ಸ್ತ್ರೀ ಸಂವೇದನೆಯನ್ನು ಹೆಚ್ಚು ಕೇಂದ್ರೀಕರಿಸಿ, ಅದರ ವಿಶಿಷ್ಟತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಡಾ॥ ಶಶಿಕಲಾ, ಅಧ್ಯಾಪಕಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56

–1–

ಪಾರಂಪರಿಕ ಸಮಾಜದ ದಮನಿತ ದನಿಗಳಲ್ಲಿ ಹೆಣ್ಣಿನ ದನಿಯೂ ಒಂದು. ಸಿಮೋನ್‌ದ ಬುವಾ ಹೇಳುವ ಮಾತಿನಂತೆ ಹೆಣ್ಣು ಸಮಾಜದಿಂದ ರೂಪಿಸಲ್ಪಡುತ್ತಾಳೆ. ಅದರಂತೆ ಗಂಡೂ ಬೆಳೆದಂತೆ ಆಯಾ ಸಮಾಜದಿಂದ ರೂಪಿಸಲ್ಪಡುತ್ತಾನೆ. ಈ ನೆಲೆಯಿಂದ ಆಯಾ ಸಮಾಜದ ನಂಬಿಕೆಗಳು ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧವನ್ನು, ವ್ಯಕ್ತಿಗಳನ್ನು ನೋಡುವ ಅನುಭವಿಸುವ ಕ್ರಮವನ್ನು ಸಮಾಜದಿಂದಲೇ ಕಂಡುಕೊಳ್ಳುತ್ತಾನೆ. ಅಲ್ಲದೆ ಬದುಕಿನ ನಂಬಿಕೆಗಳು, ಜೀವನ ದೃಷ್ಟಿಯೂ ಇದೆ ಸಮಾಜದಿಂದ ರೂಪಿಸಲ್ಪಟ್ಟದೇ ಆಗಿರುತ್ತದೆ. ಇಂತಹ ನಂಬಿಕೆಗಳ ಮೊತ್ತವು ಪುರುಷ ಮತ್ತು ಸ್ತ್ರೀ ದೃಷ್ಟಿಕೋನವನ್ನು ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ವ್ಯಕ್ತಿಗಳಾಗಿ ಇವರಿಬ್ಬರ ಸಂವೇದನೆಗಳು ವಿಶಿಷ್ಟವಾದರೂ, ಒಂದು ಸಮಾಜದ ಅಂಗವಾಗಿ ರೂಪಿಸಲ್ಪಟ್ಟ ಅವರ ಸಂವೇದನೆಗಳಲ್ಲಿ ಪರಂಪರಾಗತ ದೃಷ್ಟಿಕೋನವು ಅವರ ಅರಿವಿಗೆ ಬರದಂತೆ ಬಿರುವ ಪ್ರಭಾವ ಒಂದೆಡೆಯಾದರೆ, ಇನ್ನೊಂದೆಡೆ ಅರಿವಿಗೂ ಬಂದು ಇಂತಹ ಮಿತಿಗಳನ್ನು ದಾಟಲಾಗದೆ ಮಾನಸಿಕವಾಗಿ ಬಂಧಿತರಾದ ಮಾದರಿಯಿದೆ. ಈ ದಿಸೆಯಲ್ಲಿ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯೋತ್ತರದ ಕಾಲಘಟ್ಟದ ಹೆಣ್ಣಿನ ನೆಲೆಗಳ ಸ್ವರೂಪವು ವಿಭಿನ್ನವಾಗಿರುವುದನ್ನು ಕಾಣಬಹುದಾಗಿದೆ.

ನಂಜನಗೂಡು ತಿರುಮಲಾಂಬ, ಕೊಡಗಿನ ಗೌರಮ್ಮ, ಸರಸ್ವತೀಬಾಯಿ ರಾಜವಾಡೆ, ಶ್ಯಾಮಲಾದೇವಿ ಬೆಳಗಾಂವಕರ ಇಂತಹವರ ಬರಹಗಳು ಸಮಾಜದ ಒಪ್ಪಿದ ಮೌಲ್ಯಗಳಲ್ಲಿ ಬದುಕನ್ನು ಸವೆಸುತ್ತಿರುವ ಹೆಣ್ಣುಗಳ ನೋವಿನ ದನಿಗಳನ್ನು ದಾಖಲಿಸುತ್ತಿರುವುದು ಕಂಡುಬರುತ್ತದೆ. ಇಲ್ಲಿ ಹೆಣ್ಣು ತನ್ನ ಭಾವನೆ, ನೋವು, ನಲಿವಿನ ಬಗೆಗಳನ್ನು ಸಮಾಜ ಕಟ್ಟಿಕೊಟ್ಟಿರುವ ಬದುಕಿನ ಚೌಕಟ್ಟಿನಲ್ಲಿಯೇ ಜೀವನವನ್ನು ಅನುಭವಿಸಬೇಕಾಗಿರುವ ಅನಿವಾರ್ಯತೆಗೆ ತನ್ನನ್ನು ಒಡ್ಡಿಕೊಂಡಿರುವುದು ಕಂಡುಬರುತ್ತದೆ. ಕೊಡಗಿನ ಗೌರಮ್ಮನವರ ಕಥೆಯಾದ 'ವಾಣಿಯ ಸಮಸ್ಯೆ'ಯನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ವಿಧವೆ ಇಂದುವಿನ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಬಿಚ್ಚಿಡುವುದು ಕಥೆಯ ಕಲಾತ್ಮಕತೆಯಿಂದ ಗಮನಾರ್ಹವಾದ ಸಂಗತಿಯಾದರೂ ಕೊನೆಯಲ್ಲಿ ಇಂದು ತೆಗೆದುಕೊಳ್ಳುವ ನಿರ್ಧಾರವು ಮತ್ತೆ ಸಾಂಪ್ರದಾಯಿಕ ಒಪ್ಪಿದ ಬದುಕಿನ ಚೌಕಟ್ಟೇ ಆಗಿದೆ. ಒಂದು ಸಂದಿಗ್ಧ ಸ್ಥಿತಿಯಲ್ಲಿ ತನ್ನನ್ನು ನಿಯಂತ್ರಿಸಿಕೊಳ್ಳುವುದು ಹೆಣ್ಣಿನ ಜೀವನದ ಮೌಲ್ಯವಾಗಿ ಪರಿಗಣಿಸಲ್ಪಡುವುದರ ನೆಲೆಯಲ್ಲಿಯೇ ತನ್ನ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಸಾಂಪ್ರದಾಯಿಕ ಸಮಾಜ ಗಂಡಿಗೂ ಇಂತಹದೇ ಆದರ್ಶವನ್ನು ಮುಂದೊಡ್ಡಿದರೂ (ಉದಾ.ಗೆ ಮಾಸ್ತಿಯವರ ಕತೆಗಳಲ್ಲಿ ಇಂತಹ ಮಾದರಿಗಳು ಕಂಡುಬರುತ್ತವೆ), ಅವಿಭಕ್ತ ಕುಟುಂಬದ ವ್ಯವಸ್ಥೆಯಲ್ಲಿ ಬಾಳು ಸುಗಮವಾಗಿ ಸಾಗಬೇಕಾದರೆ ಹೆಣ್ಣಿಗೆ ಇಂತಹ ಚೌಕಟ್ಟುಗಳು ಹೆಚ್ಚಾಗಿಯೇ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಒಂದು ವೇಳೆ ಇಂತಹ ಚೌಕಟ್ಟುಗಳನ್ನು ಮೀರಿದರೂ ಅಂತಹ ಹೆಣ್ಣುಗಳು ಸ್ವಾರ್ಥಿಗಳಾಗಿ ಬಿಂಬಿತವಾಗುತ್ತಾರೆ. ಉದಾಹರಣೆಯಾಗಿ ಕುವೆಂಪುರವರ ಕಾನೂರು ಸುಬ್ಬಮ್ಮ ಹೆಗ್ಗಡತಿಯ ಪಾತ್ರದಲ್ಲಿ ಸುಬ್ಬಮ್ಮನನ್ನು ಚಿತ್ರಿಸಿರುವ ರೀತಿಯನ್ನು ನೋಡಬಹುದು.

ಸಾಮುದಾಯಿಕ ಬದುಕೇ ಒಂದು ದೊಡ್ಡ ಮೌಲ್ಯವಾಗಿ ಅದಕ್ಕೆ ಮಹತ್ವ ಕೊಡುವಂತೆ ಬದುಕುವುದೇ ಬಹುದೊಡ್ಡ ಆದರ್ಶವಾಗಿ ಸ್ವಾತಂತ್ರ್ಯಪೂರ್ವದ ಜೀವನ ಮತ್ತು ಸಾಹಿತ್ಯ ಕಂಡುಬರುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಒಂದು ರಾಜಕೀಯ ಪ್ರೇರಣೆಯೂ ಇದರ

ಬೆನ್ನಿಗಿರುವುದಾಗಿದೆ. ತ್ರಿವೇಣಿಯವರ ಸಾಹಿತ್ಯವೂ ಸಹ ಇಂತಹದ್ದೇ ಮಾದರಿಯನ್ನು ಗುರುತಿಸಿದರೂ, ಸಾಂಪ್ರದಾಯಿಕ ಕುಟುಂಬಗಳಲ್ಲಿ ಹೆಣ್ಣು ಹೇಗೆ ಒಂದು ನೋವಿಗೆ ತುತ್ತಾಗುತ್ತಾಳೆ, ಇಂತಹ ನೋವುಗಳು ಅವಳ ಬದುಕಿನ ಚೈತನ್ಯವನ್ನೇ ಉಡುಗಿಸಿಬಿಡುತ್ತವೆ ಎನ್ನುವುದನ್ನು ಗುರುತಿಸುತ್ತದೆ. 'ನರಬಲಿ' ಕತೆಯಲ್ಲಿ ರತ್ನಾಳ ಮೇಲೆ ನಡೆಯುವ ಆಕ್ರಮಣವು ಅವಳ ಮಗುವಿನ ಹಂಬಲದ ಕೊರತೆಯನ್ನು ನೀಗಿಸಿದರೂ, ಅದಕ್ಕಿಂತ ಹೆಚ್ಚಾಗಿ ರತ್ನಾ ತನ್ನ ಮೇಲೆ ನಡೆದ ಆಕ್ರಮಣದಿಂದಾಗಿ ಮಾನಸಿಕವಾಗಿ ಕುಗ್ಗಿ ಹೋಗಿ ತನ್ನ ಬದುಕನ್ನೇ ಸಮಾಪ್ತಿ ಮಾಡಿಕೊಳ್ಳುತ್ತಾಳೆ. ಇಲ್ಲಿ ರತ್ನಾಳಿಗೆ ಸಂಪ್ರದಾಯಿಕ ನೈತಿಕ ಮೌಲ್ಯದ ಪ್ರಜ್ಞೆ ಎಷ್ಟು ಗಾಢವಾಗಿ ಅವಳನ್ನು ಕಾಡುತ್ತದೆ ಎಂದರೆ ಇಡೀ ಬದುಕನ್ನೇ ಬಲಿ ತೆಗೆದುಕೊಳ್ಳುವಷ್ಟು, ಇವಳ ಬದುಕಿನ ಮೌಲ್ಯಗಳು ಸಾಂಪ್ರದಾಯಿಕ ಸಮಾಜದ ಕೊಡುಗೆಗಳು. ಬದುಕಿನ ದೃಷ್ಟಿಯೂ ಕೂಡಾ ಅವುಗಳಿಂದಲೇ ನಿರ್ದೇಶಿತವಾಗುತ್ತವೆ. ಇದೇ ಸಂದರ್ಭದಲ್ಲಿ ಮಾಸ್ತಿಯವರ 'ಗೌತಮಿ ಹೇಳಿದ ಕತೆ'ಯನ್ನು ನೆನಪಿಸಿಕೊಳ್ಳಬಹುದು. ಪುರುಷ ಮತ್ತು ಸ್ತ್ರೀ ಎಂಬ ಭೇದವಿಲ್ಲದೆ ಜೀವನವನ್ನು ನೋಡುವ ದೃಷ್ಟಿಯಲ್ಲಿ ಸಂಪ್ರದಾಯವೇ ಪ್ರಧಾನ ಪಾತ್ರವಹಿಸುತ್ತಿದೆ.

–2–

ಸ್ವಾತಂತ್ರ್ಯಾ ನಂತರದಲ್ಲಿ ಬದಲಾದ ಅನೇಕ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರವು ಮನುಷ್ಯನ ಯೋಚನೆಯ ಕ್ರಮವನ್ನೇ ಬದಲಾಯಿಸಿಬಿಟ್ಟವು. ಈಗಾಗಲೇ ನೋಡಿದಂತೆ ಮನುಷ್ಯನು ತನ್ನ ಬಗ್ಗೆ ಯೋಚಿಸುವಂತೆ ಮಾಡುವ ವಾತಾವರಣದ ಸೃಷ್ಟಿಯಾಯಿತು. ಇದರಿಂದಾಗಿಯೇ ವ್ಯಕ್ತಿಪ್ರಜ್ಞೆ ಪ್ರಬಲವಾಗಿ ಇದುವರೆಗಿನ ಬದುಕಿನ ಕ್ರಮದಲ್ಲಿ ವಿಘಟನೆ ಕಂಡುಬಂದಿತು. ಸಂಪ್ರದಾಯದ ನೆಲೆಗಳು ತಮ್ಮ ಅರ್ಥವನ್ನು ಕಳೆದುಕೊಂಡವು. ಇಲ್ಲವೇ ಸಂಪ್ರದಾಯದ ಹಿಂದಿನ ಮುಖವಾಡಗಳು ಕಳಚಿಬಿದ್ದವು. ಇಂತಹದ್ದೇ ಮಾದರಿಗಳು ಸ್ತ್ರೀಯನ್ನು ಸಂವೇದನೆಯ ನೆಲೆಯನ್ನು ಹೇಗೆ ಪ್ರಭಾವಿಸಿದೆ ಎಂದು ನೋಡಿದಾಗ ಹೆಣ್ಣು ಪುರುಷನ ಬೇಡಿಕೆಗಳನ್ನು ಈಡೇರಿಸುವ ಸಾಧನವೇ ಆದಳು. ಅನಂತಮೂರ್ತಿ, ಲಂಕೇಶ್, ತೇಜಸ್ವಿಯವರ ಕತೆಗಳಲ್ಲಿ ಇದೇ ನೆಲೆ ಪ್ರಧಾನವಾಗಿರುವುದನ್ನು ಕಾಣಬಹುದಾಗಿದೆ. ಹೆಣ್ಣಿನ ಸಾಂಪ್ರದಾಯಿಕ ನೆಲೆಯ ಇನ್ನೊಂದು ಮಾದರಿ ಕಂಡುಬರುತ್ತದೆ ಅಷ್ಟೇ ಹೊರತು ಅಂತಹ ಮಹತ್ತರ ಬದಲಾವಣೆಯೇನೂ ಇಲ್ಲ. ಆದರೆ ಮಹಿಳಾ ಬರಹಗಾರರಲ್ಲಿ ವ್ಯಕ್ತಿನಿಷ್ಠ ನೆಲೆಯು ಮಹಿಳೆಯರಲ್ಲಿ ತನ್ನ ಅಸ್ತಿತ್ವದ ಬಗೆಗಿನ ಎಚ್ಚರವನ್ನು ಮೂಡಿಸಿತು. ಈ ನಿಟ್ಟಿನಲ್ಲಿ ರಾಜೇಶ್ವರಿ ಎನ್.ರಾವ್ ಹಾಗೂ ವೀಣಾ ಶಾಂತೇಶ್ವರ ಅವರ ಸಾಹಿತ್ಯವನ್ನು ನೋಡಬಹುದು. ವೀಣಾ ಅವರ ಬಿಡುಗಡೆ ಕಥೆಯು ಗಂಡು ಹೆಣ್ಣಿನ ಸಂಬಂಧದಲ್ಲಿನ ಅತೃಪ್ತಿಯು ಕೊನೆಯಲ್ಲಿ ಹೆಣ್ಣಿಗೆ, ಗಂಡಿನ ಸಾವು ಬಿಡುಗಡೆಯ ಭಾವವನ್ನು ತರುವುದನ್ನು ಹೇಳುತ್ತದೆ. ಇಲ್ಲಿ ಸಂಪ್ರದಾಯಿಕ ಸಮಾಜವು ಹೆಣ್ಣಿಗೆ ವಿಧವೆಯ ಪಟ್ಟವನ್ನು ಕಟ್ಟಬಹುದಾದರೂ ಅದಕ್ಕಿಂತ ಹೆಣ್ಣು ಗಂಡಿನೊಡನೆಯ ಸಂಬಂಧದಲ್ಲಿ ಅನುಭವಿಸಿದ ನೋವಿನ ಮುಂದೆ ಅದು ಬಹಳ ಕಡಿಮೆ ಎನ್ನಿಸುವ ಆಲೋಚನೆಗಳು ಮೂಡುತ್ತಿರುವುದು ಮುಖ್ಯವಾದ ಸಂಗತಿ. ಏಕೆಂದರೆ ಸಂಪ್ರದಾಯದ ಮುಖವಾಡದೊಳಗಿನ ಕ್ರೌರ್ಯ ಅರಿವಿಗೆ ಬರುವುದು ಮಾತ್ರವೇ ಅಲ್ಲದೆ, ಕ್ರೌರ್ಯವನ್ನು ಅನುಭವಿಸುತ್ತಿರುವ ಹೆಣ್ಣು ಅದನ್ನು ವಿರೋಧಿಸುವ ಧೈರ್ಯವನ್ನು, ಸಾಮರ್ಥ್ಯವನ್ನು ಕಂಡುಕೊಳ್ಳುವಂತೆ ಆಗಿದ್ದು ಸ್ತ್ರೀ ಸಂವೇದನೆಯಲ್ಲಾದ ಬದಲಾವಣೆ. ಈ ಕಾಲಘಟ್ಟದಲ್ಲಿ ಗಂಡು ತನ್ನ ಅಸ್ತಿತ್ವದ ಬಗ್ಗೆ ಕುರಿತು ಚಿಂತಿಸಿದರೆ, ಹೆಣ್ಣು ತನ್ನ ಅಸ್ತಿತ್ವವನ್ನು

ಪ್ರಜ್ಞಾಪೂರ್ವಕವಾಗಿ ಭಾವನಾತ್ಮಕ ನೆಲೆಯಲ್ಲಿಯೂ ಅನುಭವಿಸುತ್ತಾ, ಅದರಲ್ಲಿನ ನೋವಿನ ನೆಲೆಗಳಲ್ಲಿ ಒಂದು ಸಂಸ್ಥೆಯಾಗಿ ಗಂಡನ್ನು ನೋಡುತ್ತಾಳೆ. ಇಲ್ಲಿ ವ್ಯಕ್ತಿವಿಶಿಷ್ಟತೆಯೂ ಇದೆ, ಅಂತೆಯೇ ಹೆಣ್ಣು ಸಾಮಾಜಿಕವಾಗಿ ಒಂದು ಸಂಸ್ಥೆಯಾಗಿ ತನ್ನ ಮೇಲಿನ ಅಕ್ರಮಣವನ್ನು ಅನುಭವಿಸುತ್ತ ಮಾನಸಿಕವಾಗಿ ಬಂಧಿತಳಾಗಿ ನಿಲ್ಲದೆ ಚೌಕಟ್ಟುಗಳನ್ನು ಪ್ರಶ್ನಿಸುವಂತಾದದ್ದು ಮತ್ತು ವಿರೋಧಿಸುವಂತಾದದ್ದು ಮುಖ್ಯವಾದ ನೆಲೆ.

75ರ ದಶಕದ ನಂತರ ಜಾಗತಿಕ ಮಟ್ಟದಲ್ಲಿ ಚರ್ಚಿತವಾಗುತ್ತಿರುವ ಸ್ತ್ರೀವಾದ ಮತ್ತು ಅದರ ಸೈದ್ಧಾಂತಿಕ ನಿಲುವುಗಳು ವೈಚಾರಿಕತೆಯು ಕನ್ನಡ ಜಗತ್ತನ್ನು ಹೆಚ್ಚು ಹೆಚ್ಚು ಪ್ರವೇಶಿಸಿತು. ಅಂತೆಯೇ ಸಣ್ಣ ಕಥಾ ವಲಯವು ಸ್ತ್ರೀ ಕೇಂದ್ರಿತ ನೆಲೆಯ ಮೂಲಕ ಬದುಕನ್ನು ಚಿತ್ರಿಸತೊಡಗಿತು. ಹೆಣ್ಣಿನ ಪ್ರಪಂಚ, ಅವಳ ಅನುಭವದ ಜಗತ್ತು ಇವು ಅನಾವರಣಗೊಳ್ಳತೊಡಗಿತು. ವೈದೇಹಿ, ಎಚ್.ನಾಗವೇಣಿಯರನ್ನು ಹೆಣ್ಣಿನ ಲೋಕದ ಕಥಾವಸ್ತುವನ್ನು ಬಳಸಿಕೊಂಡಿದ್ದು ಕಂಡುಬರುತ್ತದೆ. ವೈದೇಹಿಯವರಲ್ಲಿ ಸಾಂಪ್ರದಾಯಿಕ ಕುಟುಂಬದ ಹೆಣ್ಣುಗಳು ಕೌಟುಂಬಿಕ ವಲಯದಲ್ಲಿ ಗಂಡಿನ ಮರ್ಜಿಯನ್ನು ಅನುಸರಿಸಿಯೇ ಬಾಳುವುದರಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತವೆ.

'ಅಕ್ಕು' ವಿನಂತಹ ಕತೆಯೊಳಗೆ ಅಕ್ಕುವಿನ ಹುಚ್ಚನ್ನು ಒಂದು ಶಕ್ತಿಯಂತೆ ಜಿ.ಎಸ್. ಆಮೂರರು ಕಾಣುತ್ತಾರೆ. ಆದರೆ ಬುದ್ಧಿಭ್ರಮಣೆಯ ಸ್ಥಿತಿಯಲ್ಲಿ ಎಲ್ಲರ ಬದುಕಿನ ಗುಟ್ಟುಗಳನ್ನು ಹೊರಹಾಕುವ, ತನ್ನ ಬದುಕಿನ ನೋವಿನ ಪರ್ಯಾಯದ ನೆಲೆಗಳನ್ನು ಹುಚ್ಚಿನ ಸ್ಥಿತಿಯಲ್ಲಿ ಕಂಡುಕೊಳ್ಳುವುದು, ಹೆಣ್ಣಿನ ಪ್ರತಿಭಟನೆಯು ರಚನಾತ್ಮಕ ಸ್ವರೂಪವನ್ನು ಪಡೆಯದೇ ಹೋಗುವುದನ್ನು ಹೇಳುತ್ತಿದೆಯೇ ಹೊರತು ಅವಳ ಒಂದು ಶಕ್ತಿಯನ್ನಲ್ಲ. ಆದರೆ ಪುಟ್ಟಮ್ಮತ್ತೆ ಮತ್ತು ಅವಳ ಮೊಮ್ಮಗಳು ಕತೆಯಲ್ಲಿ ಪುಟ್ಟಮ್ಮತ್ತೆ, ಮತ್ತು ಅವಳ ಮಗಳು ಯಾವುದನ್ನು ವಿರೋಧಿಸದೇ ರಾಜಿಮಾಡಿಕೊಂಡು ಬದುಕುವುದರ ಮೂಲಕ ಪಡೆದುಕೊಂಡಷ್ಟನ್ನು ಸಹ ಮೊಮ್ಮಗಳಾದ ಕಮಲಾವತಿ ಪಡೆದುಕೊಳ್ಳದೆ ಹೋಗುವುದು ಎಲ್ಲೋ ರಾಜಿಸೂತ್ರವೇ ವಾಸಿ ಎಂಬ ಧ್ವನಿಯನ್ನು ಕತೆ ಹೊರಡಿಸಿಬಿಡುತ್ತದೆ. ನಾಗವೇಣಿಯವರ ಕತೆಗಳಲ್ಲಿ ಶೂದ್ರ ಹಣ್ಣುಗಳ ಒರಟುತನ, ಹೆಣ್ಣು ಎಂಬ ಮಾರ್ದವತೆಯನ್ನು ಮೀರಿ ವರ್ತಿಸುವ ಅವರ ಸ್ವಾರ್ಥ ಇಂತಹ ವಸ್ತುಗಳು ಕಾಣಿಸುತ್ತಿವೆ. ಹೆಣ್ಣಿನ ಸಮೃದ್ಧ ಅನುಭವ ಲೋಕದ ಅನಾವರಣವಾಗುತ್ತಿದೆ.

ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಸ್ತ್ರೀವಾದದಂತಹ ಸೈದ್ಧಾಂತಿಕ, ವೈಚಾರಿಕತೆಗಳ ಪರಿಚಯವಿಲ್ಲದ ಸಂದರ್ಭದಲ್ಲಿ ವ್ಯಕ್ತಗೊಂಡಂತಹ ಕಥಾವಸ್ತುಗಳು ಮತ್ತು ಅದರ ನಿರೂಪಣಾ ಕ್ರಮದಲ್ಲಿ ಸರಳತೆಯೇ ಪ್ರಧಾನವಾಗಿದೆ. ಸ್ವಾತಂತ್ರ್ಯಾ ನಂತರದಲ್ಲಿ ಪ್ರವೇಶಿಸಿದ ಅಸ್ತಿತ್ವವಾದದಂತಹ ತಾತ್ವಿಕತೆಯ ಸಂದರ್ಭದಲ್ಲಿ ವ್ಯಕ್ತಗೊಂಡ ಕಥಾವಸ್ತುಗಳು ಗಂಡನ್ನು ತನಗೆ ವಿರೋಧದ ನೆಲೆಯಲ್ಲಿ ಇಟ್ಟು ನೋಡಿಕೊಂಡಿದರೂ ಸ್ತ್ರೀ ಸಂವೇದನೆಯ ಸಂದರ್ಭದಲ್ಲಿ ಅವಳ ಅಂತರಂಗವನ್ನು ಬಿಚ್ಚಿ ತೋರಿಸುವ ಮಾದರಿಯು ಕಂಡುಬಂದಿತು. ದನಿ ಇಲ್ಲದವಳ ಅಂತರದ ಜಗತ್ತಿನ ತಾಕಲಾಟವು ಬೆಳಕಿಗೆ ಬಂದದ್ದು, ಸಾಂಪ್ರದಾಯಿಕ ಸಮಾಜದೊಳಗೆ ನಲುಗುತ್ತಿರುವ ಮೌಲ್ಯಗಳ ಮುಖವಾಡದೊಳಗೆ ಬಂಧಿತಳಾದವಳ ಮನಸ್ಸುಗಳು ಅನಾವರಣಗೊಂಡಿದ್ದು ಸ್ತ್ರೀ ಸಂವೇದನೆಯ ದೃಷ್ಟಿಯಿಮದ ಹೊಸ ಲೋಕದ ಪರಿಚಯವನ್ನು ಮಾಡಿಸಿತು. ಒಂದು ಸಂಸ್ಥೆಯಾಗಿ, ವ್ಯಕ್ತಿಯಾಗಿ ಹೆಣ್ಣು ಅನುಭವಿಸುತ್ತಿರುವ ಬದುಕು ತೆರೆದುಕೊಂಡಿತು. ಆದರೆ ಮಹಿಳಾ ಲೇಖಕಿಯರು ಕಥಾವಸ್ತುವನ್ನು ನಿರ್ವಹಿಸುತ್ತಿರುವ ಕ್ರಮದಲ್ಲಿ, ವಸ್ತುವಿನ ಸಂಕೀರ್ಣತೆಯನ್ನು ಹಿಡಿಯುವಲ್ಲಿ ಇನ್ನಷ್ಟು ಹೆಚ್ಚಿನ ಪ್ರಯತ್ನಗಳ ಕೊರತೆಯನ್ನು ಸಣ್ಣ ಕಥಾ ಲೋಕ ಅನುಭವಿಸುತ್ತಿದೆ.

–3–

ಹೆಣ್ಣಿ ಸಂವೇದನೆಯ ವಿಶಿಷ್ಟತೆಯನ್ನು ವಿಭಿನ್ನ ಲಂಕೇಶರ 'ದ ಸೂಯಿಸೈಡ್ ನೋಟ್' ಎನ್ನುವ ಕಥೆ, ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕಥೆ ಹಿಡಿಯುತ್ತದೆ. 'ಸೂಯಿಸೈಡ್ ನೋಟ್' ನಲ್ಲಿ ಹೆಣ್ಣು ಎಷ್ಟು ಸೂಕ್ಷ್ಮವಾಗಿ ತನ್ನ ಪ್ರವೃತ್ತಿಗಳನ್ನು ಅನುಭವಿಸಬಲ್ಲಳು ಎಂಬುದನ್ನು ಲಂಕೇಶರು ಚಿತ್ರಿಸುತ್ತಾರೆ. 'ದಾಹ'ದಂತ ಕತೆಯಲ್ಲಿ, 'ಸ್ಟೆಲ್ಲಾ ಎಂಬ ಹುಡುಗಿ' ಕತೆಯಲ್ಲಿ ಹೆಣ್ಣಿನ ಮಾನಸಿಕ ಸ್ಥಿತಿಯ ಸಂಕೀರ್ಣತೆಯನ್ನು ಹಿಡಿಯುವಾಗ್ಗೆ ಇರುವರೆಗೂ ಇದ್ದ ನೆಲೆಗಳು ಬದಲಾಗುತ್ತಿರುವುದು ಕಾಣಿಸುತ್ತವೆ. ತನ್ನ ಬಯಕೆಯನ್ನು ಪೂರೈಸುವವಳಾಗಿ ಮಾತ್ರ ಕಂಡುಬರುತ್ತಿದ್ದವಳು ಕ್ರಮೇಣ ಒಂದು ಚೈತನ್ಯದ ಜೀವಂತಿಕೆಯ ಸ್ವರೂಪವಾಗಿ ಕಂಡುಬರುವಂತಾದದ್ದು, ಇದರೊಡನೆಯೆ ಗಂಡಿನ ಅಸಹಾಯಕತೆ, ಅವನ ಕೊರತೆಯನ್ನು ತುಂಬುವ ಸಾಧನವಾಗಿ ನೊಡುವಂತಾದದ್ದು 'ಹೆಣ್ಣು' ಎಂಬ ಸಂಸ್ಥೆಯನ್ನು ನೋಡುವ ದೃಷ್ಟಿಕೋನದಲ್ಲಾದ ಬದಲಾವಣೆಯನ್ನು ಸೂಚಿಸುತ್ತದೆ. ಇದು ಸಂಪ್ರದಾಯಕ್ಕಿಂತ ಬಹಳ ಭಿನ್ನವಾದ ಜೀವನದ ಗ್ರಹಿಕೆಯನ್ನು ರೂಢಿಸಿಕೊಳ್ಳುವ ಕಡೆಗೆ ಚಲಿಸುತ್ತಿದೆ. ಹೆಣ್ಣಿನ ಬಗೆಗಿನ ಅನುಕಂಪದ ನೆಲೆಯಿಂದ, ದೇಹ ಕೇಂದ್ರಿತ ನೆಲೆಯಿಂದ ಹೊರಬಂದು ಅವಳ ವ್ಯಕ್ತಿತ್ವದ ವಿಶಿಷ್ಟತೆಯಲ್ಲಿ ಹೆಣ್ಣನ್ನು ಕಂಡುಕೊಳ್ಳುವಂತೆ ಆಗುತ್ತಿರುವುದು 'ಗಂಡು ಮತ್ತು ಹೆಣ್ಣಿನ ಸಂಬಂಧವು ಎಂತಹ ಒಂದು ಸಂದಿಗ್ಧತೆಯಲ್ಲಿದೆ ಎಂಬುದನ್ನು ಚಿತ್ರಿಸುವ ಸಂಕೀರ್ಣ ಮುಖಗಳು ಹೆಣ್ಣಿನ ಸಂವೇದನೆಯಲ್ಲಿ ಮೂಡಿಬರುವಂತಾದರೆ ಮತ್ತಷ್ಟು ಹೊಸ ಲೋಕಗಳ ಪರಿಚಯವಾಗುತ್ತದೆ. ಕನ್ನಡ ಕಥಾ ಲೋಕವು ಈ ನಿಟ್ಟಿನೆಡೆಗೆ ಚಲಿಸುವಂತಾಗಬೇಕಾಗಿದೆ.

●

"ಭಾರತದಲ್ಲಿ ನನ್ನ ಬಾಲ್ಯದ ದಿನಗಳಿಂದಲೂ ನನ್ನ ತಂದೆ, ನನ್ನ ಅಜ್ಜಿ ಮತ್ತು ವಿಶೇಷವಾಗಿ ಮೋಹನದಾಸ ಕೆ. ಗಾಂಧಿ ಅವರ ಉದಾಹರಣೆಗಳಿಂದ ಶ್ರದ್ಧೆಗೆ ಸದಾ ಕರ್ಮದ ಬೆಂಬಲವಿರಬೇಕು ಎಂಬ ಪಾಠವನ್ನು ಕಲಿತಿದ್ದೆ. ಕಲ್ಕತ್ತಾದ ಅತ್ಯಂತ ನಿರ್ಗತಿಕರಿಗೆ ನೆರವಿನ ಹಸ್ತ ಚಾಚಿದ ಮದರ್ ಥೆರೆಸಾ ಅವರನ್ನು ಕಾಣುವ ಭಾಗ್ಯ ನನ್ನದಾಗಿತ್ತು. ಆಕೆ ನನ್ನ ಅಚಲವಾದ ಅರ್ಪಣಾ ಮನೋಭಾವದಿಂದ ಕರ್ಮದಲ್ಲಿನ ಶ್ರದ್ಧೆಯ ಸಂಕೇತವಾಗಿದ್ದಳು"

– **ಮಣಿ ಭೌಮಿಕ್**

ಯು ಆರ್.......

(ನೀವು ನೀವಾಗಿದ್ದೀರಿ)

ಮಾಗಿದರೂ ಮಾಸಿಲ್ಲ ಚೆಲುವು, ಕುಂದಿಲ್ಲ
ನಡಿಗೆಯಲ್ಲಿಯ ಬೆಡಗು. ಈಗಲೂ ಮೊದಲಿನ ಹಾಗೆ
ಮಾತು. ನಿಪುಣ ಕಥೆಗಾರನ ಮಾತು
ಸಂಜ್ಞೆಗಳ ಮೂಲಕ ಇಲ್ಲದ್ದನ್ನು ಎಲ್ಲಿಂದಲೋ ಹಿಡಿದುತಂದು
ನೋಡಿ ಇದು ಹೀಗಿದೆ ಎಂದು ಹೇಳುವ ಪರಿ
ನಿಮಗೆ ಮಾತ್ರ ದಕ್ಕಿದ್ದು. ಆಗಸದಾಚೆನಾಚೆನಾಗಸಕ್ಕೆ
ಕೈಚಾಚಿ ಅಲ್ಲಿ ನಾಗಂದಿ ಮೇಲೆ ಏನೊ ಇಟ್ಟಿದ್ದು
ನೆನಪಾಗಿ ಹುಡುಕುತ್ತೀರಿ ನೀವು.

ಕಾಯುತ್ತೇವೆ ನಾವು ಗಟ್ಟಿಪಿಂಡಗಳು
ಕಾಯುತ್ತೇವೆ ನಮಗಾಗಿ ನೀವು ಏನನ್ನಾದರು ಹುಡುಕಿ
ತಂದೇ ತರುತ್ತೀರೆಂದು. ಕತ್ತಲೆ ಕವಿದ
ಖಾಲಿ ರಾತ್ರಿಗಳಲ್ಲಿ ಮುಚ್ಚಿಟ್ಟುಕೊಳ್ಳಲಾಗುವುದಿಲ್ಲ
ಉರಿವ ಜ್ವಾಲೆಯನ್ನು. ನಿಗಿನಿಗಿಸುಡುವ ಕೆಂಡದ ಕೊಂಡ ಹಾದು
ಪ್ರೀತಿ ತುಂಬಿದ ನಿಮ್ಮ ಕಣ್ಣಲ್ಲೀಗ ದೀಪದ ಬೆಳಕು;
ಕಾಣುತ್ತದೆ ಜಗದ ಕಣ್ಣುಗಳಲ್ಲಿ ಅದರ ಹೊಳಪು.

ಚಂದ್ರಿಯ ಬಿಟ್ಟು ಊರುಬಿಟ್ಟು ಇಷ್ಟು ದೂರ
ನಡೆಗಟ್ಟುನಡೆದರೂ ಹೆಗಲಬಿಟ್ಟು ಇಳಿಯಲಿಲ್ಲ ಸತ್ತ ನಾರಣಪ್ಪ
ತ್ರಿವಿಕ್ರಮನಿಗೆ ಬೇತಾಳ ಕಾಡುವ ಹಾಗೆ ಮತ್ತೆ ಪ್ರಶ್ನೆ
ಆಚಾರ್ಯರು ಚಂದ್ರಿ ಜೊತೆ ಮಲಗಿದ್ದು ಕೂಡುವಿಕೆಯೋ
ಪ್ರಸ್ತವೋ ಮತ್ತೊಂದೋ? ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದು
ಬಗೆಹರಿಯಲೇ ಇಲ್ಲ ಹೆಂಡತಿ ಸತ್ತರೂ ಕೊನೆಗೆ.
ಬಗೆಹರಿಯುವುದಾದರೂ ಹೇಗೆ ಹುಡುಕಾಟದ
ದಾಹವೇ ಇಲ್ಲದಿದ್ದರೆ? ಅನ್ವೇಷಕನೇ ನಕಲಿಯಾದರೆ?
ಪಾಪವೋ ಅಪರಾಧವೋ ಮತ್ತಾವುದೇ ಇರಲಿ
ದಳ್ಳುರಿಯಾಗಿ ಒಳಗಿದನ್ನು ಸುಡದಿದ್ದರದೆಂಥ ಸಂಸ್ಕಾರ?

ನಿಮ್ಮ ಎದೆಯೊಳಗಿನ ಬೆಂಕಿ ಬೆಳಕಿನ ಕಿಡಿಯಾಗಿ
ಬೆಳಗಬೇಕಿದೆ ಎಲ್ಲರೆದೆಗಳಲ್ಲಿ. ಭವದ ಕಾಲ್ತೊಡಕು
ಬಿಡಿಸಿಕೊಂಡು ಬರಬೇಕು ನೀವು ನಾಗಾಲೋಟದೀಜಗತ್ತಿಗೆ

ಎಂ.ಎಸ್. ರುದ್ರೇಶ್ವರಸ್ವಾಮಿ, 553, ಪಲ್ಲವಿ 2ನೇ ಮುಖ್ಯರಸ್ತೆ, ವಸಂತವಲ್ಲಭನಗರ
ಸುಬ್ರಹ್ಮಣ್ಯಪುರ ಅಂಚೆ, ಬೆಂಗಳೂರು.

ಇಲ್ಲ ಎಲ್ಲವೂ ಮೊದಲಿದ್ದಂತಿಲ್ಲ. ತಿಳಿಯ ಹೇಳುತ್ತ
ಮಾಡುವುದಕ್ಕಿದೆ ನೂರಾರು ಕೆಲಸ. ಸಂಸಾರದಿಂದ ಸಂಸ್ಕೃತಿ
ಸಂಸ್ಕಾರ; ಗೊತ್ತು ನಿಮಗೆ. ಪ್ರೀತಿ ತುಂಬಿದ ಕಣ್ಣುಗಳಿಗೆ
ಕಂಡಿವೆ ನಿಮ್ಮ ಕಂಬನಿ ಹನಿದು ಎದೆಮೇಲೆ ಬಿದ್ದದ್ದು
ಇದು ಹೊಕ್ಕುಳದ ಸಂಬಂಧ. ಇರಬೇಕು ನೀವು ಕೊನೆವರೆಗು.

– ಎಂ. ಎಸ್. ರುದ್ರೇಶ್ವರಸ್ವಾಮಿ

(80ಕ್ಕೆ ಕಾಲಿಡುತ್ತಿರುವ ಡಾ. ಯು. ಆರ್. ಅನಂತಮೂರ್ತಿ ಅವರನ್ನು ನೆನೆಯುತ್ತ)

ಕೆ.ಪಿ.ಮೃತ್ಯುಂಜಯ ಅವರ ಎರಡು ಕವನ

ನಿನ್ನ ಮರೆಯಲ್ಲಿ ಇರುವೆ

ನೀನೇ ನನ್ನ ಮುಂದೆ
ಹಿಂಗೆ ಸೊಂಪಾದ ಮರವಾಗಿ
ಸಾವಿರಾರು ಕೈಯಿ
ಗಳನ್ನು ಅಲ್ಲಾಡಿಸುತಿರುವೆ–
ನನ್ನ ತಂದೆಯೆ.

ಮಳೆ ನಿಂತ ಮೇಲಿನ ಹನಿಯಲ್ಲವಿವು
ಕಣ್ಣುಗಳು ಮೊದಲೇ ತೊಟ್ಟಿದ್ದವು
ಅಂಗೈಯ ಗುಣಿ ಮಾಡಿ
ಪ್ರೋಕ್ಷಣೆ ಮಾಡಿದೆ–

ನನ್ನ ತಂದೆಯೆ.
ಯಾರೂ ಅರಿಯದ ಇಸುಮು ನಾನು
ನಿನ್ನ ಪದತಲದಿಂದ ದೂರವಿಹೆನು
ಮಾತಿನಲಿ ಮೌನದಲಿ ಕೊರಗುವೆನು
ನಗು–ಅಳುವೊ ಅಳು–ನಗುವೊ ತಿಳಿಯದವನು–
ನನ್ನ ತಂದೆಯೆ.

ಹಕ್ಕಿಯಂತೆ ನಿನ್ನ ಕೊಂಬೆಯಲಿ
ಕೂರಿಸಿಕೊ; ಹೂವಂತೆ ಎಲೆಗಳಲ್ಲಿ
ಅಡಗಿಸಿಕೊ. ಇರುವೆನು ನಿನ್ನ ಮರೆಯಲ್ಲಿ–
ನನ್ನ ತಂದೆಯೆ.

ಭಯದಲ್ಲಿ ದಿನ

ದಿನವೂ ಬೆಳಗ್ಗೆ
ವಿಚಿತ್ರ ಆತಂಕದಲ್ಲಿ ಶುರುವಾಗುತ್ತದೆ:
ಪುಂಡು ನಾಯಿ ಲಬಕ್ಕನೆ ಕಣಕಾಲಿಗೆ ಬಾಯಿ ಹಾಕುತ್ತದೋ
ಎಂಬ ಭಯದಲ್ಲಿ;
ಪತ್ನಿಯ ಹೊಸ ಸುಪ್ರಭಾತ ಏನಿರುತ್ತದೋ
ಎಂಬ ಡವಗಿನಲ್ಲಿ;
ಚಾಕರಿ ಕಳೆದು ಹೋದೀತೋ
ಎಂಬ ನಡುಗಿನಲ್ಲಿ;
ನಾನು ಮತ್ತೆ ಮತ್ತೆ ನೋಡುವ ಹುಡುಗಿ ಇಷ್ಟಪಡಲಾರಳೇನೋ
ಎಂಬ ತಲ್ಲಣದಲ್ಲಿ;
ಆರುಂಧತಿರಾಯ್‌ರನ್ನು ಗಂಭೀರ ಓದಿದ್ದಕ್ಕೆ ನಾನು
ನಕ್ಸಲ ಬೆಂಬಲಿಗನೋ–
ಮಫ್ತಿ ಪೇದೆ ಕೊಳಪಟ್ಟಿ ಹಿಡಿಯಬಹುದೋ
ಎಂಬ ಭೀತಿಯಲ್ಲಿ;
ಮುಸ್ಲಿಮ್ ಗೆಳೆಯನೊಂದಿಗೆ ಓಡಾಡುವ ಕಾರಣಕ್ಕೆ
ಆಗದವರು ಹಿಡಿದು ತದುಕುತ್ತಾರೇನೋ
ಎಂಬ ತಳಮಳದಲ್ಲಿ;
ಜಾತಿ ಮತ ಧರ್ಮ ಲಿಂಗ ಇತ್ಯಾದಿ
ಭೇದ ಸಲ್ಲದೆಂಬ ವಿಚಾರ ಕೇಳಿ
ವಿದ್ಯಾರ್ಥಿಗಳೇ ತಿರುಗಿ ಬೀಳುವರೆಂಬ
ವಿಚಿತ್ರ ಭಯದಲ್ಲಿ
ದಿನವರಳುತ್ತದೆ.
ರಾತ್ರೆ:
ಇವೇ
ದಿಗಿಲಿದ್ದರೂ
ನೆತ್ತಿಯಲ್ಲಿ ತಂಪು ಚಂದ್ರ;
ಭೂಮಿ ಮೇಲೆ
ಬೆಳದಿಂಗಳಿರುತ್ತದೆ.

– ಕೆ.ಪಿ.ಮೃತ್ಯುಂಜಯ

ದೊರೆ ಭೀಮಸೇನ ಜೋಶಿ

– ಪ್ರಮೋದ ಮುತಾಲಿಕ್



ಭೀಮಸೇನ ಜೋಶಿಯವರನ್ನು ಕುರಿತು ಯಾವ ಸಂಬೋಧನೆಯನ್ನು ಮಾಡಿದರೂ, ಅದು ಕ್ಲೀಷೆಯಾಗುವ ಎಲ್ಲಾ ಸಾಧ್ಯತೆಗಳಿರುವುದರಿಂದ ಆ ಒಂದು 'ಸಾಹಸಕ್ಕೆ' ಕೈ ಹಾಕದೆ, ಕಳೆದ ಸುಮಾರು ಮೂರುವರೆ ದಶಕಗಳಿಂದ ಸಂಗೀತವನ್ನು ಒಬ್ಬ ಸಾಮಾನ್ಯ ಮನುಷ್ಯನ ನೆಲೆಯಲ್ಲಿ ಕೇಳುತ್ತ ಬಂದ ನನ್ನ ಅನಿಸಿಕೆಗಳನ್ನು ದಾಖಲು ಮಾಡಿಕೊಳ್ಳುವುದು ಈ ಬರವಣಿಗೆಯ ಆಶಯ.

ಭೀಮಸೇನ ಜೋಶಿಯವರು ಒಂದು ದಂತ ಕಥೆ. ತನ್ನ ಜೀವಮಾನದಲ್ಲಿ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಸಂಗೀತ ಕಚೇರಿಗಳನ್ನು ನೀಡಿ ಅಷ್ಟೇ ಪ್ರಮಾಣದಲ್ಲಿ ನಂಬಲಸಾಧ್ಯ ಮಟ್ಟದ ಜನಪ್ರಿಯತೆಯನ್ನು ಜಗತ್ತಿನಾದ್ಯಂತ ಹೊಂದಿದ್ದ ಉದಾಹರಣೆಗಳು ಮನುಕುಲದ ಇತಿಹಾಸದಲ್ಲಿ ವಿರಳ. ಇದೇ ಜನವರಿ 24ರಂದು ಭೀಮಸೇನ ಜೋಶಿಯವರು ಸುದೀರ್ಘ ಕಾಯಿಲೆಯ ನಂತರ ಕೊನೆಯುಸಿರೆಳೆದಾಗ, ಇಡೀ ಜಗತ್ತಿನ ಮಾಧ್ಯಮಗಳು ಒಕ್ಕೊರಲಿನಿಂದ ಅವರನ್ನು ಮುಕ್ತ ಕಂಠದಲ್ಲಿ ನೆನೆದದ್ದು ಇದಕ್ಕೆ ಸಾಕ್ಷಿ. ತನಗಿಷ್ಟವಾದ ಅಭಿವ್ಯಕ್ತಿ ಮಾಧ್ಯಮವನ್ನು ಬದುಕಿನಲ್ಲಿ ಅತಿ ಬೇಗ ಗುರುತಿಸಿ, ಅದರಲ್ಲೇ ತನ್ನನ್ನು ತಾನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಾಗ, ಅಭಿವ್ಯಕ್ತಿಯೇ ವ್ಯಕ್ತಿಯಾಗುತ್ತಾನೆ. ಭೀಮಸೇನ ಜೋಶಿಯವರಿಗೆ ಆದದ್ದೂ ಇಷ್ಟೇ! ಎಂತಲೆ ಅವರ ಸಂಗೀತ ಕಚೇರಿಗಳು ನೀಡುವ ಅನುಭವವನ್ನು ಬಹುಶಃ ಬೇರಾವ ಕಲಾವಿದನ ಕಚೇರಿಗಳು ನೀಡಲಾರವು.

ಸಂಗೀತದ ತುಡಿತ ಭೀಮಸೇನ ಜೋಶಿಯವರಿಗೆ ಮೊದಲಾದದ್ದು ಬಾಲ್ಯಾವಸ್ಥೆಯಲ್ಲಿ.

ಪ್ರಮೋದ ಮುತಾಲಿಕ್, ಇಂಗ್ಲೀಷ್ ಪ್ರಾಧ್ಯಾಪಕ, ನ್ಯಾಶನಲ್ ಕಾಲೇಜ್, ಬಸವನಗುಡಿ, ಬೆಂಗಳೂರು–560004

ಅದೂ ಶಾಲೆಯಿಂದ ಮನೆಗೆ ಬರುವಾಗ; ದಾರಿಯಲ್ಲಿ ಗ್ರಾಮಾಫೋನ್ ಕಂಪನಿಯ ಅಂಗಡಿಯಲ್ಲಿ ಅಬ್ದುಲ್ ಕರೀಂಖಾನ್‌ರ ಜಿಂಜೋಟಿ ರಾಗದ ಠುಮರಿ ಒಂದನ್ನು ಕೇಳಿದಾಗ. ಇದರೊಂದಿಗೇನೆ ಅವರ ಬಸಂತ ರಾಗದ ಬಂದಿಶ್ ಒಂದನ್ನು ಕೇಳಿದ ಮೇಲಂತೂ ಅವರ ಹುಚ್ಚಿಗೆ ಕೊನೆ ಮೊದಲಿಲ್ಲವಾಯ್ತು. ಹೇಗಾದರೂ ಮಾಡಿ ತಾನೂ ಅದೇ ರೀತಿ ಹಾಡಬೇಕೆಂದು ಬಾಲಕ ಭೀಮಸೇನ ಪಣ ಮಾಡಿದಂತಿತ್ತು. ಪ್ರತಿದಿನ ಶಾಲೆಯಿಂದ ಬರುವಾಗ, ಆ ಅಂಗಡಿಯ ಹೊರಗೆ ನಿಂತು ಕರೀಂಖಾನ್‌ರ ಆ ಹಾಡುಗಳನ್ನು ಆಲಿಸುವುದು ಮತ್ತೆ ಇಡೀ ದಿನ ಅದೇ ಗುಂಗಿನಲ್ಲಿರುವುದು ಅವರ ದೈನಂದಿನ ಕ್ರಿಯೆಯ ಒಂದು ಅವಿಭಾಜ್ಯವಾದ ಅಂಗವೇ ಆಗಿ ಬಿಟ್ಟಿತು. ಪುಣ್ಯವಶಾತ್ ಭೀಮಸೇನ ಜೋಶಿಯವರ ತಂದೆಯವರಾದ ಗುರುರಾಜ ಜೋಶಿಯವರು ಅತ್ಯಂತ ಸೂಕ್ಷ್ಮ ಗ್ರಾಹಿಗಳಾಗಿದ್ದರು. ಹೀಗಾಗಿ ಮಗನ ತುಡಿತವನ್ನು ಬಹು ಬೇಗನೆ ಗುರುತಿಸಿದರು. ಒಮ್ಮೆ ಆತನನ್ನು ಗದಗ ಸಮೀಪದ ಕುಂದಗೋಳಕ್ಕೆ ಸವಾಯಿ ಗಂಧರ್ವರ ಸಂಗೀತವನ್ನು ಕೇಳಲು ಕರೆದೊಯ್ದಿದ್ದರು. ಹನ್ನೊಂದು ವರ್ಷದ ಬಾಲಕನಿಗೆ ಇದೊಂದು ಅವಿಸ್ಮರಣೀಯವಾದ ಗಳಿಗೆಯಾಗಿತ್ತು. ಸವಾಯಿ ಗಂಧರ್ವರಲ್ಲಿಯೆ ಸಂಗೀತವನ್ನು ಕಲಿಯುವ ಬಯಕೆಯನ್ನೂ ವ್ಯಕ್ತಪಡಿಸಿದ. ಆದರೆ ಅದು ಆಗ ಸಾಧ್ಯವಾಗಲಿಲ್ಲ. ಏಳು ಮಕ್ಕಳ ತುಂಬು ಸಂಸಾರವನ್ನು ನಿಭಾಯಿಸಬೇಕಾಗಿದ್ದ ಗುರುರಾಜ ಜೋಶಿಯವರಿಗೆ ಮಗನ ತೀವ್ರ ತುಡಿತಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಲಾಗದ ಅಸಹಾಯಕತೆ ಪ್ರಾಯಶಃ ಹನ್ನೊಂದು ವರ್ಷದ ಪೋರನಿಗೆ ಅರ್ಥವಾಗದೆ ಹೋಗಿರಬಹುದು. ಮಗನ ಸಂಗೀತ ಕುರಿತಾದ 'ಹುಚ್ಚಿನ' ಬಗ್ಗೆ ಯಾವುದೇ ಸಂದೇಹ ಇರದ ಗುರುರಾಜ ಜೋಶಿಯವರು ಈ ಸಂದರ್ಭದಲ್ಲಿ ಅಲ್ಲಿಯೇ ಇದ್ದ ಶ್ರೀ ಚನ್ನಪ್ಪ ಕುರ್ತಕೋಟಿ ಮತ್ತು ಶ್ರೀ ಶಾಮಾಚಾರ್ಯರ ಹತ್ತಿರ ಸಂಗೀತದ ಪ್ರಾರಂಭಿಕ ಪಾಠಗಳನ್ನು ಕಲಿಸುವ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಕರೀಂಖಾನ್‌ರ ರಾಗ ಬಸಂತ ಮತ್ತು ಠುಮರಿಯ ಗುಂಗು ಹಿಡಿದ ಮೇಲೆ, ಸವಾಯಿ ಗಂಧರ್ವರನ್ನು ಮೊದಲ ಸಲ ಭೆಟ್ಟಿ ಆದ ಮೇಲೆ–ನಂತರದ ಘಟನಾವಳಿಗಳಿಂದ ಭೀಮಸೇನರ ಗುರುವಿನ ಅನ್ವೇಷಣೆಯ ತವಕ ಬೇರೆ ದಾರಿಯನ್ನು ಕಂಡುಕೊಂಡಿತು. ಹನ್ನೊಂದು ವರ್ಷದ ಭೀಮಸೇನ ತೊಟ್ಟ ಬಟ್ಟೆಯಲ್ಲೇ ಮನೆ ಬಿಟ್ಟು ಓಡಿ ಹೋದ. ಹೀಗೆ ಹೊರಟ ಭೀಮಸೇನರು ಬಿಜಾಪೂರಿಗೆ ಹೋದದ್ದು ಅಲ್ಲಿಂದ ಗ್ವಾಲಿಯರ್‌ಕ್ಕೆ ಹೋಗಿ ಮಾಧವ ಸಂಗೀತ ವಿದ್ಯಾಲಯದಲ್ಲಿ ಉಸ್ತಾದ್ ಹಫೀಜ್ ಅಲಿಖಾನ್‌ರನ್ನು ಕಂಡು ತನ್ನ ಉತ್ಕಟವಾದ ಅಭೀಪ್ಸೆಯನ್ನು ವ್ಯಕ್ತಪಡಿಸಿ ಅವರ ಸಲಹೆಯಂತೆ ಕಲ್ಕತ್ತಾ, ಲಕ್ನೋಗಳಿಗೆ ಹೋಗಿ ಗುರುಗಳನ್ನು ಅರಸಿದ್ದು ಮತ್ತೆ ಕೊನೆಗೆ ಪಂಡಿತ ಪಟವರ್ಧನರ ಸೂಚನೆಯ ಮೇರೆಗೆ ಸ್ವಂತ ಊರಿಗೇ ಮರಳಿ ಸವಾಯಿ ಗಂಧರ್ವರಲ್ಲೇ ಶಿಷ್ಯವೃತ್ತಿಯನ್ನು ಸ್ವೀಕರಿಸಿದ್ದು ಈಗ ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಭೀಮಸೇನರ ಸುದೀರ್ಘ ಪಯಣ. ಮೂರ್‍ನಾಲ್ಕು ವರುಷಗಳ ನಂತರ ಧುತ್ತೆಂದು ಮುಂದೆ ಬಂದು ನಿಂತ ಮಗನನ್ನು ಆತನ ತಂದೆ ತಾಯಿ ಒಮ್ಮೆಲೆ ಗುರ್ತಿಸದಷ್ಟು ಬದಲಾಗಿ ಹೋಗಿದ್ದರು ಭೀಮಸೇನ. ಮರಳಿ ಮನೆಗೆ ಬಂದ ಮಗನನ್ನು ಇನ್ನು ಯಾವ ಕಾರಣಕ್ಕೂ ಕಳೆದು ಕೊಳ್ಳಬಾರದೆಂದು ಧೃಡ ನಿಶ್ಚಯ ಮಾಡಿದ್ದ ಗುರುರಾಜ ಜೋಶಿಯವರು ತಕ್ಷಣವೆ ಅವರನ್ನು ಕುಂದಗೋಳಕ್ಕೆ ಕರೆದುಕೊಂಡು ಹೋಗಿ ಸವಾಯಿ ಗಂಧರ್ವರಲ್ಲಿಯೇ ಸಂಗೀತ ಕಲಿಸುವ ವ್ಯವಸ್ಥೆ ಮಾಡಿಸಿಯೇ ಬಿಟ್ಟರು.

ಅಪ್ಪಟ ಗುರುಕುಲ ಪರಂಪರೆಯ ಈ ಕಲಿಕೆಗೆ ತನ್ನ ಸಂಬಳದ ಕಾಲುಭಾಗವನ್ನು ತಂದೆ ಗುರುರಾಜ ಜೋಶಿಯವರು ಮೀಸಲಾಗಿಟ್ಟಿದ್ದರು. ಸುಮಾರು ಐದು ವರುಷಗಳ ಈ ಅವಧಿ ಭೀಮಸೇನರನ್ನು ರೂಪಿಸಿದ ಕಾಲ. ಗುರು ಸವಾಯಿ ಗಂಧರ್ವರ ಮನೆಯಲ್ಲಿಯೇ ಇದ್ದು

ಎಲ್ಲ ಮನೆಗೆಲಸಗಳನ್ನು ಮಾಡಿಕೊಂಡು ಗುರುಗಳ 'ಕೃಪೆ'ಗಾಗಿ ಕಾಯುವುದು, ಒಂದು ಅನಿವಾರ್ಯವಾದ ಮತ್ತು ಅಷ್ಟೇ ಸಹಜವಾದ ಕ್ರಿಯೆ ಆಗಿತ್ತು. ಸವಾಯಿ ಗಂಧರ್ವರ ಕಲಿಸುವಿಕೆಯೂ ಅತ್ಯಂತ ಕ್ರಮಬದ್ಧ ಮತ್ತು ಕಟ್ಟು ನಿಟ್ಟಿನದಾಗಿತ್ತು. ಈ ಅವಧಿಯಲ್ಲಿ ಗುರುಗಳು ಭೀಮಸೇನರಿಗೆ ಕಲಿಸಿದ್ದು ಮೂರು ರಾಗಗಳನ್ನು ಮಾತ್ರ. ತೋಡಿ, ಮುಲ್ತಾನಿ ಮತ್ತು ಪೂರಿಯಾ. ವಿಶೇಷವೆಂದರೆ ಈ ಮೂರು ರಾಗಗಳು ಭೀಮಸೇನ ಜೋಶಿಯವರಿಗೆ ಕೊನೆಯವರೆಗೂ ಅತ್ಯಂತ ಆಪ್ತರಾಗಗಳಾಗಿದ್ದವು. ಭೀಮಸೇನರೊಂದಿಗೆ ಈ ಅವಧಿಯಲ್ಲಿಯೇ ಗಂಗೂಬಾಯಿ ಹಾನಗಲ್ ಮತ್ತು ಫಿರೋಜ್ ದಸ್ತೂರ ಅವರುಗಳೂ ಸಂಗೀತಭ್ಯಾಸ ಮಾಡುತ್ತಿದ್ದರೆಂದರೆ, ಕಿರಾಣಾ ಘರಾಣಾದ ಭವಿಷ್ಯವೇ ಇಲ್ಲಿ ರೂಪಗೊಳ್ಳುತ್ತಿತ್ತು ಎಂದರೆ ಅತಿಸಯೋಕ್ತ ಅನ್ನಿಸಲಿಕ್ಕಲ್ಲ. ಐದು ವರ್ಷಗಳ ಈ ಅವಧಿಯಲ್ಲಿ ಭೀಮಸೇನ ಜೋಶಿಯವರು ಗುರುಗಳ ಗರಡಿಯಲ್ಲಿ ಪಕ್ವವಾಗುತ್ತಲೇ ಹೋದರು. ದೇಶದ ಉದ್ದಗಲಕ್ಕೂ ಸವಾಯಿ ಗಂಧರ್ವರು ನೀಡುತ್ತಿದ್ದ ಕಚೇರಿಗಳಲ್ಲಿ ಅವರಿಗೆ 'ಸಾಥ್' ನೀಡುತ್ತ ಹೋದಂತೆ ಶ್ರೋತೃಗಳ ಮಿಡಿತದ ಸೂಕ್ಷ್ಮ ಪರಿಚಯ ಭೀಮಸೇನರಿಗೆ ಆಗುತ್ತ ಹೋಯಿತು. ವಿಚಿತ್ರ ಸನ್ನಿವೇಶವೊಂದರಲ್ಲಿ 1940ರ ಸುಮಾರಿಗೆ ಗುರುಗಳಲ್ಲಿಯ ವಾಸ್ತವ್ಯ ಅನಿರೀಕ್ಷಿತವಾಗಿ ಕೊನೆಗೊಂಡರೂ ಎದೆಗುಂದದ ಭೀಮಸೇನ ಜೋಶಿ ತಾನು ಕಲಿತದ್ದನ್ನು ಪ್ರಸ್ತುತ ಪಡಿಸುವ ಕಾರ್ಯಕ್ಕೆ ಮೊದಲಾದರು. ಇದರ ಆರಂಭವಾದದ್ದು ಸಣ್ಣ ಪುಟ್ಟ ಸಂಗೀತ ಸಭೆಗಳ ಮೂಲಕ ಮತ್ತು ಗುರುವಾರಗಳ ಭಜನೆಗಳ ಮೂಲಕ. ಈ ಸಭೆಗಳು ಭೀಮಸೇನರಲ್ಲಿ ವಿಶೇಷವಾದ ಆತ್ಮ ಸ್ಥೈರ್ಯವನ್ನು ತುಂಬಿದವು. ಪ್ರತಿಯೊಂದು ಸಭೆಯೂ ಅವರಿಗೆ ಒಂದು ಕಲಿಕೆಯಾಗಿತ್ತು. ಶ್ರೋತೃಗಳ ಇಂಗಿತ ಮನೋಧರ್ಮ ಮತ್ತು ಅವರ ಇಷ್ಟಗಳ ಒಳನೋಟದ ಸೂಕ್ಷ್ಮ ಪರಿಚಯ ಅವರಿಗೆ ಆಗುತ್ತ ಹೋದದ್ದು ಈ ಅವಧಿಯಲ್ಲಿ. ಇದರೊಂದಿಗೆ ಪ್ರದರ್ಶನದ ತಾಕತ್ತನ್ನ ಗಳಿಸಿದ್ದು ಈಗಲೇ! ಹೀಗೆ ಸಣ್ಣ ಪುಟ್ಟ ಸಭೆಗಳಿಂದ ಮೊದಲಾದ ಈ ಕ್ರಿಯೆ ಮುಂದಿನ ಆರು ದಶಕಗಳ ಅವಧಿಯಲ್ಲಿ ಭೀಮಸೇನ ಜೋಶಿಯವರನ್ನು ಗದುಗಿನಂತಹ ಚಿಕ್ಕ ಊರಿನ ಎಲ್ಲೆಯನ್ನು ಮೀರಿಸಿ ಜಗತ್ತಿನಾದ್ಯಂತ ಪರಿಚಯಿಸಿದ್ದು ಒಂದು ಪವಾಡ ಸದೃಶ ಸಂಗತಿಯೆ ಸರಿ.

ಭೀಮಸೇನ ಜೋಶಿಯವರ ಉತ್ಕಟವಾದ ಪರ್ಯಟನಾಕಾಂಕ್ಷೆ ಸಂಗೀತದ ಸೂಕ್ಷ್ಮ ಪದರುಗಳನ್ನು ಇನ್ನೂ ಭೇಧಿಸುವ ತವಕ ಅವರನ್ನು ಮತ್ತೆ ಗುರುಗಳ ಅನ್ವೇಷಣೆಗಾಗಿ ಮನೆ ಬಿಟ್ಟು ಹೋಗುವಂತೆ ಮಾಡಿತು. ಈ ಅವಧಿಯಲ್ಲಿಯೇ ಜಲಂಧರ್, ರಾಂಪೂರ, ಲಕ್ನೋಗಳನ್ನು ಸುತ್ತಿದ ಭೀಮಸೇನರಿಗೆ ಆ ಸಮಯದ ಖ್ಯಾತನಾಮರನ್ನು ಸಂಪರ್ಕಿಸುವ ಮತ್ತು ಅವರ ಒಡನಾಟದ ಅವಕಾಶವೂ ಸಿಕ್ಕಿತು. ಇಂಥ ಒಂದು ಸನ್ನಿವೇಶ ಲಕ್ನೋ ಆಕಾಶವಾಣಿ ಕೇಂದ್ರದಲ್ಲಿ ಬೇಗಂ ಅಖ್ತರ್‌ರ ಪರಿಚಯ. ಅವರ ಮುಂದೆ ಅವರ ಅಪೇಕ್ಷೆಯಂತೆ ಒಂದು ಚಿಕ್ಕ ಭೈರವಿ ಚೀಜನ್ನು ಪ್ರಸ್ತುತಪಡಿಸಿದ್ದೇ–ಭೀಮಸೇನರಿಗೆ ಹೊಸ ದಿಗಂತವೊಂದು ಆಕಾಶವಾಣಿಯ ನೌಕರಿ ರೂಪದಲ್ಲಿ ಅವರ ಮುಂದೆ ತೆರೆದುಕೊಂಡಿತು. ಬಿಸ್ಮಿಲ್ಲಾಖಾನ್‌ರಂತಹ ಕಲಾವಿದರೊಂದಿಗೆ ಒಂದೇ ಕೋಣೆಯಲ್ಲಿ ಇರುತ್ತಿದ್ದ ಕಾಲವದು. ಭೀಮಸೇನರ ರೇಡಿಯೋ ಕಾರ್ಯಕ್ರಮಗಳು ಬರಲಾರಂಭಿಸಿದವು. ಅವರೇ ಹೇಳುವಂತೆ ಅವರ ಬದುಕಿನ ನಿಜವಾದ ನಿರ್ಣಾಯಕ ಗಳಿಗೆ 1946ರಲ್ಲಿ ಗುರು ಸವಾಯಿ ಗಂಧರ್ವರಿಗೆ 60 ವರ್ಷ ತುಂಬಿದ ಸಂದರ್ಭದಲ್ಲಿ ಅವರನ್ನು ಪುಣೆಯಲ್ಲಿ ಸತ್ಕರಿಸಿದ ಸಮಾರಂಭ ಗುರುಗಳ ಸಮ್ಮುಖದಲ್ಲಿ, ಅತ್ಯಂತ ಸೂಕ್ಷ್ಮ ಗ್ರಾಹಿ ಶ್ರೋತೃಗಳ ಮುಂದೆ ಹಾಡಿದ ಭೀಮಸೇನರಿಗೆ ಸಿಕ್ಕದ್ದು ಅಭೂತ ಪೂರ್ವದ ಪ್ರಶಂಸೆ ಮತ್ತು ಮನ್ನಣೆ. ಈ 'ಮೆಹಫಿಲ್' ಮುಗಿಯುವ ಹೊತ್ತಿಗೆ ಭೀಮಸೇನ ಜೋಶಿಯವರು

ಬಹುಶಃ ಭಾರತದ ಎಲ್ಲ ಪ್ರಮುಖ ಸಾಂಸ್ಕೃತಿಕ ನಗರಗಳಿಗೂ ಪರಿಚಿತರಾದರೂ ಅಲ್ಲಿಂದ ಆಹ್ವಾನಗಳು ಬರಲಾರಂಭಿಸಿದವು. ಈ ಪುಣೆಯ ಕಾರ್ಯಕ್ರಮದ ನಂತರ ಭೀಮಸೇನ ಜೋಶಿಯವರು ಹಿಂದೆ ನೋಡಿದ್ದೇ ಇಲ್ಲ. ಅವ್ಯಾಹತವಾಗಿ ಸುಮಾರು ಆರು ದಶಕಗಳಷ್ಟು ಸುದೀರ್ಘ ಅವಧಿಯಲ್ಲಿ ಏನಿಲ್ಲವೆಂದರೂ ಹದಿನೈದು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿರಬಹುದೆಂಬುದು ಗುಣಾತ್ಮಕವಾಗಿ ಬೆಳೆಯುತ್ತಲೇ ಹೋದರು. ಅವರ ಕಣಜದಲ್ಲಿ ಏನಿಲ್ಲವೆಂದರೂ ಮೂವತ್ತು ರಾಗಗಳ ಭಂಡಾರವೇ ಇತ್ತು. ಅದಾಗ್ಯೂ ಭೀಮಸೇನ ಜೋಶಿಯವರು ಕೆಲರಾಗಗಳನ್ನು ಮೇಲಿಂದ ಮೇಲೆ ಹಾಡುತ್ತಿದ್ದರು ಮತ್ತು ಶ್ರೋತೃಗಳಿಗೆ ಇಷ್ಟವಾಗುವ ರಾಗಗಳನ್ನು ಮಾತ್ರ ಆರಿಸಿಕೊಳ್ಳುತ್ತಿದ್ದರು ಎಂಬ ಅಭಿಪ್ರಾಯವೂ ಆಗೀಗ ಕೇಳಿಬರುತ್ತಿತ್ತು. ವೇದಿಕೆಯ ಮೇಲೆ ನಿರೂಪಣೆ ಮಾಡುವುದು ಭೀಮಸೇನ ಜೋಶಿಯವರಿಗೆ ಇಷ್ಟವಿರದ ಸಂಗತಿಯಾಗಿತ್ತು. ಸಂಕೀರ್ಣ ರಾಗಗಳ ಅಭಿವ್ಯಕ್ತಿಗೆ ಚಿಕ್ಕ 'ಮೆಹಫಿಲ್'ಗಳು ಸೂಕ್ತವಾದ ವೇದಿಕೆಗಳು ಮತ್ತು ಅಲ್ಲಿಯ ಶೋತೃಗಳ ಮನೋಧರ್ಮವೂ ಬೇರೆ ಮಟ್ಟದ್ದು ಎಂಬುದು ಅವರ ನಂಬುಗೆ ಆಗಿತ್ತು.

ಅದೂ ಅಲ್ಲದೆ, ಐತಿಹಾಸಿಕ ಸಂಗೀತ ಒಂದು ಉದ್ಯಮವಾಗಿಯೂ ಬೆಳೆಯಲಾರಂಭಿಸಿದ್ದು ಈ ಅವಧಿಯಲ್ಲಿ ಭೀಮಸೇನ ಜೋಶಿಯವರಂತಹ ಕೆಲವೇ ಕಲಾವಿದರೂ ಉದ್ಯಮಕ್ಕೆ ಆರ್ಥಿಕ ಭದ್ರತೆಯನ್ನು ತಂದುಕೊಟ್ಟವರು. ಕೊನೆಯವರೆಗೂ ಕಿರಾಣಾ ಘರಾಣಾಕ್ಕೆ ನಿಷ್ಠರಾಗಿದ್ದು ಭೀಮಸೇನ ಜೋಶಿಯವರಿಗೆ ಈ ಹೊಸ ಆಯಾಮವೊಂದನ್ನು ನೀಡಿದ್ದು ಅವರು ಅಭಂಗಗಳು ಮತ್ತು ದಾಸರ ಪದಗಳನ್ನು ಹಾಡಲು ಆರಂಭಿಸಿದ ಮೇಲೆ. ಹಾಗೆ ನೋಡಿದರೆ ಅವರ ಜನಪ್ರಿಯತೆಯನ್ನು ವಿಪರೀತವಾಗಿ ಬೆಳೆಸಿದ್ದೇ ಅವರ ಸಂತವಾಣಿ' ಹಾಡುಗಾರಿಕೆ. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಭಕ್ತಿ ಸಾಹಿತ್ಯದ ಒಂದು ದೊಡ್ಡ ಪರಂಪರೆಯೇ ಇದೆ. ಜ್ಞಾನೇಶ್ವರ, ನಾಮದೇವ, ತುಕರಾಂ, ಏಕನಾಥ, ಪುರಂದರದಾಸರು–ಮುಂತಾದವರ ಭಕ್ತಿಗೀತೆಗಳು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಸಾಮೂಹಿಕ ಜಾಗೃತಿಗೆ ಪೂರಕವಾಗಿದ್ದು ಐತಿಹಾಸಿಕ ಸಂಗತಿ. ಈ ಭಕ್ತಿ ಗೀತೆಗಳಿಗೆ ಸಂಗೀತದ ಅಪರೂಪದ ಬೆಸುಗೆ ಭೀಮಸೇನ ಜೋಶಿಯವರ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಿಂದ ಹೊಸ ರೂಪವೇ ದೊರಕಿತು. ಎಂತೆಲೆ ಕಚೇರಿಯ ವೇದಿಕೆಯ ಮೇಲೂ ಮತ್ತು ಧ್ವನಿಮುದ್ರಿತ ರೂಪಾಂತರಗಳಲ್ಲೂ ಇವು ಅತ್ಯಂತ ಜನಪ್ರಿಯತೆ ಪಡೆದಿರುವುದಂತೂ ನಿಜ. ಇಂದಿಗೂ ಸಮಗೀತದ ಮಾರುಕಟ್ಟೆಯಲ್ಲಿ ಅತ್ಯಮತ ಪ್ರಚಲಿತವಾದ ಸರಕುಗಳು ಇವಾಗಿವೆ. ಹೀಗಾಗಿ ಭೀಮಸೇನ ಜೋಶಿಯವರ ಕಚೇರಿ ಎಂದರೆ ಅಪಾರ ನಿರೀಕ್ಷೆ ಇಟ್ಟುಕೊಂಡು ಬರುತ್ತಿದ್ದ ಎಲ್ಲ ವರ್ಗದ ಶೋತೃಗಳಿಗೆ ಅವರೆಂದೂ ನಿರಾಸೆ ಮಾಡುತ್ತಿರಲಿಲ್ಲ. ಅವರ ನರೀಕ್ಷೆಯಂತೆ ಪೂರ್ಣ ಪ್ರಮಾಣದ ಶಾಸ್ತ್ರೀಯರಾಗದ ಪ್ರಸ್ತುತ ಅಭಂಗ ಮತ್ತು ದಾಸರ ಪದಗಳು ಇರುತ್ತಿದವು. ಈ ಕಷೇರಿಗಳಲ್ಲಿ ಅಪರೂಪದ ಕಲಾತ್ಮಕತೆಯ ಲತೆಗೆ ಕಸಮುದಾರಿಕೆಯೂ ಇರುತ್ತಿತ್ತು. ಎಂತೆಲೆ ಅವರು ಒಂದರ್ಥದಲ್ಲಿ ಸಂಗೀತ ಕ್ಷೇತ್ರದ 'ಅನಭಿಶಕ್ತ' ದೊರೆ ಆದರು. ಆವರ ಅಪಾರವಾದ ಪ್ರಿತಿಯನ್ನೂ ಗಳಿಸಿದರು. ಬಹುಶಃ ಈ ಬಂಡವಾಳವೇ ಜೋಶಿಯವರನ್ನು ಸುಮಾರು ಇಪ್ಪತ್ತು ವರ್ಷಗಳವರೆಗೆ ವ್ಯಾಪಿಸಿದ್ದ ಕುಡಿತದ' ಅವಧಿಯಲ್ಲಿ ರಕ್ಷಿಸಿದ್ದು ಅತ್ಯಮತ ಪ್ರೀತಿಯಿಂದ ಸಹಾನುಭೂತಿಯಿಂದ ತಮ್ಮ ದೊರೆಯನ್ನು ಈ ಅವಧಿಯಲ್ಲಿ ಸಲುಹಿದ ಸಂಗೀತ ರಾಜ್ಯದ ಪ್ರಜೆಗಳು ಆತ ಮತ್ತೆ ಪೂತಿಯಾಗಿ ಮುಕ್ತನಾಗಿ ವಿಜೃಂಭಿಸಲು ಆರಂಭಿಸಿದಾಗ ಸಂಭ್ರಮಿಸಿದರು. 'ಕರ್ನಾಟಕ ರತ್ನ, ಮಹಾರಾಷ್ಟ್ರ ರತ್ನ ಮತ್ತು ಭಾರತ ರತ್ನವೂ' ಆದರು.

ಭೀಮಸೇನ ಜೋಶಿಯವರ ಕಂಚಿನ ಕಂಠ ಅವರ ಪ್ರಥಮ ಬಂಡವಾಳ. ಸಾಹಿತ್ಯದ ಸ್ಪಷ್ಟ ಉಚ್ಚಾರಣೆ ಮತ್ತು ಚೀಜ್/ಬಂದಿಶ್‌ಗಳನ್ನು ಭಾವಪೂರ್ಣವಾಗಿ ಬಿಡಿಸುತ್ತ ಗಂಧರ್ವಲೋಕವೊಂದನ್ನುಸೃಷ್ಟಿಮಾಡುತ್ತಿದ್ದರು. ಕಾಲಾತೀತ ಲೋಕವೊಂದರಲ್ಲಿ ವಿಹರಿಸಿ ಬಂದ ಅನುಭವ ಅವರ ಸಂಗೀತ ನೀಡುವುದು ಮತ್ತೆ ಮತ್ತೆ ಆ ಲೋಕಕ್ಕೆ ಹೊಗುವಂತೆ ಪ್ರೇರೇಪಿಸುವುದು ಈ ಅನುಭವದ ಹಿಂದೆ ಒಂದರ್ಥದಲ್ಲಿ ಶಾಸ್ತ್ರೀಯ ಸಂಗೀತ ಕುರಿತಾದ ಭೀಮಸೇನ ಜೋಶಿಯವರ ಕೆಲ ಬಲವಾದ ನಂಬಿಕೆಗಳೂ ಇವೆ. ಹಿಂದುಸ್ತಾನಿ ಸಂಗೀತದ ತಿರುಳು ಅದರ ನಿಧಾನವಾದ ಸ್ವರ ವಿನ್ಯಾಸದ ಪರಿಶೋಧನೆಯಲ್ಲಿ ಅಡಗಿದೆ. ಅವರೇ ಹೇಳುವಂತೆ ಅದು ರಾಗವನ್ನು ತಾನಾಗಿಯೇ ಬಿಚ್ಚಿಕೊಳ್ಳಲು ಸರಿಯಾದ ಮನಸ್ಥಿತಿಯನ್ನು ಸ್ಥಾಪಿಸುತ್ತದೆ. ವಾದ್ಯಸಂಗೀತ ಆಲಿಸುವ ನಿಜಾನಂದವೂ ಸಹ ತಾಳವಾದ್ಯ ಸಾಥ್ ಇಲ್ಲದ 'ಆಲಾಪ್'ದಲ್ಲಿಯೇ ಇದೆ. ಭೀಮಸೇನ ಜೋಶಿಯವರ ಆತಂಕ ಇರುವುದು ಪ್ರದರ್ಶನದಲ್ಲಿ ಗತ್ ಆರಂಭಗೊಂಡ ಕ್ಷಿಪ್ರಕಾಲದಲ್ಲೇ ಪ್ರಧಾನ ಕಲಾವಿದ ಮತ್ತು ಸಾಥಿದಾರೆ ವೇಗದ ಧಾಟಿಯಲ್ಲಿ ಮತ್ತು ಅತಿವೇಗದ ಗತಿಯಲ್ಲಿ ಚಲಿಸುವ ಚಪಲಕ್ಕೆ ಒಲಗಾಗುವುದು ಶ್ರೋತೃಗಳಿಗೆ ಕ್ಷಣಿಕ ಉತ್ಸಾಹದ ಕ್ಷಣಗಳನ್ನು ನೀಡಿದರೂ ಇದು ಕರುಣಾಜನಕ ಬೆಳವಣಿಗೆ.

ಭೀಮಸೇನ ಜೋಶಿಯವರಿಗೆ ಹಿರಿಯ ಮತ್ತು ಕಿರಿಯ ಸಹ ಸಂಗೀತಗಾರರನ್ನು ಕುರಿತು ಅಭಿಮಾನ ಇರುತ್ತಿತ್ತು. ಅಮೀರಖಾನ್ ಮತ್ತು ಕೇಸರಬಾಯಿ ಕರಕರರ ಬಗ್ಗೆ ವಿಶೇಷ ಗೌರವವಿತ್ತು. ಜೀಜ ಬಿತ್ತಿ ಮರ ಜೋಪಾನ ಮಾಡಿದರು ಅಮೀರಖಾನ್. ಆ ಮರದ ಫಲವನ್ನು ಇಂದಿನ ಪೀಳಿಗೆಯ ನಾವು ಅನುಭವಿಸುತ್ತಿರುವೆವು ಎಂದು ಅಮೀರಖಾನ್ ಕುರಿತು ಭಾವಪೂರ್ಣವಾಗಿ ಹೇಳುತ್ತಿದ್ದರು. ಅಮೀರಖಾನ್‌ರಿಗೂ ಭೀಮಸೇನ ಜೋಶಿಯವರ ಕುರಿತು ಅಪಾರವಾದ ಅಭಿಮಾನವಿತ್ತು. ಕಚೇರಿ ನೀಡುವ ಮೊದಲು ಭೀಮಸೇನರ ಕಚೇರಿಗಳನ್ನು ತಪ್ಪದೆ ಆಲಿಸುವಂತೆ ತಮ್ಮ ಶಿಷ್ಯಂದರಿಗೆ ಯಾವಾಗಲೂ ಸೂಚಿಸುತ್ತಿದ್ದರು. ಭೀಮ-ಸೇನರ ಕಲಾಶ್ರೀ ರಾಗದ ಬಗ್ಗೆ ಅವರು ಎಷ್ಟು ನೂರು ಹೋಗಿದ್ದರೆಂದರೆ ಆ ರಾಗದಲ್ಲೊಂದು ತಿರಾನಾ ರಚಿಸಿದರು.



ಈ ಮೊದಲೆ ಬರೆದಂತೆ ಭೀಮಸೇನ ಜೋಶಿ ತಮ್ಮ ಜೀವ-ಮಾನದಲ್ಲಿ ನೀಡಿದ ಸಂಗೀತ ಕಚೇರಿಗಳ ಸಂಖ್ಯೆ ಐದಂಕಿಯಲ್ಲಿಯೇ ಇದೆ. ಆದರೆ ಅವರ ಮನಸ್ಸಿನಲ್ಲಿ ಉಳಿದಿರುವುದು ಕೆಲವಿಶೇಷ ಕಚೇರಿಗಳು. ಅವರೇ

ಹೇಳುವಂತೆ 1941ರಲ್ಲಿ ಬೆಂಗಳೂರಿನಲ್ಲಿ ನೀಡಿದ ಕಾರ್ಯಕ್ರಮಕ್ಕೆ ಉನ್ನತ ಸ್ಥಾನ ನೀಡುತ್ತಾರೆ. ಖ್ಯಾತ ವಿಜ್ಞಾನಿ ಸರ್.ಸಿ.ವಿ.ರಾಮನ್ ಮತ್ತು ಸುಮಾರು 200 ಜನ ವಿದೇಶಿಯರು ಆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರಂತೆ. 1962ರಲ್ಲಿ ಜಲಂಧರನಲ್ಲಿ ಪ್ರಸ್ತುತ ಪಡಿಸಿದ ತೋಡಿ ಮತ್ತು ಜೋಗಿಯಾ ಠುಮರಿಯನ್ನು ವಿಶೇಷವಾಗಿ ನೆನಪಿಸಿಕೊಳ್ಳುತ್ತಿದ್ದರು. 'ಪಿಯಾ ಮಿಲನ್ ಕಿ ಆಸ್' ಶ್ರೋತೃವೃಂದವನ್ನು ಎಷ್ಟು ಪ್ರಭಾವಿತಗೊಳಿಸಿತೆಂದರೆ ಕಾರ್ಯಕ್ರಮ ಮುಗಿದ ಕೂಡಲೆ ಎಷ್ಟೋ ಜನ ವೇದಿಕೆಗೆ ನುಗ್ಗಿ ಭೀಮಸೇನರನ್ನು ಸುತ್ತುವರಿದು ಅಪ್ಪಿಕೊಳ್ಳಲು ಧಾವಿಸಿದ್ದರಂತೆ. ಒಬ್ಬ ಪ್ರಖ್ಯಾತ ಸಮಕಾಲೀನ ಸಂಗೀತಗಾರರು ಹೇಳುವಂತೆ ಭೀಮಸೇನರ ಸಂಗೀತದ ಶ್ರೇಷ್ಠ ಕ್ಷಣಗಳು ನಿಜವಾಗಿಯೂ ಶ್ರೇಷ್ಠವಾಗಿರುತ್ತದೆ. ಅಂಥ ಕ್ಷಣಗಳಲ್ಲಿ ಅವರು ಅಪರೂಪದ ಪ್ರತಿಭೆಯನ್ನು ತೋರ್ಪಡಿಸುತ್ತಿದ್ದರು. ಅವರ ಶಕ್ತಿಯು ಧ್ವನಿ, ಅಸಾಧಾರಣ ಉಸಿರು-ನಿಯಂತ್ರಣ, ಸೂಕ್ಷ್ಮ ಸಂಗೀತ ಸಂವೇದನೆ ಮತ್ತು ಮೂಲಂಶಗಳ ಮೇಲಣ ಮಿಸುಗದ ಹಿಡಿತ ಇವುಗಳೇ ಭೀಮಸೇನ ಜೋಶಿಯವರನ್ನು ಅಸಾಧಾರಣ ಎತ್ತರಕ್ಕೆ ಏರಿಸಿದ್ದು ಮತ್ತು ಇದರೊಂದಿಗೆ ಇವರು ಸಂಗೀತದೊಡನೆ ಹೊಂದಿರುವ ಸಂಪೂರ್ಣ ಅನನ್ಯತೆ. ಭೀಮಸೇನ ಜೋಶಿಯವರ ಚರಿತ್ರಕಾರರೊಬ್ಬರು ಹೇಳುವಂತೆ 'ಸಂಗೀತದ ಎಲ್ಲ ರಂಜಕತೆ ಮತ್ತು ತೀವ್ರತೆಗಳೊಂದಿಗೆ ತಮ್ಮ ಜೀವನವನ್ನು ಪ್ರೀತಿಸಿದ ಮತ್ತು ಬದುಕಿದ ಮನುಷ್ಯ ಇವರು – ಎಂತಲೇ ಭೀಮಸೇನ ಜೋಶಿ ವಿಶಿಷ್ಟರು.

●

"ಬಿಸಿಲು ದೇಶದ ಜನ ತೆಲುಗರಿಗೆ ಹಣ್ಣುಗಳಲ್ಲಿ ಮಾವು ಪ್ರಿಯ,
ಹಾಗೆಯೇ ಕವಿಗಳಲ್ಲಿ ಅವರಿಗೆ ವೇಮನನಲ್ಲಿ ಮಹಾ ವ್ಯಾಮೋಹ,
ಬಿಸಿಲಿನ ಉರಿ ಮಾವಿನಲ್ಲಿ ಸಿಹಿಯಾಗಿ ಪರಿವರ್ತನೆಯಾಗಿರಬೇಕು.
ಬಿಸಿಲಿನಲ್ಲಿ ಬಂಡೆಗಳ ನಡುವೆ ಬದುಕುವ ತೆಲುಗರ ಜೀವನ ಛಲ
ವೇಮನನಲ್ಲಿ ಜೀವನ ಪ್ರೀತಿಯಾಗಿ ಮಾರ್ಪಾಟಾಗಿರಬೇಕು"

– **ಡಿ.ಆರ್. ನಾಗರಾಜ್**

ಬೆಂಗಳೂರು ದಿನಚರಿಯ ಪುಟಗಳಿಂದ

ಒಂದಷ್ಟು ಟಿಪ್ಪಣಿಗಳು

– ಶೂದ್ರ ಶ್ರೀನಿವಾಸ್



ವೈರಮುತ್ತು ಎಂಬ ತಮಿಳು ಕವಿ :

ತಮಿಳುನಾಡಿನಲ್ಲಿ ಈತ ತುಂಬ ಜನಪ್ರಿಯ ಕವಿ. ಸುಮಾರು ನಾಲ್ಕು ಸಾವಿರಕ್ಕೂ ಮೇಲ್ಪಟ್ಟು ಚಲನಚಿತ್ರಗೀತೆಗಳನ್ನು ರಚಿಸಿದವರು. ಭೌತಿಕವಾಗಿ ಸಾಕಷ್ಟು ಎತ್ತರವಿರುವ ವೈರಮುತ್ತು ಅವರು ಸ್ವಲ್ಪ ದಪ್ಪನೆಯ ಮೀಸೆಯ ಜೊತೆಗೆ ಸದಾ ಸ್ವಲ್ಪ ನೀಟಾಗಿ ಮೇಕಪ್‌ನಲ್ಲಿರತಕ್ಕವರು. ಈತ ಚಲನಚಿತ್ರಗಳಲ್ಲಿಯೇ ಕರಗಿ ಹೋದವರಲ್ಲ. ಒಬ್ಬ ಉತ್ತಮ ಕವಿಯಾಗಿ ಕಾವ್ಯಾಸಕ್ತರನ್ನು ಚರ್ಚೆಗೆ ಹತ್ತಿರ ಬರಮಾಡಿ ಕೊಂಡವರು. ಕೆಲವು ತಿಂಗಳುಗಳ ಹಿಂದೆ ಕೆ. ಮಲರ್‌ವಿಳಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯು ಬೆಂಗಳೂರು ಪ್ರಾದೇಶಿಕ ಕಛೇರಿಯಲ್ಲಿ ತಿಂಗಳ ಸಾಹಿತ್ಯ ಕಾರ್ಯಕ್ರಮದಲ್ಲಿ ಪರಿಚಯವಾದವರು. ಈಕೆ ತಮಿಳಿನಿಂದ ಕನ್ನಡಕ್ಕೆ, ಕನ್ನಡದಿಂದ ತಮಿಳಿಗೆ ಅನುವಾದಿಸುವ ಕ್ರಿಯೆಯಲ್ಲಿ ತೊಡಗಿರುವಂಥವರು. ಬೆಂಗಳೂರಿನ ಸ್ವಲ್ಪ ಹೊರವಲಯದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾದ್ದಾರೆ. ವೈರಮುತ್ತು ಅವರ ಪ್ರಾತಿನಿಧಿಕ 33 ಕವಿತೆಗಳನ್ನು ಸಂಕಲನದ ರೂಪದಲ್ಲಿ ತಂದಿದ್ದಾರೆ. ಇದರ ಬಿಡುಗಡೆಗೆ ಮುನ್ನ ತನ್ನ ಪ್ರೀತಿಯ ಕವಿಯ ಬಗ್ಗೆ ಸಾಕಷ್ಟು ಹೇಳಿದ್ದರು. 'ವೈರಮುತ್ತುರವರ 33 ಕವಿತೆಗಳು' ಎಂಬ ಕವನ ಸಂಕಲನದ ಬಿಡುಗಡೆ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದವರು ಏರ್ಪಡಿಸಿದ್ದರು. ಇಲ್ಲಿ ಕನ್ನಡ ಸಂಘವನ್ನು ತುಂಬ ಅರ್ಥಪೂರ್ಣವಾಗಿ ಬೆಳೆಸಿದವರು ಚಿ. ಶ್ರೀನಿವಾಸರಾಜು ಅವರು. ಅವರ ನಂತರವೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆಂಬುದು ಸಂತೋಷದ ವಿಷಯ.

'ವೈರಮುತ್ತುರವರ 33 ಕವಿತೆಗಳು' ಸಂಕಲನದ ಬಿಡುಗಡೆಗೆ ನಮ್ಮ ಕವಿ ಚಂದ್ರಶೇಖರ ಕಂಬಾರ ಅವರು ಕಥೆಗಾರರಾದ ಶೇಷನಾರಾಯಣ ಅವರು ಮುಖ್ಯ ಅತಿಥಿಗಳಾಗಿದ್ದರು. ಸಭಾಭವನ ತುಂಬಿ ಹೊರಗೆ ನಿಲ್ಲುವ ರೀತಿಯಲ್ಲಿ ವೈರಮುತ್ತು ಅವರ ಅಭಿಮಾನಿಗಳು ಸೇರಿದ್ದರು. ವೈರಮುತ್ತು ಅವರು ತಮ್ಮ ಅನುವಾದಿತ ಕವನ ಸಂಕಲನ ಬಿಡುಗಡೆ ನಂತರ

ಮಾತಾಡಲು ಎದ್ದು ನಿಂತರು. ಒಂದೈದು ನಿಮಿಷ ಕಿವಿ ಕಿತ್ತು ಹೋಗುವ ರೀತಿಯಲ್ಲಿ ಚಪ್ಪಾಳೆ. 'ರೋಜಾ' ಚಲನಚಿತ್ರದ ಗೀತೆಯನ್ನು ಗುನುಗುನಿಸಿದರು. ಸಭಿಕರಲ್ಲಿ ಬಹುಪಾಲು ಮಂದಿ ತುದಿಗಾಲಿನಲ್ಲಿ ನಿಂತು ಚಪ್ಪಾಳೆ ತಟ್ಟಿದರು. ಆದರೆ ಇದೆಲ್ಲದಕ್ಕಿಂತ ಮಿಗಿಲಾಗಿ ಸುಮಾರು ಮುಕ್ಕಾಲು ಗಂಟೆ ಮಾತಾಡಿದರು. ತಮ್ಮ ಕವನ ವಾಚಿಸಿದರು. ಅವರ ಮಾತೇ ಕಾವ್ಯಮಯವಾಗಿತ್ತು. ತುಂಬ ಉತ್ತಮ ಮಾತುಗಾರರು. ಕಂಬಾರರನ್ನು ಅಮೇರಿಕಾದಲ್ಲಿಯ ಕವಿಗೋಷ್ಠಿಯಲ್ಲಿ ಭೇಟಿಯಾಗಿದ್ದನ್ನು ಸ್ಮರಿಸಿಕೊಂಡು ಮಾತು ಮುಂದುವರೆಸಿದ್ದರು. ಈ ಕಾರ್ಯಕ್ರಮ ನನಗಂತೂ ಒಂದು ಮೂವಿಂಗ್ ಎಕ್ಸ್‌ಪೀರಿಯನ್ಸಾಗಿತ್ತು. ವೈರಮುತ್ತು ಅವರು ಮಾತು ನಿಲ್ಲಿಸಿ ಕೂತಾಗ ಸಭಾಭವನ ಮಾಮೂಲಿ ಸಭಾಭವನ ಗಂಭೀರ ಪರಿಸ್ಥಿತಿಗೆ ಬರಲು ಐದಾರು ನಿಮಿಷ ತೆಗೆದುಕೊಂಡಿತು. ಕಂಬಾರರು ಸೂಕ್ಷ್ಮವಾಗಿ ಹದಿನೈದು ನಿಮಿಷ ಮಾತಾಡಿದರು. ಕೊನೆಗೆ ವೈರಮುತ್ತು ಅವರು ಅನುವಾದಿತ ಕವನಸಂಕಲನಕ್ಕೆ ಹಸ್ತಾಕ್ಷರ ಪಡೆಯಲು ಹಾಗೂ ಅವರೊಡನೆ ಭಾವಚಿತ್ರ ತೆಗೆಸಿಕೊಳ್ಳಲು ಅಭಿಮಾನಿಗಳು ಕ್ಯೂನಲ್ಲಿ ನಿಂತರು. ಇದರ ಮಧ್ಯೆಯೇ ಕೆ. ಮಲರ್‌ವಿಳಿಯವರು ನನ್ನನ್ನು ಪರಿಚಯಿಸಿದರು. 'ಶೂದ್ರ' ಹೆಸರಿನ ಪತ್ರಿಕೆ ತರುತ್ತಿರುವುದರ ಬಗ್ಗೆ ಸಂತೋಷದಿಂದ ಉದ್ಗಾರ ತೆಗೆದರು. ಚೆನ್ನೈಗೆ ಬರಲು ಆಹ್ವಾನಿಸಿದರು. ಸುಮಾರು ಒಂದು ವಾರ ಅವರ ಮಾತಿನ ಗುಂಗುನಲ್ಲಿಯೇ ಇದ್ದೆ. ಇದಾದ ಕೆಲವು ತಿಂಗಳುಗಳ ನಂತರ ಬೆಂಗಳೂರಿನ ಜಯನಗರ ಪ್ರದೇಶದಲ್ಲಿ ನಡೆದ ಮದುವೆಗೆ ಬಂದಿದ್ದರು. ಅಂದು ಕೂಡ ಜನ ನೂಕುನುಗ್ಗಲು. ಮದುವೆಗೆ ಮಾಜಿ ಸಚಿವರಾದ ರಾಮಲಿಂಗಾರೆಡ್ಡಿಯವರು ಬಂದಿದ್ದರು. ವೈರಮುತ್ತು ಅವರನ್ನು ಕುರಿತು ಕೇಳಿದರು. ಹೇಳಿದೆ. ಮದುವೆಯ ಗಂಡುಹೆಣ್ಣಿನ ಜೊತೆ ನಿಂತು ಭಾವಚಿತ್ರ ತೆಗೆಸಿಕೊಳ್ಳಲು ವ್ಯವಸ್ಥೆ ಮಾಡಿದರು. ಆದರೂ ನಮ್ಮನ್ನು ಪಕ್ಕಕ್ಕೆ ತಳ್ಳಿ ಜನ ನಿಂತುಕೊಳ್ಳುತ್ತಿದ್ದರು. ಇದರಿಂದ ಒಂದರ್ಧ ಗಂಟೆ ಮದುವೆಯ ಚೌಲ್ಟ್ರಿಯಲ್ಲಿ ಗದ್ದಲವೋ ಗದ್ದಲ. ಇನ್ನೊಂದು ಸ್ವಾರಸ್ಯವೆಂದರೆ ಮದುವೆಯ ಗಂಡಿನ ಹೆಸರೂ ಕೂಡ ವೈರಮುತ್ತು. ಗಂಡಿನ ತಂದೆತಾಯಿಗಳು ಎಂದೋ ವೈರಮುತ್ತು ಅವರ ಕಾವ್ಯ ಕೇಳಿಸಿಕೊಂಡು ತಮಗೆ ಹುಟ್ಟಿದ ಮಗುವಿಗೆ ಅವರ ಹೆಸರನ್ನು ಇಟ್ಟವರು. ಇದಾದ ಮೇಲೆ ಇತ್ತೀಚೆಗೆ ವಿಶ್ವ ತಮಿಳು ಸಮ್ಮೇಳನ ನಡೆದ ಸಂದರ್ಭದಲ್ಲಿ ವೈರಮುತ್ತು ಕುರಿತು 'ದಿ ಹಿಂದೂ' ಇಂಗ್ಲೀಷ್ ಪತ್ರಿಕೆಯಲ್ಲಿ ಒಂದು ಲೇಖನವಿತ್ತು. ಅದನ್ನು ಓದಿ ಖುಷಿಪಟ್ಟೆ. ಇದೇ ಸಮಯದಲ್ಲಿ ಒಮ್ಮೆ 'ಹಂಸಲೇಖ'ರವರಂಥ ಚಲನಚಿತ್ರ ಸಂಗೀತ ನಿರ್ದೇಶಕರಿಗೆ ವೈರಮುತ್ತು ಅವರ ವಿಷಯ ತಿಳಿಸಿದಾಗ 'ಶ್ರೀನಿವಾಸ್ ನನಗೆ ತಿಳಿಸಿದ್ದರೆ ನಾನೂ ಬರುತ್ತಿದ್ದೆ. ದ್ರಾವಿಡ ಸಂಸ್ಕೃತಿಯನ್ನು ಅರಗಿಸಿಕೊಂಡು ಬರೆಯುತ್ತಿರುವಂಥವರು' ಎಂದರು.

ಈ ಎಲ್ಲ ನೆನಪುಗಳ ಮಧ್ಯೆ ಮಲರ್‌ವಿಳಿಯವರು ಸಿಗುತ್ತಿರುತ್ತಾರೆ. ವೈರಮುತ್ತು ಅವರ ಗುಣಗಾನ ಮಾಡುತ್ತಲೇ ಇರುತ್ತಾರೆ. ಮಲರ್‌ವಿಳಿಯವರ ಪ್ರೆಸಿಡೆನ್ಸಿ ಕಾಲೇಜಿಗೆ ರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಹೋಗಿಬಂದೆ. ಪ್ರೆಸಿಡೆನ್ಸಿ ಕಾಲೇಜಿನ ವಾತಾವರಣವನ್ನು ಎಷ್ಟು ನೀಟಾಗಿಟ್ಟುಕೊಂಡಿದ್ದಾರೆ ಅನ್ನಿಸಿತು. ಇಂಥ ಕವಿಯ ಕುರಿತು ಒಮ್ಮೆ ಆತ್ಮೀಯ ಸ್ನೇಹಿತರಾದ ಪಿ.ಜಿ.ಆರ್. ಸಂಧ್ಯಾ ಅವರ ಮಗನ ಮದುವೆ ಬೆಂಗಳೂರಿನ ಅರಮನೆ ಬಯಲಿನಲ್ಲಿತ್ತು.

ಅಲ್ಲಿ ಊಟ ಮಾಡುವಾಗ ಐ.ಎ.ಎಸ್. ಅಧಿಕಾರಿ ಗೆಳೆಯರಾದ ಪೆರುಮಾಳ್‌ರವರು ಸಿಕ್ಕಿದರು. ವೈರಮುತ್ತು ಅವರ ವಿಷಯ ತಿಳಿಸಿದೆ. "ಹೌದು ಅವರು ಕರುಣಾನಿಧಿಗೆ ತುಂಬ ಹತ್ತಿರದವರು. ಅವರಿಗೆ ಹೇಳಿದರೆ ಏನು ಕೆಲಸ ಬೇಕಾದರೂ ಆಗುತ್ತದೆ" ಎಂದರು. ನನಗೆ ನಗು ಬಂತು. ಮಾತು ಮುಂದುವರೆಸಲಿಲ್ಲ. ಈ ವಿಷಯವನ್ನು ಮಲರ್ ಬಳಿಯೂ ಹೇಳಲಿಲ್ಲ. ಇರಲಿ, ಇಲ್ಲಿ ಅವರ 'ಪ್ರೀತಿಸಿ ನೋಡು' ಎಂಬ ಸಂಕಲನದಿಂದ ಕೆಳಗಿನ ಸಾಲುಗಳನ್ನು ದಾಖಲಿಸುವೆ:

"ನಿಶ್ಯಬ್ದ ತರಂಗಗಳಲಿ
ನಿನ್ನ ಧ್ವನಿ ಮಾತ್ರ
ಪ್ರಸಾರವಾಗುವುದು.
ನಿನ್ನ ನರವೇ ಹೆದೆಯೇರಿಸಿ
ನಿನ್ನೊಳಗೆ ಬಾಣ ಹೂಡುವುದು
ಪ್ರೇಮದ ತೆರೆ-ಸೀರೆಯ
ಕಾಯ ಹರಿಯುವುದು

ಹಾರ್ಮೋನುಗಳೇ
ನೈಲ್ ನದಿಯಾಗಿ ತುಂಬಿ ಹರಿಯುವುದು
ಅಧರಗಳು ಮಾತ್ರ
ಸಹಣವಾಗುತ್ತವೆ"

ಮಲರ್ ವಿಳಿಯವರ ಅನುವಾದ ಚೆನ್ನಾಗಿರುವುದರಿಂದ ಆರಾಮ ಓದಿ ಸಂತೋಷ ಪಡಬಹುದು. ಸದಾ ನಗುತ್ತ ಕಾವ್ಯ ಕುರಿತೇ ಮಾತಾಡುವುದು ಆಕೆಯ ಮೆಚ್ಚಬಹುದಾದ ಗುಣ.

ಪ್ರೊ. ಜಿ.ಎಸ್.ಎಸ್. ವಿಮರ್ಶಾ ಪ್ರಶಸ್ತಿ :

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಟ್ರಸ್ಟಿನಿಂದ ಪ್ರತಿವರ್ಷ ವಿಮರ್ಶೆಗಾಗಿಯೇ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ನನ್ನ ಅರಿವಿನ ಮಟ್ಟಿಗೆ ಕವಿಯೊಬ್ಬರು ತಮ್ಮ ಹೆಸರಿನ ಪ್ರಶಸ್ತಿಯನ್ನು ವಿಮರ್ಶಕರಿಗೆ ಕೊಡುವಂಥದ್ದು ಬೇರೆ ಭಾಷೆಗಳಲ್ಲಿ ಇಲ್ಲದಿರಬಹುದು. ಆದರೆ ಜಿ.ಎಸ್.ಎಸ್. ಅವರು ಕವಿಯಾಗಿ ಸಮಕಾಲೀನ ನಾನಾ ರೀತಿಯ ಧೋರಣೆಗಳಿಗೆ ಸ್ಪಂದಿಸಿದವರು. ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದಾಗ ಎಂತೆಂಥ ಮನಸ್ಸುಗಳನ್ನು ಬೆಳೆಸಿದರು. ಅದು ಕರ್ನಾಟಕದ ಉದ್ದಗಲಕ್ಕೂ ಒಂದು ರೀತಿಯಲ್ಲಿ ಸಾಂಸ್ಕೃತಿಕ ಸಂಚಲನವಾಗಿ ರೂಪುಗೊಂಡಿತು. ವಿವಿಧ ಸ್ಕೂಲ್ ಆಫ್ ಥಾಟ್‌ಗಳು ಇಲ್ಲಿಂದ ಕೇಂದ್ರಗೊಂಡು ವಿಸ್ತಾರವಾದುವು. ಇದು ನಂತರ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಮೂರು ವರ್ಷವೂ ಮುಂದುವರೆಯಿತು. ಇಂದು ಕೂಡ ಜಿ.ಎಸ್.ಎಸ್. ಅವರು ನಮ್ಮ ಸಾಂಸ್ಕೃತಿಕ ಸಂದರ್ಭದ ಸಾಕ್ಷಿಪ್ರಜ್ಞೆಯಾಗಿ ಒಟ್ಟು

ಸಮಕಾಲೀನತೆಯನ್ನು ಕುರಿತು ಪ್ರತಿಕ್ರಿಯಿಸುವ ಮನಸ್ಸನ್ನು ಉಳಿಸಿಕೊಂಡಿದ್ದಾರೆ. ತಮ್ಮ 87ನೆಯ ವಯಸ್ಸಿನಲ್ಲಿಯೂ ಯಾವುದೇ ಸಭೆಯಲ್ಲಿ ಎರಡು ಮೂರು ಗಂಟೆ ಗಂಭೀರವಾಗಿ ಕೂತು ಆಲಿಸಿಕೊಳ್ಳುವಂಥವರು.

ಜಿ.ಎಸ್.ಎಸ್. ಟ್ರಸ್ಟ್ ವತಿಯಿಂದ ಪೂರ್ಣ ವಿಮರ್ಶೆಯಲ್ಲಿ ತೊಡಗಿರುವಂಥವರಿಗೆ ಪ್ರಶಸ್ತಿಯನ್ನು ಕೊಡುತ್ತ ಬಂದಿದೆ. ಅದು ಒಂದು ಉತ್ತಮ ಮಾದರಿ ಕೂಡ. ಆದರೆ ಈ ಬಾರಿ ಕವಿ ಮತ್ತು ಕಾವ್ಯಪ್ರೇಮಿ ಹಾಗೂ ಕಾವ್ಯದ ಅನುವಾದಕರಾಗಿರುವ ಪ್ರೊ. ಎಸ್.ಎಸ್. ಲಕ್ಷ್ಮೀನಾರಾಯಣಭಟ್ಟರ ಕಾವ್ಯಪ್ರತಿಮೆ ಕೃತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೊಡಲಾಯಿತು. ಫೆಬ್ರವರಿ 7ರಂದು ಜಿ.ಎಸ್.ಎಸ್. ಸಮ್ಮುಖದಲ್ಲಿ ವೇದಿಕೆಯಲ್ಲಿ ಡಾ॥ ಚಂದ್ರಶೇಖರ ಕಂಬಾರ, ಪ್ರೊ.ಎನ್.ಎಸ್.ಎಲ್. ಹಾಗೂ ಅಭಿನಂದನಾ ಭಾಷಣ ಮಾಡಿದ ಡಾ॥ ಹೆಚ್.ಎಸ್. ವೆಂಕಟೇಶಮೂರ್ತಿಯವರಿದ್ದರು. ಟ್ರಸ್ಟಿನ ಅಧ್ಯಕ್ಷರಾದ ಪ್ರೊ.ಕೆ.ಮರುಳಸಿದ್ದಪ್ಪ ಅವರು ಇದ್ದರು. ನಾನು ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದೆ. ಆಗ ಕಾರ್ಯಕ್ರಮ ಆರಂಭವಾಗುವ ಮುನ್ನ ಸುಮಾರು ಇಪ್ಪತ್ತೆರಡು ವರ್ಷದ ಪ್ರಾಯಕ ಸ್ಫುರದ್ರೂಪಿ ಹುಡುಗನೊಬ್ಬ ಷರ್ಟು ಮತ್ತು ಪಂಚೆಯ ಡ್ರೆಸ್ಸಿನಲ್ಲಿ ನನ್ನ ಬಳಿ ಬಂದು "ದಯವಿಟ್ಟು ನನ್ನ ಅಭಿಮಾನಿಗಳಾದ ಬರಗೂರು ರಾಮಚಂದ್ರಪ್ಪನವರಿಂದ ಮಾತಾಡಿಸಬೇಕು" ಎಂದ. ನಾನು ಆಗಲಿ ಎಂದು ಸುಮ್ಮನಾದೆ. ಆ ಹುಡುಗ ಸಾಕಷ್ಟು ಕುಡಿದಿದ್ದ. ಆ ಹುಡುಗನನ್ನು ನೋಡಿದರೆ ದಕ್ಷಿಣ ಕನ್ನಡದಿಂದ ಬಂದ ಯಾವುದೋ ಒಂದು ಹೋಟೆಲಿನ ಕೆಲಸಗಾರ ಅನ್ನಿಸಿತು. ಸಭ್ಯತೆಯನ್ನು ಮೀರದೆ ಸಭೆಯಲ್ಲಿ ಕೊನೆಯ ತನಕ ಇದ್ದು; ಮಧ್ಯೆ ಎರಡು ಮೂರು ಸಲ ಎದ್ದು ಬಂದು ನನ್ನನ್ನು ಕರೆದು ನೆನಪಿಸುತ್ತ ಹೋದ. ನಾನು ಆಗಲಿ ಎಂದು ಸಮಾಧಾನಪಡಿಸಿ ಕಳಿಸಿದೆ. ಕೊನೆಯಲ್ಲಿ ಕಾರ್ಯಕ್ರಮ ಆದ ಮೇಲೆ ನನ್ನ ಬಳಿ ಬಂದು ಕೈಹಿಡಿದು 'ಕೊನೆಗೂ ನೀವು ನನಗೆ ಮೋಸ ಮಾಡಿದಿರಿ' ಎಂದ. ಆತನ ಮುಖವನ್ನೇ ನೋಡಿದೆ. ಅಯ್ಯೋ ಅನ್ನಿಸಿತು. ಇಷ್ಟು ಚಿಕ್ಕವಯಸ್ಸಿಗೆ ಕುಡಿತಕ್ಕೆ ಈ ರೀತಿಯಲ್ಲಿ ಬಲಿಯಾಗುವುದೇ ಅನ್ನಿಸಿ; ಬೇರೆ ಬೇರೆ ಗೆಳೆಯರ ಬಳಿ ಮಾತಾಡಿ ಮನೆಗೆ ಹೋದೆ.

ಕಾವ್ಯಶಿವರಾತ್ರಿ:

ಇದು ಕಿ.ರಂ. ಅವರ ಕಾವ್ಯದ ವಿವಿಧ ರೂಪಗಳನ್ನು ಅರಿಯುವ ಮನಸ್ಥಿತಿಯಿಂದ ಹುಟ್ಟಿಕೊಂಡದ್ದು. ಕೆಲವು ವರ್ಷಗಳಿಂದ ಬೆಂಗಳೂರಿನ ಬೇರೆ ಬೇರೆ ಭಾಗಗಳಲ್ಲಿ ಶಿವರಾತ್ರಿಯ ದಿವಸ ರಾತ್ರಿಯೆಲ್ಲ ಸಂಭ್ರಮವನ್ನು ಕಾಣುತ್ತಿದ್ದವರು. ಕಿ.ರಂ. ಅವರಿಗೆ ಕಾವ್ಯದ ಹಾಗೂ ಬದುಕಿನ ಸಂದರ್ಭದಲ್ಲಿ ಏನೇನೋ ಇದೆ ಅದನ್ನೆಲ್ಲ ನಮ್ಮದಾಗಿ ಮಾಡಿಕೊಳ್ಳಬೇಕು ಎಂಬ ಧೋರಣೆಯವರು. ಅದನ್ನು ಯಾವ ಯಾವ ರೂಪದಲ್ಲಿ ತಲುಪಿಸಬೇಕೋ ಆ ಮಾದರಿಗಳನ್ನು ಹುಡುಕುತ್ತಿದ್ದರು. ಹಾಗೆ ನೋಡಿದರೆ ನಮ್ಮೆಲ್ಲ ಹಬ್ಬ ಹುಣ್ಣಿಮೆಗಳು ಸಾಂಸ್ಕೃತಿಕ ಶ್ರೀಮಂತಿಕೆಯ ಕೇಂದ್ರಬಿಂದುಗಳು. ಕಾವ್ಯ ಮತ್ತು ಕಲೆಯನ್ನು ಶೋಧಿಸುವ ರೀತಿಯಲ್ಲಿಯೇ ಇದನ್ನು ಹಾಗೆ ಶೋಧಿಸಬೇಕು ಎಂಬುದು ಕಿ.ರಂ. ಅವರ ದಟ್ಟವಾದ ನಿಲುವು.

ಈ ದೃಷ್ಟಿಯಿಂದ ನಮ್ಮ ನಾಡಿನ ದಿವ್ಯ ಚೈತನ್ಯಗಳಾದ ಮಂಟೇಸ್ವಾಮಿ, ಮಲೆಮಾದೇಶ್ವರ ಹಾಗೂ ಬಿಳಿಗಿರಿ ರಂಗಸ್ವಾಮಿ ಇವರುಗಳ ಕಾವ್ಯ ವೈವಿಧ್ಯತೆಯನ್ನು ಕಾವ್ಯಗಾಯನದ ಮೂಲಕ ನಮ್ಮ ಮನೋಲೋಕಕ್ಕೆ ಬಿಡುತ್ತ ಬರುವಲ್ಲಿ ವಿವಿಧ ಯೋಜನೆಗಳನ್ನು ಹಾಕಿಕೊಂಡವರು. ಈ ಬಾರಿ ಪ್ರತಿ ವರ್ಷದಂತೆ ನಾಡಿನ ಖ್ಯಾತ ನೀಲಗಾರ ವೃತ್ತಿಗಾಯಕರಾದ ಶ್ರೀಮತಿ ಬನ್ನೂರು ಕೆಂಪಮ್ಮ ಕನಕಪುರ ತಾಲ್ಲೂಕು ದೊಡ್ಡ ಆಲಹಳ್ಳಿ ಶ್ರೀ ಪಂಚಲಿಂಗಯ್ಯ ಹಾಗೂ ಚಾಮರಾಜನಗರ ದೊಡ್ಡಗವಿ ಬಸಪ್ಪ ಮತ್ತು ಅವರ ತಂಡದವರು ಪ್ರಸ್ತುತಪಡಿಸಿದರು. 2-3-2011ರಂದು ಬುಧವಾರ ಸಂಜೆ ಆರು ಗಂಟೆಯಿಂದ ಬೆಳಗಿನ ಜಾವ ನಾಲ್ಕೂವರೆಗೆ ಸಂಭ್ರಮವನ್ನು ಹಂಚಿದರು. ಪ್ರತಿವರ್ಷ ಕಿ.ರಂ. ಅವರು ಓಡಾಡುತ್ತ ಮಧ್ಯೆ ಮಧ್ಯೆ ಸಿಗರೇಟಿನ ಹೊಗೆಯ ನಡುವೆ ಮುಗ್ಧ ನಗೆಯನ್ನು ಚೆಲ್ಲುತ್ತ ಹರಟೆ ಕೊಚ್ಚುತ್ತ ವಿದ್ಯಾರ್ಥಿಗಳ ಹಾಗೂ ಸಭಿಕರ ನಡುವೆ ನಮ್ಮವರಾಗಿಬಿಡುತ್ತಿದ್ದರು. ಆದರೆ ಈ ಬಾರಿ ಕಾರ್ಯಕ್ರಮದ ಬ್ಯಾನರ್‌ನಲ್ಲಿ ಕಿ.ರಂ. ಅವರು ಹೋಗಿ ಕೂತುಬಿಟ್ಟಿದ್ದರು. ನನ್ನ ಆಪ್ತರು ಇದನ್ನು ಹೇಗೆ ನಡೆಸುತ್ತಾರೆ ಎಂದು. ಹಾಗೆಯೇ ಅವರು ಮಧ್ಯದಲ್ಲಿಯೇ ಬಿಟ್ಟು ಹೋದ ಕಾವ್ಯಮಂಡಲದ ಮೂಲಕ ಎಂ.ಫಿಲ್. ಪದವಿ ಪತ್ರಗಳ ವಿತರಣೆಯೂ ಇತ್ತು. ಡಾ॥ ಸಿದ್ದಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ನಟರಾಜ್ ಹುಳಿಯಾರ್, ರಾಮಲಿಂಗಪ್ಪ, ಟಿ. ಬೇಗೂರು, ಹೆಚ್.ಎಸ್. ಮಾಧವರಾವ್, ಕ.ನಂ. ನಾಗರಾಜ್, ಎಂ.ಎಸ್. ಮೂರ್ತಿ, ಟಿ. ವೆಂಕಟೇಶಮೂರ್ತಿ, ಜಯಶಂಕರ್ ಹಲಗೂರು, ಕುರುವ ಬಸವರಾಜ್, ಕೆ. ಶಿವಾರೆಡ್ಡಿ, ಡಾ॥ ಮಂಗಳಾ ಶ್ರೀಧರ್ ಮುಂತಾದವರು ಶಿವರಾತ್ರಿಗೆ ಕಲಾವಿದರ ಜೊತೆ ಬೆಳಕು ತುಂಬಿದರು. ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಭೂಮಿಯ ವೇದಿಕೆಯಲ್ಲಿ ಇದನ್ನು ರೂಪಿಸಲಾಗಿತ್ತು. ಮುಂದಿನ ವರ್ಷಗಳಲ್ಲಿ ಒಟ್ಟು ದಿವಸ ಪೂರ್ತಿ ಒಂದು ಉತ್ಸವದ ಕಳೆಯನ್ನು ತುಂಬುವುದರ ಬಗ್ಗೆ ಚರ್ಚಿಸಲಾಯಿತು. ಇದರಲ್ಲಿ ಕಿ.ರಂ. ಅವರ ಎಷ್ಟೊಂದು ವಿದ್ಯಾರ್ಥಿನಿಯರು ಕ್ರಿಯಾಶೀಲರಾಗಿದ್ದರು. ಆದರೆ ಒಂದು ವಿಷಾದದ ಸಂಗತಿಯೆಂದರೆ ಅವರ ಮಕ್ಕಳು ನಮ್ಮ ನಡುವೆ ಕಾಣಿಸಿಕೊಳ್ಳಲಿಲ್ಲ.

ಗೋರಾ :

ಈ ಕಾದಂಬರಿಗೆ 2010ಕ್ಕೆ ನೂರು ವರ್ಷ ತುಂಬಿದೆ. ರವೀಂದ್ರನಾಥ ಟ್ಯಾಗೂರರ 150ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ 'ಶತಮಾನ ಸ್ಮರಣೆ'ಯನ್ನು ತನ್ನ ಬಗಲಲ್ಲಿಟ್ಟುಕೊಂಡಿರುವ ಮಹತ್ವಪೂರ್ಣ ಕಾದಂಬರಿ. ಮನುಷ್ಯ ಸಂಬಂಧಗಳನ್ನು ತೀವ್ರ ರೀತಿಯಲ್ಲಿ ಶೋಧನೆಗೊಳಪಡಿಸುವ ಕೃತಿ. ಅದರಲ್ಲೂ ಜಾತಿ ಮತ್ತು ಮತ ವ್ಯವಸ್ಥೆಯಲ್ಲಿ ಆಕಾರಗೊಳ್ಳುತ್ತಲೇ ಹೋಗುವ ಸಂಕೀರ್ಣ ಸ್ವಭಾವ ಮತ್ತು ನಡಾವಳಿಗಳನ್ನು ವಿಶ್ಲೇಷಿಸಿರುವ ಕ್ರಮವೇ ಅಪೂರ್ವವಾದದ್ದು. ಒಂದು ಶತಮಾನದ ನಂತರವೂ ನಾನಾ ಮಗ್ಗುಲುಗಳಿಂದ ವರ್ತಮಾನದಲ್ಲಿಟ್ಟು ನೋಡಬಹುದಾದ ಕೃತಿ.

ಇತ್ತೀಚೆಗೆ ಫೆಬ್ರವರಿ ತಿಂಗಳಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಒಂದು ವಾರ 'ರವೀಂದ್ರ 150' ನೆಪದಲ್ಲಿ ನಾನಾ ರೀತಿಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಅದರಲ್ಲಿ 'ಗೋರಾ' ಕಾದಂಬರಿಯನ್ನು ಕುರಿತು ಒಂದು ಚರ್ಚೆಯನ್ನು ಏರ್ಪಡಿಸಿದ್ದರು.

ಅದರಲ್ಲಿ ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯದ ಕುಮಾರಪ್ಪ ಅವರು 'ಗೋರಾ' ಕಾದಂಬರಿಯನ್ನು ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಬೇಕಿತ್ತು. ಆದರೆ ಎಲ್ಲರ ಪರವಾಗಿ ವಿವಿಧ ಮುಖಗಳಿಂದ ಪ್ರಾಸ್ತಾವಿಕ ನುಡಿಗಳನ್ನಾಡುವುದಕ್ಕೆ ನಮ್ಮ ಯು.ಆರ್. ಅನಂತಮೂರ್ತಿಯವರಿದ್ದಾರಲ್ಲ. ಒಂದಷ್ಟು ಗಂಭೀರ ಚರ್ಚೆಗೆ ಪೂರಕವಾಗುವಂಥ ಮಾಹಿತಿಯನ್ನು ಪಡೆಯುವುದಕ್ಕೆ ಯಾವ ತೊಂದರೆಯೂ ಇರುವುದಿಲ್ಲ. ಅಷ್ಟರಮಟ್ಟಿಗೆ ತುಂಬು ಮನಸ್ಸಿನಿಂದ ರವೀಂದ್ರರ ಮನಸ್ಥಿತಿ, ರಾಜಕೀಯ ಚಿಂತನೆ ಹಾಗೂ ಗಾಂಧೀಜಿಯವರು ಮತ್ತು ರವೀಂದ್ರರು ತಮ್ಮನ್ನು ಮುಖಾಮುಖಿ ಗುರ್ತಿಸಿಕೊಂಡ ಕ್ರಮ ಕುರಿತು ಮಾತಾಡಿದರು. ಇದೇ ಸಮಯದಲ್ಲಿ ಗೆಳೆಯ ಕೆ.ಪಿ. ವಾಸುದೇವನ್ ಅವರನ್ನು ಬಹಳ ವರ್ಷಗಳ ನಂತರ ಭೇಟಿಯಾದೆ. ತುಂಬ ಸೂಕ್ಷ್ಮ ಸಂವೇದನೆಯ ಸಾಹಿತ್ಯ ಮತ್ತು ರಾಜಕೀಯ ವಿದ್ಯಾರ್ಥಿ. ತುಂಬ ಚೆನ್ನಾಗಿ ಮಾತಾಡಿದರು; ಹೆಣ್ಣಿನ ವಿಚಾರವಾಗಿ ಗಾಂಧೀಜಿಯವರ ಅಭಿಪ್ರಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೊಂಕು ಮಾತುಗಳು ಇಷ್ಟವಾಗಲಿಲ್ಲ. ಅದೇ ಸಮಯಕ್ಕೆ ಟ್ಯಾಗೂರರಿಗೂ ಹೆಣ್ಣನ್ನು ಕಂಡರೆ ತುಂಬ ಇಷ್ಟವಿತ್ತು ಎಂಬ ಮಾತು ಕೂಡ ವಿಶ್ಲೇಷಣೆಯ ಮಾತಾಗಿರುವುದಿಲ್ಲ. ಸಿನಿಕತನದ ಮಾತಾಗಿರುತ್ತದೆ. ನಾನು ಕಂಡ ಬಹಳಷ್ಟು ರಿಜಿಡ್ ಮಾರ್ಕ್ಸ್‌ವಾದಿಗಳಿಗೆ ಹಾಗೂ ಸೂಡೋ ವಿಚಾರವಾದಿಗಳಿಗೆ 'ವ್ಯಂಗ್ಯ' ಎಂಬುದು ಒಂದು ದೊಡ್ಡ ರೋಗವಾಗಿ ಪರಿಣಮಿಸಿರುತ್ತದೆ. ಯಾಕೆಂದರೆ ಎಷ್ಟೇ ಚೆನ್ನಾಗಿ ಮಾತಾಡಿದರೂ ಅಥವಾ ಉತ್ತಮ ಪ್ರಬಂಧವನ್ನು ಮಂಡಿಸಿದರೂ ಕೆಲವು ಸಿನಿಕತನದ ನುಡಿಗಳಿಂದ ಸಾದರಪಡಿಸಿದ ಅರ್ಥಪೂರ್ಣ ವಿಚಾರಗಳೂ ಮರೆಯಾಗಿಬಿಡುತ್ತವೆ. ವರ್ತಮಾನದ ಸಂದರ್ಭದಲ್ಲಿ ಮತೀಯ ಸಂಘಟನೆಗಳು ಕೆಲವು ಆತಂಕಗಳನ್ನು ಸೃಷ್ಟಿಸುತ್ತಲೇ ಹೋಗುತ್ತಿರುವ ಕಾಲಘಟ್ಟದಲ್ಲಿ ಒಬ್ಬ ದಾರ್ಶನಿಕ ಮಹಾನ್ ಲೇಖಕಿ ಒಟ್ಟು ಜನ ಸಮುದಾಯ ಮತ್ತು ಮಾನವ ಸಂಬಂಧಗಳನ್ನು ಹೀಗೆ ನೋಡಿದ್ದಾರೆಂಬುದನ್ನ ಹೇಳುವುದರಲ್ಲಿ ನಮ್ಮ ಚಿಂತನೆ ನಾಪತ್ತೆಯಾಗಬಾರದು.

'ಸಮುದಾಯ' ಮೂರು ದಶಕಗಳಿಗೂ ಮೇಲ್ಪಟ್ಟು ಕರ್ನಾಟಕದ ಉದ್ದಗಲಕ್ಕೂ ನಾನಾ ರೀತಿಯ ಸಾಂಸ್ಕೃತಿಕ ಮನಸ್ಸುಗಳನ್ನು ಲವಲವಿಕೆಯಿಂದ ಇಟ್ಟಿರುವಂಥದ್ದು. ಈಗ ಹೊಸ ಹೊಸ ಮುಖಗಳನ್ನು ಒಳಗೆ ಬಿಟ್ಟುಕೊಳ್ಳುವಂತಾಗಬೇಕು. ಅವರಿಗೆಲ್ಲ 'ಗೋರಾ' ಕಾದಂಬರಿಯನ್ನು ಪರಿಚಯಿಸಬೇಕು. ಆಗ ಗೋರಾ ಮತ್ತು ಆನಂದಮಯಿ ಒಂದು ವಿಶಾಲ ಭಿತ್ತಿಯಲ್ಲಿ ಅರ್ಥಪೂರ್ಣರಾಗುತ್ತಾರೆ.

ರಜನಿಭಕ್ಷಿ :

ಜಗತ್ತಿನಲ್ಲೆಲ್ಲ ಲೋಕ ಹಿತಕ್ಕೆ ದುಡಿಯುವವರ ಸಂಖ್ಯೆ ಕಡಿಮೆಯೇನೂ ಇಲ್ಲ. ಯಾರ್ಯಾರೋ ಮಹನೀಯರು ಪರರ ಸುಖ ತಮ್ಮ ಸುಖವೆಂದು ತಿಳಿದವರು ಸಾವಿರಾರು ಮಂದಿ ಇದ್ದಾರೆ. ಅವರಿಗೆ ಪ್ರಚಾರ, ಸ್ಥಾನಮಾನ ಯಾವುದೂ ಬೇಕಿಲ್ಲ. ತಾವು ನಂಬಿದ ತತ್ವಗಳಿಗೆ ಅನುಗುಣವಾಗಿ ಬದುಕುವುದು 'ಕರ್ತವ್ಯ' ಎಂದು ತಿಳಿದವರು. ಒಂದು ದೃಷ್ಟಿಯಿಂದ ಇವರೆಲ್ಲ ಋಷಿ ಸದೃಶರು. ಆದ್ದರಿಂದಲೇ ನಮ್ಮ ನೆಲ ಇನ್ನೂ ಪೂರ್ತಿ ಜಾಡ್ಯಕ್ಕೆ ತುತ್ತಾಗಿಲ್ಲ. ಹೀಗೆ ಭಾರತದ

ಮಟ್ಟಿಗೆ ಗುಟ್ಟಾಗಿ ದುಡಿದ ಮತ್ತು ದುಡಿಯುತ್ತಿರುವ ಕೆಲವು ಆಪ್ತಚಿತ್ರಣಗಳ ಕೃತಿ 'ಬಾಪುಕುಟಿ'. ಇದರ ಮೂಲ ಲೇಖಕರು ರಜನಿಭಕ್ಷಿ. ನಾಲ್ಕೈದು ವರ್ಷಗಳ ಹಿಂದೆ ಈ ಪುಸ್ತಕ ಕನ್ನಡಕ್ಕೆ ಬಂತು. ಅಭಿನವ ಪ್ರಕಾಶನದ 'ಶತಮಾನ ಚಿಂತನೆ ಮಾಲಿಕೆ'ಯಲ್ಲಿ ಪ್ರಕಟಗೊಂಡಿರುವಂಥದ್ದು. ಈ ಮಾಲಿಕೆಯ ಸಂಪಾದಕರು : ಜಿ. ರಾಜಶೇಖರ ಅವರು. ಕನ್ನಡಕ್ಕೆ ಕೆ. ವೆಂಕಟರಾಜು ಅವರು ಅನುವಾದಿಸಿದ್ದಾರೆ.

'ಬಾಪುಕುಟಿ' ಮೂಲಭೂತವಾಗಿ ಹನ್ನೆರಡು ಮಹನೀಯರ ಸಾಧನೆಗಳನ್ನು ತಣ್ಣಗೆ ತುಂಬಿಕೊಂಡಿರುವ ಕೃತಿ. ಇವರೆಲ್ಲ ಗಾಂಧಿ ತತ್ವಗಳನ್ನು ಸಾಧ್ಯವಾದ ಮಟ್ಟಿಗೆ ಜಾರಿಗೆ ತರಲು ದುಡಿಯುತಿರುವಂಥವರು. ಇವರಿಗೆಲ್ಲ ಗಾಂಧೀಜಿಯುವರೇ ಆದರ್ಶ. 'ಗಾಂಧೀಜಿಯವರು ಹೀಗೆ ಬದುಕಿದರು' ಎಂಬ ಸತ್ಯದ ನುಡಿಯನ್ನು ಜೀವಂತವಾಗಿಡು–ವಂಥವರು. ರಜನಿಭಕ್ಷಿಯವರು ಬಾಪುಕುಟಿಯ ಮೂಲಕ ಇವರನ್ನೆಲ್ಲ ನಮ್ಮವರಾಗಿಸಿಬಿಡುತ್ತಾರೆ. ದೇಶವಿದೇಶಗಳಲ್ಲಿ ಅಧ್ಯಯನ ಮಾಡಿದ ಈಕೆ ಇಂಥ ಮಹತ್ವಪೂರ್ಣ ಕೃತಿಯನ್ನು 1998ರಲ್ಲಿ ಪ್ರಕಟಿಸಿದರು. ಮೂಲಭೂತವಾಗಿ ಲೇಖಕಿ ಮತ್ತು ಪತ್ರಕರ್ತೆ. ಕನ್ನಡಕ್ಕೆ 2006ರಲ್ಲಿಯೇ ಬಂತು. ಒಮ್ಮೆ ಓದಿದ ಯಾರೇ ಆಗಲಿ, ಹತ್ತು ಮಂದಿಗೆ ಇದನ್ನು ಪರಿಚಯಿಸುವರು. ಯಾಕೆಂದರೆ ಪರಿಚಯಿಸುವ ಈ ಕೃತಿಯೇ ಸೃಷ್ಟಿಸುತ್ತದೆ. ನಾನಂತೂ ಸಂದರ್ಭ ಸಿಕ್ಕಿದಾಗಲೆಲ್ಲ 'ಬಾಪುಕುಟಿ'ಯನ್ನು ಕುರಿತು ಸಭೆ ಸಮಾರಂಭಗಳಲ್ಲಿ ಪರಿಚಯಿಸುವುದು ನನ್ನ ಧರ್ಮವೆಂದೇ ತಿಳಿದಿರುವೆ. ಹಾಗೆಯೆ ಪುಸ್ತಕವನ್ನು ತಲುಪಿಸುವುದು.

ಇಂಥ ಲೇಖಕಿ ಮತ್ತು ಚಿಂತಕಿಯನ್ನು ಬೆಂಗಳೂರಿಗೆ ಕರೆಸಿಕೊಳ್ಳುವುದು ನನ್ನ ಆಸೆಯಾಗಿತ್ತು. ಒಮ್ಮೆ ಬೆಂಗಳೂರಿನ ಗಾಂಧಿಭವನಕ್ಕೆ ಹೋದಾಗ, ಆತ್ಮೀಯರಾದ ಪ್ರೊ.ಹೆಚ್.ಆರ್. ದಾಸೇಗೌಡರ ಬಳಿ ಚರ್ಚಿಸುತ್ತಿರುವಾಗ; 'ಶೂದ್ರ, ಒಂದಷ್ಟು ಲೇಖಕರ ಮತ್ತು ಚಿಂತಕರ ಹೆಸರನ್ನು ಕೊಡು, ವಿಶೇಷ ಉಪನ್ಯಾಸ ಮಾಲೆಗೆ' ಎಂದರು. ಆಗ ಕೊಟ್ಟ ಕೆಲವು ಹೆಸರುಗಳಲ್ಲಿ ರಜನಿಭಕ್ಷಿಯವರೂ ಒಬ್ಬರು. ಹಿರಿಯ ಗಾಂಧಿವಾದಿಗಳು ಮತ್ತು ಉತ್ತಮ ಲೇಖಕರೂ ಆಗಿದ್ದ ಕೆ.ಎಸ್. ನಾರಾಯಣಸ್ವಾಮಿಯವರ ನೆನಪಿನ ಉಪನ್ಯಾಸಕ್ಕೆ ಬೆಂಗಳೂರಿಗೆ ಬಂದರು. ಇದೇ ಫೆಬ್ರವರಿ 11ರಂದು ಶುಕ್ರವಾರ ಕೃಷಿ ಮತ್ತು ಜಾಗತೀಕರಣ ಕುರಿತು ಉಪನ್ಯಾಸವಿತ್ತು. ಉಪನ್ಯಾಸಕ್ಕೆ ಮುನ್ನ ಅವರು ಗಾಂಧೀಭವನದ ಸಭಾಭವನದ ಬಳಿ ಗುಡುಗುಡು ಗೊಂಬೆಯಂತೆ ಬಂದರು. ಒಂದು ರೀತಿಯಲ್ಲಿ ಅವರು ಭೌತಿಕವಾಗಿ ಗೊಂಬೆಯಂತೆ ಇದ್ದಾರೆ. ಸದಾ ಹಸನ್ಮುಖಿಯಾಗಿ ಮುದ್ದುಮುದ್ದಾಗಿಯೇ ಇದ್ದಾರೆ. ಪರಿಚಯ ಮಾಡಿಕೊಂಡು ಒಂದಷ್ಟು ಸಮಯ ಅವರೊಡನೆ ಮಾತಾಡಿ, ಕಾಫಿ ಕುಡಿದು ಉಪನ್ಯಾಸ ಕೇಳುವಂತಾಯಿತು. ಕೇಳಿದ ಮೇಲೆ ಮತ್ತು ನೋಡಿದ ನಂತರ ಇಷ್ಟು ಚಿಕ್ಕವಯಸ್ಸಿಗೆ ಎಷ್ಟು ಪ್ರಬುದ್ಧೆ ಅನ್ನಿಸಿತು. ಅಂದು ಇವರ ಉಪನ್ಯಾಸಕ್ಕೆ ಮುನ್ನ ಗಾಂಧಿ ತತ್ವ ಚಿಂತನೆಗಳ ಭಾಗವಾಗಿಯೇ ಆಗಿರುವ ಆತ್ಮೀಯರಾದ ಕೆ.ಪಿ.ಎಸ್. ಮೆನನ್ ಅವರು ಹಿರಿಯರಾದ ಕೆ.ಎಸ್. ನಾರಾಯಣಸ್ವಾಮಿಯವರನ್ನು ಕುರಿತು ಕೆಲವು ಆಪ್ತವಾದ ನೆನಪುಗಳನ್ನು ನಮ್ಮ ಮುಂದಿಟ್ಟರು.

ಪಂಡಿತ್ ಭೀಮಸೇನ್ ಜೋಶಿ ಗಾನವೈಭವ :

ನಮ್ಮ ಕಾಲದ ಮಹಾನ್ ಹಿಂದೂಸ್ತಾನಿ ಗಾಯಕ ಪಂಡಿತ್ ಭೀಮಸೇನ ಜೋಶಿಯವರು ಬದುಕಿರುವಾಗಲೇ ದಂತಕಥೆಗಳ ಮಧ್ಯೆ ತಮ್ಮ ಅಮೋಘ ಗಾಯನದ ಚರ್ಚೆಗೆ ದಾರಿಮಾಡಿಕೊಟ್ಟವರು. ಪಂಡಿತ್ ಜೋಶಿಯವರ ಗಾಯನದ ವೈವಿಧ್ಯ ಕುರಿತು ಎಷ್ಟು ಚರ್ಚಿಸಿದರೂ; ಒಂದು ರೀತಿಯಲ್ಲಿ ಅಪೂರ್ಣವೇನೋ ಎಂಬ ಭಾವನೆ ಮೂಡುತ್ತದೆ. ಕೇಳಿದಷ್ಟು ಆಲಿಸಿದಷ್ಟು ರಾಗವೈಭವವನ್ನು ನಮ್ಮ ಮುಂದೆ ಹರಡಿ ಕೂತು ಧ್ಯಾನಸ್ಥ ಗಾಯನದಲ್ಲಿ ತೊಡಗಿಬಿಡುತ್ತಾರೆ. ಎಷ್ಟೋ ವರ್ಷಗಳಿಂದ ನಾವು ಅವರ ಸಂಗೀತವನ್ನು ಕೇಳುತ್ತ ಬಂದಿದ್ದೇವೆ. ಸಂಗೀತ ಕಚೇರಿಗಳ ವಿಭಿನ್ನತೆಯನ್ನು ನೋಡುತ್ತ ಬಂದಿದ್ದೇವೆ. ಆದರೆ ಅಂಥದೇ ಮತ್ತೊಂದು ಅವರ ನಿಧನದ ನಂತರ ಕೇಳಲು ಸಾಧ್ಯವಾಯಿತು. ಸುಮಾರು ಎರಡೂವರೆ ಗಂಟೆ ಬೆಂಗಳೂರಿನ ಗಾಯನ ಸಮಾಜದಲ್ಲಿ ಕಥೆಗಾರ ಮತ್ತು ಸಂಗೀತ ಚಿಂತಕ ಎಸ್. ದಿವಾಕರ್ ವ್ಯವಸ್ಥೆ ಮಾಡಿದ್ದರು. ಹಿಂದೆ ಇದೇ ಗಾಯನ ಸಮಾಜದಲ್ಲಿ ಜೋಶಿಯವರು ಜೀವಂತ ಹಾಡಿ ಒಟ್ಟು ಸಭಾಂಗಣದ ತುಂಬ ಧ್ವನಿತರಂಗಗಳನ್ನು ತುಂಬಿಸಿದವರು. ಆದರೆ ಇದೇ ಮಾರ್ಚ್ 5ರಂದು ಶನಿವಾರ ಸಂಜೆ ಅಂಥದೇ ವೈಭವದ ಕ್ಷಣಗಳನ್ನು ಅನುಭವಿಸುವಂತಾಯಿತು. ಪಂಡಿತ್ ಪರಮೇಶ್ವರ ಹೆಗಡೆ, ಅಪರೂಪದ ಲೇಖಕ ಮತ್ತು ಚಿಂತಕ ರಾಮಚಂದ್ರ ಗುಹಾ ಮತ್ತು ಸೂಕ್ಷ್ಮ ಸಂವೇದನೆಯ ಪತ್ರಕರ್ತ, ಛಾಯಾಗ್ರಾಹಕ ಹಾಗೂ ಪ್ರಜಾವಾಣಿಯ ಸಂಪಾದಕ ಕೆ.ಎನ್. ಶಾಂತಕುಮಾರ್ ಅವರು ಎಸ್. ದಿವಾಕರ್ ರಚಿಸಿದ ಜೋಶಿಯವರ ಜೀವನ ಚಿತ್ರಣ ಕೃತಿಯ ಬಿಡುಗಡೆಯೂ ಇತ್ತು. ಇದು ಸ್ವಲ್ಪ ಕಾಲ ತೆಗೆದುಕೊಂಡರೂ; ಮಿಕ್ಕ ಕಾಲ ಜೋಶಿಯವರು ಭಾರತದ ಉದ್ದಗಲಕ್ಕೂ ಎಲ್ಲೆಲ್ಲೋ ಹಾಡನ್ನು ಗಂಟಲಿನಲ್ಲಿ ಧ್ವನಿಸಿದ ಅಪರೂಪದ ಚಿತ್ರಣ ಮತ್ತು ಧ್ವನಿಯ ಆಡಿಯೋ ಮತ್ತು ವೀಡಿಯೋ ಮೂಲಕ ಜೋಶಿಯವರನ್ನು ಅಪ್ಪಿಕೊಂಡಿದ್ದ ರೂಪಕಗಳೆಲ್ಲ ಕೇಳುಗರಿಗೆ ಧಾರೆಯಾಗಿ ಬಂತು. ಕೊನೆಯಲ್ಲಂತೂ ಭೈರವಿ ರಾಗದ ಮೂಲಕ ಗುರುಸ್ಮರಣೆಯ ಧ್ವನಿಯಲ್ಲಿ ಕೈಮುಗಿದು ತಮ್ಮ ಗಂಟಲಿಗೆ ಶಾಶ್ವತ ವಿರಾಮ ಕೊಟ್ಟರೇನೋ ಎಂಬ ಭಾವನೆ ಮೂಡುವಂತಿತ್ತು.

ಪಂಡಿತ್ ಜೋಶಿಯವರ ಒಟ್ಟು ಸಂಗೀತದ ಲಯವನ್ನು ಎರಡೂವರೆ ಗಂಟೆಗೆ ಎಡಿಟ್ ಮಾಡಿರುವ ಕ್ರಮವೇ ಮಹತ್ವಪೂರ್ಣವಾದದ್ದು. ಇಲ್ಲಿಯವರೆವಿಗೂ ಕೇಳಿದ್ದು ಮಾತ್ರವಲ್ಲ ಮುಂದೆಯೂ ನಮ್ಮ ಜೀವನದ ಕೊನೆಯ ದಿನಗಳವರೆಗೂ ಕೇಳಬಹುದಪ್ಪ ಎಂಬ ಅಭಿಪ್ರಾಯ ದಟ್ಟವಾಗುವ ಗೀತೆಯಲ್ಲಿ ಸಂಗೀತ ಮೂಡಿಬಂತು. ಯಾಕೆಂದರೆ ಯಾವುದೇ ಮಹಾನ್ ಸಂಗೀತ ಮತ್ತು ಕೃತಿಯನ್ನು ಒಮ್ಮೆ ನೋಡಿ, ಕೇಳಿ ಮತ್ತು ಓದಿ ಪಕ್ಕಕ್ಕಿಡುವಂಥದ್ದಲ್ಲ. ನಮ್ಮ ಮಗ್ಗುಲಲ್ಲಿಯೇ ಇದೆಯೆನ್ನುವ ಮನಸ್ಥಿತಿಯನ್ನು ತುಂಬಿಕೊಡುವುದಿದೆಯಲ್ಲ ಅದು ಎಲ್ಲರಿಂದಲೂ ಸಾಧ್ಯವಿಲ್ಲ. ಎಸ್. ದಿವಾಕರ್ ಅವರು ಬೇಂದ್ರೆಯವರ ದಿನವನ್ನು ಅಡಿಗರ ದಿನವನ್ನು ತುಂಬಿಕೊಟ್ಟವರು. ಅಂಥದಕ್ಕೆ ಇದೂ ಸೇರಿತು ಎಂಬುದು ಸಂತೋಷದ ವಿಷಯ. ತಮ್ಮ ಜೊತೆಗೆ ತಮ್ಮಂಥೆ ಯೋಚಿಸುವ ವಸಂತ ಪ್ರಕಾಶ ಸಂಸ್ಥೆಯನ್ನು ಹಾಗೂ ಚ.ಹ. ರಘುನಾಥ, ದೀಪಾ ಗಣೇಶ್ ಮುಂತಾದವರ ಸಹಕಾರ ಪಡೆದು ಕಾರ್ಯಕ್ರಮ ರೂಪಿಸಿದರು. ಒಬ್ಬ ದೊಡ್ಡ ಕಲಾವಿದನಿಗೆ ನಿಜವಾಗಿಯೂ ನಾವು ಈ ರೀತಿಯಲ್ಲಿಯೇ ಶ್ರದ್ಧಾಂಜಲಿ ಅರ್ಪಿಸಬೇಕಾಗಿರುವುದು, ಮಾತುಗಳ ಆಡಂಬರದಿಂದಲ್ಲ.

ಕೆ. ವಿ. ಸುಬ್ಬಣ್ಣ ಆಪ್ತ ಬಳಗ

ಕೆ.ವಿ. ಸುಬ್ಬಣ್ಣನವರ ಆಪ್ತ ಬಳಗ ಮತ್ತು ಕಂಬಾರರ 'ಸಂಗೀತ' ಚಿತ್ರ: ಇದೇ ಮಾರ್ಚ್ ಆರರಂದು ನಮ್ಮಲ್ಲಿಯ ಬಹುಮುಖ್ಯ ನಾಟಕಕಾರರು ಮತ್ತು ಕವಿಗಳಾದ ಚಂದ್ರಶೇಖರ ಕಂಬಾರರ 'ಸಂಗೀತ' ಚಿತ್ರವನ್ನು ನೋಡಲು ಹೋದೆ. ಗೆಳೆಯರಾದ ಶ್ರೇಷ್ಠ ಛಾಯಾಗ್ರಾಹಕ ಕೆ.ಎಸ್. ರಾಜಾರಾಂ ಅವರು ಬರಲು ಸೂಚಿಸಿದ್ದರು. 'ಕೆ.ವಿ. ಸುಬ್ಬಣ್ಣನವರ ಆಪ್ತ ಬಳಗ'ವೆಂಬ ದೊಡ್ಡ ಮನಸ್ಸಿನ ಪುಟ್ಟ ಜಾಗದಲ್ಲಿ ಗೆಳೆಯ ಗೋಪಿಯವರು ನಾನಾ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿರುವಂಥವರು. ಇದರಿಂದ ಬಹಳಷ್ಟು ಸಾಹಿತ್ಯಾಸಕ್ತರಿಗೆ ಆಪ್ತವಾದ ಜಾಗವಿದು. ಇಲ್ಲಿ ಕೆಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುವೆ. ಆದರೆ ಕಳೆದ ವರ್ಷ ಹಿರಿಯ ವಿದ್ವಾಂಸರು ಹಾಗೂ ಅಪರೂಪದ ಚಿಂತಕರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳಿಂದ ಜೈಮಿನಿ ಭಾರತದ ವಾಚನ ಮತ್ತು ವಿಶ್ಲೇಷಣೆ ಇತ್ತು. ತೊಂಬತ್ತರ ಗಡಿಯನ್ನು ದಾಟಿರುವ ಕೃಷ್ಣಶಾಸ್ತ್ರಿಗಳ ನೆನಪು ಎಷ್ಟು ಅಗಾಧವಾದದ್ದು. ಸುಮಾರು ಒಂದೂವರೆ ಗಂಟೆ. ಒಟ್ಟು ವಾಚನವನ್ನು, ಕೃತಿಯನ್ನು ನೋಡದೆ ನಾಲಿಗೆಯ ಮೇಲೆ ನಲಿದಾಡಿಸಿದರು. ಅದರ ಹಿಂದಿನ ವಾರ ಕಿ.ರಂ. ಅವರು ತಮ್ಮ ಪಿ.ಎಚ್.ಡಿ. ವಿದ್ಯಾರ್ಥಿಯೊಬ್ಬರಿಗೆ ಮನೆಯಲ್ಲಿ ಉಪನ್ಯಾಸ ನೀಡುವಾಗ ನಾನು ವಿದ್ಯಾರ್ಥಿಯಾಗಿದ್ದೆ. ಕಿ.ರಂ. ಅವರ ಒಳನೋಟ ನನ್ನ ಮನಸ್ಸಿನ ಪರಿಧಿಯಲ್ಲಿ ಇನ್ನೂ ನಲಿದಾಡುತ್ತಿರುವಾಗಲೇ ಕೃಷ್ಣಶಾಸ್ತ್ರಿಗಳ ಉಪನ್ಯಾಸವನ್ನು ಕೇಳಲು ಹೋಗಿದ್ದೆ. ಜನ ಕಿಕ್ಕಿರಿದು ತುಂಬಿದ್ದರು. ನಿಂತು ಒಬ್ಬರಿಗೊಬ್ಬರು ಅಂಟಿಕೊಂಡು ಕೇಳುತ್ತಿದ್ದವರು ಎಷ್ಟೋ ಮಂದಿ. ಉಪನ್ಯಾಸ ಮುಗಿದ ಮೇಲೆ ಶಾಸ್ತ್ರಿಗಳಿಗೆ ನಮಸ್ಕರಿಸಲು ಹೋದೆ. 'ಬಾರಯ್ಯ' ಎಂದು ಎಳೆದು ಪಕ್ಕದಲ್ಲಿ ಕೂರಿಸಿಕೊಂಡರು.

ಆರರಂದು ಈ ಆಪ್ತ ಬಳಗಕ್ಕೆ ಹೋದಾಗ ಆ ನೆನಪು ಇನ್ನೂ ಮೃದುವಾಗಿಯೇ ಆವರಿಸಿಕೊಂಡಿತ್ತು. ಇಂಥ ಆವರಿಸಿಕೆಯ ಮಧ್ಯೆಯೇ ಕಂಬಾರರ 'ಸಂಗೀತ' ಚಿತ್ರವನ್ನು ನೋಡಲು ಹೋಗಿದ್ದೆ. ಕಂಬಾರರು ತಮ್ಮ ನಿರ್ಮಾಪಕ ನಾರಾಯಣಸ್ವಾಮಿ ಮತ್ತು ತಮ್ಮ ಶ್ರೀಮತಿಯವರೊಡನೆ ಬಂದಿದ್ದರು. ಸುಮಾರು ಮೂರು ದಶಕಗಳ ಹಿಂದೆ ಲಂಕೇಶ್‌ರವರ ಜೊತೆ ಈ ಚಿತ್ರವನ್ನು ನೋಡಲು ಹೋಗಿದ್ದೆ. ಆಗ ಜಯಮಾಲ ಅವರು ಚಲನಚಿತ್ರರಂಗಕ್ಕೆ ಬಂದ ಹೊಸದರಲ್ಲಿ ಬೆಣ್ಣೆಯ ಗೊಂಬೆಯಂತಿದ್ದರು. ಅಷ್ಟೇ ಲವಲವಿಕೆಯ ನಟಿಯಾಗಿದ್ದರು. ಈ ಚಿತ್ರದ ನಾಯಕರು ಮಾನು (ಗುತ್ತಿಗೇರಿ ಮಾನಪ್ಪ) ಮತ್ತು ಲೋಕೇಶ್. ಎಂಥ ಕಾವ್ಯಾತ್ಮಕ ಉತ್ತಮ ಚಿತ್ರ ಅನ್ನಿಸಿತು. ಎರಡನೆಯ ಬಾರಿಗೆ ಬೋರ್ ಅನ್ನಿಸಲಿಲ್ಲ. ಮರು ಓದು, ಮರುನೋಟ ಅನ್ನಿಸಿತು. ಕವಿಯೊಬ್ಬರು ಇನ್ನೊಂದು ಮಾಧ್ಯಮದಲ್ಲಿ ಹೇಗೆ ಎದ್ದು ಕಾಣಬಹುದು ಎಂಬ ಅಧ್ಯಯನಕ್ಕೆ ಪ್ರೇರಕವಾಗುವ ಚಿತ್ರ, ಒಟ್ಟು ಚಿತ್ರದುದ್ದಕ್ಕೂ ಲೋಕೇಶ್ (ನಾಯಿಮಗ, ಸಿದ್ದರಾಮು) ಮತ್ತು ಜಯಮಾಲಾ (ಸಂಗೀತ) ಎಷ್ಟು ಚೆನ್ನಾಗಿ ಆವರಿಸಿಕೊಂಡುಬಿಡುತ್ತಾರೆ. ಆದರೆ ಈ ಚಿತ್ರದುದ್ದಕ್ಕೂ ಕಿರಿಕಿರಿ ಅನ್ನಿಸುವ ಪಾತ್ರವೆಂದರೆ ಮುಸುರಿ ಕೃಷ್ಣಮೂರ್ತಿ, ಬಯಲೇ ಕಾಣದ ಗಿಡಮರಬಳ್ಳಿ ಮತ್ತು ತೊರೆಗಳ ನಡುವಿನ ಅದ್ಭುತ ಲೊಕೇಷನ್ಸ್ ಇರುವ ಚಿತ್ರ,

ಚಿತ್ರ ಮುಗಿದ ಮೇಲೆ ಚರ್ಚೆ ಇತ್ತು. ಚರ್ಚೆಯಲ್ಲಿ ಯಾರ್‍ಯಾರೋ ಭಾಗಿಯಾದರು.

ಕನಸಿಗೊಂದು ಕಣ್ಣು

ಅಲೆಮಾರಿಯ ಮಾತು – 148

– ಶೂದ್ರ ಶ್ರೀನಿವಾಸ್

ಕಲ್ಕತ್ತೆಯ ಪುಸ್ತಕಲೋಕವೆಂಬ ಕಾಲೇಜು ಬೀದಿ

"Dear Water, clear water, playful in all your streams,
as you dash or loiter through life who does not love"

- W.H. Auden







ಕಲ್ಕತ್ತೆಯ ಕಾಲೇಜ್ ಸ್ಟ್ರೀಟ್ ಸದಾ ನನ್ನ ಮನಸ್ಸಿನಲ್ಲಿ ಚಿಗುರುತ್ತಿರುವ ವೃಕ್ಷ. ಕಳೆದ ಕಾಲು ಶತಮಾನದಿಂದ ಅದೊಂದು ಬೋಧಿ ವೃಕ್ಷದಂತೆ ಅರ್ಥಗಳನ್ನು ವಿಸ್ತರಿಸುತ್ತಲೇ ಇದೆ. ಯಾಕೆಂದರೆ ಕಲ್ಕತ್ತೆ ಮತ್ತು ಆ ಪುಸ್ತಕ ಕಾಶಿ ಎಂಬ ಕಾಲೇಜ್ ಸ್ಟ್ರೀಟ್‌ನಿಂದ ತಂದಿದ್ದ ಪುಸ್ತಕಗಳು ಒಂದಲ್ಲ ಒಂದು ಕಾರಣಕ್ಕಾಗಿ ನನ್ನ ಕಣ್ಣಿಗೆ ಬೀಳುತ್ತಲೇ ಇರುತ್ತದೆ. ಇದರ ಜೊತೆಗೆ ಅಲ್ಲಿಂದ ತಂದ ಉಂಗುರವೊಂದು ಏನೇನೋ ರೂಪಾಂತರ ವನ್ನು ಪಡೆದು; ನೆನಪು ಹಸಿಯಾಗಿ ಕಂಗೊಳಿಸುವಂತೆ ಇಟ್ಟಿದೆ. ಓಡಾಡಿ ಕಾಲುಗಳು ಸೋತು ಎರಡು ಮೂರು ಬಾರಿ ಅಲ್ಲಿಯೇ ಇರುವ ಕಾಫಿ ಬಾರ್‌ಗೆ ಹೋಗಿ ಕಾಫಿ ಕುಡಿದು ಮತ್ತೆ ಚೈತನ್ಯ ಪಡೆದು ಸುತ್ತಾಡಿದ್ದೆ. ಆದರೆ ಈ ವರ್ಷ ಜನವರಿ 28ರಂದು ನನಗೆ ತುಂಬ ಪ್ರಿಯವಾದ ಈ ಪುಸ್ತಕ ಕಾಶಿಗೆ ಮತ್ತೊಮ್ಮೆ ಬಂದಾಗ; ಬಹಳ ವರ್ಷಗಳ ನಂತರ ನನ್ನ ಪುಸ್ತಕ ಬಂಧುಗಳನ್ನು ಹಾಗೂ ಪುಸ್ತಕನಾಡನ್ನು ನೋಡುತ್ತಿದ್ದೇನೆ ಎಂಬ ಅನನ್ಯತೆ ಯಾವುದೋ ಅವ್ಯಕ್ತ ಅಪೂರ್ವ ಧ್ವನಿಯನ್ನು ಮುಂದಿಟ್ಟಿತ್ತು. ಯಾಕೆಂದರೆ ಹೋದ ತಕ್ಷಣ ಸುತ್ತಲೂ ಕಣ್ಣಾಡಿಸಿದಾಗ; ಈಗ ಮತ್ತಷ್ಟು ಆಪ್ತ ಅನ್ನಿಸಿತು. ಕಾಲು ಶತಮಾನದ ಹಿಂದೆ ನೋಡಿದ ಮುಖಗಳು ಕಾಣಲಿಲ್ಲ. ಆದರೆ ಅದೇ ಗಡಿಬಿಡಿಯ ಜನಸಂದಣಿ, ಎಲ್ಲೆಂದರಲ್ಲಿ ತಮಗೆ

ಬೇಕಾದ ಒಂದೊಂದೇ ಪುಸ್ತಕವನ್ನು ನೋಡುವ ಪುಸ್ತಕಪ್ರಿಯರು. ತಮಗೆ ಪ್ರಿಯವಾದ ಲೇಖಕರ ಪುಸ್ತಕಗಳ ಪುಟಗಳನ್ನು ತೆರೆದು ಅವಲೋಕಿಸುವ ಮನಸ್ಥಿತಿಯವರು. ಎಂಥವರನ್ನೂ ಆಕರ್ಷಿಸಿ ನಿಮಗೆ ಬೇಕಾದ ಪುಸ್ತಕಗಳಲ್ಲಿ ಕರಗಿ ಹೋಗಿ ಎಂಬ ವಾತಾವರಣವನ್ನು ಕಾದುಕೊಂಡಿರುವ ಬೀದಿ.

ಹೋದ ತಕ್ಷಣ ಇಂಗ್ಲೀಷ್ ಸಾಹಿತ್ಯದ ಘಟಾನುಘಟಿಗಳ ಕೃತಿಗಳು ಇದ್ದ ಷಾಪ್ ಮುಂದೆ ನಿಂತಾಗ; ಒಂದು ಕ್ಷಣ ಎಲ್ಲವನ್ನು ಬಾಚಿ ಗೋಣಿಚೀಲದಲ್ಲಿ ತುಂಬಿಕೊಂಡು ಬಿಡೋಣ ಅನ್ನಿಸಿತು. ಆ ಮನಸ್ಥಿತಿಯಲ್ಲಿಯೇ ಡಬ್ಲ್ಯು.ಹೆಚ್. ಆಡೆನ್ ನ ಕವನ ಸಂಕಲನ ಸಿಗುವುದಾ ಎಂದು ಕೇಳಿದೆ. ಇಪ್ಪತ್ತೈದರ ಪ್ರಾಯದ ಆ ಹುಡುಗ ಆಂಥಾಲಜಿ ಸಿಗುವುದಿಲ್ಲ, ಇತ್ತೀಚೆಗೆ ಅವರ ಸೆಲೆಕ್ಟೆಡ್ ಪೊಯಮ್ಸ್ ನ ಸಂಗ್ರಹವಿದೆಯೆಂದು ಹೇಳಿದಾಗ; ದಯವಿಟ್ಟು ಕೊಡಿ ಎಂದೆ. ಒಂದು ಕ್ಷಣ ಇಲ್ಲೇ ಇರಿ ಎಂದು ಹೋದ. ನಾನು ಎಲಿಯೆಟ್, ಎಜ್ರಾಪೌಂಡ್ ಮುಂತಾದವರ ಕಾವ್ಯಸಂಗ್ರಹಗಳನ್ನು ಗಮನಿಸುತ್ತಿದ್ದೆ. ಆ ಹುಡುಗ ಜಾನ್ ಫುಲ್ಲರ್ ಸಂಪಾದಿಸಿರುವ ಕೃತಿಯನ್ನು ತಂದ, ಖುಷಿಯಾಯಿತು. ಅದರ ಮುಖಬೆಲೆಯ ಮುನ್ನೂರು ರೂಪಾಯಿ ಕೊಟ್ಟೆ. ಮುವತ್ತು ರೂಪಾಯಿ ಡಿಸ್ಕೌಂಟ್ ಕೊಡಲು ಬಂದ. ಬೇಡವೆಂದು ಮತ್ತೆ ಬೇರೆ ಬೇರೆ ಪುಸ್ತಕಗಳನ್ನು ನೋಡುವ ಮುನ್ನ ಒಂದು ಕ್ಷಣ ಪ್ರೆಸಿಡೆನ್ಸಿ ಕಾಲೇಜಿನ ಒಳಗಡೆ ಹೋಗಬೇಕೆನ್ನಿಸಿತು. ಈ ಅನ್ನಿಸಿಕೆಯ ನಡುವೆಯೇ ಆಡೆನ್ ನ ಸೆಲೆಕ್ಟೆಡ್ ಕವನಗಳ ಕೃತಿ ಸಿಕ್ಕಿದ್ದಕ್ಕೆ ಸಂತೋಷವಾಗಿತ್ತು. ಯಾಕೆಂದರೆ ಕಳೆದ ಒಂದು ವರ್ಷದಿಂದ ಬೆಂಗಳೂರಿನ ಬುಕ್ ಷಾಪ್ ನ ಗೆಳೆಯರಿಗೆ ಹಾಗೂ ಪುಸ್ತಕ ವಿತರಣೆ ಮಾಡುವವರನ್ನ ಕೇಳಿಕೊಂಡಿದ್ದೆ. ಯಾರೂ ವ್ಯವಸ್ಥೆ ಮಾಡಲಿಲ್ಲ ತರಿಸಿಕೊಡಲು. ಕೊನೆಗೆ ಬೇರೆ ಬೇರೆ ಆಂಥಾಲಜಿಗಳಿಂದ ಹತ್ತು ಹನ್ನೆರಡು ಕವನಗಳನ್ನು ಜೆರಾಕ್ಸ್ ಮಾಡಿಕೊಂಡಿದ್ದೆ. ಒಮ್ಮೆ ಇದೇ ವಿಷಯ ಕುರಿತು; ನಮ್ಮ ಲೋಕದಲ್ಲಿ ವಿಹರಿಸುತ್ತ ಕಿ.ರಂ. ಜೊತೆ ಕೂತಿದ್ದಾಗ ಪ್ರಸ್ತಾಪ ಮಾಡಿದೆ. ಅವರು ನನ್ನ ಬಳಿ ಆಡೆನ್ ಕವಿತೆಗಳ ಆಂಥಾಲಜಿ ಇದೆ. ಮುಂದಿನ ವಾರ ಬೆಳಿಗ್ಗೆ ಬಿಡುವು ಮಾಡಿಕೊಂಡು ಬಾ. ಜೆರಾಕ್ಸ್ ಮಾಡಿಸಿಕೊಡುವೆ ಎಂದಿದ್ದರು. ಆದರೆ ಅದರ ಎರಡನೆಯ ದಿನವೇ ಬೇಂದ್ರೆಯವರನ್ನು ಕುರಿತು ಮಾತಾಡುತ್ತಲೇ ಮರೆಯಾದರು.

ಪ್ರೆಸಿಡೆನ್ಸಿ ಕಾಲೇಜ್ ತುಂಬ ಪುರಾತನವಾದ ಕಾಲೇಜ್. 1817ರಲ್ಲಿ ಹಿಂದೂ ಕಾಲೇಜ್ ಆಗಿ ಹುಟ್ಟಿಕೊಂಡಿದ್ದು. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜನ್ನು ಸುಮಾರು ವರ್ಷಗಳ ಹಿಂದೆ ನೋಡಿದ್ದೆ. ಇಲ್ಲೆಲ್ಲ ಎಂತೆಂಥ ಮಹಾನುಭಾವರು ಓದಿ ಬೆಳೆದು ನಮ್ಮ ಸಾಮಾಜಿಕ ಬದುಕನ್ನು ಶ್ರೀಮಂತಗೊಳಿಸಿದರು ಎಂಬ ಭಾವನೆ ಬಂತು. ಕಟ್ಟಡಗಳ ವಾಸ್ತುಶಿಲ್ಪ ಎಂಥ ಅಪೂರ್ವವಾದದ್ದು. ಎಷ್ಟೊಂದು ದಪ್ಪ ದಪ್ಪ ಕಲ್ಲಿನ ಗೋಡೆಗಳು. ಆದ್ದರಿಂದಲೇ ಸುಮಾರು ಎರಡು ಶತಮಾನಗಳಾದರೂ ಅದೇ ಜೀವಂತಿಕೆಯನ್ನುಳಿಸಿಕೊಂಡಿದೆ. ಹೀಗೆ ನೋಡುತ್ತಿರುವಾಗ ಪಕ್ಕದಲ್ಲಿಯೇ 'ಆರ್ಟ್ ಲೈಬ್ರರಿ, ಪ್ರೆಸಿಡೆನ್ಸಿ ಕಾಲೇಜ್' ಎಂಬ ನಾಮಫಲಕವಿತ್ತು. ಕುತೂಹಲದಿಂದ ನನ್ನ ಜೊತೆಗಿದ್ದ ಲಕ್ಷ್ಮಣರೆಡ್ಡಿಯನ್ನು ಕರೆದುಕೊಂಡು ಒಳಗೆ ಹೋದೆ. ತುಂಬ ಹಳೆಯದು. ಅಷ್ಟೊಂದು ಅಚ್ಚುಕಟ್ಟಾಗೇನೂ ಇರಲಿಲ್ಲ. ಹೊರಗೆ ಕಾಲೇಜ್ ಸ್ಟ್ರೀಟೇ ಒಂದು ವಿಶ್ವಮಾನ್ಯ ಗ್ರಂಥಾಲಯದ ರೀತಿಯಲ್ಲಿರುವಾಗ ಇದು ಕಳಪೆ ಅನ್ನಿಸಿತು. ಆದರೂ ನೋಡಬೇಕೆನ್ನಿಸಿತು. ಅಲ್ಲಿಯ ಮುಖ್ಯ ಗ್ರಂಥಾಲಯಾಧಿಕಾರಿ ಬಿಜಯ್ ಡೇ ಅವರನ್ನು ಭೇಟಿಯಾದೆ. ಸಂತೋಷದಿಂದ ಕೈಕುಲುಕಿ ಎಲ್ಲಾ ಅಲಮಾರುಗಳಲ್ಲಿದ್ದ ಕೃತಿಗಳನ್ನು ನೋಡಲು ಅವಕಾಶ

ಕೊಟ್ಟರು. ಅದರಲ್ಲೂ ಕೆಲವು ಹಳೆಯ ತಲೆಮಾರಿನ ವಿದ್ವಾಂಸರು ತಮ್ಮ ಸ್ವಂತ ಪುಸ್ತಕಗಳನ್ನು ಲೈಬ್ರರಿಗೆ ದಾನ ಮಾಡಿದ್ದರು. ಅವುಗಳಲ್ಲಿ ಅಲ್ಲೊಂದು-ಇಲ್ಲೊಂದು ಕೈಗೆ ತೆಗೆದುಕೊಂಡು ಪುಸ್ತಕಗಳನ್ನು ತೆರೆದೆ. ಎಲ್ಲದರಲ್ಲೂ ಓದಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅಂಡರ್ ಲೈನ್ ಮಾಡಿದ್ದ ಪುಟಗಳು. ಅದರಲ್ಲೂ ಕಲ್ಕತ್ತೆಗೆ ಬೇರೆ ಬೇರೆ ವಿದೇಶಿಯರು ಬಂದದ್ದರ ಬಗ್ಗೆ, ಆಗ ಕಲ್ಕತ್ತೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಯಾವ ಯಾವ ಆಕಾರ ಪಡೆಯುತ್ತ ಹೋಯಿತು ಎಂಬುದಕ್ಕೆ ಸಂಬಂಧಿಸಿದ ಕೃತಿಗಳು. ಹಾಗೆಯೇ ರಾಮಕೃಷ್ಣ ಪರಮಹಂಸರನ್ನು ಕುರಿತಂತೆ ವಿದೇಶಿಯ ವಿದ್ವಾಂಸರು ದಾಖಲು ಮಾಡಿದ ವಿಚಾರಧಾರೆ. ಸಾಮಾನ್ಯವಾಗಿ ಆ ಕೃತಿಗಳ ವಿಚಾರಧಾರೆಯನ್ನು ತಿಳಿಯುವುದಕ್ಕಿಂತ ಹೆಚ್ಚಾಗಿ; ಆ ವಿದ್ವಾಂಸರ ಓದು ಯಾವ ರೀತಿಯದ್ದು ಎಂಬ ಕುತೂಹಲ ನನ್ನಲ್ಲಿತ್ತು. ಒಂದು ಕ್ಷಣ ಆ ಕೃತಿಗಳನ್ನು ನೋಡುವಾಗ ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರು ತಮ್ಮ ಸಾವಿರಾರು ಪುಸ್ತಕಗಳನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕೊಟ್ಟಾಗ, ಗೋಣಿಚೀಲಗಳಲ್ಲಿ ತುಂಬಿದ್ದ ಪುಸ್ತಕಗಳನ್ನು ತೆಗೆದು ಜೋಡಿಸಿ ಸೆಂಟ್ರಲ್ ಕಾಲೇಜಿನ ಲೈಬ್ರರಿಗೆ ಸಾಗಿಸಿದ್ದೆವು. ಆಗ ನಾನು ಕೊನೆಯ ಆನರ್ಸ್ ವಿದ್ಯಾರ್ಥಿ. ನನ್ನ ಜೊತೆಗೆ ಗೆಳೆಯ ಹೆಚ್.ಎಸ್. ಮಾಧವರಾವ್ ಇದ್ದ. ಆಗಲೂ ನಾವು ಪ್ರೊ.ಡಿ.ಎಲ್.ಎನ್. ಅವರ ಓದಿನ ಕ್ರಮ ಕುರಿತು ನಮಗೆ ಕುತೂಹಲವಿತ್ತು. ನನಗಿಂತ ಹೆಚ್ಚಾಗಿ ಮಾಧವರಾವ್ ಗಿತ್ತು. ಹೀಗೆ ನೋಡುವಾಗ ಒಂದು ಪುಸ್ತಕದ ಮಧ್ಯೆ ನೂರು ರೂಪಾಯಿಯ ನೋಟಿತ್ತು. ಅದನ್ನು ತೆಗೆದುಕೊಂಡು ಹೋಗಿ ಪ್ರೊ. ಜಿ.ಎಸ್.ಎಸ್. ಅವರಿಗೆ ಕೊಟ್ಟಾಗ ; ನಗುತ್ತ ಏನಾದರೂ ತಿಂಡಿ ತಿನ್ನಿ ಹೋಗಿ ಎಂದು ನಮಗೇ ಅದನ್ನು ಕೊಟ್ಟಿದ್ದರು. ಆ ಕಾಲಕ್ಕೆ ನೂರು ರೂಪಾಯಿಗೆ ಈಗಿನ ಸಾವಿರ ರೂಪಾಯಿಗಿಂತ ಜಾಸ್ತಿ ಬೆಲೆ ಇತ್ತು. ಇದೇ ರೀತಿಯಲ್ಲಿ ಬೆಂಗಳೂರಿನ ಮಲ್ಲೇಶ್ವರಂನಲ್ಲಿದ್ದ ಡಾ॥ ಗುರುದತ್ ಎಂಬುವವರು "ಇನ್‌ಸ್ಟ್ಯೂಟ್ ಆಫ್ ವರ್ಲ್ಡ್ ಕಲ್ಚರ್" ಸಂಸ್ಥೆಗೆ ನೂರಾರು ಪುಸ್ತಕಗಳನ್ನು ದಾನ ಮಾಡಿದ್ದರು. ಅವರು ದಾನ ಮಾಡಿದ ಒಂದೊಂದು ಪುಸ್ತಕವೂ ಅವರ ಗಂಭೀರ ಓದಿಗೆ ಸಾಕ್ಷಿಯಾಗಿತ್ತು. ಅಷ್ಟರಮಟ್ಟಿಗೆ ಅಂಡರ್ ಲೈನ್, ಪ್ರಶ್ನಾರ್ಥಕ ಚಿಹ್ನೆ ಹಾಗೂ ಒಂದೆರಡು ಶಬ್ದಗಳಲ್ಲಿ ಪ್ರತಿಕ್ರಿಯೆ ದಾಖಲಾಗಿಬಿಡುತ್ತಿತ್ತು. ಇವರು ಕಿ.ರಂ. ಅವರಿಗೆ ಚೆನ್ನಾಗಿ ಗೊತ್ತಿತ್ತು. ಇಬ್ಬರೂ ಪರಸ್ಪರ ಅಭಿಮಾನಿಗಳು. ಒಂದು ಸಂಜೆ ಕಿ.ರಂ. ಅವರ ಜೊತೆ ಸಿಮೋನ್‌ವೇಲ್‌ಳ ಕೃತಿಗಳನ್ನು 'ವರ್ಲ್ಡ್ ಕಲ್ಚರ್' ಗ್ರಂಥಾಲಯದಲ್ಲಿ ಹುಡುಕುವಾಗ ಡಾ॥ ಗುರುದತ್ ಅವರ ಓದಿನ ಕ್ರಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಜಗತ್ತಿನಲ್ಲಿ ಎಂತೆಂಥ ಓದುವ ಕ್ರಮವಿದೆಯೆಂದು ಸೂಚ್ಯವಾಗಿ ವಿವರಿಸಿದ್ದರು. ಇವೆಲ್ಲ ಒಂದು ಕ್ಷಣ ಪ್ರೆಸಿಡೆನ್ಸಿ ಕಾಲೇಜಿನ ಗ್ರಂಥಾಲಯದಲ್ಲಿ ಮನಸ್ಸಿನ ಪರದೆಯ ಮೇಲೆ ಹರಿದು ಹೋಯಿತು.

ಬಿಜಯ್ ಡೇ ಅವರಿಗೆ ಕರ್ನಾಟಕದಲ್ಲಿ ಗ್ರಂಥಾಲಯ ಚಳುವಳಿಯ ಬಗ್ಗೆ ವಿವರಿಸಿದೆ. ಹಾಗೆಯೇ ಕಲ್ಕತ್ತೆಯ ಬುಕ್ ಫೇರ್ ಬಗ್ಗೆ ನಾನು ಪ್ರಸ್ತಾಪಿಸಿದಾಗ; ಅವರು ಸಂಭ್ರಮದಿಂದ ಬುಕ್ ಫೇರ್‌ಗಳ ವೈಶಿಷ್ಟ್ಯವನ್ನು ಕುರಿತು ವಿವರಿಸಿದ್ದರು. ಇದರ ಹಿಂದಿನ ಎರಡು ದಿನ ಬುಕ್ ಫೇರ್‌ಗೆ ಹೋಗಿದ್ದೆ. ಮೊದಲನೆಯ ಜನವರಿ 26ರಂದು ನ್ಯಾಷನಲ್ ಲೈಬ್ರರಿಯ ಗೆಳೆಯ ಕುಮಾರಪ್ಪ ಹಾಗೂ ಅವರ ಜೊತೆ ಪರಿಚಯವಾದ ಗುಲಬರ್ಗಾದ ಶರಣಬಸಪ್ಪ ಅವರು ಬಂದಿದ್ದರು. ಶರಣ ಬಸಪ್ಪ ಅವರು ಎಸ್.ಬಿ.ಐ.ನಲ್ಲಿ ತನಿಖಾಧಿಕಾರಿ. ಉತ್ತಮ ಕಥೆಗಾರರು. ಈ ಬಾರಿಯ ಬುಕ್ ಫೇರ್ ನ ವಿಶೇಷವೆಂದರೆ: ರವೀಂದ್ರನಾಥ ಟ್ಯಾಗೂರರ

150ನೇ ಜನ್ಮದಿನಾಚರಣೆಯ ನೆನಪಿಗೆ ಪ್ರವೇಶ ಶುಲ್ಕವಿರಲಿಲ್ಲ. ಎಲ್ಲೆಂದರಲ್ಲಿ ತುಂಬಿಕೊಂಡ ಪುಸ್ತಕಪ್ರೇಮಿಗಳು. ಯಾವ ಪುಸ್ತಕಗಳ ಸ್ಟಾಲ್ ಗೆ ಹೋದರೂ ಅಲ್ಲೆಲ್ಲ ಟ್ಯಾಗೂರು ಕುರಿತ ವೈವಿಧ್ಯಮಯ ಕೃತಿಗಳು. ಅದರಲ್ಲೂ ಅಲ್ಲಿಯ ಮುಖಪುಟಗಳ ವೈವಿಧ್ಯಮಯತೆ ನನಗೆ ತುಂಬ ಇಷ್ಟವಾಯಿತು. ಇದನ್ನು ಕುರಿತು ಬಿಜಯ್ ಡೇ ಅವರಿಗೆ ತಿಳಿಸಿದಾಗ ತುಂಬ ಖುಷಿಯಿಂದ ಪ್ರತಿಕ್ರಿಯಿಸುತ್ತ ಬೆಂಗಳೂರಿನಲ್ಲಿ ಈ ರೀತಿಯ ಬುಕ್ ಫೇರ್ ನಡೆಯುತ್ತದಾ ಎಂದು ಕೇಳಿದ್ದರು. ಹೀಗೆ ಏನೇನೋ ಚರ್ಚಿಸುತ್ತ ಮಮತಾ ಬ್ಯಾನರ್ಜಿಯ ವೇವ್ ಬಗ್ಗೆ ಕೇಳಿದಾಗ: ಈ ಬಾರಿ ಅಧಿಕಾರಕ್ಕೆ ಬರಬಹುದು. ಆದರೆ ಎರಡು ಮೂರು ವರ್ಷವಿದ್ದರೆ ಹೆಚ್ಚು. ಯಾಕೆಂದರೆ ಆಕೆಯದು ಒಂದು ದೃಷ್ಟಿಯಿಂದ ಏಕವ್ಯಕ್ತಿಯ ಸಂಘಟನೆ ಎಂದಿದ್ದರು. ಅವರು ಬೀಳ್ಕೊಟ್ಟರು. ಬೆಂಗಳೂರಿಗೆ ಆಹ್ವಾನಿಸಿದೆ. ಬೆಂಗಳೂರು ನೋಡಿಲ್ಲ, ಬರಬೇಕು ಎಂದರು. ದಯವಿಟ್ಟು ಸಂಪರ್ಕಿಸಿ, ಮತ್ತೊಮ್ಮೆ ಕಲ್ಕತ್ತೆಗೆ ಬಂದಾಗ ಭೇಟಿಯಾಗಿ ಎಂದು ವಿಳಾಸ ಮತ್ತು ಮೊಬೈಲ್ ನಂಬರ್ ಕೊಟ್ಟರು.

ಈ ಆಕಸ್ಮಿಕ ಭೇಟಿಯನ್ನು ಮುಗಿಸಿ ಪಕ್ಕದಲ್ಲಿದ್ದ ಕಲ್ಕತ್ತ ವಿಶ್ವವಿದ್ಯಾಲಯದ ಕ್ಯಾಂಪಸ್ ಗೆ ಹೋದೆ. ಕಳೆದ ಬಾರಿ 1986ರಲ್ಲಿ ಬಂದಾಗ ವಿದ್ಯಾರ್ಥಿಗಳ ಚುನಾವಣೆಯ ಕಾರಣಕ್ಕೆ ಎಲ್ಲೆಂದರಲ್ಲಿ ಬ್ಯಾನರ್ ಗಳು ಮತ್ತು ಪೋಸ್ಟರ್‌ಗಳು ಒಂದು ರೀತಿಯಲ್ಲಿ ವಿಶ್ವವಿದ್ಯಾಲಯದ ಗೋಡೆಗಳ ಅಂದವನ್ನೇ ಕೆಡಿಸಿದ್ದವು. ಈ ಬಾರಿ ಆ ರೀತಿಯದ್ದು ಏನೂ ಇರಲಿಲ್ಲ. ಕ್ಯಾಂಪಸ್ ನೀಟಾಗಿತ್ತು. ಎಂತೆಂಥ ಫ್ಯಾಕಲ್ಟಿಗಳು ಇವೆ ಎಂದು ಸುಮ್ಮನೆ ಒಂದಷ್ಟು ಸುತ್ತಾಡಿದೆವು. ಹಾಗೆಯೇ ಸ್ವಲ್ಪ ಸಮಯ ಅಲ್ಲಿ ಹುಲ್ಲಿನ ಮೇಲೆ ಕೂತು; ಆ ವಿಶ್ವವಿದ್ಯಾಲಯದ ವೈಭವದ ದಿನಗಳನ್ನು ಮೆಲುಕು ಹಾಕುತ್ತ ಎದ್ದು ಹೊರಗೆ ಬಂದೆವು.

ಕಲ್ಕತ್ತ ವಿಶ್ವವಿದ್ಯಾಲಯದ ರಸ್ತೆ ತುಂಬ ಉದ್ದನೆಯ ರಸ್ತೆ, ಕಿರಿದಾದ ರಸ್ತೆಯೇನು ಅಲ್ಲ. ಸಾಕಷ್ಟು ಅಗಲವಿರುವಂಥದ್ದು. ಎರಡು ಬದಿಯಲ್ಲೂ ಪುಸ್ತಕಗಳ ಸ್ಟಾಲುಗಳು, ಅವು ಒಂದು ರೀತಿಯಲ್ಲಿ ಗೋಡನ್ ಗಳೇ ಸರಿ. ಅಷ್ಟರಮಟ್ಟಿಗೆ ಪುಸ್ತಕಗಳನ್ನು ಜೋಡಿಸಿರುತ್ತಾರೆ. ಅದೇ ಸಮಯಕ್ಕೆ ಆ ಪುಸ್ತಕಗಳ ನರನಾಡಿಗಳನ್ನು ಬಲ್ಲವರು. ವಿಶ್ವವಿದ್ಯಾಲಯದ ಎದುರು ಇರುವಂಥದ್ದೇ ಬಂಕಿಮ್ ಚಟರ್ಜಿ ರಸ್ತೆ. ಒಂದು ಅರ್ಥದಲ್ಲಿ ಅದು ಕಾಲೇಜ್ ಸ್ಟ್ರೀಟ್‌ಗೆ ಸೇರಿಕೊಂಡಿರುವಂಥದ್ದು. ಪುಸ್ತಕ ಕಾಶಿಯ ಕಾಲೋನಿ ಅದು. ನಾವು ಈಗಾಗಲೇ ಎರಡು ಗಂಟೆ ಕಾಲ ಕಳೆದಿದ್ದೆವು. ಸುಮ್ಮನೆ ನೋಡುವುದೇ ಒಂದು ಲಕ್ಸುರಿಯಾಗಿರುತ್ತದೆ. ಎಂತೆಂಥವರೋ ಅಲ್ಲಿಗೆ ಬರುತ್ತಾರೆ. ತುಂಬ ವಯೋವೃದ್ಧರಿಂದ ಮೊದಲ್ಗೊಂಡು ಪುಟ್ಟ ಪುಟ್ಟ ಮಕ್ಕಳ ಕೈಹಿಡಿದು ಬರುವ ತಂದೆ ತಾಯಿಗಳು. ಸಂಸ್ಕೃತಿಯೆಂದರೆ ಈ ಪುಸ್ತಕಗಳಲ್ಲಿ ಸಿಗುವಂಥದ್ದು ಎಂದು ಅರಿವು ಮೂಡಿಸುವ ತಂದೆತಾಯಿಗಳು. ಸರ್ಕಾರಿ ಕೆಲಸದ ದಿನವಾದರೂ ಬೆಳಿಗ್ಗೆ ಹನ್ನೊಂದು ಗಂಟೆಗೆ ಜನ ತುಂಬಿಕೊಂಡಿದ್ದರು.

ನಾವು ಪುಸ್ತಕಗಳ ರಾಶಿಯಲ್ಲಿ ಯಾವ ಯಾವುದೋ ಪುಸ್ತಕಕ್ಕೆ ಕೈಹಾಕಿ ಪುಟಗಳನ್ನು ತೆರೆದು ನೋಡುತ್ತಿದ್ದೆವು. ಹೀಗೆ ಕಾಲ ಕಳೆಯುವಾಗ ಸಂಭ್ರಮ ಮತ್ತು ದಿಗ್ಭ್ರಮೆ ಏಕಕಾಲದಲ್ಲಿ ನಮ್ಮಲ್ಲಿ ಆಪ್ತಗೊಂಡಿರುತ್ತದೆ. ಜಗತ್ತಿನ ಜ್ಞಾನಭಂಡಾರವೆಲ್ಲ ಅಲ್ಲಿಯೇ ತುಂಬಿಕೊಂಡಿರುವಂಥದ್ದು. ಎಂತೆಂಥ ಅಭಿರುಚಿಯವರೋ ಅಲ್ಲಿಗೆ ಬರುತ್ತಿರುತ್ತಾರೆ. ಒಂದು ದೃಷ್ಟಿಯಿಂದ ಪಶ್ಚಿಮ ಬಂಗಾಳದ ಮಂದಿಗೆ ಕಲ್ಕತ್ತೆಯ ಕಾಲೇಜು ಸ್ಟ್ರೀಟ್‌ಗೆ ಹೋಗಿ ಬಂದೆವು ಎಂಬುದು ಪ್ರತಿಷ್ಠೆಯ

ಮತ್ತು ಗೌರವದ ಮಾತಾಗಿರುತ್ತದೆ. ಹಾಗೆಯೇ ಪಶ್ಚಿಮ ಬಂಗಾಳದ ಹೊರಗಿನವರಿಗೂ ಕೂಡ. ಹೀಗೆ ಒಂದು ಸ್ಟಾಲ್‌ನಲ್ಲಿ ಪುಸ್ತಕಗಳನ್ನು ನೋಡುತ್ತಿರುವಾಗ ; ಎಂಬತ್ತರ ಗಡಿಯನ್ನು ದಾಟಿದವರೊಬ್ಬರು ಮಣಿ ಭೌಮಿಕ್ ಎಂಬ ಮಹಾಜ್ಞಾನಿಯ 'ಕೋಡ್ ನೇಮ್ ಗಾಡ್' ಕೃತಿಯನ್ನು ಕೈಗೆ ತೆಗೆದುಕೊಂಡು ನೋಡುತ್ತಿದ್ದರು. ನಾನು ಒಂದೈದು ನಿಮಿಷ ಆತನನ್ನೇ ನೋಡುತ್ತಿದ್ದೆ. ಸಣ್ಣಗೆ ಸ್ವಲ್ಪ ಎತ್ತರಕ್ಕಿದ್ದ. ಸಾಧಾರಣ ಉಡುಪು. ಪರಿಚಯ ಮಾಡಿಕೊಳ್ಳಬೇಕೆನ್ನಿಸಿತು. ಯಾಕೆಂದರೆ ಮಣಿ ಭೌಮಿಕ್‌ನ ಮೇಲಿನ ಹೆಸರಿನ ಕೃತಿಯು ಕನ್ನಡಕ್ಕೆ ಅನುವಾದವಾಗಿ ಬಂದಿರುವಂಥದ್ದು. 'ದೇವರು ಎಂಬ ಸಂಕೇತನಾಮ'ವನ್ನು ಧರಿಸಿ ಕನ್ನಡದ ಸಾಕಷ್ಟು ಓದುಗರಿಗೆ ಪ್ರಿಯವಾಗಿರುವಂಥದ್ದು. ಈ ಕೃತಿ ನಮ್ಮನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗುವುದು. ಜ್ಞಾನದ ವಿವಿಧ ಮೂಲಗಳನ್ನು ಪರಿಚಯಿಸುವ ಎನ್‌ಸೈಕ್ಲೋಪೀಡಿಯ ಇದ್ದಂತೆ. ಒಂದರ್ಥದಲ್ಲಿ ಬಿಡಿಬಿಡಿಯಾಗಿಯೂ, ವಿವರಣಾತ್ಮಕ ವಾಗಿಯೂ ಇರುವುದರಿಂದ ಜಾಗ್ರತೆ ಮನಸ್ಸಿಗೆ ಹತ್ತಿರವಾಗಿಬಿಡುತ್ತದೆ. ಮಣಿಭೌಮಿಕ್ ಅವರ ಓದು ಮತ್ತು ಅದನ್ನು ಜೀರ್ಣಿಸಿಕೊಂಡು ಬರವಣಿಗೆಯ ರೂಪದಿಂದ ಹತ್ತಾರು ಮಂದಿ ಓದಿ ಜಿಜ್ಞಾಸೆಗೊಳಪಡಿಸುವಂಥದ್ದು. ಯಾಕೆಂದರೆ ಭೌಮಿಕ್ ಹೇಳಿರುವುದರಲ್ಲಿ ಕ್ರಮಬದ್ಧತೆ ಇದೆ. ಸುಮ್ಮನೆ ಒಂದು ಪ್ಯಾರಾವನ್ನು ಇಲ್ಲಿ ದಾಖಲಿಸುತ್ತಿದ್ದೇನೆ. ನನ್ನ ಮುಂದಿರುವ ವ್ಯಕ್ತಿ ನನಗಿಂತ ತೀವ್ರವಾಗಿ ಯೋಚಿಸುತ್ತಿರಬಹುದು ಎಂಬ ಕಾರಣಕ್ಕಾಗಿ: "ನಮ್ಮ ತಂದೆಯೂ ಪ್ರತ್ಯೇಕವಾಗಿ ಧ್ಯಾನ ಮಾಡುತ್ತಿದ್ದರು. ನನ್ನ ಜನ್ಮದಾತರು ಮಾಡುತ್ತಿದ್ದ ಆರಾಧನೆ ಒಂದು ಹೃದಯಸ್ಪರ್ಶಿ ನೋಟ. ಅವರು ದೇವರೊಡನೆ ಆಧ್ಯಾತ್ಮಿಕ ಏಕತೆಗಾಗಿ ಹಂಬಲಿಸುತ್ತಿದ್ದರು. ಆದರೆ ಸಾಮಾನ್ಯ ಬದುಕಿನ ರೀತಿಯಲ್ಲಿ ಅದು ಅಸಾಧ್ಯವೆಂದು ನಂಬಿದ್ದರು. ಲೌಕಿಕ ಬದುಕಿನ ಸಂಪೂರ್ಣ ತ್ಯಾಗ ಮತ್ತು ಹಿಮಾಲಯಕ್ಕೆ ಇಲ್ಲವೇ ಅಂಥ ಯಾವುದಾದರೊಂದು ಆಧ್ಯಾತ್ಮಿಕ ತಾಣಕ್ಕೆ ತೆರಳಿದರೆ ತಮ್ಮ ಹೃದಯದ ಹಂಬಲ ನೆರವೇರುವುದೆಂದು ಭಾವಿಸಿದ್ದರು. ಆದರೆ ಇದು ಪ್ರಾಯೋಗಿಕವಾಗಿ ಸಾಧ್ಯವಾಗದ ಮಾತು. ಜಗತ್ತನ್ನು ದೂರೀಕರಿಸದೆಯೇ ಜ್ಞಾನೋದಯ ಸಾಧನೆ ಸಾಧ್ಯ ಎಂಬುದು ನನ್ನ ನಂಬಿಕೆ; ಆದರೆ ತನ್ನ ಪೂರ್ವಿಕರ ದೃಢನಂಬಿಕೆಯನ್ನು ತಿರಸ್ಕರಿಸುವುದರಿಂದ ಅಲ್ಲ. ಒಂದು ಅಣುವಿನ ಸ್ವಭಾವವನ್ನು ಕಂಡುಹಿಡಿಯಲು ತೊಡಗುವ ತೀವ್ರತೆಯಲ್ಲಿಯೇ ಗಾಂಧಿಯಂತೆ ಶ್ರದ್ಧೆಯನ್ನು ಕ್ರಿಯೆಯಲ್ಲಿ ತೊಡಗಿಸುವುದರ ಮೂಲಕ ಸಾಧ್ಯ" ಈ ರೀತಿಯ ವೈವಿಧ್ಯಮಯವಾದ ವಿಚಾರ ಮಂಡನೆಯನ್ನು ಇಡೀ ಪುಸ್ತಕದುದ್ದಕ್ಕೂ ಕಾಣಬಹುದು. ಅಭಿನವ ಪ್ರಕಾಶನದಲ್ಲಿ ಬಂದಿರುವಂಥ ಈ ಕೃತಿಯನ್ನು ಕೆ. ಪುಟ್ಟಸ್ವಾಮಿಯವರ ಉತ್ತಮ ಅನುವಾದದಲ್ಲಿ ನಮಗೆ ಲಭ್ಯವಾಗಿರುವಂಥದ್ದು.

ಮಣಿ ಭೌಮಿಕ್ ಅವರ ಕೃತಿಯನ್ನು ನೋಡುತ್ತಿದ್ದ ವ್ಯಕ್ತಿಯನ್ನು ಪರಿಚಯ ಮಾಡಿಕೊಂಡೆ. ಆತನೇನು ತತ್ವಶಾಸ್ತ್ರದ, ಸಾಹಿತ್ಯದ ಅಥವಾ ವಿಜ್ಞಾನದ ವಿದ್ಯಾರ್ಥಿಯೇನೂ ಆಗಿರಲಿಲ್ಲ. ಮುಖ್ಯ ಇಂಜಿನಿಯರ್ ಆಗಿ ಕೆಲಸ ಮಾಡಿ ಸುಮಾರು ಎರಡು ದಶಕಗಳ ಹಿಂದೆ ನಿವೃತ್ತಿಯಾದವರು. ಆತನ ಹೆಸರು : ಬಲರಾಮ್ ಲಾಹ ಎಂದು. ಮಣಿ ಭೌಮಿಕ್ ಅವರ ಕೃತಿ ಕನ್ನಡಕ್ಕೆ ಅನುವಾದವಾಗಿದೆ ಎಂದಾಗ ತುಂಬ ಖುಷಿಪಟ್ಟರು. ಆ ಖುಷಿಗೆ ಪೂರಕವಾಗಿ ಒಂದೆರಡು ತಿಂಗಳ ಹಿಂದೆ ಕಲ್ಕತ್ತೆಯ ರಾಮಕೃಷ್ಣ ಆಶ್ರಮದಲ್ಲಿ ಭೌಮಿಕ್ ಅವರ ಎರಡು ವಿಶೇಷ ಉಪನ್ಯಾಸ ಕುರಿತು ಸಂಭ್ರಮದಿಂದ ಎಂಥ ಗ್ರೇಟ್ ಥಿಂಕರ್ ಎಂದು ಒಂದಷ್ಟು ಮಾತನ್ನು ಹೇಳಿದರು. ಅದೇ ಸಮಯಕ್ಕೆ ಕಾಲೇಜ್ ಸ್ಟ್ರೀಟ್ ಗೆ ಸಂಬಂಧಿಸಿದಂತೆ ಕೇಳಿದಾಗ;

ನೋಡಿ: ಪಶ್ಚಿಮ ಬಂಗಾಳದ ಸುಶಿಕ್ಷಿತ ಮಧ್ಯಮ ವರ್ಗ ಹಾಗೂ ಕೆಳಮಧ್ಯಮ ವರ್ಗದವರಿಗೆ ತಿಂಗಳಿಗೊಮ್ಮೆ ಇಲ್ಲಿಗೆ ಬಂದು ಹೋಗುವುದು ಒಂದು ಸಾಂಸ್ಕೃತಿಕ ಪ್ರತಿಷ್ಠೆಯನ್ನಾಗಿ ಸ್ವೀಕರಿಸಿದ್ದಾರೆ. ಕೆಳವರ್ಗದ ಶಿಕ್ಷಿತರ ಮನಸ್ಸಿನಲ್ಲಿಯೂ ಹರಡುತ್ತಿರುವುದು ಸಂತೋಷದ ಸಂಗತಿ. ನಾನಂತೂ ಕಳೆದ ಅರವತ್ತು ವರ್ಷಗಳಿಂದ ಪಶ್ಚಿಮ ಬಂಗಾಳದ ಯಾವ ಮೂಲೆಯಲ್ಲಿದ್ದರೂ; ತಿಂಗಳಿಗೊಮ್ಮೆ ಇಲ್ಲಿಗೆ ತಪ್ಪದೇ ಬಂದು ಹೋಗಿದ್ದೇನೆ. ಇಲ್ಲಿಯ ಬಹುಪಾಲು ಮಂದಿಗೆ ಕಾಳಿಕಾ ಟೆಂಪಲ್ ಮತ್ತು ಕಾಲೇಜ್ ಸ್ಟ್ರೀಟ್ ಬೇರೆ ಬೇರೆ ಅಲ್ಲ ಎಂದರು. ಅವರಿಗೆ ನಮಸ್ಕರಿಸಿ ಅವರ ಪುಸ್ತಕಗಳ ಹುಡುಕಾಟಕ್ಕೆ ತೊಂದರೆ ಕೊಡುವುದು ಬೇಡವೆಂದು ಹಾಗೆಯೇ ಸುತ್ತಾಡುತ್ತ ಮುಂದೆ ಬಂದೆ.

ಅಲ್ಲೊಂದು ಸ್ಟಾಲ್‌ನಲ್ಲಿ ಹೀಗೆಯೇ ಪುಸ್ತಕಗಳನ್ನು ಹುಡುಕುತ್ತಿರುವಾಗ ಡಾ॥ ಲಾಲ್ ಅವರ ಪುಸ್ತಕ ಕಾಣಿಸಿತು. ಕ್ಯಾನ್ಸರ್‌ಗೆ ಸಂಬಂಧಿಸಿದ ಮಾನಸಿಕ ಟ್ರೀಟ್‌ಮೆಂಟನ್ನು ಕುರಿತ ಪುಸ್ತಕ. ಪೆಂಗ್ವಿನ್ ಪ್ರಕಾಶನ ಅನ್ನಿಸುತ್ತದೆ. ಒಂದೆರಡು ದಶಕಗಳ ಹಿಂದೆ ಪ್ರಕಟವಾಗಿರುವಂಥದ್ದು. ಆ ಕೃತಿಯ ಅಧ್ಯಾಯಗಳೇ ಒಂದು ರೀತಿಯಲ್ಲಿ ಭಾವನಾತ್ಮಕವಾಗಿರುವಂಥದ್ದು. ಸುಮ್ಮನೇ ಹೀಗೆಯೇ ಅವಲೋಕಿಸಿದಾಗ; ಅಲ್ಲಿಯ ಅಧ್ಯಾಯಗಳೇ ಮಾನಸಿಕ ಟ್ರೀಟ್‌ಮೆಂಟ್‌ನ ಚೌಕಟ್ಟಿನಲ್ಲಿ ಬರೆದ ಸ್ವಗತದ ಬರಹಗಳು. ಬಹಳ ಹಿಂದೆ ಕಿ.ರಂ. ಅವರು ಅವರ ಚಿಕ್ಕಮ್ಮನಿಗೆ ಕ್ಯಾನ್ಸರ್ ಬಂದಾಗ; ಸಾಂದರ್ಭಿಕವಾಗಿ ಈ ಕೃತಿಯನ್ನು ಕುರಿತು ಪ್ರಸ್ತಾಪಿಸಿದ್ದರು. ಈ ಪುಸ್ತಕವನ್ನು ತೆಗೆದುಕೊಳ್ಳೋಣವೆಂದು ಸುಮಾರು ಅರ್ಧ ಗಂಟೆ ಕಾದೆ. ಯಾರೋ ಹುಡುಗನನ್ನು ಕೂರಿಸಿ ಯಜಮಾನ ಎಲ್ಲಿಗೋ ಹೋಗಿದ್ದರು. ಈಗಲೇ ಬಂದು ಬಿಡುತ್ತೇನೆ ಎಂದು. ನಾವು ಬೆಳಿಗ್ಗೆಯಿಂದ ಸುತ್ತಾಡಿ ತುಂಬ ಸುಸ್ತಾಗಿದ್ದೆವು. ಅಲ್ಲಿಯೇ ಇದ್ದ ಇಂಡಿಯನ್ ಕಾಫೀ ಬಾರ್‌ಗೆ ಹೋದೆವು. ಕಳೆದ ಕಾಲು ಶತಮಾನದ ಹಿಂದೆ ಹೇಗಿತ್ತೋ ಹಾಗೆಯೇ ಇತ್ತು. ಆದರೆ ಹೋದ ತಕ್ಷಣ ತುಂಬ ಮನಮೋಹಕವಾಗಿ ಕಂಡಿದ್ದು; ರವೀಂದ್ರರ ಯೌವನಾವಸ್ಥೆಯ ಅದ್ಭುತ ಆಕರ್ಷಕ ಭಾವಚಿತ್ರ, ಅದು ಲೈಫ್ ಸೈಜ್‌ಗಿಂತ ಎತ್ತರವಾಗಿತ್ತು. ವಾಷ್ ಬೇಸಿನ್ ಬಳಿ ಹೋಗಿ ಕೈತೊಳೆದು ಮುಖಕ್ಕೆ ತಣ್ಣೀರು ಹಾಕಿಕೊಂಡಾಗ ಹಾಯ್ ಅನ್ನಿಸಿತು. ಲಕ್ಷ್ಮಣರೆಡ್ಡಿ ಜೊತೆ ಹಳೆಯ ನೆನಪುಗಳನ್ನು ಕುರಿತು ಪ್ರಸ್ತಾಪಿಸುತ್ತಿದ್ದೆ. ಕಾಫಿಗೆ ಆರ್ಡರ್ ಮಾಡಿದೆವು. ಪಕ್ಕದ ಟೇಬಲ್‌ನಲ್ಲಿ ಐವತ್ತರ ಪ್ರಾಯದ ಮಹಿಳೆಯೊಬ್ಬರು ಬ್ರೆಡ್ ರೋಸ್ಟ್ ತಿನ್ನುತ್ತ ಕಾಫಿ ಚಪ್ಪರಿಸುತ್ತಿದ್ದರು. ಆಕೆಯ ಕೈಯಲ್ಲಿ ಒಂದು ಪುಸ್ತಕವಿತ್ತು. ತಲೆ ತುಂಬ ಬೆಳ್ಳನೆಯ ಬಿಳಿಯ ಕೂದಲು. ಸಾಧಾರಣವಾದ ಕಾಟನ್ ಸೀರೆ ಧರಿಸಿದ್ದರು. ನಮಗೆ ಕಾಫಿ ಬಂತು. ಆಕೆಯನ್ನೇ ಕುರಿತು ಯೋಚಿಸುತ್ತಿದ್ದೆ. ಶರತ್‌ಚ್ಚಂದ್ರ ಚಟರ್ಜಿಯವರ ಸ್ತ್ರೀ ಪಾತ್ರದಂತೆ ಗೋಚರಿಸಿದಳು. ಇನ್ನೂ ಮುಂದುವರಿದು ಹೇಳಬೇಕೆಂದರೆ; ಟ್ಯಾಗೂರರ ಗೋರಾ ಕಾದಂಬರಿಯ ಆನಂದಮಯಿಯಾಗಿ ಕಂಡರು. ಮತ್ತೊಂದು ಪಕ್ಕದ ಟೇಬಲ್ಲಿನಲ್ಲಿ ಐದಾರು ಮಂದಿ ಕೂತು ಏನೇನೋ ಮಾತಾಡುತ್ತಿದ್ದರು. ಅವರನ್ನು ಕಂಡರೆ ಕಲ್ಕತ್ತೆ ವಿಶ್ವವಿದ್ಯಾಲಯದ ನೌಕರರಂತೆ ಕಂಡರು. ಅವರ ಮಾತೂ ಅದೇ ದಿಕ್ಕಿನಲ್ಲಿತ್ತು. ನಾನು ಎದ್ದು ಹೋಗಿ ಟ್ಯಾಗೂರರ ಆ ಮನಮೋಹಕ ಭಾವಚಿತ್ರದ ಮುಂದೆ ಒಂದೆರಡು ನಿಮಿಷ ನಿಂತು, ನೋಡಿ ಆನಂದದಿಂದ ಮತ್ತೆ ನನ್ನ ಟೇಬಲ್ ಬಳಿ ಬಂದೆ. ಆಕೆ ಒಮ್ಮೆ ನನ್ನ ಕಡೆ ನೋಡಿದರು. ಹೋಗಿ ಮಾತಾಡಬೇಕೆನ್ನಿಸಿತು. ಆದರೆ ಈ ಅನ್ನಿಸಿಕೆ ಫಲಗೊಳ್ಳಲು ಐದಾರು ನಿಮಿಷ ತೆಗೆದುಕೊಂಡಿತು. ಕೊನೆಗೆ ಸ್ವಲ್ಪ ಧೈರ್ಯ ತೆಗೆದುಕೊಂಡು ಮಾತಾಡಿಸಿದೆ. ಹೆಸರು ಕೇಳಿದೆ. ವಿನುತ ಚಟರ್ಜಿ

ಎಂದರು. ಕಲ್ಕತ್ತೆಯ ಯಾವುದೋ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದೇನೆ. ಈ ಕಾಲೇಜ್ ಸ್ಟ್ರೀಟ್‌ಗೆ ಬಂದದ್ದನ್ನು ತಿಳಿಸಿದರು. ನಾನು ಕಾಲೇಜ್ ಸ್ಟ್ರೀಟ್ ಬಗ್ಗೆಯ ನನ್ನ ಫ್ಯಾಸಿನೇಷನ್ ಕುರಿತು ಹೇಳಿದೆ. ಬೆಂಗಳೂರಿನಿಂದ ಬಂದದ್ದನ್ನು ತಿಳಿಸಿದೆ. ಆಕೆಯ ಮುಖದ ತುಂಬ ಸೌಮ್ಯದ ನಗು. ಕೂತುಕೊಳ್ಳಿ ಎಂದರು. ನಾನು ಕೂತು ಏನೇನೋ ಕೇಳಲು ಮನಸ್ಸಿದ್ದರೂ 'ಇಟ್ ಈಸ್ ಆಲ್ ರೈಟ್' ಎಂದು ನಮಸ್ಕರಿಸಿ ನಮ್ಮ ಟೇಬಲ್ ನಲ್ಲಿ ಕೂತು ಮತ್ತೊಂದು ಸುತ್ತು ಕಾಫೀ ಕುಡಿದು ಆಡೆನ್ನನ ಕವನ ಸಂಕಲನದ 'ಸ್ಟ್ರೀಮ್ಸ್' ಕವನವನ್ನು ಮತ್ತೊಮ್ಮೆ ಓದಿಕೊಂಡೆ. 'ಡಿಯರ್ ವಾಟರ್, ಕ್ಲಿಯರ್ ವಾಟರ್, ಪ್ಲೇಫುಲ್ ಇನ್ ಆಲ್ ಇವರ್ ಸ್ಟ್ರೀಮ್ಸ್' ಸಾಲು ಏನೇನೋ ನೆನಪುಗಳನ್ನು ದಟ್ಟಗೊಳಿಸಿತು. ಮುಂದಿನ ಸಾಲಿನ 'ಲಾಯ್‌ಟರ್' ಎಂಬ ಶಬ್ದದ ಅರ್ಥಬಾಹುಳ್ಯವನ್ನು ಕುರಿತು ಯೋಚಿಸುತ್ತಿದ್ದೆ. 'ಅಲೆದಾಟ, ಅಲ್ಲಲ್ಲೆ ಸುತ್ತುತ್ತಿರು' ಎಂಬುದು ಎಷ್ಟು ಪ್ರಿಯವಾದದ್ದು. ಯಾರಿಗಾದರೂ 'ಲಾಯ್‌ಟರ್' ಎಂದು ಹೆಸರಿಟ್ಟು ಕರೆದರೆ ಎಷ್ಟು ಚೆನ್ನಾಗಿರುತ್ತದೆ ಎಂದು ನನ್ನ ಪಾಡಿಗೆ ನಾನು ಯೋಚಿಸುತ್ತ ಹೋದೆ. ಮತ್ತೊಮ್ಮೆ ಟ್ಯಾಗೂರರ ಭಾವಚಿತ್ರವನ್ನು ನೋಡಿದೆ. ಟ್ಯಾಗೂರರು ಎಷ್ಟೊಂದು ಅಲೆಮಾರಿಯಾಗಿದ್ದರು. ಆದರೂ ಮಾಡಬೇಕಾದ್ದನ್ನೆಲ್ಲ, ಕಟ್ಟಬೇಕಾದ್ದನ್ನೆಲ್ಲ ಆಯಾ ಕಾಲಕ್ಕೆ ಹೇಗೆ ಕಟ್ಟುತ್ತ ಹೋದರು ಅನ್ನಿಸಿತು.

ಎದ್ದು ಹೊರಗೆ ಹೊರಟೆವು. ಆಕೆ ಅಲ್ಲೇ ಕೂತಿದ್ದರು. ನೋಡಿದೆ. ನೈಸ್ ಎಂದರು. ಮತ್ತೆ ಕಾಲೇಜ್ ಸ್ಟ್ರೀಟ್, ಬಂಕಿಮ ಚಟರ್ಜಿಯವರ ಬೀದಿಯಲ್ಲಿ ಪುಸ್ತಕ ಆರಾಧಕರು ಮತ್ತಷ್ಟು ಜಾಸ್ತಿಯಾಗಿದ್ದರು. ಹೀಗೆಯೇ ನೋಡುತ್ತ ಹೋದಾಗ; ಅಲ್ಲೊಂದು ಮೂಲೆಯಲ್ಲಿ ಎಷ್ಟೋ ವರ್ಷಗಳ ಬಂಗಾಳಿ ಪೀರಿಯಾಡಿಕಲ್ಸನ್ನು ಒಟ್ಟಿಗೆ ಜೋಡಿಸಿದ್ದರು. ಮತ್ತೊಂದು ಮಗ್ಗುಲಲ್ಲಿ ಎನ್‌ಕೌಂಟರ್, ಸೆಮಿನಾರ್, ಟೈಮ್, ನ್ಯೂಸ್ ವೀಕ್, ಲಂಡನ್ ಪತ್ರಿಕೆಗಳು, ಅವುಗಳನ್ನೆಲ್ಲ ಸಾಗಿಸಿಕೊಂಡು ಬರಲು ಸಾಧ್ಯವಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅನ್ನಿಸಿತು. ಆ ಸ್ಟಾಲ್ ನ ಯಜಮಾನ ನಾವು ಪತ್ರಿಕೆಗಳನ್ನು ನೋಡುತ್ತಿದ್ದರೆ; ತನ್ನ ಪಾಡಿಗೆ ತಾನು ಯಾವುದೋ ಕೃತಿಯನ್ನು ಓದುತ್ತಿದ್ದರು. ಕುತೂಹಲಕ್ಕೆ ಯಾವುದು ಎಂದು ಕೇಳಬೇಕೆನ್ನಿಸಿತು. ಅಷ್ಟರಲ್ಲಿ ಇಬ್ಬರು ಮಹಿಳೆಯರು ಬಂದು ಬಂಗಾಳಿಯಲ್ಲಿ ಏನೋ ಕೇಳತೊಡಗಿದರು. ಅವರು ಪಕ್ಕದ ಸಂಸ್ಕೃತ ಕಾಲೇಜಿನವರಿರಬಹುದು. ವೇದಗಳಿಗೆ ಸಂಬಂಧಿಸಿದ ಹಳೆಯ ಪತ್ರಿಕೆಯನ್ನು ಕೇಳುತ್ತಿದ್ದರು. ಆ ಇಬ್ಬರು ಮಹಿಳೆಯರು ಸ್ವಲ್ಪ ಗುಂಡಗೆ ಮುದ್ದುಮುದ್ದಾಗಿದ್ದರು. ತುಟಿಗಳಿಗೆ ಏಳು ಬಂಡಿ ತುಟಿಯ ಬಣ್ಣವನ್ನು ಅಂಟಿಸಿಕೊಂಡಿದ್ದರು. ಹೆಗಲ ಮೇಲೆ ಶಾಲುಗಳಿದ್ದವು. ಯಾಕೆಂದರೆ ಬೆಳಿಗ್ಗೇನೆ ಬಂದವರಿರಬಹುದು. ಕಲ್ಕತ್ತೆಯಲ್ಲಿ ಆಗ ತಾನೇ ಚಳಿ ಕಡಿಮೆಯಾಗಿತ್ತು. ಕಲ್ಕತ್ತೆಯಲ್ಲಿ ಬಹುಪಾಲು ಮಹಿಳೆಯರು ತುಟಿಗಳಿಗೆ ಬಣ್ಣವನ್ನು ಹಚ್ಚಿಕೊಂಡಿರುತ್ತಾರೆ. ಅವರ ಹೊಳಪುಗಣ್ಣುಗಳ ಮುಂದೆ ಈ ಬಣ್ಣ ಏನೇನೂ ಅಲ್ಲ. ಆದರೂ ವ್ಯಾಮೋಹ.

ಟ್ಯಾಗೂರರ 'ಮೈಸ್ಕೂಲ್' ಚಿತ್ರವಿದ್ದ ಪತ್ರಿಕೆಯನ್ನು ತೆಗೆದುಕೊಂಡೆ. ಅದು ಬಂಗಾಳಿಯದ್ದಾಗಿದ್ದರೂ ಬೆಂಗಳೂರಿನಲ್ಲಿ ಮೀರಾ ಚಕ್ರವರ್ತಿಯಂಥವರಿಂದ ಓದಿಸಿ ತಿಳಿದುಕೊಳ್ಳಬಹುದೆಂದು. ಅದೇ ಸಮಯಕ್ಕೆ ಆನಂದಬಜಾರ್

ಪತ್ರಿಕಾ ಗುಂಪಿನ 'ದೇಶ್' ಪತ್ರಿಕೆಯ ವಿಶೇಷಾಂಕಗಳನ್ನು ತೆಗೆದುಕೊಳ್ಳಬೇಕೆನ್ನಿಸಿತು. ಬಂಗಾಳಿಯ ಹಿರಿಯ ಕಥೆಗಾರ ಸುನಿಲ್ ಗಂಗೋಪಾಧ್ಯಾಯ ಅವರು ಅದರ ಸಂಪಾದಕರಾಗಿದ್ದರು. ಕಾಲು ಶತಮಾನದ ಹಿಂದೆ ಅವರನ್ನು ಮತ್ತು ಮತ್ತೊಬ್ಬ ಕಥೆಗಾರ ಮತಿನಂದಿನಿಯವರನ್ನು ನೋಡಲು ಹೋಗಿದ್ದೆ. ಅವರಿಗೆ ರಾಘವೇಂದ್ರ ಖಾಸನೀಸರು ಒಂದು ಪತ್ರವನ್ನು ಕೊಟ್ಟಿದ್ದರು. ಆಗ ಸುನಿಲ್ ಗಂಗೋಪಾಧ್ಯಾಯ ಅವರು ಎಂ.ಎಫ್. ಹುಸೇನ್ ಅವರ ಮುಖಪುಟವಿದ್ದ ಸಂಚಿಕೆಯನ್ನು ಕೊಟ್ಟಿದ್ದರು. ಈಗಲೂ ಅದು ನಾಶವಾಗದೆ ನನ್ನ ಬಳಿ ಇದೆ. ಒಂದು ದೃಷ್ಟಿಯಿಂದ 'ದೇಶ್' ಪತ್ರಿಕೆ ಕಳೆದ ಕೆಲವು ದಶಕಗಳಿಂದ ಬಂಗಾಳಿ ಸಾಹಿತ್ಯಕ್ಕೆ ವೈವಿಧ್ಯಮಯ ಮಾದರಿಗಳನ್ನು ತಂದುಕೊಟ್ಟಿರುವಂಥದ್ದು. ಅಂದು ಮತಿನಿಂದಿನಿ ಮತ್ತು ಸುನಿಲ್ ಗಂಗೋಪಾಧ್ಯಾಯ ಅವರು ಮರೆಯದೇ ಕಾಲೇಜ್ ಸ್ಟ್ರೀಟನ್ನು ನೋಡಲು ಸೂಚಿಸಿದ್ದರು. ಎಷ್ಟು ಬಾರಿ ನೋಡಿದರೂ ಸಾಕೆನಿಸುವುದಿಲ್ಲ ಅಂಥ ಪುಸ್ತಕ ಕಾಶಿ.

ಪಕ್ಕದ ಸಂಸ್ಕೃತ ಕಾಲೇಜನ್ನು ನೋಡಲು ಹೋದೆವು. ತುಂಬ ಹಳೆಯದಾದ ಕಾಲೇಜ್, ಎಲ್ಲೆಂದರಲ್ಲಿ ಹುಡುಗಿಯರು ಕಟ್ಟಡಗಳ ಮೆಟ್ಟಿಲುಗಳ ಮೇಲೆ ಕೂತು ಏನೇನೋ ಮಾತಾಡುತ್ತಿದ್ದರು. ಬಹುಪಾಲು ಹೆಣ್ಣುಮಕ್ಕಳ ಮುಖಾರವಿಂದದಲ್ಲಿ ಲಿಪ್ ಸ್ಟಿಕ್ ಎದ್ದು ಕಾಣುತ್ತಿತ್ತು. ಹತ್ತು ನಿಮಿಷ ಅಲ್ಲೆಲ್ಲ ಸುತ್ತಾಡಿದೆವು. ಹಸಿವಾಗತೊಡಗಿತ್ತು. ಮತ್ತೊಮ್ಮೆ ಕಾಫಿ ಬಾರ್ ಗೆ ಹೋದೆವು. ಬ್ರೆಡ್ ರೋಸ್ಟ್ ಮತ್ತು ಮೊಟ್ಟೆ ಪಲ್ಯವನ್ನು ತೆಗೆದುಕೊಂಡೆವು. ಆಕೆ ವಿನುತ ಚಟರ್ಜಿಯವರು ಎದ್ದು ಹೋಗಿದ್ದರು. ಮತ್ತೊಮ್ಮೆ ಟ್ಯಾಗೂರರ ಮೋಹಕವಾದ ಚಿತ್ರವನ್ನು ಕಣ್ತುಂಬಿಸಿಕೊಂಡೆ. ಆಡೆನ್‌ನ ಸ್ಟ್ರೀಮ್ ಕವನದ ಕೊನೆಯ ಸಾಲುಗಳು ನನ್ನ ಮುಂದಿದ್ದುವು;

"Wishing, I thought, the least of men their
figures of splendor, their holy places"

ಇದನ್ನು ಓದಿಕೊಳ್ಳುತ್ತಲೇ ಟ್ಯಾಗೂರರ ನದಿಗಳ, ಸರೋವರ ಮತ್ತು ಸಮುದ್ರದ ಮೇಲಿನ ಮಮಕಾರದ ಅಸ್ಪಷ್ಟ ಚಿತ್ರಣವೊಂದು ಮನಸ್ಸಿನ ಪರದೆಯ ಮೇಲೆ ಸುಳಿದು ಹೋಯಿತು. ತಿಂಡಿ ಮುಗಿಸಿ ಕಾಲೇಜ್ ಸ್ಟ್ರೀಟ್‌ಗೆ ಬಂದೆವು. ಈ ಬಾರಿ ಮಕ್ಕಳ ಪುಸ್ತಕಗಳೇ ಇರುವ ಸ್ಟಾಲ್ ಗಳ ಕಡೆ ಹೋದೆವು. ಅಲ್ಲಿ ತಂದೆತಾಯಿಗಳು ತಮ್ಮ ಮಕ್ಕಳ ಜೊತೆ ತುಂಬಿಕೊಂಡಿದ್ದರು. ಮಕ್ಕಳು ತಮಗೆ ಆಕರ್ಷಕವಾದ ಪುಸ್ತಕವನ್ನು ಕೈಗೆ ತೆಗೆದುಕೊಂಡು ಅದನ್ನು ಕೊಳ್ಳಲು ಒತ್ತಾಯಿಸುತ್ತಿದ್ದರು. ಈ ಎಲ್ಲಾ ದೃಶ್ಯಾವಳಿಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ಕಾಲೇಜ್ ಸ್ಟ್ರೀಟ್‌ಗೆ, ಬಂಕಿಮ ಚಂದ್ರ ಚಟರ್ಜಿ ಬೀದಿಗೆ ವಂದಿಸಿ ಮತ್ತೊಮ್ಮೆ ಬರಲು ಪ್ರಯತ್ನಿಸುವೆ ಎಂದು ಹೇಳಿ ಬಂದೆ.

●

"Philosophy has a technical language that one must use, changing it whenever necessary, if one is forging new ideas"

- Jean-Paul Sartre

ಒಳನೋಟ

ಪ್ರೀತಿಯ ಶೂದ್ರ

ಸೆಪ್ಟೆಂಬರ್–ಡಿಸೆಂಬರ್ ಸಂಚಿಕೆಯಲ್ಲಿ ನಮ್ಮ ಮಹತ್ವದ ಲೇಖಕಿ ಕಮಲಾದಾಸ್ ಬಗ್ಗೆ ನೀವು ಬರೆದ ಬರಹ ಅತ್ಯಂತ ಭಾವಸ್ಪರ್ಶಿಯಾಗಿತ್ತು. ಓದುತ್ತ ಓದುತ್ತ ಕಣ್ತುಂಬಿ ಬಂತು. ಅಂತಹ ಒಬ್ಬ ಲೇಖಕಿಯನ್ನು ನೀವು ಅರ್ಥಮಾಡಿಕೊಳ್ಳಲು ಯತ್ನಿಸಿದ ರೀತಿ ಕಂಡು ಹೆಮ್ಮೆ ಅನಿಸಿತು. ಅವಳ ಒಳಗುದಿಗಳು ಹಾಗೂ ದಟ್ಟ ವಿಷಾದಗಳಿಂದ ಕೂಡಿದ ಸೃಜನಶೀಲತೆಯನ್ನು ಎಷ್ಟು ಸಶಕ್ತವಾಗಿ ವಿಶ್ಲೇಷಿಸಿದ್ದೀರಿ! ಸುಮ್ಮನೆ ಹೇಳುತ್ತ ಹೋಗುವ ಶೈಲಿಯಲ್ಲಿಯೇ ಅವಳನ್ನು ಗ್ರಹಿಸಬೇಕಾದ ಪಾತಳಿಗಳನ್ನು ಅಲ್ಲಲ್ಲಿ ಮಿಂಚಿನಂತೆ ದರ್ಶಿಸಿದಿರಿ. ವಿವಿಧ ಕಾರ್ಯಕ್ರಮಗಳಲ್ಲಿ, ವೇದಿಕೆಗಳಲ್ಲಿ ಅವಳನ್ನು ಕಂಡ ಕೇಳಿದ ನೆನಪುಗಳನ್ನು ಜೋಡಿಸಿಡುವ ಕ್ರಮದಲ್ಲಿಯೇ ಅವಳ ನಿಜಸತ್ವದ ಅನಾವರಣವೂ ಆಗಿಬಿಡುವಂತಹ ವಿಸಿಷ್ಟ ಮಂಡನೆ ಅದು.

'ದಿನಚರಿಯ ಪುಟಗಳಿಂದ' ದಲ್ಲಿ ಬರೆದಿರುವ ಟಿಪ್ಪಣಿಗಳೂ ಅಷ್ಟೆ, ಅವತ್ತವತ್ತು ನಡೆದಿರುವುದನ್ನೆಲ್ಲ ರಾತ್ರಿಹೊತ್ತು ಹಜಾರದಲ್ಲಿ ಕುಳಿತು ಮನೆಮಂದಿಯೊಂದಿಗೆ ಹೇಳುತ್ತ ಇರುತ್ತಾರಲ್ಲ, ಆ ಧಾಟಿಯಲ್ಲಿದ್ದೂ ತನ್ನದೇ ಆದೊಂದು ಸೆನ್ಸಿಟಿವ್ ಮಗ್ಗುಲಿಂದ ಬಹಳ ಆಪ್ತವಾಗಿವೆ.

ಅಭಿನಂದನೆಗಳು.

ವೈದೇಹಿ
ಮಣಿಪಾಲ್

*****

ಪ್ರಿಯ ಶೂದ್ರ ಶ್ರೀನಿವಾಸರವರಿಗೆ,

ಸಪ್ಟೆಂಬರ್–ಡಿಸೆಂಬರ್ 2010ರ "ಶೂದ್ರ" ಸಂಚಿಕೆಯಲ್ಲಿ, 'ಈ ಶೂದ್ರ ಎಂಬ ಗೂಡಿನಲ್ಲಿ ಒಂದಷ್ಟು ಚಿಲಿಪಿಲಿ' ವಿಭಾಗದ ಕೊನೆಯಲ್ಲಿ ಪಿ. ಜಗನ್ನಾಥ ನಿಧನ ವಾರ್ತೆಯನ್ನು ಪ್ರಕಟಿಸಿದ್ದೀರಿ. ಬದುಕಿದ್ದಾಗ ಸದಾ ಸುದ್ಧಿಯಾಗಿರುತ್ತಿದ್ದ, ಕಂಡ ತಕ್ಷಣ 'ಪಾಪಿ ಮುಂಡೇದೇ ಇಷ್ಟು ದಿನ ಯಾಕೆ ಸಿಗಲಿಲ್ಲ?' ಎಂದು ಎದೆಗಪ್ಪಿಕೊಳ್ಳುತ್ತಿದ್ದ ಗೆಳೆಯ ಅಸ್ತಂಗತನಾದ ಸುದ್ದಿ ಯಾವ ಪತ್ರಿಕೆಯಲ್ಲೂ ಪ್ರಕಟವಾಗಲಿಲ್ಲ. ಪ್ರೀತಿ, ವಿಶ್ವಾಸ, ಬದ್ಧತೆಗಳು ಅಪ್ರಸ್ತುತವಾಗುತ್ತಿರುವ ಈ ಸಮಯದಲ್ಲಿ ಪಿ. ಜಗನ್ನಾಥನ ಮರಣವೂ ಪತ್ರಿಕೆಗಳಿಗೆ, ಜಗನ್ನಾಥ ನಡೆಸಿದ ಹೋರಾಟಗಳಿಂದ ಪ್ರಯೋಜನ ಪಡೆದ ವ್ಯಕ್ತಿ, ಸಂಘಟನೆಗಳಿಗೆ ಪ್ರತಿಕ್ರಿಯೆ ನೀಡಲಾರದಷ್ಟು, ಸಂತಾಪ ಸೂಚಿಸಲಾರದಷ್ಟು ನಿಷ್ಕ್ರಿಯಗೊಳಿಸಿರುವುದು ವಿಷಾದನೀಯ. ಡಿ.ಆರ್.ನಾಗರಾಜ, ಎಂ.ಕೆ.ಭಟ್, ಸಮುದಾಯದ ಸಿ.ಜಿ. ಕೃಷ್ಣಸ್ವಾಮಿ ಮುಂತಾದವರನ್ನು ಕಳೆದುಕೊಂಡು ಈಗ ಬೆಂಗಳೂರಿನಲ್ಲಿ ಯಾರಿಗೆ ಮಾತನಾಡಿಸುವುದು? ಎನ್ನುವ ಸ್ಥಿತಿ ತಲುಪಿದ್ದೇವೆ. ಜೀವಂತವಿದ್ದರೂ ಅನೇಕ ಕ್ರಿಯಾಶೀಲ ಮನಸ್ಸುಗಳು ಒಂದು ಕಡೆ ಸೇರುವ ಸಾಮಾನ್ಯ ವೇದಿಕೆ ಇಲ್ಲದಿರುವುದರಿಂದ ಅನಾಥ ಪ್ರಜ್ಞೆಗೆ ಒಳಗಾಗಿದ್ದೇವೆ. ಪಿ.ಜಗನ್ನಾಥನ ಸಾವು ಹಳೆಯ ಗೆಳೆಯರಿಗೆ ನೀಡಿದ ವಿದಾಯ ಗೀತೆಯ ಒಂದು ಸಾಲು.

ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದ ಜಗನ್ನಾಥ, ಶಸ್ತ್ರಚಿಕಿತ್ಸೆಯ ನಂತರ ಮತ್ತೆ ಹಳೆಯ ಗೆಳೆಯರನ್ನು ಸೇರಿಸಿ ರೈತ ಕಾರ್ಮಿಕರ ಪರವಾಗಿ ಧ್ವನಿ ಎತ್ತುವ ರಾಜಕೀಯೇತರ ಸಂಘಟನೆಯನ್ನು ಕಟ್ಟಲು ಪ್ರಯತ್ನಿಸುತ್ತಿದ್ದ. ಕಳೆದ ದಿನಗಳ ಬಗ್ಗೆ ಹೆಮ್ಮೆ, ವಿಷಾದ, ನೋವುಗಳನ್ನು ಅನುಭವಿಸುತ್ತಿದ್ದ. ಬೆಂಗಳೂರಿನ ಬಗಲಲ್ಲಿರುವ ತಲಘಟ್ಟಪುರದ ಸುತ್ತಮುತ್ತ ಇರುವ ಹಳ್ಳಿಗಳಲ್ಲಿ ಚಿರಪರಿಚಿತ ಹಾಗೂ ಜನಪ್ರಿಯನಾಗಿದ್ದ ಜಗನ್ನಾಥ ಮನಸ್ಸು ಮಾಡಿದ್ದರೆ, ತಾನೇ ಒಂದು ಸಣ್ಣ "ತಾತಗುಣಿ ಎಸ್ಟೇಟ್"ನಂತಹ ತೋಟವನ್ನು ರಿಯಲ್ ಎಸ್ಟೇಟ್ ದಂಧೆಯನ್ನು ಮಾಡಿಕೊಂಡು ಸುಖವಾಗಿರಬಹುದಿತ್ತು. ಆದರೆ, ದೇವಿಕಾರಾಣಿಯ "ತಾತಗುಣಿ ಎಸ್ಟೇಟ್" ಕಾರ್ಮಿಕರ ಕಷ್ಟ, ನೋವು, ಶೋಷಣೆಗಳಿಗೆ ಧ್ವನಿಯಾಗಿ ದಿವಂಗತ ಸೂರಿಯವರೊಂದಿಗೆ ಹೋರಾಟವನ್ನು ರಾಜ್ಯದಾದ್ಯಂತ ಜನತೆ ಮತ್ತು ಸರ್ಕಾರದ ಗಮನಸೆಳೆಯುವಂತೆ ಮಾಡಿದನೇ ಹೊರತು, ಹೋರಾಟಗಳಲ್ಲಿ ಎಂದೂ ರಾಜಿಯಾಗಲಿಲ್ಲ. ಸಿ.ಪಿ.ಐ. (ಎಂ)ನಲ್ಲಿ ಅವನಿಗೆ ಸಿಗಬೇಕಿದ್ದ ಸೂಕ್ತ ಸಹಾಯ, ಮಾರ್ಗದರ್ಶನ, ಸ್ಥಾನ ಗೌರವ ಸಿಗಲಿಲ್ಲ. ಒಬ್ಬ ರಾಜ್ಯಮಟ್ಟದ ಮುಖಂಡನಾಗಿ ಬೆಳೆಯಬೇಕಿದ್ದ ಗೆಳೆಯ ಬರೀ ಬೆಂಗಳೂರಿಗೆ ಸೀಮಿತನಾದ. ಇದೇ ವಿಷಾದವಾಗಿ ಕಾಡುತ್ತಿದೆ. ಜಗನ್ನಾಥನ ನಗುವಿನಲ್ಲೂ ನೋವುಗಳು ತುಂಬಿದ್ದನ್ನು ನಾವು ಅಸಹಾಯಕರಾಗಿದ್ದನ್ನು ನೆನೆಯುತ್ತಿದೆ.

"ಶೂದ್ರ" ಪತ್ರಿಕೆಯಿಂದಾಗಿ ಸಾವಿನ ಸುದ್ದಿ ತಿಳಿದ ನನಗೆ, ಇನ್ನಿಲ್ಲದ ಗೆಳೆಯನ ಸುದ್ದಿ ತಿಳಿಸಿದ್ದಕ್ಕಾಗಿ ತಮಗೂ "ಶೂದ್ರ" ಪತ್ರಿಕೆಗೂ ಧನ್ಯವಾದಗಳು.

– ಎಂ. ಇಕ್‌ಬಾಲ್ ಹುಸೇನ್
ಬೆಂಗಳೂರು

*****

ಪ್ರಿಯ ಶೂದ್ರ,

ಈ ಸಾರಿಯ 'ಶೂದ್ರ' ಸಂಚಿಕೆ ಅರ್ಥವತ್ತಾಗಿದೆ. ನಿನ್ನ 'ಬೆಂಗಳೂರು ದಿನಚರಿಯ ಪುಟಗಳಿಂದ' ದಲ್ಲಿನ ಝಿುನ್, ಜಿ.ಎಸ್.ಎಸ್. ನಾಟಾಸುಬ್ಬಣ್ಣರ ಬರಹಗಳು ತುಂಬಾ ಪ್ರಸುತ್ತವಾದವು. ಕಮಲಾದಾಸ್ ಬಗ್ಗೆ ಕೂಡ ಅಷ್ಟೇ ಗಂಭೀರವಾಗಿ ಬರೆದಿದ್ದೀಯ. ಉಳಿದಂತೆ, ವೈದೇಹಿ, ಝುಂಜರವಾಡರ ಲೇಖನಗಳು ಅಪೂರ್ವ ಒಳನೋಟ ನೀಡುವಂಥವು. ಹೀಗೇ 'ಶೂದ್ರ' ಸಂಚಿಕೆಯಿಂದ ಸಂಚಿಕೆಗೆ ಬೆಳೆಯುತ್ತಾ ಹೋಗಲೆಂದು ಹೃದಯ ತುಂಬಿ ಹರಸುವೆ.

– ಚಂದ್ರಶೇಖರ ತಾಳ್ಯ
ಹೊಳಲ್ಕೆರೆ

*****

ಶೂದ್ರ ಅವರಿಗೆ

ದಿನಾಂಕ 3–3–2011

ವಿಶಿಷ್ಟ ವ್ಯಕ್ತಿಗಳ ಜೊತೆಗಿನ ಒಡನಾಟ ಎಲ್ಲರಿಗೂ ಲಭ್ಯವಿಲ್ಲ. ಲಭ್ಯವಾದದ್ದನ್ನು ಎಲ್ಲರೂ ಹಂಚಿಕೊಳ್ಳುವುದೂ ಇಲ್ಲ. 38 ವರ್ಷಗಳ ಸಾಧನೆ, ತಾವು ನೆಟ್ಟ ಮರದಲ್ಲಿ ಅದೆಷ್ಟೊ ಚಿಗುರುಗಳು, ಅದೆಷ್ಟೊ ಕನಸುಗಳು, ಜೀವನ ಪ್ರೀತಿಯ ಲೇಖಕಿ ಕಮಲಾದಾಸ್ ಅವರನ್ನು ನೇರವಾಗಿ ಭೇಟಿಯಾದ ನೀವು ನಿಮ್ಮ ನೆನಪನ್ನು ತೆರೆದಿಟ್ಟಿದ್ದೀರ, ಕಮಲಾದಾಸ್ ಬಗ್ಗೆ

ಸಂಶೋಧನೆ ಮಾಡಹೊರಟಿರುವ ನನಗೆ ನಿಮ್ಮ ಲೇಖನದ ಪ್ರತಿ ಸಾಲು ಹೊಸ ಕುತೂಹಲದೊಟ್ಟಿಗೆ ಓದಿಸಿಕೊಂಡು ಹೋಯಿತು. ಕೆಲವೊಮ್ಮೆ ನಮ್ಮೊಡನೆ ಇರುವ ವ್ಯಕ್ತಿಗಳು ಬದುಕನ್ನು ವಿಶಿಷ್ಟವಾಗಿ ಅನುಭವಿಸಿ ಆಗಿ ಹೋದರೂ ಅದರ ಪರಿವೆಯೇ ಇಲ್ಲದೆ ಜೀವಿಸುತ್ತಿರುತ್ತೇವೆ. ಬದುಕಿನ ಅನುಭವಗಳು ಸಾಕಷ್ಟಿದೆ, ಬರವಣಿಗೆಗೆ ಹೊಸ ವಿಷಯವನ್ನು ಹುಡುಕುವುದ್ಯಾಕೆ ಎನ್ನುವ ಕಮಲಾದಾಸ್‌ರವನ್ನು ನಾನು ನೇರವಾಗಿ ನೋಡಿಲ್ಲದಿದ್ದರೂ, ನಿಮ್ಮ ಲೇಖನವನ್ನು ಓದುತ್ತಿರುವಾಗ ನನ್ನ ಕಣ್ಣೆದುರಿಗೆ ನಡೆದಂತೆ ಭಾಸವಾಯಿತು. ಕಮಲಾದಾಸ್‌ರವರ ಕಥನ ಸಾಹಿತ್ಯವನ್ನು ಗಂಭೀರವಾಗಿ ಅನುಭವಿಸುತ್ತಾ ಓದಹೊರಟಿರುವ ನನಗೆ ಕನ್ನಡದಲ್ಲಿ ಐದು ಪುಸ್ತಕಗಳು ಮಾತ್ರ ದೊರೆತಿದೆ. ಸಂಶೋಧಕರಿಗೆ ಪಠ್ಯ ಎಷ್ಟು ಮುಖ್ಯವೋ ಆ ಪಠ್ಯ ಸೃಷ್ಟಿಯಾಗಲು ಇದ್ದ ಪ್ರೇರಣೆ ಒತ್ತಾಸೆಗಳು ಮುಖ್ಯವಾಗುತ್ತದೆ. ಪ್ರಭಾವಶಾಲಿ ಪರಿಣಾಮಕಾರಿಯಾದ ಸಾಹಿತ್ಯದ ಹಿಂದೆ ನೂರಾರು ಅನುಭವಗಳು ಕೆಲಸ ಮಾಡುತ್ತಿರುತ್ತದೆ. ಸುತ್ತಲಿನ ಪರಿಸರ ಅನುಭವ, ವ್ಯಕ್ತಿತ್ವಗಳು ಯಾವ ಪುಸ್ತಕದಲ್ಲೂ ದಾಖಲಾಗುವುದಿಲ್ಲ. ನಾನು ಸಾಹಿತ್ಯವನ್ನು ಬೆರಗುಗಣ್ಣಿನಿಂದ ನೋಡುವಂತೆ ಸಾಹಿತ್ಯ ಸೃಜಿಸಲು ಕಾರಣವಾಗುವ ಘಟನೆಗಳ ಬಗೆಗೂ ಗಮನ ಹರಿಸುತ್ತೇನೆ. ಪ್ರತಿಯೊಬ್ಬರ ಅನುಭವವೂ ಅನನ್ಯ, ಅದರದೇ ವಿಶಿಷ್ಟತೆ ಇರುತ್ತದೆ ಎನ್ನುವ ಹೊತ್ತಿಗೆ ಕನ್ನಡ ಲೋಕಕ್ಕೆ ಕಮಲಾದಾಸ್‌ರವರನ್ನು ಭಿನ್ನವಾಗಿ ಪರಿಚಯಿಸಿಕೊಟ್ಟಿದ್ದೀರಾ, ನೀವು ಕಂಡದ್ದನ್ನು, ಅವರು ಇನ್ನಿತರ ಮೇರು ಸಾಹಿತಿಗಳೊಟ್ಟಿಗೆ ಕಳೆದ ಕ್ಷಣವನ್ನು ತೆರೆದಿಟ್ಟಿದ್ದು ಅರ್ಥಪೂರ್ಣವಾಗಿದೆ. ಪಂಜರದ ಗಿಳಿ ಹಾರಿಹೋದರೂ, ಗಿಳಿ ಪಂಜರದಲ್ಲಿದ್ದ ನೆನಪು ಮಾಸುವುದಿಲ್ಲ. ನೆನಪಿಗೆ ಚೈತನ್ಯ ತುಂಬುವ ಸಹೃದಯರಿಗೆ ಕಿರಿಯಳಿಂದ ವಂದನೆಗಳು.

– ಕೃಪ ಎ.
ಬೆಂಗಳೂರು

*****

'ಶೂದ್ರವೆಂಬ ಅಕ್ಷರ ದಿವ್ಯಕ್ಕೆ ಪ್ರತಿಕ್ರಿಯೆಯೆಂಬ ಶಬ್ದ ಪ್ರಮಾಣು'

'ಶೂದ್ರ 38' ನೇ ಸಂಪುಟದ ಬರಹಗಳಿಗೆ ಹೀಗೊಂದು ಸುದೀರ್ಘ–ಓದು ಬರಹ

ಈ ಸಂಚಿಕೆಯಲ್ಲಿ ಮೊದಲಿಗೆ ನನ್ನ ಗಮನವನ್ನು ಸೆಳೆದ ಬರಹಗಳ ಗುಚ್ಛವೆಂದರೆ ನನ್ನ ಪ್ರೀತಿಯ ಕೀ.ರಂ. ಮೇಷ್ಟ್ರಿಗೆ ಸಂಬಂಧಿಸಿದ್ದು. ಇದರಲ್ಲಿ ಮೊದಲಿಗೆ ನಾನು ಓದಲು ತೊಡಗಿದ್ದು, ಡಾ॥ ಬಿ.ಎಂ. ಮಂಗಳಾ ಅವರು ಕೀ.ರಂ. ಅವರ ನಿಧನಾನಂತರ ಕೀ.ರಂ. ಗೆ ಬರೆದ ಪತ್ರ, ಕೀ.ರಂ. ಮತ್ತು ಮಂಗಳಾ ಅವರ ನಡುವಿನ ಆಪ್ತತೆಯ ಅಕ್ಷರ ರೂಪ ಜೊತೆಗೆ ಕೀ.ರಂ. ವ್ಯಕ್ತಿತ್ವದ ಬಹುಮುಖ್ಯವಾದ ತಾಯ್ತನ'ವನ್ನು ಈ ಪತ್ರ–ಭಾವತೀವ್ರತೆಯೊಂದಿಗೇ ದಾಖಲಿಸುತ್ತದೆ.

ಈ ಸಂಚಿಕೆಯಲ್ಲಿ– ಕೀ.ರಂ. ಬಗ್ಗೆ ಬರೆದ ಕವಿತೆಗಳಲ್ಲಿ ಪ್ರೊ॥ ಎಸ್.ಜಿ. ಸಿದ್ದರಾಮಯ್ಯನವರು ಬರೆದ 'ಗುರುಪಾದ' ಕವಿತೆ ಕೀ.ರಂ. ಮತ್ತು ತಮ್ಮ ನಡುವಿನ ಜಗಳವನ್ನು 'ಕಾಲುದಾರಿಯಲ್ಲಿ ತುಳಿತಕ್ಕೆ ಸಿಕ್ಕ ಗರಿಕೆಯ ಬೇರಿಗೆ' ಹೋಲಿಸಿದ್ದು ಅರ್ಥಪೂರ್ಣವಾಗಿದೆ. ಅನುಮಾನವೆಂಬ ಅಗ್ನಿದಿಬ್ಬದಲ್ಲಿ ಶಬ್ದ ಅಪ್ರಮಾಣುವೆಂಬ' ಅಲ್ಲಮನ ಜಿಜ್ಞಾಸೆಗೆ ಹತ್ತಿರವಾದ ಕೀ.ರಂ. ಕವಿಯ ಕನಸಿಗೂ ದಕ್ಕದೆ ಮಹಾಬಯಲೊಂದರಲ್ಲಿ ಬಾವಿಯ ನೀರು ನೆಲ ಸೇರುವ ಹಾಗೆ; ಮರೆಯಾದ ರೂಪಕದೊಂದಿಗೆ ಮೂಡಿದ, ಅದ್ಭುತ ಕಾವ್ಯ ಪ್ರತಿಮೆ ಈ ಕವಿತೆ.

ಎಂ. ರುದ್ರೇಶ್ವರ ಸ್ವಾಮಿ ಅವರ 'ಜೋಗಿ' ಕವಿತೆಯಲ್ಲಿ ಕೀ.ರಂ. ಅವರನ್ನು 'ಜೋಗಿ' ಗೆ ಹಾಗೂ ಅವಧೂತನಿಗೆ ಹೋಲಿಸಿದ್ದನ್ನು ಕೀ.ರಂ. ಇದ್ದಿದ್ದರೆ ನಗುನಗುತ್ತ ಬೈದು ಬಿಡುತ್ತಿದ್ದರೆಂದು ಕಾಣುತ್ತದೆ. ಆದರೂ ಕೀ.ರಂ. ಬೇಂದ್ರೆಯವರ ಬಗ್ಗೆ, ಬೇಂದ್ರೆಯವರ ಜೋಗಿ ಪದ್ಯದ ಬಗ್ಗೆ ಮಾತನಾಡಿದ ಕೊನೆಯ ಭಾಷಣದ ಸಂದರ್ಭದಲ್ಲಿದ್ದ ಕೀ.ರಂ. ಅವರ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಈ ಕವಿತೆ ಚಿತ್ರಿಸುತ್ತದೆ.

ಬ್ಯಾಡರಳ್ಳಿ ಶಿವರಾಜರ ಕವಿತೆ 'ಎಲ್ಲರಂಥವರಲ್ಲ ಈ ಗುರು ಎಂಬ ಕವಿತೆ, ಕೀ.ರಂ. ವ್ಯಕ್ತಿತ್ವದ ಪ್ರಗತಿಪರತೆ, ಪ್ರಭುತ್ವ ವಿರೋಧಿ ಧೋರಣೆ, ಮತೀಯತೆ, ಮಠೀಯತೆಗಳ ಬಗ್ಗೆ ಕೀ.ರಂ. ಗಿದ್ದ ಒಟ್ಟು ಕಾವ್ಯ ಪ್ರೇಮ, ಮಾನವ ಪ್ರೇಮಗಳನ್ನು ಸರಳವಾದ ಗದ್ಯಾಲಯದಲ್ಲಿ ಆಪ್ತವಾಗಿ ಹಿಡಿದಿಟ್ಟಿದ್ದಾರೆ.

ಜಯಶಂಕರ ಹಲಗೂರು ತಮ್ಮ, ಕೀ.ರಂ. 'ತಳದ ಗೊಬ್ಬರ ಗುರುವೇ' ಎಂಬ ಕವಿತೆಯಲ್ಲಿ ಕೀ.ರಂ. ಅವರ ಗರಡಿಗೆ ಬಿದ್ದ ಶಿಷ್ಯರು ತಮ್ಮ ವ್ಯಕ್ತಿತ್ವದ ವಿಕಾರಗಳಾದ ಬಾಲ, ಜುಟ್ಟು, ಪಟ್ಟೆ, ನಾಮ, ಕುಲಾವಿ, ಲಗಾಮು, ಸಲಾಮುಗಳ ಕಳೆದುಕೊಂಡು ಅಪ್ಪಟ್ಟ ಸಾಹಿತ್ಯದ ವಿದ್ಯಾರ್ಥಿಗಳಾಗುವ ವಿಕಸನದ ಪರಿಯನ್ನು ಮತ್ತು ಕೀ.ರಂ. ತೋರುವ ಸಾಹಿತ್ಯದ ವಿರಾಟ ಸ್ವರೂಪವನ್ನು ಕಂಡು ಕಲಿಯುವ ಕುರಿತು, ಕೀ.ರಂ. ಗೆ ಸಲ್ಲಿಸಿದ ಕಾವ್ಯನಮನ ಸೊಗಸಾಗಿದೆ.

ಡಾ॥ ಸಿದ್ದಲಿಂಗಯ್ಯನವರು ಕೀ.ರಂ. ಕುರಿತು ಬರೆದ 'ಮಂಟೇದ ಅಯ್ಯಗಳು' ಎಂಬ ಶೀರ್ಷಿಕೆಯೇ ಒಂದು ರೂಪಕವಾಗಿದ್ದು, ಅತ್ಯಂತ ಅರ್ಥಪೂರ್ಣವಾದ ಕಾವ್ಯ ಪ್ರತಿಮೆಗಳ ಮೂಲಕ ಕೀ.ರಂ. ಅವರ ವ್ಯಕ್ತಿತ್ವವನ್ನು ಸತ್ವಯುತವಾಗಿ ಬಿಂಬಿಸಿದೆ. ಕಿತ್ತಾನೆ ಕಡೆಯಿಂದ ಹತ್ತಾನೆ ಬಂದಂತೆ ಬಂದ ಗುರು, ಗೂಢ ನಿಗೂಢಗಳ ಕೆಂಜೆಡೆಯ ಬಿಟ್ಟು, ನೆಲವ ನಿಂಬೆಯ ಮಾಡಿ ಅಂಗೈಯಲ್ಲಿ ಆಡಿಸುತ್ತಾ ಬಂದು, ನಮ್ಮ ನಡುವೆ ಇದ್ದು ಬಿದ್ದವನ ಮೇಲಕ್ಕೆತ್ತಿ ಭಂಡಾರ ಹಚ್ಚಿದ ಹೃದಯವಂತ ಉರಿಯ ಖಂಡಾಯವನು ತಿರುಗಿಸುತ್ತಾ, ಬೆಳಕ ತುಂಬುತ್ತಾ ಲೋಕ ಗುರುವೇ ಆಗಿದ್ದ ಗುರುವು ಇನ್ನಿಲ್ಲವೆಂಬ ಸುದ್ದಿ-ಕೇಳಿದಾಗ ಹೆಬ್ಬಂಡೆ ಮಲ್ಲಿಗೆಯ ಮೇಲೆ ಬಿದ್ದಂತೆ ಆಘಾತವಾದುದನ್ನು ವರ್ಣಿಸುವ ಕವಿ 'ಅವರು ನಮ್ಮ ನಡುವಿನ ಮಂಟೇದ ಅಯ್ಯಗಳಾಗಿದ್ದರೆಂಬ'-ಪ್ರತಿಮೆಯ ಮೂಲಕ ತಮ್ಮ ಕಾವ್ಯಗೌರವವನ್ನು ಸಲ್ಲಿಸಿದ್ದಾರೆ.

ಉಳಿದಂತೆ ಶೂದ್ರದ ಈ ವಿಶೇಷ ಸಂಚಿಕೆಯಲ್ಲಿ ಕಂಡು ಬಂದ ಕವಿತೆಗಳೆಂದರೆ, ಜ್ಯೋತಿ ಗುರುಪ್ರಸಾದರ, 'ಪದ್ಯ' ಶಿರ್ಷಿಕೆಯ ಪದ್ಯ ಮುದ್ದಣ ಮನೋರಮೆಗೆ ಪದಪದ ಸೇರಿಸಿ ಕಟ್ಟಿ ಕೇಳಿಸಿದ ಕಾವ್ಯಪದಕ್ಕಿಂತ ಅವಳು ಅವನೆದೆಯ ಮೇಲೆ ಕಿವಿಯಿಟ್ಟು ಕೇಳಿದ ಅವನೆದೆ ಬಡಿತವೇ ಅವಳ ಪಾಲಿನ ಮಹಾ ಕಾವ್ಯವಾಗಿತ್ತೆಂಬ ಪದ್ಯದ ಕಲ್ಪನೆಯೇ ಸೊಗಸಾಗಿದೆ. ಉಳಿದಂತೆ ಟಿ. ಪದ್ಮ ಅವರ 'ಮೌನ ಚೆಲ್ಲಿದ ಹಗಲು' ಕವಿತೆಯ ಸರಸದ, ಮಧುರೋನ್ಮತ್ತ ನೆನಪುಗಳ ಸ್ಮೃತಿ ತನ್ನ ಪ್ರತಿಮಾತ್ಮಕ ನಿರೂಪಣೆಯಿಂದ ಮುದ ನೀಡುತ್ತದೆ.

ಈ ಸಂಚಿಕೆಯ ಲೇಖನಗಳಿಗೆ ಸಂಬಂಧಿಸಿದಂತೆ ಮೊಟ್ಟಮೊದಲಿಗೆ ನನ್ನ ಗಮನ ಸೆಳೆದ ಲೇಖನವೆಂದರೆ ಮಾಲಿಕ ಲೂಯಿ ಫಿಷರ್ ಅವರು ಗಾಂಧೀಜಿಯ ಬಗ್ಗೆ ಬರೆದ ಲೇಖನವಂತೂ, ಗಾಂಧೀಜಿಯವರ ಬಗ್ಗೆ ಇದುವರೆಗೂ ಎಲ್ಲೂ ದೊರೆಯದ ಅಪರೂಪದ ವ್ಯಕ್ತಿತ್ವವನ್ನು ತೆರೆದಿಟ್ಟಿದೆ. ಗಾಂಧೀಜಿಯವರ ನಡೆ, ನುಡಿ, ಸ್ವಭಾವ, ಹಿರಿಮೆ, ಸಣ್ಣತನ, ಉದಾರಗುಣ, ರಾಜತಾಂತ್ರಿಕತೆ, ಅವರ ಉಪವಾಸ, ಅಹಿಂಸೆ, ದೌರ್ಬಲ್ಯ ಹೀಗೆ ಎಲ್ಲಾ

ಆಯಾಮಗಳಿಂದ ಗಾಂಧೀ ವ್ಯಕ್ತಿತ್ವಕ್ಕೆ ಹಿಡಿದ ಕ್ಯಾಲಿಡೊಸ್ಕೋಪ್ (ವರ್ಣಪಠಲ)ನಂತೆ ವರ್ಣರಂಜಿತವಾದ ಮಾಹಿತಿದಾಯಕವಾದ ಅಪರೂಪದ ಲೇಖನವಾಗಿದೆ. ಹಾಗೆಯೇ ಹೆಚ್.ಎ. ಅನಿಲ್ ಕುಮಾರ್ ಅವರ ಕಲಾವಿದ ಮರಿಶಾಮಾಚಾರ್ ಕುರಿತ ಲೇಖನ ಒಂದು ಉತ್ತಮ ಪರಿಚಯವಾಗಿದೆ.

ಈ ಸಂಚಿಕೆಯ ಮಗದೊಂದು ಆಸಕ್ತಿದಾಯಕವಾದ ಲೇಖನವೆಂದರೆ 'ಭೂಷಣ್ ಕೇಳ್ಕರ್' ಎಂಬ ಸಾಫ್ಟ್‌ವೇರ್ ತಂತ್ರಜ್ಞರು, NRI ಗಳು ಬರೆದ, 'Nest Returned Indians' ಕೃತಿಯ ಮುನ್ನುಡಿಯನ್ನು ಕನ್ನಡಕ್ಕೆ ಅನುವಾದಿಸಿದ ಆನಂದ ಝುಂಜರವಾಡರ ಅನುವಾದ. ಜಾಗತೀಕರಣದ ಸಂದರ್ಭದಲ್ಲಿ ಭಾರತಕ್ಕೆ ಮರಳುವ NRI ಗಳ ಮನಸ್ಥಿತಿಗಳ ಅನಾವರಣವನ್ನು ಮಾಡಿದೆ. ಹಾಗೆಯೇ ಕೇಳ್ಕರ್ ಅವರು ಈ NRI ಗಳನ್ನು ನರ್ಮದೆಯೊಳಗಿನ 'ಸಾಲಮನ್ ಮೀನುಗಳಿಗೆ' ಹೋಲಿಸಿ ಬರೆದ ಕೃತಿ ಪರಿಚಯ NRI ಗಳ ಬಗೆಗೆ ಸಮಾಜದಲ್ಲಿ ಈಗಿರುವ ಮನೋಧರ್ಮ ಹಾಗೂ ಮುಂದೆ ಆಗಬೇಕಾಗಿರುವ ಬದಲಾವಣೆಯ ಸ್ವರೂಪ ಮತ್ತು ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುತ್ತದೆ.

ವಿಮರ್ಶಕರಾದ ಡಾ॥ ಸಿ.ಎನ್. ರಾಮಚಂದ್ರನ್ ಅವರ 'ಜನಪದ ಸಾಹಿತ್ಯ ಸಂಸ್ಕೃತಿ ಪುನಾರಚನೆಯ ಸವಾಲು' ಎಂಬ ಲೇಖನ, ಶಿಷ್ಟ ಸಾಹಿತ್ಯದ ಮಾನದಂಡಗಳನ್ನು ಮೀರುವ ಹಾಗೂ ಅದು ಪ್ರತಿಪಾದಿಸುವ ವ್ಯವಸ್ಥೆ ಮತ್ತು ಮೌಲ್ಯಗಳನ್ನು ತಿರಸ್ಕರಿಸುವ ಜಾನಪದ ಸಾಹಿತ್ಯ ವ್ಯಕ್ತಿಕೇಂದ್ರಿತ ನೆಲೆಯಿಂದ, ಸಮಷ್ಠಿ ಕೇಂದ್ರಿತವಾದ ಸಮುದಾಯದ ಅನುಭವ ಆದರ್ಶಗಳಿಗೆ ಅಭಿವ್ಯಕ್ತಿಯಾದ ಅದರ ಅನನ್ಯತೆಯನ್ನು ವಿವರಿಸುತ್ತದೆ.

ಮೇರುಕವಿ ಶಮ್‌ಶೇರ್, ಪಾರ್ಕಿನ್‌ಸನ್ ಖಾಯಿಲೆಗೆ ತುತ್ತಾಗಿ ಅನುಭವಿಸಿದ ಯಮಯಾತನೆ ಒಂಟಿತನಗಳ ಮಧ್ಯೆಯೂ ಅದ್ಭುತವಾದ ಸಾಹಿತ್ಯ ರಚನೆ ಮಾಡಿದ ಆತನ ಕವಿತೆ ಮತ್ತು ವ್ಯಕ್ತಿತ್ವಗಳ ಬಗ್ಗೆ ಪ್ರೊ॥ ಬಿ.ವೈ ಲಲಿತಾಂಬ ಅವರ ಲೇಖನ ಮನಮಿಡಿಯುವಂತಿದೆ.

ನೇಪಾಳದಲ್ಲಿ ರಾಣಾಗಳ ಪಟ್ಟಭದ್ರ ಹಿತಾಸಕ್ತಿ ಕಪಿಮುಷ್ಟಿ, ಹಾಗೂ ಕುತಂತ್ರದಿಂದ ಕೈಗೊಂಬೆಯಂತಿದ್ದ ರಾಜಕೀಯ ವ್ಯವಸ್ಥೆಯನ್ನು, ನೆಹರು ಅವರ ಸಲಹೆ, ಸಹಕಾರ ಹಾಗೂ, ಸ್ವತಂತ್ರ ಮನೋಭಾವಗಳಿಂದ ಅತ್ಯಂತ ಸುಭದ್ರವಾದ ಆಧುನಿಕ ನೇಪಾಳದ ಪುನರ್ ಸ್ಥಾಪಕನಾದ ತ್ರಿಭುವನ ಶಹದೇವ ನೇಪಾಳುರವರ ಪಾಲಿಗೆ ರಾಷ್ಟ್ರಪಿತನಾದ ಬಗೆಗಿನ ರೋಚಕ ಕಥಾನಕವನ್ನು 'ವೈದೇಹಿ' ಅವರ ಲೇಖನ ತಿಳಿಸಿಕೊಟ್ಟಿದೆ.

ಅಮಿತವ್ ಘೋಷ್ ಮತ್ತು ಮಾರ್ಗರೆಟ್ ಅಕ್‌ಫುಡ್ ಅವರು ಪಡೆದ ಡಾನ್ ಡೇವಿಡ್ ಪ್ರಶಸ್ತಿಯು ವಿವಾದಗಳಿಗೆ ಕಾರಣವಾದ ಹಿನ್ನಲೆಯಲ್ಲಿ ಪ್ರಿಯಂವದಾ ಗೋಪಾಲ್ ಅವರು 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟಿಸಿದ್ದ ಇಂಗ್ಲೀಷ್ ಲೇಖನವನ್ನು ಕನ್ನಡಕ್ಕೆ ತಂದ ಕ.ನಂ. ನಾಗರಾಜ್ ಅವರಿಗೆ ಅಭಿನಂದನೆ ಸಲ್ಲಬೇಕು. ಪ್ರಶಸ್ತಿಯ ಸ್ವೀಕರಣೆ ಅಥವಾ ನಿರಾಕರಣೆಯ ಸಂದರ್ಭದಲ್ಲಿ ಲೇಕಕರು ಮನಸ್ಥಿತಿ ಹಾಗೂ ಪ್ರತಿಭಟನಾಕಾರರ ನಿರೀಕ್ಷೆಗಳ ಸ್ವರೂಪವನ್ನು ಲೇಖನ ನಿರ್ಮಮಕಾರದಿಂದ ಹಿಡಿದಿಟ್ಟಿದೆ. ಅವರ ಅನುವಾದವೂ ಕನ್ನಡ ಮೂಲದ್ದೇ ಎಂಬಷ್ಟು ಸಹಜವಾಗಿ ಓದಿಗೆ ಅನುವು ಮಾಡಿಕೊಟ್ಟಿದೆ.

ಶೂದ್ರ ಸಂಚಿಕೆಯಲ್ಲಿ ಸ್ವತಃ ಶೂದ್ರ ಅವರೇ ಬರೆಯುವ ಬಹುಮುಖೀ ಆಯಾಮವಿರುವ ಹಾಗೂ ಓದು, ವಿಭಿನ್ನ ಕಾರ್ಯಕ್ರಮ, ತಿರುಗಾಟ, ಪುಸ್ತಕ, ವ್ಯಕ್ತಿ, ಸ್ಥಳ, ಸಂದರ್ಶನ,

ಸಮಾರಂಭ ಇಂತಹವುಗಳ ಹಿನ್ನಲೆಯಲ್ಲಿ ಬೆಂಗಳೂರನ್ನು ಕೇಂದ್ರ ಮಾಡಿಕೊಂಡಂತೆ ಕಂಡರೂ ಆ ಬರವಣಿಗೆಯ ಪರಿಧಿ ಮಾತ್ರ ಕೇಂದ್ರದಿಂದಾಚೆ ನೆಗೆಯುತ್ತಾ, ವಿಶ್ವದ ಸಾಹಿತ್ಯ, ಸಾಹಿತಿ, ತತ್ವ, ಚಿಂತನೆ, ಚಳವಳಿ ಹಾಗೂ ಹಲವು ವಿದ್ಯಮಾನಗಳನ್ನು ಒಳಗೊಂಡು, ಶೂದ್ರರ ಒಟ್ಟು ಜೀವನಾನುಭವವನ್ನು ನಿರಂತರವಾಗಿ ಟಿಪ್ಪಣಿಗಳಿಗೆ ಇಳಿಸಿ 'ಟಿಪ್ಸ್' ರೂಪದಲ್ಲಿ ಪ್ರಕಟಗೊಳ್ಳುವ ಬರಹ 'ಬೆಂಗಳೂರು ದಿನಚರಿಯ ಪುಟಗಳಿಂದ' ಶೂದ್ರದ ಮೂಲಕ ಓದುಗರ ಹೃದಯಕ್ಕೆ ಶಿಫ್ಟ್ ಆಗುತ್ತದೆ. ಈ ಸಂಚಿಕೆಯ ದಿನಚರಿ 'ಎ ಪೀಪಲ್ಸ್ ಹಿಸ್ಟರಿ ಆಫ್ ದಿ ಯುನೈಟೆಡ್ ಸ್ಟೇಟ್ಸ್' ಎಂಬ ಕೃತಿಯಿಂದ ಪ್ರಸಿದ್ಧರಾದ ತಲೆಮಾರಿನ ಪ್ರಜ್ಞಾವಂತ ವಿದ್ಯಾರ್ಥಿಗಳೂ ಹಾಗೂ ಯುವಜನತೆಯ ಗೌರವಯುತ ಬದುಕಿಗೆ ಮಾದರಿಯಾಗಿದ್ದ 'ಹೌವಾರ್ಡ್ ಝಿನ್' ಅವರ ಬಗ್ಗೆ ಚಾಮ್ ನೋಮ್‌ಸ್ಕಿ ಬರೆದ ಟಿಪ್ಪಣಿಯ ಸಾರವನ್ನು ಶೂದ್ರ ಕನ್ನಡಿಗರಿಗೆ ಪರಿಚಯಿಸಿದ್ದಾರೆ.

ಕೃಷ್ಣ ಮಾಸಡಿಯವರು ಜಿ.ಎಸ್. ಶಿವರುದ್ರಪ್ಪನವರ ಬಗ್ಗೆ ನಿರ್ಮಿಸುತ್ತಿದ್ದ ಸಾಕ್ಷ್ಯಚಿತ್ರದ ಸಂದರ್ಭದಲ್ಲಿ ಶೂದ್ರ ಕೂಡ ಜಿ.ಎಸ್.ಎಸ್. ಮತ್ತು ಅನಂತಮೂರ್ತಿಯವರ ಮಾತು, ಕನ್ನಡ ಕಾವ್ಯ ಪರಂಪರೆ, ಗುರು ಪರಂಪರೆ, ಲಂಕೇಶ್‌ರ ಪ್ರತಿಕ್ರಿಯೆ, ಸಾವು ಹಾಗೂ ಜೀವನದ ಬಗ್ಗೆ ಲಂಕೇಶ್ ಹಾಗೂ ಜಿ.ಎಸ್.ಎಸ್. ಅವರ ನಡುವೆ ಇದ್ದ ಭಿನ್ನ ಧೋರಣೆಗಳ ಬಗೆಗಿನ ಸ್ಮೃತಿಕೋಶವನ್ನು ಶೂದ್ರ ತೆರೆದಿಟ್ಟಿದ್ದಾರೆ.

ಈ ದಿನಚರಿಯಲ್ಲಿ ಶೂದ್ರ ಪರಿಚಯಿಸುವ ಮತ್ತೊಬ್ಬ ಮಹನೀಯರ ಚಿತ್ರಣ 'ಬಾಟಾ ಸುಬ್ಬಣ್ಣ' ಅವರ ಬಗೆಗಿನದು. 'ಶೂದ್ರ' ಪತ್ರಿಕೆಯ ಪ್ರಾರಂಭದಿಂದ ಕಡೆಯವರೆಗೂ ಒತ್ತಾಸೆಯಾಗಿದ್ದ ಕರ್ನಾಟಕದ ಸಮಾಜವಾದೀ ಚಿಂತಕರಿಗೆ ಕಛೇರಿಯನ್ನೇ ಆಶ್ರಯವನ್ನಾಗಿ ನೀಡಿದ್ದ, ಸಾಹಿತ್ಯ, ಸಮಾಜ, ಸ್ನೇಹ ಎಲ್ಲಕ್ಕೂ ಮಾದರಿಯಾಗಿದ್ದ ಮನುಷ್ಯನ ಹೃದಯಂಗಮ ನೆನಪು ಆಪ್ತವಾಗಿ ಮೂಡಿ ಬಂದಿದೆ.

ಶೂದ್ರ ಅವರ ಗಡ್ಡದಿಂದ ಕೂಡಿದ ಚಹರೆಯನ್ನು ಕಂಡು ಹೋಟೆಲ್ ಒಂದರಲ್ಲಿ ಗುಂಪೊಂದು ಬಂದು ನೀವು ಮುಸ್ಲೀಮಾ ಎಂದಿದ್ದು? ವ್ಯಕ್ತಿಯೊಬ್ಬ ಶೂದ್ರರ ಕೈ ಹಿಡಿದು ಪಾಕಿಸ್ತಾನದಲ್ಲಿನ ಅತಿವೃಷ್ಟಿಯಿಂದ ಸಾಯುತ್ತಿರುವ ನಮ್ಮ ಜನಕ್ಕಾಗಿ ಏನಾದರೂ ಮಾಡಬೇಕೆಂದು ಕಣ್ಣೀರಿಟ್ಟು ಗೋಳಾಡಿದ್ದು ಅದಕ್ಕೆ 'ಶೂದ್ರ' ಹೌದು ನಾನು ಮುಸ್ಲಿಂ ಎಂದಾಗ ಆ ಗುಂಪು ಸಂಶಯ ವ್ಯಕ್ತಪಡಿಸಿದ್ದು. ನಂತರ 'ಹೌದು, ನಾನು ರೆಡ್ಡಿ, ನಾನು ಹಿಂದೂ, ನಾನು ಮುಸ್ಲಿಂ ಎಂದು ಉತ್ತರಿಸಿದ್ದು. ಬೂಸಾ ಪ್ರಕರಣದಲ್ಲಿ ಲಂಕೇಶರಿಗಾದ ಮುತ್ತಿಗೆ ಈ ಎಲ್ಲಾ ಘಟನೆಗಳ ಮೂಲಕ ಶೂದ್ರ ನಮ್ಮ ಸಮಾಜದಲ್ಲಿನ ಧಾರ್ಮಿಕ ಹಾಗು ಜಾತಿ ಡೊಂಬರಾಟದ ಮನಸ್ಥಿತಿಗೆ ಕನ್ನಡಿ ಹಿಡಿದಂತಿದೆ.

ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಎಲ್ಲರೂ ಸರ್ವಪಲ್ಲಿ ರಾಧಾಕೃಷ್ಣ ಅವರನ್ನು ಕೊಂಡಾಡಿದರೆ ಶೂದ್ರ ಮಾತ್ರ ಭಿನ್ನವಾಗಿ ಒಳ್ಳೆಯ ಇತಿಹಾಸದ ಅಧ್ಯಾಪಕರಾಗಿದ್ದ ಸರ್ವಪಲ್ಲಿ ಗೋಪಾಲ್ ಮತ್ತು ಆದರ್ಶದ ಬಗ್ಗೆ ಮಾತಾಡುತ್ತಾರೆ. ಎಲ್ಲ ಕ್ಷೇತ್ರಗಳಿಗೂ ಮಾರ್ಗದರ್ಶನ ನೀಡತಕ್ಕ ಗುರುಗಳ ಅಗತ್ಯವಿದೆ ಎನ್ನುವ ಶೂದ್ರ ಇವತ್ತಿನ ಸಂದರ್ಭದ ನಮ್ಮ ಗ್ರೇಟೆಸ್ಟ್ ಗುರುಗಳು ಎಂದರೆ ಅತ್ಯುತ್ತಮ ಕೃತಿಗಳು ಮಾತ್ರ.

ಆಗ ಮಾತ್ರ ಡೋಂಗಿ ಜಗದ್ಗುರುಗಳ ಹಾವಳಿಯಿಂದ ದೂರ ಇರಬಹುದೆನ್ನುತ್ತಾರೆ ತುಂಬಾ ಸಕಾಲಿಕ ಸತ್ಯ ಅನ್ನಿಸುತ್ತದೆ.

ಬಾನಂದೂರು ಹಾಡಿದ ಹಿಗ್ಗದೆ ಯಾಕೋ ಹಾಡಿಗೆ ಫೋನ್‌ನಲ್ಲಿ ಹಿಗ್ಗುವ ಸಹೃದಯ ಶೂದ್ರ, ಕವಿ ಇಕ್ಬಾಲ್ ಜನ್ಮ ದಿನಾಚರಣೆಯ ನೆನಪಲ್ಲಿ 1995ರಲ್ಲಿ ಭಾರತ ಮತ್ತು ಪಾಕಿಸ್ತಾನ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದ್ದು, ಖುಷ್ವಂತ್ ಸಿಂಗ್ ಅವರ 'ಟ್ರೈನ್ ಟು ಪಾಕಿಸ್ತಾನ್' ಕೃತಿಯ ಬಗ್ಗೆ ಸಾದತ್ ಹಸನ್ ಮುಟೋನ ಕಥೆಗಳನ್ನು ಓದಿದ್ದರೆ ನಾವು ಪಡೆದ ಸ್ವಾತಂತ್ರದ ಹೆಚ್ಚುಗಾರಿಕೆ ಚಾರಿತ್ರಿಕವಾಗಿ ಗೊತ್ತಾಗುವುದೇ ಇಲ್ಲ, ಎಂಬ ಅವರ ಟಿಪ್ಪಣಿ ಭಾರತ ಪಾಕಿಸ್ತಾನ ಸೌಹಾರ್ದದ ಮೂಲವನ್ನು ಕೆದುಕುವಂತಿದೆ.

ಕಲಾವಿದ ಎಂ.ಎಸ್. ನರಸಿಂಹಮೂರ್ತಿ ಅವರ ಫಾರ್ಮ್‌ಹೌಸ್ ಕಮ್ ಆರ್ಟ್ ಗ್ಯಾಲರಿಯಾದ 'ಭೂಮಿ'ಯಲ್ಲಿ ಬಂಗಾಳದ ಪ್ರಸಿದ್ಧ ಸರೋದ್ ಕಲಾವಿದ ಬುದ್ಧದೇವ ದಾಸಗುಪ್ತರ ಸರೋದ್ ಕಾರ್ಯಕ್ರಮದ ಇಂಪಿಗೆ ತಲೆದೂಗುವ ಅವರ ಅಭಿರುಚಿಗಳಲ್ಲಿ ಸಂಗೀತವೂ ಒಂದು.

ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ಬಗ್ಗೆ ಹಾಗೂ ನಮ್ಮ ಸಂಸ್ಕೃತಿಯ ಆಧ್ಯಾತ್ಮಿಕ ನೆಲೆಗಟ್ಟಿನಂತಿರುವ ವೇದೋಪನಿಷತ್ತುಗಳ ಬಗ್ಗೆ ಆಳವಾದ ಅಧ್ಯಯನ ಮತ್ತು ಒಳನೋಟಗಳುಳ್ಳ ಉಡುಪಿಯ ಲಕ್ಷ್ಮೀಶ ತೋಳ್ಪಾಡಿ ಅವರು ಅತ್ಯಂತ ಸರಳ ಮಾತುಗಳ ಮೂಲಕ ಇವುಗಳ ಸಾರವನ್ನು ವಿವರಿಸುವ ರೀತಿಗೆ ವಿಸ್ಮಯ ಪಡುವ ಶೂದ್ರ ಅವರ ಪಾಂಡಿತ್ಯವನ್ನು ಆಪ್ತವಾಗಿ ಪರಿಚಯಿಸಿದ್ದಾರೆ.

ಮಾತೃಭಾಷೆ ಮತ್ತು ದೇಶಭಾಷೆಗಳ ನಡುವಿನ ಪ್ರತಿಷ್ಠೆಯ ಸಂದರ್ಭ ಬಂದಾಗ ಮಾತೃ ಭಾಷೆಗೆ ಇರುವ ಸತ್ಯವನ್ನೇ ವಿಜೃಂಭಿಸಿದ ವಿಶ್ವಕವಿ ರವೀಂದ್ರನಾಥ ಠಾಕೂರರ 'ಗೋರಾ' ಕೃತಿ ಬಂದು 2010ಕ್ಕೆ ನೂರು ವರ್ಷ ತುಂಬಿದ ಈ ಸಂದರ್ಭದಲ್ಲಿ ರವೀಂದ್ರರ ಬದುಕು ಬರಹಗಳ ಮಹತ್ವವನ್ನು ಗುರುತಿಸುವ ಶೂದ್ರ ಕೀ.ರಂ. ಅವರು ಬೇಂದ್ರೆ ಕುರಿತು ಸಂಚಯದ ಕಾರ್ಯಕ್ರಮದಲ್ಲಿ ಆಡಿದ ಕೊನೆಯ ಮಾತುಗಳಿಗೆ ಸಾಕ್ಷಿಯಾಗಿ ಈ ದಿನಚರಿಯ ಪುಟಗಳನ್ನು ಮುಗಿಸುವುದು 'ಶೂದ್ರ'ದ ಓದುಗರ ಮನಸಲ್ಲಿ ಕೀ.ರಂ. ಇಲ್ಲದ ಖಾಲಿತನವನ್ನು ವಿಷಾದ-ದುಃಖ ಆವರಿಸಿಕೊಳ್ಳುವಂತೆ ಮಾಡುತ್ತದೆ.

ಭಾರತೀಯ ಸಾಹಿತ್ಯಲೋಕ ಕಂಡ ಕೇರಳದ ಅದ್ಭುತ ಕಥೆಗಾರ್ತಿ ಲೇಖಕಿ ಕಮಲಾದಾಸ್ ಬದುಕು ಬರಹಗಳ ಹಿಂದಿನ ಸಮೃದ್ಧತೆ ವೈವಿಧ್ಯತೆಗಳನ್ನು ಅತ್ಯಂತ ಹೆಂಗರುಳಿನಿಂದ ಪರಿಭಾವಿಸುವ ಶೂದ್ರರ ಅನನ್ಯವಾದ ವ್ಯಕ್ತಿ ಚಿತ್ರದಂತೆ ಕಮಲಾದಾಸರ ಲೇಖನ ಓದಿಸಿಕೊಳ್ಳುತ್ತಲೇ ಕಮಲಾದಾಸರ ಬಗೆಗಿನ ಗೌರವ ಅಭಿಮಾನಗಳನ್ನು ಇಮ್ಮಡಿಗೊಳಿಸುತ್ತದೆ.

ಇಂತಹ ಸಂಪನ್ಮೂಲಭರಿತ ಬರಹಗಳ ಕಾರಣದಿಂದಲೇ ಶೂದ್ರದ ಮೂವತ್ತೆಂಟನೇ ಸಂಪುಟ ಒಬ್ಬ ಸಾಹಿತ್ಯದ ವಿಧ್ಯಾರ್ಥಿಯಾಗಿ ನನಗೆ ಇಷ್ಟವಾಗುತ್ತದೆ. ಓದುಗರ ಕಣ್ಣಿನ ಆರೋಗ್ಯದ ದೃಷ್ಟಿಯಿಂದ ಶೂದ್ರ ಅಕ್ಷರಗಳ ಗಾತ್ರವನ್ನು ಇನ್ನಷ್ಟು ದಪ್ಪಗೆ ಮಾಡಬೇಕಾದ ಕೊರತೆಯೊಂದು ಮಾತ್ರ ಉಳಿದುಬಿಡುತ್ತದೆ.

– ಪ್ರೊ॥ ಟಿ. ಯಲ್ಲಪ್ಪ
ಬೆಂಗಳೂರು

ಈಗ ಕಂಡ ಪುಸ್ತಕಗಳು

– ಸಿದ್ಧಾರ್ಥ

ನೆನಪಿನ ಶಿಲ್ಪಗಳು (ಲೇಖನಗಳು) ವಿಜಯನಾಥ ಶೆಣೈ, ಸಾಧನಾ ಪ್ರಕಾಶನ, ನಂ. 120, 1ನೇ ಮಹಡಿ, ಬಳೇಪೇಟೆ ಮುಖ್ಯರಸ್ತೆ, ಬಂಎಂಗಳೂರು–53, ಬೆಲೆ : 395–00, ವಿಜಯನಾಥ ಶೆಣೈ ಅವರ ತಮ್ಮ ಮಣಿಸಾಲದ 'ಹಸ್ತಶಿಲ್ಪ'ದ ಕೊಡುಗೆಯ ಮೂಲಕ ಪ್ರಸಿದ್ಧರಾದವರು. ಹಸ್ತ ಶಿಲ್ಪವಂತೂ ಚಾರಿತ್ರಿಕವಾದದ್ದು. ಇಂಥದನ್ನು ಸೃಷ್ಟಿಸಬೇಕಾದರೆ ಅದ್ಭುತ ಮನಸ್ಸು ಇರಬೇಕಾಗುತ್ತದೆ. ಇವರ ಜೊತೆ ಒಂದಷ್ಟು ಗಂಟೆ ಕಳೆದಿರುವುದರಿಂದ ವಿಜಯನಾಥ ಶೆಣೈ ಅವರ ಗ್ರೇಟ್ ನೆಸ್ ನ್ನ ಹತ್ತಿರದಿಂದ ಬಲ್ಲವನಾಗಿರುವೆ. ಎಂಥ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮನಸ್ಸು, ಅಂಥ ಶ್ರೀಮಂತವಾದ ಮನಸ್ಸಿನಿಂದ ಹೊರಬಂದಿರುವ ಕೃತಿ. ಓದುತ್ತಿದ್ದಂತೆ ಐವತ್ತು ಅರವತ್ತು ವರ್ಷಗಳ ದೀರ್ಘ ಕಾಲದ ಏನೇನೋ ಚಿತ್ರಣಗಳು ನಮಗೆ ಮುಖಾಮುಖಿಯಾಗುತ್ತ 'ಹಾಯ್' ಅನ್ನಿಸುತ್ತದೆ.



ದೃಶ್ಯ (ದೃಶ್ಯ ಕಾದಂಬರಿ) ಡಾ॥ ಎಂ.ಎಸ್. ಮೂರ್ತಿ, ಥಿನ್‌ಲೈನ್ ಪಬ್ಲಿಕೇಶನ್, ನಂ. 107, ನಾಗೇಗೌಡ ಪಾಳ್ಯ ಬಿ.ಎಸ್.ಕೆ. 6ನೇ ಹಂತ, ತಲಘಟ್ಟಪುರ ಅಂಚೆ, ಕನಕಪುರ ಮೈನ್ ರೋಡ್, ಬೆಂಗಳೂರು ದಕ್ಷಿಣ, ಬೆಲೆ 75–00 ರೂ. ಇಂಥ ಅಪರೂಪದ ಕೃತಿಯನ್ನು ಕಲಾವಿದ ಮತ್ತು ಲೇಖಕ ಡಾ॥ ಎಂ.ಎಸ್. ಮೂರ್ತಿಯವರು ತಾವೇ ಮುಖಪುಟದ ಮೇಲೆ 'ದೃಶ್ಯ' ಶೀರ್ಷಿಕೆಯ ಕೆಳಗೆ 'ಒಂದು ವಿನೂತನ ದೃಶ್ಯ ಕಾದಂಬರಿ' ಎಂದು ಮುದ್ರಿಸಿರುವ ಅಗತ್ಯವಿರಲಿಲ್ಲ. ಯಾಕೆಂದರೆ ಇದಕ್ಕೆ 'ವಿನೂತನ' ಎಂಬ ಪ್ರಮಾಣಪತ್ರವನ್ನು ಸಂತೋಷದಿಂದ ಕೊಡಬಹುದಾಗಿತ್ತು. ಇರಲಿ, ಈ 'ದೃಶ್ರೆ' ಚಿತ್ರಗಳ ಕಾದಂಬರಿಯಲ್ಲಿ ಪುಟಗಳನ್ನು ತಿರುವಿದಂತೆಲ್ಲ ಏನೇನೋ ಪರಿಕಲ್ಪನೆಗಳು ಮನಸ್ಸಿನ ತುಂಬ ಆಕಾರ ಪಡೆಯುತ್ತ ಹೋಗುತ್ತದೆ.

ಹಾಗೆಯೇ ಅದ್ಭುತ ಕೊಲ್ಯಾಜ್ ಆಗಿಯೂ ಸಂಕೀರ್ಣ ರೂಪಗಳಾಗಿಯೂ ನಿಲ್ಲುತ್ತದೆ.

ತುಂಬ ಶ್ರಮ ಚಿಂತನೆ ಮತ್ತು ಯೋಜನೆ ಮೂಲಕ ಆಕಾರ ಕೊಟ್ಟಿದ್ದಾರೆ ಒಟ್ಟು ದೃಶ್ಯಕ್ಕೆ. ನಾವೆಲ್ಲ ನೋಡಿ ಸಂತೋಷಪಡಬಹುದು.

ದೊಡ್ಡಮ್ಮ ದೇವತೆಗೆ ಕಣ್ಣು ಧರಿಸಿದ ಹೊತ್ತು (ಕವನ ಸಂಕಲನ) ಕೆ.ಪಿ. ಮೃತ್ಯುಂಜಯ, ಅಪರಂಜಿ ಪ್ರಕಾಶನ, ಅಪರಂಜಿ ನಿಲಯ, ನರಿಗುಡ್ಡೇನಹಳ್ಳಿ, ಕಲ್ಯಾಣನಗರ, ಜ್ಯೋತಿನಗರ (ಅಂಚೆ), ಚಿಕ್ಕಮಗಳೂರು–2 ಬೆಲೆ : 100.00 ರೂ. ಇದು ಕೆ.ಪಿ. ಮೃತ್ಯುಂಜಯ ಅವರ 5ನೇ ಕವನ ಸಂಕಲನ. ಈಗಾಗಲೇ ಇವರ ಕಾವ್ಯ ನಾನಾ ವಲಯಗಳಲ್ಲಿ ಚರ್ಚೆಯಾಗಿರುವಂಥದ್ದು. ಸಾಹಿತ್ಯದ ಗಂಭೀರ ವಿದ್ಯಾರ್ಥಿಯೊಬ್ಬರು 'ಕಾವ್ಯ'ದ ಕೃಷಿ ಹೇಗೆ ನಡೆಸಬಹುದು ಎಂಬುದಕ್ಕೆ ಮೃತ್ಯುಂಜಯ ಸಾಕ್ಷಿಯಾಗಿದ್ದಾರೆ. ಮುನ್ನುಡಿಯಲ್ಲಿ ವಿಮರ್ಶಕ ಹಾಗು ಚಿಂತಕ ಹೀಗೆ ಬರೆಯುತ್ತಾರೆ: "ನಾಲ್ಕೈದು ಕವನಸಂಕಲನಗಳ ಉದ್ದಕ್ಕು ತನಗೆ ದಕ್ಕಿದ ಜೀವನಾನುಭವದ ಆಕಾರವನ್ನು ಒಂದು ವಿಶಾಲ ಸಾಮುದಾಯಿಕ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲೆಂಬಂತೆ, ಮತ್ತೆ ಮತ್ತೆ ತನ್ನ ಒಳಿಗನ್ನು ತಡಕಾಡಿಕೊಂಡು ಬರೆಯುತ್ತಿರುವ ಮೃತ್ಯುಂಜಯ ಅವರ ಕಾವ್ಯಶ್ರದ್ಧೆ ಅಪರೂಪದ್ದಾಗಿದೆ" ಎಂಬ ಅಭಿಪ್ರಾಯ ಸಕಾರಣವಾಗಿದೆ.

ನೆನಪು ತೆರೆವ ಕವಿಮನ (ಪಾಬ್ಲೋನೆರೂಡ ಅವರ ಆತ್ಮಕಥೆಯ ಸಂಗ್ರಹ) ನಯನಾ ಕಶ್ಯಪ್, ಮೌಲ್ಯ ಪ್ರಕಾಶನ, ನಲ್ಲೂರು–574 502, ಕಾರ್ಕಳ, ಉಡುಪಿ ಜಿಲ್ಲೆ, ಬೆಲೆ 90.00 ರೂ. ಪಾಬ್ಲೋ ನೆರೂಡ ಕನ್ನಡ ಸಾಹಿತ್ಯ ಸಂದರ್ಭಕ್ಕೆ ಹೊಸಬರೇನೂ ಅಲ್ಲ. ಆತನ ಕಾವ್ಯ ಮತ್ತು ಜೀವನ ನೆನಪಿನ ಮೆಮ್ಮೈರ್ಸ್ ತುಂಬ ಪ್ರಿಯವಾಗಿರುವಂಥದ್ದು. ಇಂಥ ಅಪರೂಪದ ಮೆಮ್ಮೈರ್ಸ್ ಕೃತಿಯ ಸಂಗ್ರಹಾನುವಾದವನ್ನು ನಯನಾ ಕಶ್ಯಪ್, ಅಚ್ಚುಕಟ್ಟಾಗಿ ತಂದಿದ್ದಾರೆ. ತಮ್ಮ ಓದುಗರಿಗೆ ಬೇಕಾಗಿದ್ದ ಕೃತಿ. ಕಾರ್ಕಳದ ನಲ್ಲೂರಿನ ಯುವ ಗೆಳೆಯ ಜಿನೇಶ್ ಜೈನ್ ಅವರು ತಮ್ಮ ಮೌಲ್ಯ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ತಾಯಿ ವೈದೇಹಿಯವರಂತೆ ನಯನಾ ಅವರೂ ಸಾಹಿತ್ಯದ ಗಂಭೀರ ವಿದ್ಯಾರ್ಥಿಯಾಗಿರುವುದು ಸಂತೋಷದ ವಿಷಯ.

ಒಡೆತನಕ್ಕೆ ಕೇಡಿಲ್ಲವಾಗಿ (ಲೇಖನಗಳ ಸಂಗ್ರಹ) ಶ್ರೀಶ ಉಡುಪ, ಮೌಲ್ಯ ಪ್ರಕಾಶನ, ನಲ್ಲೂರು–574 502, ಕಾರ್ಕಳ, ಉಡುಪಿ ಜಿಲ್ಲೆ, ಬೆಲೆ 50.00 ರೂ. ಶ್ರೀಶ ಉಡುಪ ಅವರು ಗಂಭೀರವಾಗಿ ಚಿಂತಿಸುತ್ತ, ಓದುತ್ತ ಬರೆಯುತ್ತ ಹೈದರಾಬಾದಿನಲ್ಲಿ ಅಧ್ಯಯನದಲ್ಲಿ ತೊಡಗಿರುವಂಥವರು. ಇಲ್ಲಿಯ ಹತ್ತು ವಿಷಯಗಳನ್ನು ಕುರಿತ ಲೇಖನಗಳು ಸಾಹಿತ್ಯಕ್ಕೆ ಸಂಬಂಧಿಸಿದವು ಅಲ್ಲ. ಆದರೆ ಸಾಹಿತ್ಯದ ವಿದ್ಯಾರ್ಥಿಗಳೂ ಸಹ ಓದಬೇಕಾದ ಕೃತಿ.

ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು (ಅಧ್ಯಯನ) : ಡಾ॥ ಸಂತೋಷ ಚೊಕ್ಕಾಡಿ, ಪ್ರಕಾಶಕರು ಕರ್ನಾಟಕ ಸಂಘ, ಪುತ್ತೂರು, ದ. ಕನ್ನಡ, ಬೆಲೆ : 150–00 ರೂ. ಈ ಕೃತಿ 2002ರಲ್ಲಿ ಪ್ರಕಟವಾಗಿರುವಂಥದು. ಎರಡು ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದಿಂದ ಸಹಾಯ ಪಡೆದು ರಚಿಸಿರುವ ಕೃತಿ. ಈ ಕೃತಿ ಕಾವ್ಯದ ವಿಭಿನ್ನ ನೆಲೆಗಳ ನೆಪದಲ್ಲಿ ಸ್ವಲ್ಪ ಗಾಢವಾಗಿಯೇ ಜೀವನದ ಮತ್ತು ಪರಿಸರದ ಬೇರೆ ಬೇರೆ ನೆಲೆಗಳನ್ನು ಕುರಿತು ಚಿಂತಿಸಿ ಬರೆದಿದ್ದಾರೆ. ಇದನ್ನು ಸಮಾಜಶಾಸ್ತ್ರದ ನೆಲೆಯಲ್ಲಿಯೂ ಓದಬಹುದಾದದ್ದು. ಕವಿ ಸುಬ್ರಾಯ ಚೊಕ್ಕಾಡಿಯವರ ಶಿಸ್ತುಬದ್ಧ ಮಾರ್ಗದರ್ಶನ ಎದ್ದು ಕಾಣುತ್ತದೆ.

ಜೋಲಿ ಲಾಲಿ (ಲೇಖನಗಳು) ಜ್ಯೋತಿ ಗುರುಪ್ರಸಾದ್, ದೇಸಿ ಪುಸ್ತಕ, ವಿಜಯನಗರ, ಬೆಂಗಳೂರು-49, ಬೆಲೆ : 160.00 ರೂ. ಇಲ್ಲಿಯ ಲೇಖನಗಳು 'ವಾರ್ತಾಭಾರತಿ' ಎಂಬ ಅರ್ಥಪೂರ್ಣ ದಿನಪತ್ರಿಕೆಗೆ ಬರೆದ ಅಂಕಣ ಬರಹಗಳು. ಇವುಗಳನ್ನು ವಿಮರ್ಶಾ ಲೇಖನಗಳು ಎಂದು ಕರೆದಿರುವುದರ ಬದಲು ಲೇಖನಗಳು ಎಂದು ಕರೆದಿದ್ದರೆ ಸಾಕಾಗಿತ್ತು. ಯಾಕೆಂದರೆ ಜ್ಯೋತಿ ಗುರುಪ್ರಸಾದ್ ಅವರು ಉತ್ತಮ ಕವಯಿತ್ರಿಯಾಗಿ ಜೀವನದ ನೆಲೆಗಳನ್ನು ಅರ್ಥೈಸಿಕೊಂಡಿರಿವ ಪರಿಯನ್ನು ಕುರಿತು ಪ್ರತಿಕ್ರಿಯಿಸಿರುವಂಥದ್ದು. ಬರವಣಿಗೆಯ ಲವಲವಿಕೆಯ ಕಾರಣವಾಗಿ ಸಂತೋಷವಾಗಿ ಓದಬಹುದಾದ ಕೃತಿ.

ಕಸಾಂದ್ರ (ಕಥೆಗಳು) ಡಾ|| ಸಿ.ಎನ್. ರಾಮಚಂದ್ರನ್, ಅಂಕಿತ ಪ್ರಕಾಶನ, ನಂ. 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ ಬಸವನಗುಡಿ, ಬೆಂಗಳೂರು-4, ಬೆಲೆ 80.00 ರೂ. ನಮ್ಮ ಸಾಹಿತ್ಯ ಸಂದರ್ಭದಲ್ಲಿ ಹಿರಿಯ ವಿಮರ್ಶಕರಾಗಿರುವ ಡಾ|| ಸಿ.ಎನ್.ಆರ್. ಬರೆದಿರುವ ಕಥೆಗಳು. ವಿಸ್ತೃತ ಓದನ್ನು ಅರಗಿಸಿಕೊಂಡಿರುವ ಸಿ.ಎನ್.ಆರ್. ಅವರ ಒಟ್ಟು ಎಂಟು ಕಥೆಗಳು ಈ ಸಂಗ್ರಹದಲ್ಲಿವೆ. ಓದಿದ ಮೇಲೆ ನಿಜವಾಗಿಯೂ ಚೆನ್ನಾಗಿ ಬರೆಯುತ್ತಾರೆ ಎಂಬ ಅಭಿಪ್ರಾಯ ಮೂಡುವಂತೆ ಇಲ್ಲಿಯ ಕಥೆಗಳಿವೆ.

ಶೋಧ (ಕಾದಂಬರಿ) ಅಂಕಿತ ಪ್ರಕಾಶನ, ಬೆಂಗಳೂರು-4, ಬೆಲೆ 50-00 ರೂ. ಸಿ.ಎನ್.ರಾಮಚಂದ್ರನ್ ಅವರ ವಿಮರ್ಶೆ ಮತ್ತು ಚಿಂತನ ಬರಹಗಳನ್ನು ಕುರಿತು ನಾವು ಯೋಚಿಸುತ್ತ ಬಂದವರು. ಆದರೆ ಮುವತ್ತು ಮೂರು ವರ್ಷಗಳ ಹಿಂದೆ ಈ ಕಾದಂಬರಿ ಪ್ರಕಟಗೊಂಡಿತ್ತು ಎಂಬುದೇ ಸಂತೋಷದ ವಿಷಯ. ಇದನ್ನು ಓದಿದ ಮೇಲೆ ಸಿ.ಎನ್.ಆರ್. ಅವರು ಯಾಕೆ ಕಾದಂಬರಿ ಬರೆಯುವುದನ್ನು ಮುಂದುವರೆಸಲಿಲ್ಲ ಅನ್ನಿಸುತ್ತದೆ. "ಸೋಮಾಲಿಯಾದಲ್ಲಿರುವ ಭಾರತೀಯರ ಸಂದಿಗ್ಧ ಪರಿಸ್ಥಿತಿ ಹಾಗೂ ಭಾರತೀಯರೇ ನಿರ್ಮಿಸಿದ ಶೋಷಣೆಯ ವಿಚಿತ್ರ ವಾತಾವರಣ ಇವುಗಳಲ್ಲಿ ಸಿಕ್ಕು ತೊಳಲಾಡುವ ಶೋಧದ ನಾಯಕ ಆಧುನಿಕ ಸಾಹಿತ್ಯ ಪರಂಪರೆಯಲ್ಲಿ ಮೂಡಿಬಂದ ಅನಾಥ ಪ್ರಜ್ಞೆಯ ಪ್ರತಿನಿಧಿ ಎಂಬ ಮಾತು ಈ ಕಾದಂಬರಿಗೆ ಸೂಕ್ತವಾಗಿದೆ. ಈ 'ಶೋಧ'ದ ಮೂಲಕ ಮತ್ತೊಂದು 'ಶೋಧ' ಬರುವಂತಾಗಲಿ.

ಬಂಗಾರದ ತೇರು (ಕಥಾಸಂಕಲನ) ಆರ್.ಟಿ. ಶರಣ್, ಪಾವನ ಪ್ರಕಾಶನ, ಕಲಬುರ್ಗಿ, ಬೆಲೆ : 60.00 ರೂ. ಇಲ್ಲಿ ಒಟ್ಟು ಹನ್ನೆರಡು ಕಥೆಗಳಿವೆ. ಈಗಾಗಲೇ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂಥವು. ಇವರು ಇತ್ತೀಚೆಗೆ ಗೆಳೆಯ ಕುಮಾರಪ್ಪ ಅವರ ಮೂಲಕ ಕಲಕತ್ತೆಯಲ್ಲಿ ಪರಿಚಯವಾದರು. ಬ್ಯಾಂಕ್ ನಲ್ಲಿ ಇಂಟರನಲ್ ಆಡಿಟರ್ ಆಗಿ ರಾಷ್ಟ್ರದ ಉದ್ದಗಲಕ್ಕೂ ಸುತ್ತಾಡುತ್ತಿರುವಂಥವರು. ಆದರೂ ಗಂಭೀರ ಕಥೆಗಳನ್ನು ಬರೆಯುತ್ತಿರುವಂಥವರು. ಇದಕ್ಕೆ ಇಲ್ಲಿಯ ಕಥೆಗಳೇ ಸಾಕ್ಷಿ.

ಕಿಟಕಿಯಾಚೆಗೊಂದು ಉತ್ತರ ಧೃವ (ಪ್ರವಾಸ ಕಥನ) ಬೆಳಕಿಂಡಿ ಪ್ರಕಾಶನ, ನಂ. 11/2, 3ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಆವಲಹಳ್ಳಿ, ಬಿಡಿಎ ಬಡಾವಣೆ, ಬೆಂಗಳೂರು-26, ಬೆಲೆ 100-00 ರೂ.

ಅನಿಲ್ ಕುಮಾರ್ ಅವರು ಕಲಾವಿದರಾಗಿ ಮತ್ತು ಕಲಾವಿಮರ್ಶಕರಾಗಿ ಪ್ರಸಿದ್ಧಿಯಾಗಿರುವಂಥವರು. ಬೆಂಗಳೂರಿನ ಪ್ರತಿಷ್ಠಿತ ಚಿತ್ರಕಲಾ ಪರಿಷತ್ತಿನ ಕಲಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ತಮ್ಮ ಸುತ್ತಲಿನ ಹತ್ತಾರು ಸಂಗತಿಗಳನ್ನು ಕುರಿತು ಅನ್ಯತೆಯಿಂದ ನೋಡುವ ಚಿಂತಕರು. ಆದ್ದರಿಂದಲೇ ಅನಿಲ್ ಕುಮಾರ್ ಅವರು ಏನು ಬರೆದರೂ ಗಂಭೀರವಾಗಿ ತೆಗೆದುಕೊಳ್ಳುವ ಓದುವ ಬಳಗವಿದೆ. ಇಂಥ ಆಸಕ್ತಿಯ ನೋಟದಿಂದ ಈ ಪ್ರವಾಸ ಕಥನಕ್ಕೆ ಹತ್ತಾರು ಬಾಗಿಲುಗಳಿವೆ. ಆ ಬಾಗಿಲುಗಳಲ್ಲಿ ನಾವು ಓದಿನ ಮೂಲಕ ಪ್ರವೇಶಿಸಿ ಎಷ್ಟೋ ಸಂಗತಿಗಳನ್ನು ನಮ್ಮದಾಗಿಸಿಕೊಳ್ಳಬಹುದು.

ಶಾಂತಿನಿಕೇತನ ಎಂಬ ಮತ್ತೊಬ್ಬನಲ್ಲದ ಆತ್ಮಚರಿತ್ರೆ (ಆತ್ಮಚರಿತ್ರಾತ್ಮ ಪ್ರವಾಸ ಕಥನ) ಹೆಚ್.ಎ. ಅನಿಲ್ ಕುಮಾರ್ ಬೆಳಕಿಂಡಿ ಪ್ರಕಾಶನ, ನಂ. 11/2, 3ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಆವಲಹಳ್ಳಿ, ಬಿಡಿಎ ಬಡಾವಣೆ, ಬೆಂಗಳೂರು–26, ಬೆಲೆ 100–00 ರೂ. ಈ ಕೃತಿಯ ಶೀರ್ಷಿಕೆಯೇ ಆಕರ್ಷಕವಾಗಿದೆ. ಈ ಕೃತಿ ಕುರಿತು ಲೇಖಕರ ಅಭಿಪ್ರಾಯ ಹೀಗಿದೆ: "ಒಮ್ಮೆ ಭೇಟಿ ನೀಡಿದ ಪ್ರದೇಶದ ಬಗ್ಗೆ ಬರೆದರೆ ಅದು ಪ್ರವಾಸ ಕಥನ. ಎರಡು ಬಾರಿ ಅದೇ ಜಾಗಕ್ಕೆ ಹೋಗಿದ್ದ ನೆನಪನ್ನು ಬರೆದರೆ ಅದರಲ್ಲಿ ಆತ್ಮಕಥನವೂ ಸೇರಿಬಿಡುತ್ತದೆ. ಮೂರು ಬಾರಿ ಹೋಗಿದ್ದನ್ನು ಬರೆದಲ್ಲಿ ಅದು ನಮ್ಮ ನೆಚ್ಚಿನ ಪ್ರವಾಸ ತಾಣವಾಗುತ್ತದೆ. ನಾಲ್ಕನೆಯ ಬಾರಿ ಅದೇ ಜಾಗಕ್ಕೆ ನಾವು ಹೋಗುವ ಕಾರಣ 'ಅಲ್ಲಿ' ಅಥವಾ 'ಅದರಲ್ಲಿ' ನಾವು ನಮ್ಮ ಹೃದಯವನ್ನು ಕಳೆದುಕೊಂಡು ಬಿಟ್ಟಿರುತ್ತೇವೆ" ಎಂಬ ಮಾತು ಪ್ರವಾಸದ ಬಗ್ಗೆ ತಾದಾತ್ಮ್ಯತೆಯನ್ನು ಹೊಂದಿರುವ ಎಲ್ಲರಿಗೂ ಹತ್ತಿರವಾಗುವ ಮಾತು. ಅನಿಲ್ ಕುಮಾರ್ ಅವರು ಶಾಂತಿನಿಕೇತನವನ್ನು ತುಂ ಹತ್ತಿರದಿಂದ ಬಲ್ಲವರು. ಅಲ್ಲಿಯ ವಿದ್ಯಾರ್ಥಿಯಾಗಿ ಅದರ ಒಳಗನ್ನು ವಿವಿಧ ಮುಖಗಳಿಂದ ಒಳಗೆ ಬಿಟ್ಟುಕೊಂಡವರು. ಆದ್ದರಿಂದಲೇ ಇದು ಆತ್ಮಕಥಾಲೇಪಿತ ಪ್ರವಾಸಕಥನವಾಗಿದೆ. ನನಗೂ ಶಾಂತಿನಿಕೇತನದ ನೆಲ ಕೆಲವು ನೆನಪುಗಳನ್ನು ವಿಸ್ತರಿಸುವುದರಿಂದ, ಈ ಕೃತಿ ತುಂಬ ಆಪ್ತವಾಗಿಬಿಡುತ್ತದೆ. ರವೀಂದ್ರರ 150ನೇ ವರ್ಷದ ನೆನಪಿನ ಸಂದರ್ಭದಲ್ಲಿ ಇದು ಪ್ರಕಟವಾಗುವುದರಿಂದ; ಅವರ ಪರವಾಗಿ ನಾನೇ ಟ್ಯಾಗೂರರಿಗೆ ಅರ್ಪಿಸುವೆ. ಯಾಕೆಂದರೆ ಅರ್ಪಿಸಿಕೊಳ್ಳುವ ಗುಣವನ್ನು ಪಡೆದಿದೆ.

ಕಂನಾ ಕಥೆಗಳು (ಒಟ್ಟು ಕಥೆಗಳು) ಕಂನಾಡಿಗಾ ನಾರಾಯಣ, ಸಿವಿಜಿ ಪ್ರಕಾಶನ, ಬೆಂಗಳೂರು, ರೂ : 300–00 ರೂ.

ಈ ಒಟ್ಟು ಕಥೆಗಳ ಆಂಥಾಲಜಿ 2004ರಲ್ಲಿಯೇ ಬಂದಿದೆ. ಇದರ ನಂತರವೂ ಅವರ ಸಂಕಲನ ಬಂದಿದೆ. ಒಟ್ಟು 36 ಕಥೆಗಳಿವೆ. ಈ ಕಥೆಗಳನ್ನು ಓದುವಾಗ ಇಲ್ಲಿಯವರೆವಿಗೆ ಇವರ ಕಥೆಗಳನ್ನು ಯಾಕೆ ನಾನು ಓದಲಾಗಲಿಲ್ಲ ಎಂಬ ಅಭಿಪ್ರಾಯ ಮೂಡುವ ರೀತಿಯಲ್ಲಿ ಕಥೆಗಳ ಗಟ್ಟಿತನವಿದೆ. ಕೊನೆಯ ಎರಡು ಕಥೆಗಳಾದ ಬೀಜದ ಹೋರಿ ಮತ್ತು ಹುಲಿವೇಷ ನನ್ನನ್ನು ಬಾಲ್ಯಕಾಲಕ್ಕೆಳೆದುಕೊಂಡು ಹೋಗಿ ಡಿಸ್ಟರ್ಬ್ ಮಾಡಿದಂಥವು. ಒಟ್ಟು ಕಥೆಗಳನ್ನು ಮತ್ತೊಮ್ಮೆ ಗಂಭೀರವಾಗಿ ಓದುವಂತೆ ಪ್ರೇರೇಪಿಸುವ ಕಥೆಗಳು ಈ ಸಂಕಲನದಲ್ಲಿವೆ ಎಂಬುದು ಸಂತೋಷದ ಸಂಗತಿ.

ಮಳೆಕೋಗಿಲೆ (ಕಾದಂಬರಿ) ಕರೀಗೌಡ ಬೀಚನಹಳ್ಳಿ, ಅಜಂತ ಪ್ರಕಾಶನ, ನಂ. 104, ಪ್ರಕೃತಿ, 3ನೇ ಮೈನ್, ಎಂ.ಪಿ.ಎಂ. ಲೇಔಟ್, ಮಲ್ಲತಹಳ್ಳಿ, ಬೆಂಗಳೂರು–56, ಬೆಲೆ ರೂ : 120–00

ಡಾ॥ ಕರೀಗೌಡ ಬೀಚನಹಳ್ಳಿಯವರು ಗಂಭೀರ ಸಾಹಿತ್ಯ ವಿದ್ಯಾರ್ಥಿ. ಅಷ್ಟೇ ಉತ್ತಮ ಕಥೆಗಾರರು. ಕಳೆದ ಮೂರು ದಶಕಗಳಿಂದ ಕಥಾರಚನೆಯಲ್ಲಿ ತೊಡಗಿರುವ ಗೌಡರು 'ಮಳೆಕೋಗಿಲೆ' ಎಂಬ ಉತ್ತಮ ಕಾದಂಬರಿಯನ್ನು ನಮಗೆ ಕೊಟ್ಟಿದ್ದಾರೆ. ನಮ್ಮ ಸಂದರ್ಭದ ಗಂಭೀರ ವಿಮರ್ಶಕರಾದ ಡಾ॥ ಕೆ.ವಿ. ನಾರಾಯಣ ಅವರು ಕಾದಂಬರಿಯ ಬೆನ್ನುಡಿಯಲ್ಲಿ ಹೀಗೆ ಪ್ರತಿಕ್ರಿಯಿಸುತ್ತಾರೆ : "ಮಳೆಕೋಗಿಲೆ ಕಾದಂಬರಿಯಲ್ಲಿ ಹಳ್ಳಿಯ ಹುಡುಗನೊಬ್ಬ ಪಟ್ಟಣದ ಬದುಕಿನ ಲಯಗಳಿಗೆ ಹೊಂದಿಕೊಳ್ಳುವಾಗ ಆಗುವ ತವಕ ತಲ್ಲಣಗಳನ್ನು ತೆರೆದು ತೋರಿಸಲು ಕತೆಗಾರರು ಹೊರಟಿದ್ದಾರೆ... ಈ ನಿಟ್ಟಿನಲ್ಲಿ ಇದೊಂದು ಯಶಸ್ವಿಯಾದ ಸೃಜನಾತ್ಮಕ ರಚನೆಯಾಗಿದೆ" ಎಂಬ ಮಾತು ಈ ಕಾದಂಬರಿಯ ಉತ್ತಮತೆಗೆ ಪೂರಕವಾಗಿದೆ.

ಮತ್ತೆ ಮತ್ತೆ ಬೇಂದ್ರೆ (ಲೇಖನಗಳು) ಕಿ.ರಂ. ನಾಗರಾಜ, ಸಂ: ಅಕ್ಷತ ಕೆ., ಅಹರ್ನಿಶಿ ಪ್ರಕಾಶನ, ಜ್ಯೋತಿರಾವ್ ಬೀದಿ, 4ನೇ ತಿರುವು, ವಿದ್ಯಾನಗರ, ಶಿವಮೊಗ್ಗ, ಬೆಲೆ ರೂ : 75–00

ಬೇಂದ್ರೆ ಕುರಿತ ಅಪರೂಪದ ಕಿ.ರಂ.ಅವರ ಲೇಖನಗಳನ್ನು ಕೆ. ಅಕ್ಷತ ಅವರು ತುಂಬ ಕಷ್ಟಪಟ್ಟು ಸಂಪಾದಿಸಿದ್ದಾರೆ. ಈ ಸಂಪಾದನೆಯಲ್ಲಿ ಅಕ್ಷತ ಅವರ ಧ್ಯಾನಸ್ಥ ಮನಸ್ಥಿತಿ ಇದೆ. ಏಕೆಂದರೆ ಕಿ.ರಂ.ರವರು ನಮ್ಮ ಸಾಹಿತ್ಯ ಲೋಕದ ಅದರಲ್ಲೂ ಮುಖ್ಯವಾಗಿ ಕಾವ್ಯಲೋಕದ ಅವಧೂತ ಚಿಂತಕರು. ಇಂಥ ಮಹಾನ್ ಚಿಂತಕನ ಅಲ್ಲಲ್ಲಿ ಚೆಲ್ಲಿಹೋಗಿದ್ದ ಲೇಖನಗಳನ್ನು ಸಂಪಾದಿಸಿ ನಮಗೆ ಓದಲು ಕೊಟ್ಟಿದ್ದಾರೆ. ಈ ಲೇಖನಗಳು ಬೇಂದ್ರೆಯವರ ಓದಿಗೆ ಸಹಕಾರಿಯಾಗುವುದು. ಈ ಶ್ರಮಕ್ಕೆ ಅಕ್ಷತ ಅವರನ್ನು ಅಭಿನಂದಿಸಲೇಬೇಕು.

●


ಯುಗಾದಿಯ ಹೊಂಬೆಳಕು
ಸ್ಫೂರ್ತಿಯ ಚೆಂಬೆಳಕು
ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು
“ನಾಡಿನ ಜನತೆಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು
ಎರಡರ ಸಮ್ಮಿಳಿತದಲಿ ಸಮೃದ್ಧಿ ಸಾಧನೆಯತ್ತ ಪಯಣ.
ನಿತ್ಯ ನಿರಂತರ ನಮ್ಮ ಉತ್ತಮ ಗುರಿ ಸಾಧನೆಯತ್ತ.
ಪ್ರಗತಿಯ ಪಥಕ್ಕೆ ಯುಗಾದಿಯೇ ಸ್ಫೂರ್ತಿ

ಹಾರ್ದಿಕ ಶುಭಾಶಯಗಳು

ಸ್ಥಾಪನೆ 1966 ಫೋನ್ : 26678329 / 26612482

ಹೋಟೆಲ್ ಉದ್ಯಮದಾರರ ಸಹಕಾರ ಬ್ಯಾಂಕ್ ನಿಯಮಿತ

"ಸಹಕಾರ ಸೌರಭ", 234, 2ನೇ ಕ್ರಾಸ್, 4ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.

ದಿನಾಂಕ : 31/03/2009ಕ್ಕೆ ಬ್ಯಾಂಕಿನ ಆರ್ಥಿಕ ಪ್ರಗತಿ

		ರೂ. ಲಕ್ಷಗಳಲ್ಲಿ
ಷೇರು ಬಂಡವಾಳ	:	906
ಆಪದ್ಧನ ನಿಧಿ ಮತ್ತು ಇತರೆ ನಿಧಿಗಳು	:	1813
ಠೇವಣಿಗಳು	:	18355
ದುಡಿಯುವ ಬಂಡವಾಳ	:	21692
ಸಾಲ ಮತ್ತು ಮುಂಗಡಗಳು	:	14153
ನಿವ್ವಳ ಲಾಭ	:	438

ಬ್ಯಾಂಕಿನ 2010-2011ನೇ ಸಾಲಿನ ಆಡಳಿತ ಮಂಡಳಿ

ಶ್ರೀ ಪುಂಡಲೀಕ ಹಾಲಂಬಿ : ಅಧ್ಯಕ್ಷರು

ಶ್ರೀ ಎಂ.ಆರ್. ಭಟ್ : ಉಪಾಧ್ಯಕ್ಷರು

ನಿರ್ದೇಶಕರು :

1. ಶ್ರೀ ಪಿ.ಎನ್. ಶ್ರೀಪತಿರಾವ್
2. ಶ್ರೀ ಸುಬ್ಬರಾವ್
3. ಶ್ರೀ ಬಿ.ಎಸ್. ನಾಗರಾಜ ಧನ್ಯ
4. ಡಾ॥ ವಿಷ್ಣುಮೂರ್ತಿ ಐತಾಳ ಪಿ.
5. ಶ್ರೀ ಎಸ್. ಸುಬ್ರಮಣ್ಯ ಐತಾಳ
6. ಶ್ರೀ ರಾಘವ ಹಾಲಂಬಿ
7. ಶ್ರೀ ಬಿ.ಎಸ್. ಮಂಜುನಾಥ
8. ಶ್ರೀ ಜಿ.ಎನ್. ಪ್ರಸಾದ್
9. ಶ್ರೀ ಹೆಚ್.ಬಿ. ರಾಜೀವ ಶೆಟ್ಟಿ
10. ಶ್ರೀ ಕೆ. ಮುರಳೀಧರ
11. ಶ್ರೀ ಜಿ.ಡಿ. ನಿರ್ಮಲ ಕುಮಾರ
12. ಶ್ರೀಮತಿ ತಾರಾ ಎಸ್. ಐತಾಳ
13. ಶ್ರೀ ಕುಮಾರ್ ಎಚ್.ಎಸ್.

ಶ್ರೀ ಕೆ. ಶ್ಯಾಮಸುಂದರ ಐತಾಳ : ಕಾರ್ಯದರ್ಶಿ

ಶಾಖೆಗಳು :

ಪ್ರಧಾನ ಕಛೇರಿ
ಚಾಮರಾಜಪೇಟೆ, ಬೆಂಗಳೂರು-560 018.
ದೂರವಾಣಿ : 26678329 / 26612482

ಬಳೇಪೇಟೆ ಶಾಖೆ
ಓ.ಟಿ.ಸಿ. ರಸ್ತೆ, ಬಳೇಪೇಟೆ ಸರ್ಕಲ್
ಬೆಂಗಳೂರು-560053, ದೂ: 22207204

ಜಯನಗರ ಶಾಖೆ
ಜಯನಗರ 9ನೇ ಬ್ಲಾಕ್, ಬೆಂಗಳೂರು-69
ದೂ : 26589888

ರಾಜಾಜಿನಗರ ಶಾಖೆ
ಇಂಡಸ್ಟ್ರಿಯಲ್ ಟೌನ್,
ಬೆಂಗಳೂರು-44. ದೂ: 23153555

ಹಲಸೂರು ಶಾಖೆ
ಪಳನಿ ಮೊದಲಿಯಾರ್ ರಸ್ತೆ, ಹಲಸೂರು
ಬೆಂಗಳೂರು-08, ದೂ. 25566859

ಉತ್ತರಹಳ್ಳಿ ಶಾಖೆ
ಉತ್ತರಹಳ್ಳಿ ಸರ್ಕಲ್, ಸುಬ್ರಮಣ್ಯಪುರ ಅಂಚೆ,
ಬೆಂಗಳೂರು-61, ದೂ: 26396465

The Bangalore Commercial Transporters Credit Co-Operative Society Ltd.

No. 2, 1st Cross, Chikkanna Garden, Shankarapuram, Bangalore - 560 018.

Ten Years of Progress

RUPEES IN LAKHS

	2001-01	2001-02	2002-03	2003-04	2004-05	2005-06	2006-07	2007-08	2008-09	2009-10
1. No. of Members	1440	1525	1618	1651	1668	1706	1745	1778	1838	1851
2. Paid up Share Capital	66.79	70.38	74.64	77.40	79.73	80.50	82.26	82.52	85.04	88.60
3. Deposits	389	423	465	446	403	413	510	516	609	734
4. Short Term, Medium term Long Term Loans Issued	280.89	273.76	290.80	277.11	255.18	362.73	511.14	415.82	377.78	459.70
5. Net Profit	27.38	35.51	30.39	41.45	48.16	28.10	35.00	38.16	39.75	33.67*
6. Dividend Paid	15%	15%	15%	15%	15%	15%	15%	15%	15%	15%
7. Reserve Fund	35.88	41.69	48.53	57.41	65.01	75.37	90.66	95.68	1 Crore	1.17 Crore

President R. Venkataswamy

* Subject to Audit

ಕೇಂದ್ರ ಸಾಹಿತ್ಯ ಅಕಾದೆಮಿ

ಹೊಸ ಪ್ರಕಟಣೆಗಳು

ಮಧುಪುರ ಬಹುದೂರ
– ಶೀಲಭದ್ರ
ಅನು : ಗೀತಾ ವಿಜಯಕುಮಾರ್
ರೂ. : 75

ಹನ್ನೆರಡು ಕಥೆಗಳ ಈ ಸಂಕಲನದಲ್ಲಿ ಕಥೆಗಾರ ಅಸಂಖ್ಯಾತ, ವಿವಿಧ ವಿಚಿತ್ರ ಸ್ವಭಾವದ ವ್ಯಕ್ತಿಗಳನ್ನು ಪರಿಚಯ ಮಾಡಿಕೊಡುತ್ತಾರೆ. ಆದರೆ ವ್ಯಕ್ತಿಗತವಾಗಿ ಯಾರನ್ನೂ ಉದ್ದೇಶಿಸದೇ ಮಾನವ ಸಂಬಂಧ'ಗಳ ವಾಸ್ತವ ಪ್ರತಿಬಿಂಬವನ್ನು ತೋರಿಸಿದ್ದಾರೆ. ಸ್ಪಷ್ಟವಾದ, ಸುಲಭವಾದ ಶೈಲಿಯಲ್ಲಿ, ಕಲಾತ್ಮಕವಾದ ಕಾಲದಿಂದ ಬಂದಂತಹ ಈ ಕಥೆಗಳನ್ನು ಓದುವಾಗ ಓದುಗ ಆಗಾಗ ತನ್ನ ಮುಖವನ್ನು ಪರಿಚಿತವಾದ ಪರಿಧಿಯೊಳಗೆ ನೋಡುತ್ತಾನೆ.

ಯಜ್ಞ
– ಕಾಳೀಪಟ್ನಂ ರಾಮಾರವ್
ಅನು : ಚಿದಾನಂದ ಸಾಲಿ
ರೂ. 200

ಅತಿ ದೀರ್ಘ ಕಥನಕಗಳು, ಅತ್ಯಂತ ಚಿಕ್ಕ ತಲೆಬರಹಗಳು, ಸಾವಧಾನವಾಗಿ ಸಮಸ್ತವನ್ನು ಪರಿಶೀಲಿಸುವ ಸೂಕ್ಷ್ಮಾತಿಸೂಕ್ಷ್ಮ ವಿವರಗಳು, ಇಡಿಕಿರಿದು ತುಂಬಿರುವ ನೂರೆಂಟು ಬಗೆಯ ಪಾತ್ರಗಳು, ಸರಳ–ನಿರಾಳ ನಿರೂಪಣಾ ಶೈಲಿ... ಹೀಗೆ ಇವು ಕಥೆಗಳೆಂದರೆ ಬರೀ ಕಥೆಗಳಲ್ಲ; ಬದಲಿಗೆ ಆ ಕಥನಾವಕಾಶದಲ್ಲಿ ಸದ್ದಿಲ್ಲದೆ ಓದುಗನನ್ನು ಒಳಗು ಮಾಡಿಕೊಳ್ಳುವ ವಿಶಿಷ್ಟ ಅನುಭವ ಕಥನಕಗಳು.

ವಿ.ಕೃ. ಗೋಕಾಕ್
– ಸುರೇಂದ್ರನಾಥ ಮಿಣಜಗಿ
ಅನು : ಮಾಧವ ಕುಲಕರ್ಣಿ
ರೂ. 40

ಗೋಕಾಕರು ತಮ್ಮ ಕಾವ್ಯ, ಕಾದಂಬರಿ ಮತ್ತು ವಿಮರ್ಶೆಗಳಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ 'ಸಮನ್ವಯ'ವನ್ನು ಸಾಧಿಸಿದವರು. ತಮ್ಮ 'ದ್ಯಾವಾ ಪೃಥ್ವೀ'ಗೆ ಕೇಂದ್ರ ಸಾಹಿತ್ಯ ಅಕಾದೆಮಿಯ ಮತ್ತು 'ಭಾರತ ಸಿಂಧು ರಶ್ಮಿ'ಗೆ ಜ್ಞಾನಪೀಠ ಪುರಸ್ಕಾರವನ್ನು ಪಡೆದವರು. ಈ ಪುಟ್ಟ ಪರಿಚಯಾತ್ಮಕ ಪುಸ್ತಕವು ಅವರ ಜೀವನ ಮತ್ತು ಕೃತಿಗಳಿಗೆ ಸಂಕ್ಷಿಪ್ತವಾದ, ಆದರೂ ಸಮಗ್ರತೆ ಮತ್ತು ಸರಳ ಮೌಲ್ಯ ಮಾಪನವನ್ನು ಒದಗಿಸುವ ಕೃತಿಯಾಗಿದೆ.

ಸಾದತ್ ಹಸನ್ ಮಾಂಟೊ
– ವಾರಿಸ್ ಆಲ್ವಿ
ಅನು : ಕೆ.ಹೆಚ್. ಶ್ರೀನಿವಾಸ
ರೂ. 40

ಮಂಟೋ ಅವರ ಸೃಜನಶಕ್ತಿಯ ಹರವು, ಮಿತವಾದ ಕಥಾ ನಿರೂಪಣೆ, ಶೈಲಿ ಹಾಗೂ ತಂತ್ರ ಉತ್ತಮ ಅಭಿರುಚಿಗೆ ಹಿಡಿದ ಕನ್ನಡಿ. ಮನುಷ್ಯ ಸ್ವಭಾವದ ಬಗ್ಗೆ ಅತ್ಯಂತ ಸೂಕ್ಷ್ಮ ಪರಿಜ್ಞಾನ ಅವರಿಗಿತ್ತು. ಜೀವನಾನುಭವಗಳನ್ನು ಅವಲೋಕಿಸಿ ಅವುಗಳನ್ನು ಅವರ ಸುಂದರ ಪ್ರಭಾವಿಯುತ ಕಥೆಗಳಲ್ಲಿ ಮೂರ್ತೀಕರಿಸುವ ರೀತಿ ನಮ್ಮನ್ನು ಬೆರಗುಗೊಳಿಸುತ್ತದೆ. ಉರ್ದು ಸಣ್ಣ ಕಥಾಲೋಕ ಮಂಟೊರವರ ಕಥೆಗಳಿಂದಾಗಿ ಶ್ರೀಮಂತವಾಗಿರುವುದಕ್ಕಾಗಿ, ಕಥಾಲೋಕದಲ್ಲಿ ಹೆಮ್ಮೆಯಿಂದ ಬೀಗುವ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.

ಅಮೃತಲಾಲ್ ನಾಗರ್
– ಶ್ರೀಲಾಲ್ ಶುಕ್ಲ
ಅನು : 'ನಾ' ಪುಜಿರೆ
ರೂ. 40

ಅಮೃತಲಾಲ್ ನಾಗರ ಅವರು ಹಿಂದಿಯಲ್ಲಿ ಸಾರ್ವತ್ರಿಕವಾದ ಮೆಚ್ಚುಗೆಗಳಿಸಿದ ಜನಪ್ರಿಯ ಸಾಹಿತಿಯಾಗಿದ್ದಾರೆ. ಅವರ ಪ್ರತಿಭೆ ಬಹುಮುಖಿಯಾಗಿದ್ದು, ಅದು ಅವರ ಸಣ್ಣ ಕಥೆ, ಹಾಸ್ಯ–ಹರಟೆ, ಏಕಾಂತ ನಾಟಕ, ಪ್ರಬಂಧ ಮತ್ತು ಕಾದಂಬರಿಗಳಲ್ಲಿ ಹೊರಹೊಮ್ಮಿತು. ಆದರೆ ಎಲ್ಲದಕ್ಕಿಂತ ಮೊದಲು ಅವರೊಬ್ಬ ಸಮರ್ಥ ಹಾಗೂ ಅಸಾಮನ್ಯ ಕಥೆಗಾರರಾಗಿದ್ದರು. ಹಿಂದಿಯಲ್ಲಿ ಮಾತ್ರವಲ್ಲ, ಇಡೀ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲೇ ಅವರೊಬ್ಬ ಜನಮನ್ನಣೆ ಪಡೆದ ವಿಶಿಷ್ಟ ಬರಹಗಾರರು.

ಒರೆಸ್ತಿಯಾ
– ಇಸ್ಕಿಲಸ್
ಅನು : ವಿಜಯಾ ಗುತ್ತಲ
ರೂ. 100

ಒರೆಸ್ತಿಯಾ ಗ್ರೀಕ್ ಸಂಸ್ಕೃತಿಯಲ್ಲಿ ಬದಲಾವಣೆಯ ಒಂದು ಪ್ರಮುಖ ಘಟ್ಟದ ಚಿತ್ರವನ್ನು ಹಿಡಿದಿಟ್ಟಿದೆ. ಜಗತ್ತಿನ ಅತೀ ಪ್ರಾಚೀನ ನಾಟಕಗಳ–ಲ್ಲೊಂದಾದರೂ, ನಾಟಕದ ಪಾತ್ರಗಳನ್ನು, ನಾಟಕದ ಸಂದರ್ಭವನ್ನು ಅತ್ಯಂತ ನೈಜವಾಗಿ ಪ್ರತಿಬಿಂಬಿಸುತ್ತದೆ. ನಿಜವಾದ ನ್ಯಾಯ ಯಾವುದು, ಮಾನವ ಮತ್ತು ದೇವತೆಗಳ ನಡುವಿನ ಸಂಬಂಧ ಎಂಥದು, ಮನುಷ್ಯ ಮನುಷ್ಯರ ನಡುವಿನ ಸಂಬಂಧ ಯಾವ ಬಗೆಯದು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡುತ್ತದೆ.

ಹೊನ್ನ ಕಣಜ
(ಶ್ರೀಮತಿ ಹೊನ್ನಮ್ಮನವರ ಜಾನಪದ ಸಿರಿಯ ಸಂಗ್ರಹ)
ಸಂ. : ಟಿ. ಗೋವಿಂದರಾಜು
ರೂ. 125

ಶ್ರೀಮತಿ ಹೊನ್ನಮ್ಮನವರು ಈ ಹೊತ್ತಿಗೂ ಜಾನಪದವನ್ನು ಪ್ರತಿನಿಧಿಸುತ್ತಿರುವ, ಜಾನಪದದಲ್ಲಿ ಬದುಕುತ್ತಿರುವ ಚೈತನ್ಯಶೀಲ ಮಹಿಳೆ. ಅವರ ಜಾನಪದ ಸಂವೇದನೆ ಶಿಷ್ಟ ಸಂವೇದನೆಯ ಭೇದದಿಂದ ಅತೀತವಾದುದು. ವ್ಯಷ್ಟಿ ಪ್ರಜ್ಞೆಯಲ್ಲಿ ಅಡಗಿರುವ ಸಮಷ್ಟಿಯ ಲಯಗಳು ಮತ್ತು ವ್ಯಷ್ಟಿಯ ಛಾಪುಗಳನ್ನು ಹೊತ್ತು ಸಮಷ್ಟಿಯೇ ಆಗುವ ಪ್ರಕ್ರಿಯೆಯನ್ನು ಈ ಕೃತಿಯು ಮನವರಿಕೆ ಮಾಡಿಕೊಡುತ್ತದೆ.

ಹಂಪಿಯಿಂದ ಹರಪ್ಪಾದವರೆಗೆ
– ತಿರುಮಲ ರಾಮಚಂದ್ರ
ಅನು : ಆರ್. ಶೇಷಶಾಸ್ತ್ರಿ
ರೂ. 325

ಈ ಆತ್ಮಕತೆಯು ಲೇಖಕರ ವಿದ್ವತ್ತು, ಪತ್ರಿಕೋದ್ಯಮದ ಹೊಳಹುಗಳು, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸ ಇತ್ಯಾದಿಗಳಿಂದ ಒಂದು ಅಮೂಲ್ಯ ಹಾಗೂ ಅನನ್ಯ ನಿರೂಪಣೆಯ ಪುಸ್ತಕವಾಗಿ ಹೆಸರುವಾಸಿಯಾಗಿದೆ. ಈ ಆತ್ಮಕಥನದಲ್ಲಿ ಗುಂಡು ಕಲ್ಲು ಹೇಳಿದ ಕಥೆಯಿಂದ ಹಿಡಿದು ಡೆಯಿಲಿ ಟೆಲಿಗ್ರಾಫ್‌ನಲ್ಲಿವರೆಗೆ ಒಟ್ಟು 61 ಅಧ್ಯಾಯಗಳಿವೆ.



ಅದೆಷ್ಟು ಪಾಕಿಸ್ತಾನಗಳು
– ಕಮಲೇಶ್ವರ್
ಅನು : ಡಿ. ಎನ್. ಶ್ರೀನಾಥ್
ರೂ. 275

ಈ ಕಾದಂಬರಿ ಮಾನವತೆಯ ಬಾಗಿಲ ಮೇಲೆ ತಟ್ಟುವ ಇತಿಹಾಸ ಮತ್ತು ಕಾಲಚಕ್ರದ ಒಂದು ಸದ್ದಾಗಿದೆ. ಭಾರತ ಮಾತ್ರವಲ್ಲ, ಜಗತ್ತಿನಲ್ಲಿ ಒಂದಾದ ಮೇಲೆ ಒಂದರಂತೆ ಮತ್ತೊಂದು ಪಾಕಿಸ್ತಾನವನ್ನು ಸೃಷ್ಟಿಸುವ ಈ ರಕ್ತ–ಸಿಕ್ತ ಪರಂಪರೆ ಇನ್ನದರೂ ಕೊನೆಗೊಳ್ಳಲಿ ಎಂಬ ಆಶಯವು ಈ ಕಾದಂಬರಿಯಲ್ಲಿ ಮೂಡಿಬಂದಿದೆ.

Subscribe Akademi's Bi-monthly Journal in English

Indian Literature
Single Copy : Rs. 50, One Year : Rs. 250
Three Years Rs. 650

Please send your subscription to
Sahitya Akademi, Central College Campus
Dr. B. R. Ambedkar Veedhi, Bengaluru - 001
Ph : 080-22245152
e-mail : sahityakademi@gmail.com

L/NP/KRNU/72, NO.M(2)PRB 211/73-74

SHUDRA

ಬಿಡಿ ಪ್ರತಿ : ರೂ. 50

ಸದರಿ ಹಣ್ಣು ಮಣ್ಣಾಗಿ, ಮಣ್ಣಿನ ಉಂಡೆ ಭೂಲೋಕವಾಯಿತಯ್ಯಾ!
ಹಣ್ಣೊಳಗಿನ ಸಣ್ಣಹುಳು ಜೀವರಾಶಿಗಳಾಗಿ
ಬುದ್ಧಿ ಬೆಳೆದು ಮಾನವರಾಗಿ
ತಿನ್ನುವುದಕ್ಕೆ ಶಿವನ ಕತ್ತು ಎಲ್ಲಿದೆಯೆಂದು ಪರದಾಡತೊಡಗಿದರಯ್ಯಾ

ಇಂತಿವರ ಹಸಿವು ಹಂಬಲವಾಗಿ
ಹಂಬಲವೆ ಮಂದಾರ ಮರವಾಗಿ
ಆಕಾಶದ ಸ್ವೇಶಿನಾಚೆಯ ಕೈಲಾಸಕ್ಕೂ ಬೆಳೆದ ಮರ
ಭೂಕೈಲಾಸಗಳನ್ನು ಏಕ ಮಾಡುವ ಏಕೈಕ ಮರ
ಅಲ್ಲಿ ಕೈಲಾಸದಲ್ಲಿ ಘಮ ಘಮ ಘಮ ಹೂ ಬಿಟ್ಟಿತಯ್ಯ

– ಚಂದ್ರಶೇಖರ ಕಂಬಾರ

(ಮಂದಾರ ಮರ ಸಂಕಲನದಿಂದ)

ಸಮಕಾಲೀನ ಬದುಕಿನ ಸಂವಾದಕ್ಕಾಗಿ
ನಾವು ನೀವು ಮಾತಾಡುವ ಮತ್ತು ಚರ್ಚಿಸುವ ಧ್ವನಿಗಾಗಿ

ವಾರ್ಷಿಕ ಚಂದಾ	: 200–00 ರೂ.	ಎರಡು ವರ್ಷಕ್ಕೆ	: 400–00 ರೂ.
ನಾಲ್ಕು ವರ್ಷಕ್ಕೆ	: 800–00 ರೂ.	ಆಜೀವ ಚಂದಾ	: 1,500–00 ರೂ.

ಪ್ರಕಾಶಕರು ಮತ್ತು ಸಂಪಾದಕರು : ಶೂದ್ರ ಶ್ರೀನಿವಾಸ್
'ಕಾವಿಮನೆ', ಅಣ್ಣಯ್ಯ ರೆಡ್ಡಿ ಬಡಾವಣೆ, ಜೆ.ಪಿ.ನಗರ 6ನೇ ಹಂತ
ಬೆಂಗಳೂರು – 560 078. ದೂರವಾಣಿ : 22451762